# ಸಂಕಲನ ೧೨

ಸಂಪಾದಕರು:

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

## ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈ ಬರೆಹದ ಅಥವಾ ಟೈಪ್ ಮಾಡಿದ ಇಲ್ಲವೆ ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೨. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಸ್ವೀಕೃತವಾಗುವ ಯಾವುದೇ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಈ ಕುರಿತು ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೩. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವ-ವಿಳಾಸದ ಕವರ್ ಅಥವಾ ಅಂಚೆ ಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು **ಸಂಕಲನ**ದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೪. ಸ್ವೀಕೃತಿ ಮತ್ತು ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು. ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು **ಸಂಕಲನ**ಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾ ಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೫. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟೆಂಬರ್, ನವಂಬರ್ ೧೪ ರ ದಿನಾಂಕ ಹೊತ್ತು ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦ - ೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

## ವಿನಂತಿ

೧. **ಸಂಕಲನ**ವನ್ನು ಮೆಚ್ಚಿ ಅನೇಕರು ಪತ್ರ ಬರೆದಿದ್ದಾರೆ, ಹೇಳಿದ್ದಾರೆ. ಆದರೆ ಪತ್ರಿಕೆಯ ಬುನಾದಿಯನ್ನು ಆರ್ಥಿಕವಾಗಿ ಭದ್ರಪಡಿಸದಿದ್ದರೆ ಪ್ರತಿನಿತ್ಯ ಏರುತ್ತಿರುವ ಈಗಿನ ಬೆಲೆಗಳ ನಡುವೆ ಇದನ್ನು ನಡೆಸುವುದು ಕಷ್ಟದ ಕೆಲಸವಾಗುತ್ತದೆ. ಆದ್ದರಿಂದ **ಸಂಕಲನ**ವನ್ನು ಪ್ರೀತಿಸುವ ಗೆಳೆಯರು ತಮ್ಮ ಸ್ನೇಹವಲಯದ ಕನಿಷ್ಠ ಇಬ್ಬಿಬ್ಬರನ್ನಾದರೂ ಚಂದಾದಾರರನ್ನಾಗಿ ಮಾಡಿಕೊಡಲು ವಿನಂತಿ.

೨. ನವಂಬರ್ ೨೦೦೩ ರಲ್ಲಿ ಪ್ರಕಟವಾಗುತ್ತಿರುವ ಈ ಸಂಚಿಕೆ **ಸಂಕಲನ - ೧೨** ತಲುಪಿದ ಕೂಡಲೇ ಮುಂದಿನ ವರ್ಷದ ೨೦೦೪ ರಲ್ಲಿ ಬರುವ **ಸಂಕಲನ ೧೩ - ೧೮** ರ ವರೆಗಿನ ಆರು ಸಂಚಿಕೆಗಳ ಚಂದಾಹಣ ರೂ. ೧೫೦/- ನ್ನು ನೆನಪೋಲೆಗಳಿಗಾಗಿ ಕಾಯದೆ ದಯವಿಟ್ಟು ಎಂ. ಓ. / ಡಿ. ಡಿ. / ಚೆಕ್ ಕಳಿಸಿ ಸಹಕರಿಸಿರಿ. ಚೆಕ್ ಕಳಿಸುವುದಾದಲ್ಲಿ ರೂ. ೨೦/- ಹೆಚ್ಚಿಗೆ ಸೇರಿಸಿರಿ.

೩. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ **ಸಂಕಲನ**ಕ್ಕೆ ಕಳಿಸಲು ಪ್ರೇರೇಪಿಸಿರಿ.

೪. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಕಳಿಸಲಾಗುವುದು.

# ಸಂಕಲನ

ದ್ವೈಮಾಸಿಕ ಸಾಹಿತ್ಯ ಸಂಕಲನ - ೧೨

೧೪ ನವಂಬರ್ ೨೦೦೩

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

**RNI No. KARKAN 14160 / 10 / 1 / 2002 - TC**

SANKALANA : **A Kannada Literary Magazine**
Volume 2, Issue 6 : 14 November 2003
Edited by **Dr. Siddhaling Pattanshetti**
Hoomane, Shridevinagar, Vidyagiri, Dharwad - 580 004

Yearly subscription : Rs. 150/-

Ptd. by Saraswati Offset Printers, Shivaji Rd. Dharwad-1

•
•
•

**ಸಂಕಲನ - ೧೨ :**

**ಸಂಪುಟ ೨, ಸಂಚಿಕೆ ೬ : ೧೪ ನವಂಬರ್ ೨೦೦೩**

ಸಂಪಾದಕರು : **ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ** ಮತ್ತು **ಡಾ. ಹೇಮಾ ಪಟ್ಟಣಶೆಟ್ಟಿ**
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ -೫೮೦ ೦೦೪
✆ ೦೮೩೬-೨೪೬ ೨೬೧೮
E-mail : spattanshetti@indiatimes.com
: spattanshetti@sify.com
**ಸಂಕಲನ ಪ್ರಕಾಶನ**, ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೪
ಮತ್ತು ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವರ್ಷ ೨೦೦೩ ರಲ್ಲಿ ಪ್ರಕಟವಾಗುವ **ಸಂಕಲನದ** ಆರು ಸಂಚಿಕೆಗಳ ಒಟ್ಟು ಬೆಲೆ ರೂ. ೧೫೦/- ಚಂದಾ ಹಣವನ್ನು ಮನಿಆರ್ಡರ್ / ಕ್ರಾಸ್ ಮಾಡಿದ ಡಿ. ಡಿ. / ಚೆಕ್ ಮೂಲಕ **ಸಂಕಲನ** ಅಥವಾ ಸಂಪಾದಕರ ಹೆಸರಿಗೆ ಕಳಿಸುವುದು. ಚೆಕ್ ಕಳಿಸುವುದಾದಲ್ಲಿ ಬ್ಯಾಂಕ್ ಕಮೀಶನ್ ರೂ. ೨೦/- ಹೆಚ್ಚಿಗೆ ಸೇರಿಸುವುದು.

•

ಛಾಯಾಕ್ಷರಣ : ಬಿಜಿಗ್ರಾಫಿಕ್ಸ್, ೧ ನೇ ಮೇನ್, ವಿಜಯನಗರ, ಧಾರವಾಡ - ೩

## ಸಂಪಾದಕರ ಮಾತು

**ಸಂಕಲನ** - ೧೨ ರ ಈ ಸಂಚಿಕೆಯೊಂದಿಗೆ ನಮ್ಮ ಪತ್ರಿಕೆ ಎರಡನೆಯ ವರ್ಷವನ್ನು ಯಶಸ್ವಿಯಾಗಿ ಪೂರಯಿಸುತ್ತಿದೆ. ಇದಕ್ಕೆ ಕಾರಣಕರ್ತರಾದ ಎಲ್ಲ ಲೇಖಕರು, ಚಂದಾದಾರರು ಮತ್ತು ಆತ್ಮೀಯ ಹಿತೈಷಿಗಳಿಗೆ ನಾವು ಕೃತಜ್ಞರಾಗಿದ್ದೇವೆ.

ಅನೇಕ ಮಿತ್ರರು **ಸಂಕಲನಕ್ಕೆ** ೨೦೦೨, ೨೦೦೩, ೨೦೦೪ ರ ಮೂರು ವರ್ಷಗಳ ಚಂದಾ ರೂ. ೪೦೦/- ನ್ನು ಆರಂಭದಲ್ಲಿಯೇ ಕೊಟ್ಟಿದ್ದರು. ಅವರು ನಮ್ಮ ಬಗ್ಗೆ ತಳೆದಿದ್ದ ವಿಶ್ವಾಸವನ್ನು ನಾವು ಉಳಿಸಿಕೊಂಡು ಬಂದಿದ್ದೇವೆ. ಹಾಗೆ ರೂ. ೪೦೦/- ಕೊಟ್ಟಿದ್ದವರಿಗೆ ೨೦೦೪ ನೇ ವರ್ಷದ ಆರು ಸಂಚಿಕೆಗಳೂ ಸಕಾಲದಲ್ಲಿ ತಲುಪುತ್ತವೆ.

**ಸಂಕಲನ** - ೧ ರಿಂದ ಈ ವರೆಗಿನ ಎಲ್ಲ ಸಂಚಿಕೆಗಳ ಕೆಲವು ಸೆಟ್‌ಗಳು ಮಾತ್ರ ಈಗ ನಮ್ಮಲ್ಲಿ ಉಳಿದಿವೆ. ಅವನ್ನು ಕೊಂಡು ಸಂಗ್ರಹಿಸಿ ಇಟ್ಟುಕೊಳ್ಳುವ ಮನಸ್ಸಿದ್ದವರು ಆರು ಸಂಚಿಕೆಗಳಿಗೆ ರೂ. ೧೫೦/- ರಂತೆ ಕಳಿಸಿ ಪಡೆಯಬಹುದು.

೧ ನವಂಬರ್, ೨೦೦೩
ಹೂಮನೆ, ಧಾರವಾಡ - ೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

**ಈ ವರ್ಷದ, ಅಂದರೆ ೨೦೦೩ ನೇ ವರ್ಷದ ಚಂದಾ ರೂ. ೧೫೦/- ಕೊಟ್ಟವರ ಚಂದಾಹಣ ಸಂಕಲನ-೧೨ ರೊಂದಿಗೆ ಮುಗಿಯುತ್ತದೆ. ಅಂಥ ಮಿತ್ರರು ಈ ಸಂಚಿಕೆ ತಲುಪಿದ ಕೂಡಲೇ ದಯವಿಟ್ಟು ೨೦೦೪ ನೇ ವರ್ಷದ ತಮ್ಮ ಚಂದಾಹಣ ರೂ. ೧೫೦/- ನ್ನು ಎಂ. ಓ. ಅಥವಾ ಡಿ. ಡಿ. ಮೂಲಕ ತಪ್ಪದೇ ಕಳಿಸಿ ಸಹಕರಿಸಿರಿ. ಚೆಕ್ ಕಳಿಸಿದರೆ ರೂ. ೨೦/- ಹೆಚ್ಚಿಗೆ ಸೇರಿಸಿರಿ.**

# ಪರಿವಿಡಿ

ಸಂಪಾದಕರ ಮಾತು / ೩

೧. ನನ್ನ ಅವ್ವ ನನ್ನ ಅಪ್ಪ : 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತೆ - ೬ :
ಅಶೋಕ ಶೆಟ್ಟರ್ / ೫-೧೮

೨. ಐದು ಕವಿತೆಗಳು : ೧. ಯಾವ ರಂಗಸಾಲೆ ೨. ಕೇಳಿತೆ ಕೊನೆಯ ಹಾಡಿನ ಮಂಗಳ
೩. ಹಾಡು ಸುಡಲು ೪. ಅಹಂ ಅಹಂ ೫. ಒರಟು ಒರಟು ಮೀಟಿದೆ :
ಚಂದ್ರಶೇಖರ ತಾಳ್ಯ / ೧೯-೨೨

೩. ಎರಡು ಕವಿತೆಗಳು : ೧. ಉಪಸ್ಥಿತಿ ೨. ದ್ವೈತ :
ಅರುಂಧತಿ ರಮೇಶ್ / ೨೩-೨೪

೪. ಶಿಕ್ಷಣದಲ್ಲಿ ಕನ್ನಡಕ್ಕೆ ಆದ್ಯತೆ : ಅಗತ್ಯ ಮತ್ತು ಔಚಿತ್ಯ :
ಅರವಿಂದ ಚೊಕ್ಕಾಡಿ/ ೨೫-೨೯

೫. ನೆನಪುಗಳು : ಕವಿತೆ : ಅಪ್ಪಾಸಾಹೇಬ ಅಲಿಬಾದಿ / ೨೯

೬. ಕನ್ನಡ ಪ್ರಗತಿಶೀಲ ಸಾಹಿತ್ಯದ ಮೂರು ಮುಖಗಳು :
ಬಸವರಾಜ ಸಾದರ / ೩೦-೪೧

೭. ದ್ವಾಪರ : ಹೊಸ ಕಾದಂಬರಿ ಪ್ರವೇಶ ಪುಟಗಳು :
ಕಂನಾಡಿಗಾ ನಾರಾಯಣ / ೪೨-೫೫

೮. ನಮ್ಮ ಪ್ರೇಕ್ಷಕ ವರ್ಗ : ರಂಗಚಿಂತನೆ : ದೇಶಪಾಂಡೆ ಸುಬ್ಬರಾಯ / ೫೬-೬೦

೯. ಕಾವ್ಯಕ್ಕೆ ಒದಗಿರುವ ಆಪತ್ತು : ಎಚ್.ಎಸ್.ಶಿವಪ್ರಕಾಶ್ / ರಾ. ಕ. ನಾಯಕ ೬೦-೬೨

೧೦. ಮುದುಕ ಸೆಟ್ಟಿಯೂ ಮೂವರು ಮಕ್ಕಳೂ : ಮಕ್ಕಳ ನಾಟಕ :
ಐ. ಕೆ. ಬೊಳುವಾರು / ೬೩-೭೨

೧೧. ಕಳಬಳ್ಳಿ : ಲಲಿತ ಪ್ರಬಂಧ : ಹಣಮಂತ ತಾಸಗಾಂವಕರ / ೭೩-೭೪

೧೨. ಇನ್ನೂ ಮರಳಿ ಬರಲಿಲ್ಲ ನನ್ನ ಮುನಿದ ಮನಸು : ಕವಿತೆ :
ನೀಲಗಂಗಾ ಎಸ್. ಜಿ. ಸ್ವಾಮಿ / ೭೫

೧೩. ನನ್ನ ನೆನಪಿಗಾಗಿ : ಕವಿತೆ : ಅರುಣ ಚಂ. ಇನಾಮದಾರ / ೭೬

೧೪. ಪುಸ್ತಕ ಪರಿಶೀಲನೆ : / ೭೬-೭೯
೧. ಕಾಲ : ಪ್ರಹ್ಲಾದ ಅಗಸನಕಟ್ಟೆ : ಎಂ. ಆರ್. ಮುಂದಾರವಲ್ಲಿ
೨. ಮರಳುಗಾಡಿನ ಕುಸುಮ : ಭಾರತಿ ಮೋಹನ ಕೋಟಿ : ಬಿ. ಎಸ್. ಗೊರವರ
೩. ವೈದ್ಯಾಧಿಕಾರಿಯ ಬದುಕು ಬವಣೆ : ಎಚ್. ಡಿ. ಚಂದ್ರಪ್ಪಗೌಡ : ವಸಂತ ಅ. ಕುಲಕರ್ಣಿ

೧೫. ಸಂಕಲನ : ಅನಿಸಿಕೆ : ೭೯-೮೦

೧೬. ಕಡೇ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ : ಆವರಣ ಪುಟ ೩

# ನನ್ನ ಅವ್ವ ನನ್ನ ಅಪ್ಪ

ಅಶೋಕ ಶೆಟ್ಟರ್

ಒಂದೇ ಹೆಸರು ಕವಲೊಡೆದಂತೆ, ನನ್ನ ಅವ್ವ ಈರವ್ವ, ಅಪ್ಪ ಈರಪ್ಪ. ಇಬ್ಬರಿಗೂ ಮಧ್ಯೆ ೧೦ ವರ್ಷಗಳ ವ್ಯತ್ಯಾಸ. ಸ್ವಭಾವ ವ್ಯತ್ಯಾಸಗಳೋ ಹಲವಾರು. ಮೂಲತಃ ಇಬ್ಬರೂ ಸಾತ್ವಿಕರು.

ಅಪ್ಪನ ಊರು ಗೋಕಾಕ ತಾಲೂಕಿನ ಕೌಜಲಗಿ. ಅಲ್ಲಿಯ ಪರಶೆಟ್ಟೆಪ್ಪ ಶೆಟ್ಟರ ಪುತ್ರನಾಗಿ ನನ್ನ ತಂದೆ ಜನಿಸಿದ್ದು ೨೮ ಡಿಸೆಂಬರ್ ೧೯೯೦ ರಲ್ಲಿ. ಪರಶೆಟ್ಟೆಪ್ಪ ಶೆಟ್ಟರು ನನ್ನ ತಂದೆಯ ಎಳವೆಯಲ್ಲೇ ಮುಂಬಯಿಗೆ ಹೋಗಿ ಅಲ್ಲಿ ತೇಜಿ - ಮಂದಿ ವ್ಯಾಪಾರ ಅಥವಾ ಸಟ್ಟಾ ವ್ಯಾಪಾರ ಮಾಡುತ್ತಿದ್ದರು. ಅದು ಷೇರುಗಳ ಕೊಳ್ಳಾಟ - ಮಾರಾಟ ಇರಬಹುದೆಂದು ನನ್ನ ಊಹೆ. ಅಥವಾ ಸರಕುಸಾಮಗ್ರಿಗಳನ್ನು ಕೊಂಡಿಟ್ಟು ಹೆಚ್ಚು ಬೆಲೆ ಬಂದಾಗ ಮಾರುವ ವ್ಯಾಪಾರವಿದ್ದೀತು. ನನ್ನ ತಂದೆ ಮುಂಬಯಿಯಲ್ಲಿನ ತನ್ನ ಬಾಲ್ಯದ ಕುರಿತು ಹೇಳಿಕೊಳ್ಳುವಾಗ ಭಯ್ಯಾಗಳ ಅಂಗಡಿಗಳಲ್ಲಿ ಹಣ ಕೊಟ್ಟು ಮನಸೋ ಇಚ್ಛೆ ಹಾಲು ಕುಡಿಯುತ್ತಿದ್ದುದು, ಕುದುರೆ ಸವಾರಿ ಮಾಡುತ್ತಿದ್ದುದು– ಇಂಥ ಪ್ರಸಂಗಗಳು ಕೆಲಕಾಲ ನನ್ನ ಅಜ್ಜನ ಆರ್ಥಿಕ ಸ್ಥಿತಿ ಚೆನ್ನಾಗಿತ್ತೆಂಬುದಕ್ಕಿಂತ ಹೆಚ್ಚಿಗೆ ಹೇಳುವದಿಲ್ಲ. ನನ್ನ ತಂದೆ ಅಲ್ಲಿ ಮರಾಠಿ ಪ್ರಾಥಮಿಕ ಶಿಕ್ಷಣ ಪಡೆದರು. ನನ್ನ ತಂದೆಯ ಮರಾಠಿ ಓದು, ಬರಹ, ಮಾತು ಅವರ ಕನ್ನಡದಷ್ಟೇ ನಿರರ್ಗಳ. ತಮ್ಮ ಕಾರ್ಯನಿಮಿತ್ತ ಅವರು ಮಿರಜ, ಸಾಂಗ್ಲಿ, ಗಡಹಿಂಗ್ಲಜ, ನಿಪ್ಪಾಣಿಗೆ ಹೋದಾಗೆಲ್ಲ ಲೋಕಸತ್ತಾ, ಸಕಾಳ, ತರುಣ ಭಾರತ್ ಇತ್ಯಾದಿ ಒಂದು ಸಿವುಡು ಮರಾಠಿ ಪತ್ರಿಕೆಗಳನ್ನು ತೆಗೆದುಕೊಂಡು ಬಂದು ಅರೆಪದ್ಮಾಸನದಲ್ಲಿ ಕುಳಿತು ರಾತ್ರಿ ಹನ್ನೆರಡು ಒಂದು ಗಂಟೆಯ ವರೆಗೆ ಓದುತ್ತಿದ್ದುದು, 'ಟಾಯಮ್ ಬಾಳ ಆತ ಮಕ್ಕೊರ್‍ರಿ ಇನ್ನs' ಎಂದು ನಮ್ಮವ್ವ ಪದೇ ಪದೇ ಹೇಳುವದು ನಮಗೆ ಸಾಮಾನ್ಯ ದೃಶ್ಯವಾಗಿರುತ್ತಿತ್ತು.

ನನ್ನ ಅಜ್ಜನ ಸುಭಿಕ್ಷದ ಕಾಲ ಮುಗಿದು ಅವರು ತಮ್ಮ ವ್ಯವಹಾರದಲ್ಲಿ ಸಂಪೂರ್ಣ ನೆಲ ಕಚ್ಚಿದ್ದರು. ಈ ಅಜ್ಜನ ನೆನಪು ನನಗೆ ಮಸಕು ಮಸಕಾಗಿ ಇದೆ. ಬೈಲಹೊಂಗಲದಲ್ಲಿ ನಾವಿದ್ದ ಬಾಡಿಗೆ ಮನೆಯೊಂದರ ಹೊರಕೋಣೆಯಲ್ಲಿ ಆತನ ವಾಸ. ಜೋಳದ ಒಣ ದಂಟು ಸುಲಿದು ಅದರ ಬೆಂಡು ಮತ್ತು ಸಿಬರುಗಳಿಂದ ಆತ ತಾಸುಗಟ್ಟಲೆ ಶ್ರದ್ಧೆ ವಹಿಸಿ ಮಾಡಿಕೊಟ್ಟ ಆಟದ ಬಂಡಿಯನ್ನು ನಾನು ಮುದ್ದಾಂ ಕೆಡಿಸಿ ಅವನ ಕೋಪಕ್ಕೆ ಕಾರಣನಾಗುತ್ತಿದ್ದುದು, ನನ್ನವ್ವ ನನ್ನನ್ನು ಬೈಯ್ಯುತ್ತಿದ್ದುದು ಸ್ಪಷ್ಟವಾಗಿ ನೆನಪಿವೆ. ಮತ್ತೊಂದು ಸ್ಪಷ್ಟ ನೆನಪು ಬಿಳಿ ರುಮಾಲು, ಧೋತರ, ಬಗಲಗಸಿ ಅಂಗಿಯಿಂದಲಂಕೃತವಾದ ಆ ನನ್ನ ಅಜ್ಜನ ಪಾರ್ಥಿವ ಶರೀರವನ್ನು ಅದೇ ಮಂದ ಬೆಳಕಿನ ಹೊರಕೋಣೆಯಲ್ಲಿ ಗೋಡೆಗೊರಗಿಸಿ ಕುಳ್ಳಿರಿಸಿದ್ದು. ನನ್ನವ್ವ ಸಂಪೂರ್ಣ ಶ್ರದ್ಧೆಯಿಂದ ಅಜ್ಜನ ಸ್ವಚ್ಛತೆ - ಶುಶ್ರೂಷೆ ಮಾಡುತ್ತಿದ್ದಳು. ನನ್ನ ತಂದೆಯ ತಾಯಿಯನ್ನು ನಾನು ನೋಡಿಲ್ಲ. ಅವಳು ಮೊದಲೇ ಗತಿಸಿದ್ದಳೆಂದು ತೋರುತ್ತದೆ. ಆಕೆ ಮತ್ತು ಖ್ಯಾತ ಜಾನಪದ ಗಾಯಕರಾಗಿದ್ದ ಹುಕ್ಕೇರಿ ಬಾಳಪ್ಪನವರ ತಾಯಿ ಅಕ್ಕತಂಗಿಯರು. ಸವದತ್ತಿ ತಾಲೂಕಿನ ಆಲದಕಟ್ಟಿ ಅವರ ತವರುಮನೆ. ಆ ಮನೆಯ ಹಿರಿಯರು ತಲ್ಲೂರ ದೇಸಾಯರ ಬಳಿ ಕಾರಭಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದುದರಿಂದ ತಲ್ಲೂರ ಶೆಟ್ಟರು ಎಂದು ಕರೆಸಿಕೊಳ್ಳುತ್ತಿದ್ದರು.

ಮುಂಬಯಿಯಿಂದ ಮರಳಿದ ನಂತರ ಅಲ್ಲಿ ತಾವು ಅದುವರೆಗೆ ಪಡೆದ ಹಂತದ ಶಿಕ್ಷಣವನ್ನು ನನ್ನ ತಂದೆ ಪುನಃ ಕನ್ನಡದಲ್ಲಿ ಪಡೆಯಬೇಕಾಯಿತು. ಆಗಿನ ಮುಲ್ಕಿ (೭ ನೇ ಇಯತ್ತೆ)

ಮುಗಿಸಿ ಅವರು ಶಿಕ್ಷಣ ಕೊನೆಗೊಳಿಸಿದ್ದರು. ಬೈಲಹೊಂಗಲಕ್ಕೆ ಬಂದು ನೆಲೆಗೊಳ್ಳುವ ಮುನ್ನ ಅಪ್ಪ ಒಂದಷ್ಟು ವರ್ಷ ಗೋಕಾಕದಲ್ಲಿ, ಒಂದೆರಡು ವರ್ಷ ಮುನವಳ್ಳಿಯಲ್ಲಿ ಇದ್ದರು. ಮತ್ತೊಂದು ವರ್ಷ ಪಾಲುಗಾರಿಕೆಯಲ್ಲಿ ವ್ಯವಹಾರವೊಂದನ್ನು ಪ್ರಾರಂಭಿಸಿದ್ದರಾದರೂ ಪಾಲುದಾರನ ವಂಚಕ ಬುದ್ಧಿಯಿಂದಾಗಿ ಅದನ್ನೂ ಕೈಬಿಟ್ಟಿದ್ದರು. ಕೊನೆಗೆ ತಲ್ಲೂರ ಶೆಟ್ಟರು ಎಂದು ಕರೆಸಿಕೊಳ್ಳುತ್ತಿದ್ದ ತನ್ನ ಸೋದರಮಾವಂದಿರ ಆಶ್ರಯಕ್ಕೆ ಬೈಲಹೊಂಗಲಕ್ಕೆ ಬಂದರು. ಆಮೇಲೆ ಬೈಲಹೊಂಗಲದ ಪ್ರತಿಷ್ಠಿತ ಜಿ. ಎಸ್. ಮೆಟಗುಡ್ ಅವರ ವಿಜಯ ಕಾಟನ್ ಆ್ಯಂಡ್ ಆಯಿಲ್ ಮಿಲ್‌ನಲ್ಲಿ ಕಾರಕೂನ ಅಥವ ಅಕೌಂಟಂಟ್ ನೌಕರಿ ಸೇರಿ ಪ್ರತ್ಯೇಕವಾಗಿ ಬದುಕಿದರು.

ಹಾಗೆ ಬೈಲಹೊಂಗಲದಲ್ಲಿ ನನ್ನ ನೆನಪುಗಳು ನಿಚ್ಚಳವಾಗಿ ಹಿಂದಕ್ಕೆ ಹೋಗುವಷ್ಟು ಅವಧಿಯಲ್ಲಿ ನಾವು ಬದುಕಿದ್ದು ಒಂದು ತೀರ ಸಾಮಾನ್ಯ ಮನೆಯಲ್ಲಿ. ಅದಕ್ಕೆ ನಾನಾಗಲೇ ಪ್ರಸ್ತಾಪಿಸಿದ ಪ್ರತ್ಯೇಕವಾಗಿದ್ದ ಒಂದು ಹೊರಕೋಣೆ, ಅದನ್ನು ಬಿಟ್ಟರೆ ಎರಡೇ ಅಂಕಣ. ಒಂದು ಪಡಸಾಲೆ ಮತ್ತು ಒಂದು ಅಡುಗೆಮನೆ. ದೊಡ್ಡದಾಗಿದ್ದ ಅಡುಗೆಮನೆಯ ಒಂದು ಮೂಲೆಯಲ್ಲಿ ಬಚ್ಚಲಿತ್ತು. ಹಿತ್ತಲಲ್ಲಿ ಕಸಕಡ್ಡಿ ಸಗಣಿ - ಗುಂಜಳಗಳ ತಿಪ್ಪೆ. ಏಕೆಂದರೆ ನಮ್ಮವ್ವ ಒಂದು ಆಕಳನ್ನು ಸಾಕಿಕೊಂಡಿದ್ದಳು. ಇನ್ನುಳಿದಂತೆ ಸಾಧುವಾಗಿದ್ದ ಆ ಆಕಳಿಗೆ 'ಕಾವಕೂಲಿ'ಗೆ ಹೊಡೆದುಕೊಂಡು ಹೋದವ ಸಂಜೆ ಒಮ್ಮೊಮ್ಮೆ ಮನೆಯ ತಿರುವಿನಲ್ಲೇ ಅದನ್ನು ಬಿಟ್ಟು ಹೋದ ಮೇಲೆ ಮನೆಗೆ ಬರದೇ ಸಮೀಪದಲ್ಲಿದ್ದ ಹೊಲ ಗದ್ದೆಗಳಲ್ಲಿ ತುಡುಗು ಮೇಯುವ ಚಟವಿತ್ತು. ಅದನ್ನು ಕೊಂಡವಾಡಕ್ಕೆ ಒಯ್ದು ಹಾಕಿದರೆ ದಂಡ ತೆರಬೇಕಾದೀತೆಂಬ ಕಾರಣಕ್ಕೆ ನನ್ನವ್ವ ಅದನ್ನು ಕರೆತರಲು ನನ್ನಣ್ಣ ಬಸವರಾಜನನ್ನು –ಅವನಾಗ ಹೈಸ್ಕೂಲ್ ವಿದ್ಯಾರ್ಥಿ– ಕಳಿಸುತ್ತಿದ್ದಳು. ಅದರ ಬೆಂಬತ್ತಿ ಓಡಾಡಿ ಕೋಲಿ ಹಾಯ್ದು ಕೆಸರು ತುಳಿದು ಅಣ್ಣ ಅದು ಹೇಗೋ ಕರೆತಂದಾದ ಮೇಲೆ ಅದನ್ನು ಕಟ್ಟಿಹಾಕಿ 'ದನಕ್ಕೆ ಬಡಿದಂತೆ' ಬಡಿದು ಕೋಪ ಶಮನಗೊಳಿಸಿಕೊಳ್ಳುತ್ತಿದ್ದ.

ಒಂಬತ್ತು ಮಕ್ಕಳ ಪೈಕಿ ಚೊಚ್ಚಲು ಮಗುವಾಗಿ ಹುಟ್ಟಿ ಎಳವೆಯಲ್ಲೇ ತೀರಿಹೋದ ಒಂದು ಗಂಡು ಮತ್ತು ಬಾಲ್ಯಾವಸ್ಥೆಗೆ ತಲುಪಿ ಕಣ್ಮುಚ್ಚಿದ ಒಂದು ಹೆಣ್ಣು ಬಿಟ್ಟು ಉಳಿದವರು ನಾವು ಏಳು ಜನ ಇದ್ದೆವು. ಅಕ್ಕಂದಿರ ಪೈಕಿ ಶಾಂತಕ್ಕ ಎಂಬವಳನ್ನು ನನ್ನ ಸೋದರಮಾವನಿಗೆ ಮದುವೆ ಮಾಡಿಕೊಟ್ಟಿದ್ದು ಅವಳು ನನ್ನ ತಾಯಿಯ ತವರೂರಾಗಿದ್ದ ಸವದತ್ತಿ ತಾಲೂಕಿನ ಸತ್ತಿಗೇರಿಯಲ್ಲಿದ್ದುದರಿಂದ ನಮ್ಮ ಮನೆಯಲ್ಲಿ ನಾವು ಆರು ಜನ ಮಕ್ಕಳು, ನನ್ನ ತಂದೆ, ತಾಯಿ ಹಾಗೂ ನಮ್ಮ ಅಜ್ಜ ಹೀಗೆ ಒಂಬತ್ತು ಜನ ಇದ್ದೆವು. ಕೊನೆಯವನಾಗಿ ಹುಟ್ಟಿದ ನನ್ನ ತಮ್ಮ ಶಿವಾನಂದ ಆಗಿನ್ನೂ ಕೈಗೂಸು. ಅವನು ಹುಟ್ಟುವ ಹೊತ್ತಿಗೆ ನನ್ನ ತಂದೆಗೆ ೫೦ ವರ್ಷ. ನನ್ನ ತಾಯಿಗೆ ೪೦. ಆ ವಯಸ್ಸಿನಲ್ಲಿ ಮತ್ತೊಂದು ಹಡೆಯಬೇಕಾಗಿ ಬಂದುದು 'ನಾಚಿಕಿ ಸಾವಾ'ಗಿತ್ತು ಎಂದು ನನ್ನವ್ವ ಒಮ್ಮೆ ಅಂದಂತಿತ್ತು. ಅದು ಸಂಕೋಚವೋ ೨೦ ವರ್ಷಗಳ ಅವಧಿಯಲ್ಲಿ ಒಂಬತ್ತು ಮಕ್ಕಳನ್ನು ಹಡೆಯುವ ಸ್ಥಿತಿಯ ಕುರಿತ ಬೇಸರವೋ ಗೊತ್ತಿಲ್ಲ.

ಆಗ ನನ್ನ ತಂದೆಗೆ ಸಿಗುತ್ತಿದ್ದುದು ವಾರಕ್ಕೆ ೨೫ ಅಂದರೆ ತಿಂಗಳಿಗೆ ೧೦೦ ರೂಪಾಯಿಯ ವೇತನ. ಅದರಲ್ಲಿ ಮನೆ ಬಾಡಿಗೆ ಎಂದು ೧೦ ರೂಪಾಯಿ ಕಳೆದು ಉಳಿದ ೯೦ ರೂಪಾಯಿಯಲ್ಲಿ ಒಂಬತ್ತು ಜನರ ಬದುಕು ನಡೆಯಬೇಕಿತ್ತು. ಈಗ ನಾನು ಹೇಳುತ್ತಿರುವದು ೧೯೬೨ - ೬೩ ರ ಮಾತು. ಬಾಡಿಗೆಯ ೧೦ ರೂಪಾಯಿ ಕೊಡುವಲ್ಲಿ ವಿಳಂಬವಾದರೆ ಮನೆಯ ಮಾಲಿಕ ಯಡಳ್ಳಿ ಬಸವಣ್ಣೆಪ್ಪನೆಂಬ ವೃದ್ಧ ಬಂದು ಮನೆಯಂಗಳದಲ್ಲಿ ನಿಂತು ಕೂಗಾಡುವದು ಶತಸ್ಸಿದ್ಧವಿತ್ತು. ಬ್ರಿಟಿಶರಂಥ ಸ್ವಚ್ಛ ಮೈಬಣ್ಣದ ಆ ಸ್ಪುರದ್ರೂಪಿ ಮುದುಕ ತಲೆಯ ಮೇಲೊಂದು ಹಳದಿ ರುಮಾಲು ಸುತ್ತಿ, ಬಿಳಿ ಅಂಗಿ, ಕೋಟು, ಧೋತರ ಉಟ್ಟು, ಕೈಲೊಂದು ಛತ್ರಿ ಹಿಡಿದು

ಬರುತ್ತಿದ್ದ. ತಲೆಯ ಮೇಲಿನ ರುಮಾಲು ತೆಗೆದು ಮೈಸೂರು ಪೇಟ ತೊಡಿಸಿದರೆ ಸಾಕ್ಷಾತ್ ಮುದ್ದೇನಹಳ್ಳಿಯ ಮೋಕ್ಷಗುಂಡಂ ವಿಶ್ವೇಶ್ವರಯ್ಯ! 'ಕೊಡತೀವ ತಗೊರ್ರಿ, ಮುಂದಿನ ವಾರ ಕೊಡತೀವ ತಗೊರ್ರಿ' ಎಂದು ನನ್ನ ಅವ್ವ - ಅಕ್ಕ ವಿನಂತಿಸಿ ಅವನನ್ನು ಸಾಗಹಾಕಿದ ಮೇಲೆ ಅವನು ಹೇಗೆ ಮುಖವೆತ್ತಿ ಮಾತಾಡಿದ, ಒಂದು ಕಾಲು ಮುಂದಿಟ್ಟು ಛತ್ರಿಯ ಸಮೇತ ಹೇಗೆ ಕೈ ಮೇಲೆತ್ತೆತ್ತಿ ಕೂಗಾಡಿದ ಎಂದು ಅಭಿನಯಿಸಿ ನಾನು ನನ್ನ ಅಕ್ಕಂದಿರು ನಗಾಡುತ್ತಿದ್ದೆವು. ನನ್ನವ್ವ ಅಪ್ಪನಿಗೂ ಇದು ಸಮ್ಮತವೇ ಇರುತ್ತಿತ್ತು. ಏಕೆಂದರೆ ಅವರೂ ನಗೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಆದರೆ ವಾಸ್ತವವಾಗಿ ಬದುಕು ಕಷ್ಟಸಾಧ್ಯವಾಗಿತ್ತು. ಪಡಸಾಲೆಯ ನೆಲದ ಮೇಲೆ ಜಮಖಾನ ಹಾಸಿ ಎಲ್ಲರೂ ಒಬ್ಬರ ಪಕ್ಕದಲ್ಲೊಬ್ಬರು ಮಲಗುತ್ತಿದ್ದೆವು. ಆ ಮನೆಯಲ್ಲಿ ತುಂಬಿಕೊಳ್ಳುತ್ತಿದ್ದ ಹೊಗೆ ನಮ್ಮ ಅತಿ ದೊಡ್ಡ ಸಮಸ್ಯೆಯಾಗಿತ್ತು. ಚಿಕ್ಕ ಕಿಟಕಿಯೊಂದರ ಹೊರತು ಅದಕ್ಕೊಂದು ಔಟ್‌ಲೆಟ್ ಅಂತ ಇರಲಿಲ್ಲ. ಅದು ಅಲ್ಲೇ ಸುತ್ತಿ ಮನೆಗೋಡೆಗಳು ಮಸಿ ಹಿಡಿದಿದ್ದವು. ನನ್ನವ್ವ ಪ್ರತಿನಿತ್ಯ ಅದನ್ನು ಶಪಿಸುತ್ತಿದ್ದಳು. ಮನೆಯಲ್ಲಿ ಕತ್ತಲೆ ಸದಾ ಡೇರೆ ಹಾಕಿರುತ್ತಿತ್ತು.

ನನ್ನ ತಂದೆಯ ಸೋದರಮಾವಂದಿರಿಗೆ ಪೇಟೆಯ ಉಪಬೀದಿಯಲ್ಲಿ ಸ್ವಂತ ಮನೆಗಳಿದ್ದವು. ಕಮೀಶನ್ ಏಜನ್ಸಿ ಇತ್ತು. ಸ್ಥಿತಿವಂತಿಕೆ ಇತ್ತು. ಚನಬಸಪ್ಪ ಮತ್ತು ಅಪ್ಪಯ್ಯಪ್ಪ ಎಂಬ ಆ ಸೋದರಮಾವಂದಿರ ಪೈಕಿ ಹಿರಿಯವನಾದ ಚನಬಸಪ್ಪ –ಅದಾಗಲೇ ಹಣ್ಣುಹಣ್ಣು ಮುದುಕನಾಗಿದ್ದವ– ಹೊರಕೋಣೆಯಲ್ಲಿ ಒಬ್ಬನೇ ಇಸ್ಪೀಟ್ ಎಲೆಗಳನ್ನು ಹರವಿಕೊಂಡು ಅದೇನೋ ಆಡುತ್ತ ಕುಳಿತಿರುತ್ತಿದ್ದ. ಯಲಿಗಾರ ಮನೆತನದ ಬಾಲಕನೊಬ್ಬ ತನ್ನ ತಾಯಿಯ ತವರೂರಾದ ಹುಣಸಿಕಟ್ಟೆಯಿಂದ ಬಂದು ಹಾಗೊಮ್ಮೆ ಭೇಟಿಯಾದ ಸಂದರ್ಭದಲ್ಲಿ ಚನ್ನಬಸಪ್ಪ ಅವನಿಗೆ ಹೇಳಿದ್ದು, 'ತಮ್ಮಾ ನಿನಗೆ ವಿದೇಶಯೋಗವಿದೆ' ಎಂಬ ಮಾತು. ಅದು ಸತ್ಯವಾಯಿತು. ನಂತರ ಕುಮಾರಸ್ವಾಮಿಗಳೆಂದು ಖ್ಯಾತರಾದ ಆ ಯೋಗಿ ದೇಶ ವಿದೇಶ ಸುತ್ತಿ, ಪೋಪ್ ಜಾನ್ ಪಾಲ್‌ರನ್ನು ವ್ಯಾಟಿಕನ್ ಸಿಟಿಯಲ್ಲಿ ಕಂಡು ಇಷ್ಟಲಿಂಗವನ್ನು ಕೊಟ್ಟು ಬಂದರು. ಧಾರವಾಡದಲ್ಲಿ ತಪೋವನ ಸ್ಥಾಪಿಸಿದರು. ಇದನ್ನೆಲ್ಲ ನನ್ನ ತಂದೆ ಹೇಳುತ್ತಿದ್ದರು. ಆದರೆ ಗಣೇಶ ಚತುರ್ಥಿಯ ಸಂದರ್ಭದಲ್ಲಿ ತಲ್ಲೂರ ಶೆಟ್ಟರ ಮನೆಯಲ್ಲಿ ನಮಗೆ ನಿಯಮಿತವಾಗಿ ಆಮಂತ್ರಣವಿರುತ್ತಿದ್ದು ಆಗ ಊಟಕ್ಕೆ ನಮ್ಮ ತಂದೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದುದು ಬಿಟ್ಟರೆ ಇನ್ನುಳಿದಂತೆ ಸಹಾಯ ಯಾಚಿಸಿ ಆಗಲಿ ಸುಮ್ಮನೇ ಆಗಲಿ ಅವರಲ್ಲಿ ಹೋಗುತ್ತಿರಲಿಲ್ಲ.

ನಮ್ಮ ತಂದೆ ಬದುಕನ್ನು ಸ್ವೀಕರಿಸಿದ ರೀತಿಯೇ ಅದ್ಭುತವಾಗಿತ್ತು. ಬೈಲಹೊಂಗಲಕ್ಕೆ ಬಂದು ನೆಲೆಗೊಳ್ಳುವ ಮುನ್ನ ಗೋಕಾಕದಲ್ಲಿದ್ದಾಗಲೇ ನನ್ನ ತಂದೆ ಮತ್ತು ಅವರ ತಮ್ಮ ಮಹಾಲಿಂಗಪ್ಪ ಶೆಟ್ಟರ ಇಬ್ಬರೂ ಪೂರ್ಣಪ್ರಮಾಣದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದವರು. ರಾಷ್ಟ್ರೀಯವಾದ ನನ್ನ ತಂದೆಯ ಆದರ್ಶವಾಗಿತ್ತು. ಅನಿಶ್ಚಿತತೆ, ಸಂಸಾರದ ತೊತ್ತಳದುಳಿತಗಳು ಅದಕ್ಕೆ ತಡೆಯಾಗಲಿಲ್ಲ. ಯರವಡಾ, ಹಿಂಡಲಗಾ ಜೇಲುಗಳಲ್ಲಿಯ ತಮ್ಮ ವಾಸದ ಅವಧಿಯ ನೆನಪುಗಳನ್ನು ನಮ್ಮ ತಂದೆ ನನ್ನೊಂದಿಗೆ ಹಲವು ಸಲ ಬಿಚ್ಚುತ್ತಿದ್ದರು. ಅದರಲ್ಲಿ ಒಂದು ಘಟನೆ ನನಗೆ ನನ್ನ ತಂದೆಯ ನಿರ್ಧಾರದ ದಿಟ್ಟತನವನ್ನು ತೋರಿತ್ತು. ಹಾಗೆ ಒಮ್ಮೆ ಅವರು ಬ್ರಿಟಿಶ್ ಸರಕಾರದಿಂದ ಶಿಕ್ಷೆಗೊಳಗಾಗಿ ಜೇಲಿನಲ್ಲಿದ್ದಾಗ ನನ್ನ ತಾಯಿಗೆ ಅವಳ ತವರಿನಲ್ಲಿ ಹೆರಿಗೆಯಾಗಿ ಆ ಸಂದರ್ಭದಲ್ಲಿ ನಮ್ಮ ತಂದೆಯವರನ್ನು ನೋಡಬೇಕೆನ್ನಿಸಿ ಪತ್ರ ಬರೆಸಿದ್ದರಂತೆ. ಜೇಲಿನ ಆಡಳಿತ ಅವರನ್ನು ಪೆರೋಲ್ ಮೇಲೆ ಬಿಡಲು ಸಿದ್ಧವೂ ಆಯಿತು. ಆದರೆ ಅದಕ್ಕೊಂದು ಪೂರ್ವಶರತ್ತು ಇತ್ತು. ಸತ್ಯಾಗ್ರಹದಲ್ಲಿ ತಾನು ಪಾಲ್ಗೊಂಡಿದ್ದು ತಪ್ಪು ಎಂದು ನನ್ನ

ತಂದೆ ಲಿಖಿತವಾಗಿ ಕ್ಷಮಾಪಣೆ ಕೋರಬೇಕಿತ್ತು. ನನ್ನ ತಂದೆ ಅದಕ್ಕೆ ಸಿದ್ಧರಾಗಲಿಲ್ಲ. ಅವರ ಮನದಲ್ಲಿದ್ದ ಯೋಚನೆಗಳು ಬಹುಶಃ ಎರಡು : ಮೊದಲನೆಯದು ಆದರ್ಶದ ಮಾತು. ನನ್ನ ತಂದೆ ಸ್ವತಃ ಗಾಂಧೀಜಿಯವರನ್ನು ಕಂಡು ಸತ್ಯಾಗ್ರಹದಲ್ಲಿ ಭಾಗವಹಿಸುವ ಇಚ್ಛೆಯನ್ನು ವ್ಯಕ್ತಗೊಳಿಸಿ ಧುಮುಕಿದ್ದ ಆಂದೋಲನವಾಗಿತ್ತದು (ಗಾಂಧಿಯನ್ನು ಮುಖತಃ ಕಂಡು, ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸುವದಾಗಿ ಹೇಳಿ ಅವರ ಸಮ್ಮತಿ ಪಡೆದು ಬಂದದ್ದು ನನ್ನ ತಂದೆಯ ಮಟ್ಟಿಗೆ ತಮ್ಮ ಬದುಕಿನ ಅತ್ಯಂತ ಸ್ಮರಣಾರ್ಹ ಘಟನೆಯಾಗಿತ್ತು). ಎರಡನೆಯದು ಸರಳ ತರ್ಕದ ಮಾತು. ಹೇಗೂ ಕೂಸು - ಬಾಣಂತಿ ಆರಾಮವಾಗಿದ್ದಾರೆ ಎಂದಿತ್ತು ಪತ್ರ. ಹಾಗಿದ್ದ ಮೇಲೆ ಹೋಗುವ ಅಗತ್ಯವೇನು ?

ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಚಿಂತನೆಯನ್ನು ವ್ಯಕ್ತಿತ್ವವನ್ನು ತೀವ್ರವಾಗಿ ಪ್ರಭಾವಿಸಿದ ವಿಚಾರಗಳು ತತ್ವಗಳು ಸ್ವಾತಂತ್ರ್ಯಾನಂತರ ನನ್ನ ತಂದೆಯ ಬದುಕಿನ ಆದರ್ಶಗಳಾದವು. ನನ್ನ ತಂದೆಯ ವ್ಯಕ್ತಿತ್ವಕ್ಕೊಂದು ಸರಳತೆ ಇತ್ತು. ಸಜ್ಜನಿಕೆ ಇತ್ತು. ಬಿಳಿಯ ಉದ್ದ ತೋಳಿನ ಶರ್ಟು, ಕೋಟು, ಧೋತರ ಹಾಗೂ ಗಾಂಧೀ ಟೋಪಿ ಇವು ಜೀವನದುದ್ದಕ್ಕೂ ಅವರ ಉಡುಗೆಗಳು. ಸಭ್ಯತೆ ಅವರ ವ್ಯಕ್ತಿತ್ವದ ಒಟ್ಟು ಸಾರ. ಯಾರೊಂದಿಗೂ ಅವರು ಕಲಹ ಮಾಡಿದ್ದಾಗಲಿ, ತಮಗೆ ಸಂಬಂಧವಿರದ ವಿಷಯಗಳಲ್ಲಿ ತಲೆ ಹಾಕಿದ್ದಾಗಲಿ, ಅವರಿವರ ಬಗ್ಗೆ ಸಲ್ಲದ ಮಾತಾಡಿದ್ದಾಗಲಿ ನಾನೆಂದೂ ನೋಡಲಿಲ್ಲ. ಯಾವ ವ್ಯಸನಗಳೂ ಇರಲಿಲ್ಲವಾಗಿ ಸ್ವಂತದ್ದೆನ್ನುವ ಖರ್ಚುಗಳೂ ಇರಲಿಲ್ಲ. ವೇತನದ ಹಣವೆಲ್ಲವನ್ನೂ ಮನೆಗೆ ಕೊಡುತ್ತಿದ್ದರು. ಅವ್ವ ಮತ್ತು ನಮ್ಮ ಹಿರಿಯಕ್ಕ ಗೌರಕ್ಕ ಹೇಗೋ ನಿಭಾಯಿಸುತ್ತಿದ್ದರು.

ಅಂಥ ದುರ್ಭರ ದಿನಗಳಲ್ಲೇ ನನ್ನ ಹಿರಿಯ ಸೋದರಮಾವ ವೀರಣ್ಣ ಬಸವಂತಪ್ಪ ಮರಡಿಯನ್ನು ಸತ್ತಿಗೇರಿಯಲ್ಲಿ ಗುಂಡಿಟ್ಟು ಕೊಲ್ಲಲಾಯಿತು. ತನ್ನ ಮೊದಲ ಹೆಂಡತಿಗೆ ಮಕ್ಕಳಾಗಲಿಲ್ಲವೆಂಬ ಕಾರಣಕ್ಕೆ ಆತ ನನ್ನ ಹಿರಿಯಕ್ಕ ಗೌರಕ್ಕನನ್ನು ಮದುವೆಯಾಗಿದ್ದ. ಈ ಮದುವೆಯಾದ ಕೆಲವೇ ತಿಂಗಳಲ್ಲಿ ಈ ಕೊಲೆ ನಡೆದುಹೋಗಿತ್ತು. ರಸಿಕತನ, ಆತ್ಮವಿಶ್ವಾಸ, ಅಚ್ಚುಕಟ್ಟಾದ ವೇಷಭೂಷಣ ಹಾಗೂ ಸುಶಿಕ್ಷಿತ ನಡಾವಳಿಗಳಿಂದ ಕೂಡಿದ ಆಕರ್ಷಕ ವ್ಯಕ್ತಿತ್ವದಿಂದಾಗಿ ಆತ ಸುತ್ತ ಘಾಸಲೆಯಲ್ಲಿ ಎದ್ದು ಕಾಣುವ ಗರಿಮೆಯೊಂದನ್ನು ಹೊಂದಿದ್ದ. ಆತನ ವರ್ಚಸ್ಸನ್ನು ಸಹಿಸದೇ ಆತನ ಗೆಳೆಯನೇ ಆಗಿದ್ದ ಊರ ಗೌಡ ಆತನಿಗೆ ಗುಂಡಿಕ್ಕಿದ್ದ. ಆ ನನ್ನ ಸೋದರಮಾವ ಬೈಲಹೊಂಗಲಕ್ಕೆ ಬಂದಾಗ ಪಡಸಾಲೆಯ ಗೋಡೆಯಲ್ಲಿದ್ದ ಗೂಟಕ್ಕೆ ತೂಗುಹಾಕಿರುತ್ತಿದ್ದ ಜೋಡುನಳಿಗೆಯ ಬಂದೂಕು ನಮಗೆ ಅಚ್ಚರಿಯ, ಭಯದ ವಸ್ತುವಾಗಿ ಕಾಣುತ್ತಿತ್ತು. ತನ್ನ ಅಣ್ಣನನ್ನು ಕೊಂದ ಪಾಟೀಲನನ್ನು ಗುಂಡಿಕ್ಕಿ ಸಾಯಿಸಿ ಸೇಡು ತೀರಿಸಿಕೊಳ್ಳಲೆಂದು ಈಗ ಧಾರವಾಡದಲ್ಲಿ ನೆಲೆಸಿರುವ ನನ್ನ ಕಿರಿಯ ಸೋದರಮಾವ ಗುರುಸಿದ್ದಪ್ಪ ಮರಡಿ ಅದು ಹೇಗೋ ಒಂದು ಕಂಟ್ರಿ ಪಿಸ್ತೂಲು ಸಂಪಾದಿಸಿ ಅದು ಜಪ್ತಿಯಾಗಿ ಪೋಲೀಸರು ಹುಡುಕತೊಡಗಿದಾಗ ತನ್ನ ಹೆಂಡತಿ (ನನ್ನ ಇನ್ನೊಬ್ಬ ಅಕ್ಕ ಶಾಂತಕ್ಕ) ಹಾಗೂ ಮಗನನ್ನು ತಂದು ನಮ್ಮ ಮನೆಯಲ್ಲೇ ಇರಿಸಿ ತಾನು ತಲೆಮರೆಸಿಕೊಂಡ. ಈ ಹೆಚ್ಚುವರಿ ಸದಸ್ಯರಿಂದಾಗಿ ಪರಿಸ್ಥಿತಿ ಮತ್ತಷ್ಟು ದುರ್ಭರವಾಗಿರಬೇಕು.

ಆದರೆ ನನ್ನ ತಂದೆ ಚಿಂತಾಕ್ರಾಂತರಾಗಿ ತಲೆ ಮೇಲೆ ಕೈಹೊತ್ತು ಕುಳಿತದ್ದಾಗಲಿ, ಕೈಲಾಗದವರಂತೆ ಸಿಡುಕಿದ್ದಾಗಲಿ, ಅಸಹನೆಯಿಂದ ವರ್ತಿಸಿದ್ದಾಗಲಿ, ಸಾಲ - ಸೋಲ ಮಾಡಿದ್ದಾಗಲಿ ನಮಗೆ ಅನುಭವಕ್ಕೆ ಬರಲಿಲ್ಲ. ನಾನು ಈಗ ಯೋಚಿಸುವಂತೆ ನಾವಾಗ ಬದುಕಿದ್ದ ಪರಿಸರ ನಮ್ಮ ತಂದೆಯ ಸುಸಂಸ್ಕೃತ ವ್ಯಕ್ತಿತ್ವಕ್ಕಾಗಲಿ, ನಮ್ಮ ಕುಟುಂಬದ ಹಿನ್ನೆಲೆಗಾಗಲಿ ಪ್ರಶಸ್ತವಾದುದಾಗಿರಲಿಲ್ಲ. ಬಸ್‌ಸ್ಟ್ಯಾಂಡಿನ ಪಾರ್ಶ್ವದಲ್ಲಿ ಎರಡು ತೋಟಗಳ ನಡುವೆ ನೇರವಾಗಿ ಸಾಗುವ ಬೀದಿಯ ಕೊನೆಯೇ ನಮ್ಮ ಓಣಿಯಾಗಿತ್ತು. ಅದನ್ನು ತಾಸೇದಾರ ಓಣಿ ಎನ್ನುತ್ತಿದ್ದರು.

ಅಲ್ಲಿಯ ಮನೆಗಳಲ್ಲಿ ಬಾಡಿಗಿದ್ದುದು ಬಹುಪಾಲು ಸುಖ್ಯ ಜನರೇ. ಒಬ್ಬ ಉಡುಪಿ ಹೋಟೆಲ್ ಮಾಲಿಕನ, ನಮ್ಮ, ಕೆಎಸ್ಸಾರ್ಟಿಸಿಯ ಒಬ್ಬ ಡ್ರೈವರನ. ಮತ್ತೊಬ್ಬ ಕಂಡಕ್ಟರನ ಮನೆಗಳು ಒಂದು ಸಾಲಿನಲ್ಲಿದ್ದವು. ರಸ್ತೆಯಾಚೆ ನಮಗೆದುರಾಗಿದ್ದ ಗಿರೆಣ್ಣವರ ಎಂಬುವರ ಮನೆಯ ಬಾಗಿಲು ವಾಸ್ತವವಾಗಿ ಅವರ ಹಿತ್ತಿಲು ಬಾಗಿಲಾಗಿದ್ದು ಅಲ್ಲಿ ಪ್ರವೇಶಿಸಿ ತಲೆಬಾಗಿಲಿನಿಂದ ಹೊರಬಿದ್ದರೆ ಅದು ರಾಣಿ ಕಿತ್ತೂರು ಚೆನ್ನಮ್ಮನನ್ನು ಬಂಧಿಸಿಟ್ಟ ಸೆರೆಮನೆಯ ಶಿಥಿಲ ಅವಶೇಷಗಳಿಗೆ ಮುಖಮಾಡಿ ತೆರೆದುಕೊಳ್ಳುತ್ತಿತ್ತು. ಅದಕ್ಕೆ ಹೂಡೆ ಎನ್ನುತ್ತಿದ್ದರು. ಹೀಗಾಗಿ ಅದು ಹೂಡೆದ ಓಣಿ. ಆ ಒಟ್ಟು ಪರಿಸರದ ಕೆಲ ಮನೆಗಳಲ್ಲಿ ಕಳ್ಳಬಟ್ಟಿಸಾರಾಯಿ ತಯಾರಾಗುತ್ತಿತ್ತೆಂಬ ಕಾರಣಕ್ಕೆ ಆಗಾಗ ರೇಡ್ ಮಾಡುತ್ತಿದ್ದ ಪೋಲೀಸಿನವರು ಅಂಥವರ ಮನೆಗಳನ್ನಷ್ಟೇ ಅಲ್ಲದೇ ನಮ್ಮ ಮನೆಯನ್ನು ಒಳಗೊಂಡು ಸಾಲು ಮನೆಗಳನ್ನು ಪ್ರವೇಶಿಸಿ ಹಿತ್ತಿಲಿನ ತಿಪ್ಪೆಗಳನ್ನು ಕೋಲು ಚುಚ್ಚಿ ಪರೀಕ್ಷಿಸುತ್ತಿದ್ದರು. ಬಟ್ಟಿಸಾರಾಯಿಯನ್ನು ಕದ್ದುಮುಚ್ಚಿ ಕುಡಿಯಲು ಗಿರಾಕಿಗಳು ಅಲ್ಲಿ ಬರುತ್ತಿದ್ದುದು, ಕೆಲವರು ತಮ್ಮ ಉಪಪತ್ನಿಯರನ್ನು ಅಲ್ಲಿಯ ಒಂದೆರಡು ಮನೆಗಳಲ್ಲಿ ನೆಲೆಗೊಳಿಸಿದ್ದು ಹೀಗೆ ಒಂದು ನಿಗೂಢತೆ ಅಲ್ಲಿತ್ತೇನೋ. ಹಾಗೆ ನಮ್ಮ ಮನೆಯ ಹಿತ್ತಿಲನ್ನು ಪರೀಕ್ಷಿಸುತ್ತಿದ್ದ ಪೋಲೀಸರು ಕೊನೆಗೆ ಅದು ಮೆಟಗುಡ್ ಅವರ ಮಿಲ್ಲಿನಲ್ಲಿ ಉದ್ಯೋಗಿಯಾಗಿದ್ದ ವೀರಪ್ಪಶೆಟ್ಟರೆಂಬ ಸಜ್ಜನನೊಬ್ಬನ ಮನೆಯೆಂದು ಮನದಟ್ಟಾಗಿ ಹಾಗೆ ಮಾಡುವದನ್ನು ನಿಲ್ಲಿಸಿದರು.

ಅವರ ಪಾಡಿಗೆ ಬಿಟ್ಟಿದ್ದರೆ ನಮ್ಮ ತಂದೆಯವರು ಸ್ವಂತದ್ದೆನ್ನುವ ಒಂದು ಜಾಗ, ಮನೆ ಇವುಗಳನ್ನು ಯಾವಾಗ ಮಾಡಿಕೊಳ್ಳುತ್ತಿದ್ದರೋ. ಈ ವಿಷಯದಲ್ಲಿ ನನ್ನ ಅವ್ವನ ಪ್ರಯತ್ನಶೀಲತೆಯನ್ನು ಮೆಚ್ಚಬೇಕು. ಕೃಷಿ ಸಂಶೋಧನಾ ಘಟಕದ ಹೊಲಗಳಿಗೆ ಹೋಗುವ ಮಾರ್ಗದ ಬಳಿ ಒಂದೆರಡು ಪ್ಲಾಟುಗಳು ಮಾರಾಟಕ್ಕಿದ್ದುದು ನಮ್ಮ ತಾಯಿಯ ಗಮನಕ್ಕೆ ಬಂದು ಅಷ್ಟಿಷ್ಟು ದುಡ್ಡು ಕೂಡಿಡತೊಡಗಿದಳು. ಇನ್ನೂ ಸ್ವಲ್ಪ ಹಣ ಕಡಿಮೆ ಬಿದ್ದಾಗ ತನ್ನ ಕೆಲವು ಹಳೆಯ ಬೆಲೆಬಾಳುವ ಸೀರೆಗಳ ಅಂಚಿನಲ್ಲಿದ್ದ ಬಂಗಾರದ ಅಂಶವಿದ್ದ ಜರಿಗಳನ್ನು ಬೇರ್ಪಡಿಸಿ ಅದನ್ನು ಒಟ್ಟುಮಾಡಿ ಮಾರಿ ಅಂತೂ ಒಂದೂಕಾಲು ಗುಂಟೆಯಷ್ಟು ಜಮೀನು ಕೊಳ್ಳಲು ಅಗತ್ಯವಿರುವ ಹಣ ಸಂಗ್ರಹ ಮಾಡಿದಳು. ಹಾಗೆ ಖರೀದಿಸಿದ ಜಾಗೆಯಲ್ಲಿ ತಟ್ಟೀಗೋಡೆ, ನಾಡ ಹೆಂಚಿನ ಸಾಮಾನ್ಯ ಮನೆಯೊಂದನ್ನು ಕಟ್ಟಿಸಿ ನಾವು ಸ್ಥಳಾಂತರಗೊಂಡೆವು. ಆಗ ಅಲ್ಲಿ ನಮ್ಮದೇ ಒಂದೆರಡು ಮನೆಗಳು. ಅನತಿ ದೂರ ಮೇಲೆ ಹೋದರೆ ಒಡ್ಡರ ಓಣಿ. ವಿದ್ಯುದ್ದೀಪ ಇರಲಿಲ್ಲವಾಗಿ ರಾತ್ರಿ ಇಡೀ ಪ್ರದೇಶ ಕತ್ತಲು. ನಮ್ಮ ಮನೆಗೆದುರಾಗಿದ್ದ ದೊಡ್ಡ ಮನೆಗೆ ಸ್ಥಳೀಯ ನ್ಯಾಯಾಲಯದ ಜಡ್ಜ್ ಒಬ್ಬರು ವಾಸಕ್ಕೆ ಬಂದ ಮೇಲೆ ಪುರಸಭೆಯ ಆಳೊಬ್ಬ ಪ್ರತಿನಿತ್ಯ ಸಂಜೆ ಬಂದು ಕಂಬಕ್ಕೆ ಕಟ್ಟಿದ್ದ ಲಾಂದ್ರದ ದೀಪಕ್ಕೆ ಸೀಮೆಣ್ಣೆ ಸುರಿದು ಬೆಳಕು ಹಚ್ಚಿ ಹೋಗುತ್ತಿದ್ದ. ಅದು ಅಲ್ಲಿನ ದಟ್ಟ ಕತ್ತಲೆಯೊಂದಿಗೆ ಕ್ಷೀಣವಾಗಿ ಹೋರಾಡುತ್ತಿತ್ತು.

ನನ್ನ ತಾಯಿ ಸತ್ತಿಗೇರಿಯಲ್ಲಿ ದೊಡ್ಡ ವಿಸ್ತಾರದ ಹಲವು ಜಮೀನುಗಳನ್ನು ಹೊಂದಿದ್ದ ಬಸವಂತಪ್ಪ ಮರಡಿ ಹಾಗೂ ಬಸವ್ವ ಎಂಬ ದಂಪತಿಗಳ ಚೊಚ್ಚಲು ಮಗಳಾಗಿ ೧೯೨೦ ರಲ್ಲಿ ಜನಿಸಿದವಳು. ನನ್ನ ತಂದೆ ಮದುವೆಗಾಗಿ ಹೆಣ್ಣು ಅಂತ ನೋಡಿದ್ದು ಅವಳೊಬ್ಬಳನ್ನೇ. ಮದುವೆಯಾಗುವದಾದರೆ ಅವಳನ್ನೇ ಆಗುತ್ತೇನೆಂದು ಹಿರಿಯರಿಗೆ ಹೇಳಿ ಅವಳನ್ನೇ ಆದವರು. ಅವಳೂ ಪರಿಸ್ಥಿತಿಗೆ ಹೊಂದಿಕೊಂಡು ಬಾಳಿದಳು. ನನ್ನ ತಂದೆಯ ಆದರ್ಶಗಳನ್ನು ಗೌರವಿಸಿದಳು. ಒಮ್ಮೊಮ್ಮೆ ನನ್ನ ತಂದೆಯ ಜೊತೆಗೆ ಅವಳಿಗೆ ಕೆಲಸಕ್ಕೆ ಬಾರದ ತಕರಾರುಗಳಿರುತ್ತಿದ್ದವು. ಅವುಗಳಲ್ಲೊಂದೆಂದರೆ ನಮ್ಮ ತಂದೆಗೆ ಯಾವುದಾದರೂ ಕ್ಯಾಲೆಂಡರ್ ಚಿತ್ರ ಇಷ್ಟವಾದರೆ ಅದಕ್ಕೆ ಫ್ರೇಮ್ ಹಾಕಿಸಿಕೊಂಡು ಬಂದು ಗೋಡೆಗೆ ತೂಗುಹಾಕುವ ಅಭ್ಯಾಸ. ಮಹಾತ್ಮಾ ಗಾಂಧೀ,

ಇಂದಿರಾ ಗಾಂಧೀ, ನೆಹರೂ, ರಾಧಾಕೃಷ್ಣನ್, ದೇವದೇವತೆಗಳು, ಸಿನಿಮಾ ನಟಿ ಜಮುನಾ ಯಾವುದಾದರೂ ಆದೀತು. Gaudy ವರ್ಣಗಳ ಆ ಫೋಟೋಗಳು ೨ - ೩ ಸಾಲುಗಳಲ್ಲಿ ಪಡಸಾಲೆ - ನಡುಮನೆಯ ಗೋಡೆಗಳನ್ನಲಂಕರಿಸಿದ್ದವು. ಅವುಗಳ ಹಿಂದೆ ತಿಗಣೆಗಳು ಸಂಸಾರ ಹೂಡಿರುತ್ತಿದ್ದವು. ಅವುಗಳಿಗೆ ನಮ್ಮ ತಂದೆ ಹಣ ವ್ಯಯಿಸುವದು ನಮ್ಮವ್ವನಿಗೆ ಇಷ್ಟವಾಗುತ್ತಿರಲಿಲ್ಲ. ನನ್ನ ತಂದೆಗೆ ೬೦ ವರ್ಷಗಳಾದ ಮೇಲೆ ನಶ್ಯ ಏರಿಸುವ ಚಟ ಅಂಟಿಕೊಂಡಿತು. ಧೋತರ, ಅಂಗವಸ್ತ್ರ, ಶರ್ಟುಗಳಿಗೆ ಅಲ್ಲಲ್ಲಿ ನಶ್ಯದ ಕಲೆ ಅಂಟಿಕೊಂಡಿರುತ್ತಿತ್ತು. ಅದೂ ತಕರಾರಿನ ವಿಷಯವಾಗಿತ್ತು. ಅವಳ ಟೀಕೆಗಳಿಗೆ ಬೇಸತ್ತು ಒಮ್ಮೆ ಪಂಢರಪುರಕ್ಕೆ ಹೋದಾಗ ಆ ಚಟವನ್ನು ಶಾಶ್ವತವಾಗಿ ತ್ಯಜಿಸಿ ಬಂದ ನಮ್ಮ ತಂದೆ ಆ ಮೇಲೆ ಕೆಲವರ್ಷ ಬಿಟ್ಟು (ಮನೆಯಲ್ಲಿನವರಿಗೆ ಗೊತ್ತಾಗದಂತೆ) ಬೀಡಿ ಸೇದತೊಡಗಿದರು. ನಂತರ ಸಿಗರೇಟಿಗೆ ಬಡ್ತಿ ಹೊಂದಿದರು. ಆ ಮೇಲೆ ನಮಗೆ ಗೊತ್ತಾದಂತೆ ಅದು 'ಸಿಗರೇಟ ಅಥವಾ ಬೀಡಿ ಸೇದ್ರೀ ಶೆಟ್ರ. ಎದ್ದಾಗಿನ ಕಫಾ ಕರಗತೈತಿ' ಎಂದು ಅವರ ಸಹೋದ್ಯೋಗಿಯೊಬ್ಬ ಕೊಟ್ಟ ಉಪದೇಶಾಮೃತದ ಫಲವಾಗಿ ಅಂಟಿಕೊಂಡ ಚಟವಾಗಿತ್ತು. ಅದನ್ನು ನಮ್ಮ ತಂದೆ ಹೆಚ್ಚೂ ಕಡಿಮೆ ಬದುಕಿನ ಕೊನೆಯ ವರ್ಷಗಳ ವರೆಗೆ ಜಾರಿಯಲ್ಲಿಟ್ಟರು. ನಮ್ಮವ್ವ ಭರ್ತ್ಸನೆಯ ಮೂಡ್‌ನಲ್ಲಿದ್ದಾಗ ಧಾರಾಳವಾಗಿ ಬಳಸಿಕೊಳ್ಳುತ್ತಿದ್ದ ವಿಷಯಗಳಲ್ಲಿ ಅದಕ್ಕೆ ಪ್ರಮುಖ ಸ್ಥಾನವಿತ್ತು.

ನನ್ನವ್ವನಿಗೆ ಮಧ್ಯ ವಯಸ್ಸಿನಿಂದಲೇ ರಕ್ತದೊತ್ತಡವಿತ್ತು. ಕೆಲ ವರ್ಷಗಳ ನಂತರ ಒಂದು ಪ್ರವೃತ್ತಿ ಶುರುವಾಯಿತು. ಮುಂಜಾನೆ ಹಾಸಿಗೆಯಿಂದೇಳುತ್ತಲೇ ಅದೇನು ಪಿತ್ತೋದ್ರೇಕವೋ ಯಾರಾದರೊಬ್ಬರನ್ನು ಟಾರ್ಗೆಟ್ ಮಾಡುತ್ತಿದ್ದಳು. ಹಾಗೆ ಟಾರ್ಗೆಟ್ ಆದವರ ತಪ್ಪು ಗುರುತರವಾದದ್ದಾಗಿರಬೇಕೆಂಬ ನಿಯಮವೇನೂ ಅವಳಿಗಿರಲಿಲ್ಲ. ನನ್ನಕ್ಕಂದಿರ ಪೈಕಿ ಒಬ್ಬಳು ಒಂದು ಕಪ್ ಒಡೆದದ್ದಾಗಿರಬಹುದು, ನಾನು ಕೈ ತೊಳೆಯದೆ ಒಂದು ಪಾತ್ರೆ ಮುಟ್ಟಿದ್ದಾಗಿರಬಹುದು, ನನ್ನವ್ವ ಪರಿಪರಿಯಾಗಿ ಟೀಕೆ-ದೂಷಣೆಗೆ ತೊಡಗುತ್ತಿದ್ದಳು. ನನ್ನ ತಂದೆ ಅಪಾರ ತಾಳ್ಮೆಯ ಮನುಷ್ಯ. 'ಇರ್ಲಿ ಬಿಡ ಇನ್', 'ಛೇ ಸುಮ್ ಆಗಿನ್ನs', 'ಮುಗಿಸಿ ಬಿಡ ಇನ್ನs' ಇವು ಅವನ ನಿಯಮಿತ ಪ್ರತಿಕ್ರಿಯೆಗಳಾಗಿರುತ್ತಿದ್ದವು. ಹೀಗೆ ಅವನು ೪೦ - ೫೦ ಸಲ ಹೇಳುತ್ತಿದ್ದನೆಂದರೆ ನನ್ನವ್ವ ಎಂಥ ಕೆಲಸಕ್ಕೆ ಬಾರದ ವಿಷಯಗಳಿಗೆ ಎಷ್ಟು ಹೊತ್ತು ಟೆನ್ಸ್ ಆಗಿರುತ್ತಿದ್ದಳೆಂಬ ಅಂದಾಜು ಸಿಕ್ಕೀತು. ಅಂಥ ಅದ್ಭುತ ತಾಳ್ಮೆಯ ನನ್ನ ತಂದೆಯೂ ಅಪರೂಪಕ್ಕೊಮ್ಮೆ ಸಹನೆ ಕಳೆದುಕೊಂಡು ಅಂತಿಮ ಅಸ್ತ್ರವಾಗಿ ಕೆಳಗೆ ಕುಳಿತ ಅವಳಿಗೆದುರಾಗಿ ನಿಂತು ಎಡಗೈಯಿಂದ ಅವಳ ಹಿಂದಲೆ ಹಿಡಿದು ಮುಂಬಾಗಿಸಿ ಬಲಗೈ ಮುಷ್ಟಿ ಮಾಡಿ ವ್ಯವಸ್ಥಿತವಾಗಿ ಬೆನ್ನಿಗೆ ನಾಲ್ಕಾರು ಗುದ್ದು ಕೊಡುತ್ತಿದ್ದ. 'ಅಯ್ಯವ್ವಾ ಕೊಲ್ಲಾನ, ನನ್ನs' ಎಂದು ಅವಳನ್ನುತ್ತಿದ್ದರೆ ನಾವು ಏನೂ ಹೇಳುತ್ತಿರಲಿಲ್ಲ. ಬಿಡಿಸಲೂ ಹೋಗುತ್ತಿರಲಿಲ್ಲ. ನಾಲ್ಕು ಗುದ್ದು ಕೊಟ್ಟು ಅವನೂ ಸುಮ್ಮನಾಗುತ್ತಿದ್ದ. ಗುದ್ದಿಸಿಕೊಂಡು ಅವಳೂ ಸುಮ್ಮನಾಗುತ್ತಿದ್ದಳು. ಇದು ಆ ಪ್ರಸಂಗಗಳ ಒಟ್ಟು ಸಾರವೆಂಬುದು ನಮಗೆ ಪರಿಚಿತವೇ ಇರುತ್ತಿತ್ತು. ಮೂರೋ ನಾಲ್ಕೋ ವರ್ಷಗಳಲ್ಲೊಮ್ಮೆ ಈ ದೃಶ್ಯ ನಮಗೆ ನೋಡಸಿಗುತ್ತಿತ್ತು. ಮುದ್ದಣ - ಮನೋರಮೆಯರ ಮಾದರಿಯ ಅವರ ಸಲ್ಲಾಪ ಆಗಾಗ ನೋಡಸಿಗುತ್ತಿತ್ತು.

ನನ್ನ ತಂದೆಯ ಶಿಕ್ಷಣದ ಬಗ್ಗೆ ಹೇಳಿರುವೆ. ನನ್ನವ್ವ ೩ ನೇ ಇಯತ್ತೆ ವರೆಗೆ ಕಲಿತಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದಳು. ಅದನ್ನು ಸಾಬೀತು ಮಾಡಲು ಸಂಯುಕ್ತ ಕರ್ನಾಟಕ ಪತ್ರಿಕೆಯ ಶೀರ್ಷಿಕೆಯ ದೊಡ್ಡಕ್ಷರಗಳನ್ನು ಕಷ್ಟಪಟ್ಟು ಓದಿ, ಇಲ್ಲವೆ ಸೊಟ್ಟಕ್ಷರಗಳಲ್ಲಿ ಈರವ್ವ ಎಂದು

ಬರೆದು ತೋರಿಸುತ್ತಿದ್ದಳು. ಎಲ್ಲ ಸಮಸ್ಯೆಗಳ ನಡುವೆಯೂ ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯನ್ನು ನನ್ನ ತಂದೆ ಮಾಡಿದ್ದರು. ನನ್ನಣ್ಣ ಬೈಲಹೊಂಗಲದಲ್ಲಿ ಹೈಸ್ಕೂಲ್ ಮುಗಿಸಿ ಅಲ್ಲಿ ಆಗ ಕಾಲೇಜು ಇರಲಿಲ್ಲವಾದ್ದರಿಂದ ೬೦ರ ದಶಕದ ಮಧ್ಯದ ಸುಮಾರಿಗೆ ಇಂಟರ್ ಮೀಡಿಯೆಟ್ ಶಿಕ್ಷಣಕ್ಕಾಗಿ ಬೆಳಗಾವಿಯ ಲಿಂಗರಾಜ ಕಾಲೇಜಿಗೆ ಹೋದ. ಅಲ್ಲಿ ಒಂದು ಕೋಣೆಯನ್ನು ಬಾಡಿಗೆ ಪಡೆದು ಇದ್ದ. ನನ್ನವ್ವ - ಅಕ್ಕ ಬೆಳಗ್ಗೆ ಎದ್ದು ಅಡಿಗೆ ಮಾಡುತ್ತಿದ್ದರು. ಮುಂಜಾನೆ ಬೆಳಗಾವಿಗೆ ಹೋಗುವ ಬಸ್ಸಿನಲ್ಲಿ ಅವನಿಗೆ ಊಟದ ಡಬ್ಬಿ ಇಟ್ಟು ಕಳಿಸುತ್ತಿದ್ದೆವು. ನನ್ನ ತಂದೆ, ನಾನು ಅಥವ ನನ್ನ ಅಕ್ಕಂದಿರು ಹಾಗೆ ಡಬ್ಬಿ ಕೊಟ್ಟು ಬರುವದು ರಾತ್ರಿ ಬೈಲಹೊಂಗಲಕ್ಕೆ ಬರುವ ಬಸ್ಸಿನಲ್ಲಿ ನನ್ನಣ್ಣ ಇಟ್ಟು ಕಳಿಸಿದ ಖಾಲಿ ಡಬ್ಬಿಯನ್ನು ಬಸ್‌ಸ್ಟ್ಯಾಂಡಿಗೆ ಹೋಗಿ ತೆಗೆದುಕೊಂಡು ಬರುವದು ದೈನಂದಿನ ಚಟುವಟಿಕೆಯಾಯಿತು. ಅವನ ರೂಂ ಬಾಡಿಗೆ, ಫೀ, ಪುಸ್ತಕ ಬಟ್ಟೆಬರೆ ಹೀಗೆ ಹೆಚ್ಚುವರಿ ಖರ್ಚಿನ ಬಾಬತ್ತುಗಳಿರುತ್ತಿದ್ದವು. ಸಂಪಾದನೆಯ ಅನ್ಯ ಮಾರ್ಗ ಅಗತ್ಯವಿತ್ತು. ನಾವು ಮನೆಯ ಒಂದು ಭಾಗವನ್ನೇ ಕೊಂಚ ಪರಿವರ್ತಿಸಿ ಒಂದು ಸಣ್ಣ ಕಿರಾಣಿ ಅಂಗಡಿ ಸುರು ಮಾಡಿದೆವು. ಉದ್ರಿ ಗಿರಾಕಿಗಳೇ ಜಾಸ್ತಿ. ದೀರ್ಘ ಕಾಲದ ವರೆಗೆ ಹಣ ಕೊಡದೇ ತಪ್ಪಿಸುತ್ತಿದ್ದ ಆ ಉದ್ರಿ ಮಂದಿ ಆಕಸ್ಮಾತ್ ದಾಟಿ ಹೋಗುವದು ಕಂಡರೆ ನನ್ನಕ್ಕ ಅವರನ್ನು ತಡೆದು ಝಾಡಿಸುತ್ತಿದ್ದಳು. ಅವರು –ಸಾಮಾನ್ಯವಾಗಿ ಒಡ್ಡರು, ಝಾಡಮಾಲಿ - ಭಂಗಿಗಳು, ರೈತಾಪಿಗಳು– ತಮ್ಮ ಅಡಚಣೆ, ಅನಾನುಕೂಲಗಳನ್ನು ಪರಿಪರಿಯಾಗಿ ಹೇಳಿಕೊಳ್ಳುತ್ತಿದ್ದರು. ನನ್ನ ಅವ್ವ ತುಂಬ ಕರುಣಾಮಯಿ. ಬಡಬಗ್ಗರ ಕುರಿತು ಅವಳಿಗೆ ತುಂಬ ಪ್ರಾಮಾಣಿಕವಾದ ಒಂದು ಅಂತಃಕರಣವಿತ್ತು. ಆ ಮಂದಿ ಉದ್ರಿ ಹಣ ಕೊಡುವದು ದೂರ ಉಳಿಯಿತು, ನಮ್ಮವ್ವನೇ ಅವರಿಗೆ ತಿನ್ನಲು - ಉಣ್ಣಲು ಕೊಟ್ಟು ಮತ್ತೊಂದಿಷ್ಟು ಅವರ ಕೂಸು ಕುನ್ನಿಗಳಿಗೆ ಕೊಟ್ಟುಕಳಿಸುತ್ತಿದ್ದಳು. ಅಂಗಡಿಯ ವ್ಯಾಪಾರ ಊರ್ಜಿತವಾಗಲಿಲ್ಲವೆಂದು ಬೇರೆ ಹೇಳಬೇಕಿಲ್ಲ. ಆದರೆ ವ್ಯಾಪಾರಕ್ಕಿಂತ ಅತ್ತೆಗೆ ಗೊತ್ತಾಗದಂತೆ ಸೊಸೆಯಂದಿರು, ರೈತಾಪಿಗಳು, ಚಿಕ್ಕ ಪುಟ್ಟ ತುಡುಗರು ಸೋವಿ ದರಕ್ಕೆ ನಮಗೆ ಮಾರುತ್ತಿದ್ದ ಕಾಳುಕಡಿಗಳು ನಮ್ಮ ಕುಟುಂಬದ ಆಹಾರ ನಿರ್ವಹಣೆಯ ಭಾರವನ್ನು ಕೊಂಚ ತಗ್ಗಿಸುತ್ತಿದ್ದವು.

ಶೇಂಗಾ ಸುಗ್ಗಿಯಲ್ಲಿ ನಮ್ಮ ಮನೆಯ ಚಿತ್ರವೇ ಬದಲಾಗುತ್ತಿತ್ತು. ಬೆಳೆದು ನಿಂತ ಶೇಂಗಾಬಳ್ಳಿ ಕಿತ್ತು ಕಾಯಿ ಹರಿದು ಕೂಲಿಗಳು ಒಟ್ಟು ಹಾಕಿದ ಕಾಯಿಗಳನ್ನು ಹೊಲದೊಡೆಯ ಒಂದು ನಿಶ್ಚಿತ ಸಂಖ್ಯೆಯ ಸಮಪ್ರಮಾಣದ ಗುಂಪುಗಳಾಗಿ ವಿಂಗಡಿಸಿ ಅದರಲ್ಲೊಂದು ಗುಂಪನ್ನು ಅವರ ಕೆಲಸದ ಪ್ರತಿಫಲವಾಗಿ ಕೊಡುತ್ತಿದ್ದರು. ಅವುಗಳನ್ನು ಆ ಕೃಷಿಕೂಲಿಗಳು –ಸಾಮಾನ್ಯವಾಗಿ ಒಡ್ಡರು– ತಂದು ನಮಗೆ ಮಾರುತ್ತಿದ್ದರು. ದೊಡ್ಡ ಪ್ರಮಾಣದ ಸಂಗ್ರಹವಿದ್ದರೆ ಒಡ್ಡರ ಓಣಿಗೇ ಹೋಗಿ ಅವ್ವ ಚಿಕ್ಕ ಚೀಲಗಳನ್ನು ಹೊತ್ತು ರೊಜ್ಜು-ರಾಡಿ ದಾಟಿಕೊಂಡು ಮನೆಗೆ ತರುತ್ತಿದ್ದಳು. ಅವರಿಗೆ ಕೊಡಬೇಕಾದ ಮೊತ್ತವನ್ನು ೩ ಅಥವಾ ೪ ಸೇರಿಗೊಂದು ರೂಪಾಯಿಯ ಲೆಕ್ಕದಲ್ಲಿ ಗುಣಿಸಿ ನನ್ನ ತಂದೆ ಬರೆಯುವದು, ಕಮೀಶನ್ ಏಜಂಟರಿಂದ ಮುಂಗಡವಾಗಿ ತಂದ ೧, ೨, ೫ ರ ಗರಿಗರಿ ನೋಟುಗಳನ್ನು ಎಣಿಸಿ ನಾನು ಆ ಕೂಲಿಗಳಿಗೆ ವಿತರಿಸುವದು. ಇದು ಪ್ರತಿವರ್ಷ ಕೆಲವು ತಿಂಗಳು ನಮ್ಮ ಮನೆಯ ಮುಖ್ಯ ಚಟುವಟಿಕೆಯಾಯಿತು. ಹಾಗೆ ಸಂಗ್ರಹವಾದ ಮಣ್ಣುಮೆತ್ತಿದ ಶೇಂಗಾಕಾಯಿಗಳು ನಮ್ಮ ಮನೆಯಲ್ಲಿ ಸ್ಥಳಾವಕಾಶ ಕೊರತೆಯಾಗುವಂತೆ ಎಲ್ಲೆಂದರಲ್ಲಿ ರಾಶಿ ಬೀಳುತ್ತಿದ್ದವು. ನಮ್ಮನ್ನೆಲ್ಲ ಕರೆದುಕೊಂಡು ನಮ್ಮ ತಾಯಿ ಪ್ರತಿನಿತ್ಯ ಅವುಗಳನ್ನು ಮನೆಯೆದುರು ಹರಡಿ, ಬಿಸಿಲಿಗೆ ಒಣಗಿಸಿ, ಮಣ್ಣು ಬಡಿದು, ತೂರಿ ಖರೀದಿಗಾರರಿಂದ ಒಳ್ಳೆಯ ರೇಟು ಪಡೆಯಲು ಅವು ಅರ್ಹವಾಗುವಂತೆ

ಚೆಂದಗೊಳಿಸುತ್ತಿದ್ದಳು. ಸಂಗ್ರಹವಾದ ಕಾಯಿಗಳನ್ನು ಪ್ರತಿನಿತ್ಯ ನಾಲ್ಕೋ ಆರೋ ಗೋಣಿಚೀಲಗಳಲ್ಲಿ ತುಂಬಿ ಬಾಯಿ ಹೊಲಿದು ನಮ್ಮಕ್ಕ ಅವುಗಳ ಮೇಲೆ ಬಣ್ಣದ ಇಂಕಿನಿಂದ ನಮ್ಮ ಹೆಸರು ಬರೆದಾದ ಮೇಲೆ ರೈತನೊಬ್ಬನ ಚಕ್ಕಡಿಗೆ ಹೇರಿ ಕೃಷಿ ಹುಟ್ಟುವಳಿ ಮಾರುಕಟ್ಟೆಯ ದಲ್ಲಾಳಿಗಳ ಮಳಿಗೆಗಳಿಗೆ ನಾನು ಕೊಂಡೊಯ್ಯುತ್ತಿದ್ದೆ. ಹೀಗೆ ಹೈಸ್ಕೂಲು - ಕಾಲೇಜು ಓದುತ್ತಲೇ ನಮ್ಮ ಮನೆಯ ಅರ್ಥವ್ಯವಸ್ಥೆಯ ನಿರ್ವಹಣೆಯ ಕೆಲವು ಪಾತ್ರಗಳನ್ನು ನಾನು ಹೊತ್ತೆ. ಅದು ಅನಿವಾರ್ಯವೂ ಆಗಿತ್ತು. ಅದರಲ್ಲಿ ದೊಡ್ಡ ಪಾತ್ರ ನನ್ನ ಅವ್ವ ಮತ್ತು ಹಿರಿಯ ಅಕ್ಕನದು. ಮದುವೆಯಾದ ಹೊಸದರಲ್ಲೇ ವಿಧವೆಯಾಗಿ ಮರುಮದುವೆಯಾಗಲು ನಿರಾಕರಿಸಿ ಮನೆಯಲ್ಲಿಯೇ ಉಳಿದ ನಮ್ಮ ಗೌರಕ್ಕ ಮನೆಯ ಗಂಡುಮಗನಂತೆ ದುಡಿದಳು. ಮನೆಯ ಪ್ರತಿಯೊಂದು ವ್ಯಾಪಾರ - ವ್ಯವಹಾರ, ಖರ್ಚುವೆಚ್ಚ, ನಮ್ಮ ಬಟ್ಟೆಬರೆ, ಸಂಬಂಧಿಕರೊಂದಿಗಿನ ಸಂಬಂಧದ ಸ್ವರೂಪ ಹೀಗೆ ಒಟ್ಟಾರೆ ಕುಟುಂಬದ ನೀತಿನಿರ್ಧಾರಕರು ನನ್ನ ಅವ್ವ - ಅಕ್ಕ ಇವರೇ ಆಗಿದ್ದರು.

ಇದೆಲ್ಲದರ ನಡುವೆ ನಮ್ಮ ತಂದೆ ಮಿಲ್‌ನ ಲೆಕ್ಕಪತ್ರ ಬರೆಯುವ ತಮ್ಮ ಕೆಲಸ ನೋಡಿಕೊಂಡು ಹೋಗುತ್ತಿದ್ದರು. ಈ ಮಧ್ಯೆ ಅವರ ವೇತನ ತಿಂಗಳಿಗೆ ೨೫೦ ರೂಪಾಯಿ ಆಗಿತ್ತು. ಅವರದು ನಿಯಮಿತವಾದ ದಿನಚರಿ. ಮುಂಜಾನೆ ಸ್ನಾನ ತಿಂಡಿ ಮುಗಿಸಿ ೯ ಗಂಟೆಗೆ ಮಿಲ್‌ಗೆ ಹೋಗುವದು. ಮಧ್ಯಾಹ್ನ ಬಂದು ಊಟ ಮಾಡಿ ಸ್ವಲ್ಪ ವಿಶ್ರಮಿಸಿ ಮಿಲ್‌ಗೆ ಹೋಗಿ ರಾತ್ರಿ ೮ ಗಂಟೆಗೆ ಮನೆಗೆ ಬರುವದು. ಹಿತಮಿತವಾದ ಊಟ. ನನ್ನ ತಾಯಿ ಮಹಾದೈವಭೀರು. ನನ್ನ ತಂದೆ ಆಸ್ತಿಕರೇ ಆಗಿದ್ದರೂ ಪೂಜೆ - ಪುನಸ್ಕಾರ ಎಂದು ಸಮಯ ವ್ಯಯಿಸಿದ್ದು ನಾನು ನೋಡಿಲ್ಲ. ಅಮಾವಾಸ್ಯೆ - ಹಬ್ಬದಂಥ ಸಂದರ್ಭಗಳಲ್ಲಿ ತಾವೇ ಪೂಜೆ ಮಾಡುತ್ತಿದ್ದರಾದರೂ ತಾಸುಗಟ್ಟಲೆ ಪೂಜೆ ಮಾಡುತ್ತ ಕುಳಿತಿರುವದು ಅವರ ದೃಷ್ಟಿಯಲ್ಲಿ ಅವ್ಯಾವಹಾರಿಕವಾಗಿತ್ತು. ಉಲ್ಲಸಿತರಾಗಿದ್ದಾಗ 'ಪರಮಪ್ರಭುವೇ ನಿಮ್ಮ ಸ್ಮರಣೆಯೊಳೆನ್ನ ಮನ ಸ್ಥಿರವಾಗಿ ನಿಂತು ಧ್ಯಾನಿಸುತಿರಲಿ, ಕರಿಗೆ ಕೇಸರಿ ವೈರಿಯೆಂತೆನ್ನ ದುರಿತಕ್ಕೆ ಹರ ನಿಮ್ಮ ನಾಮವು ಹಗೆಯಾಗಲಿ' ಎಂಬ ಪದ್ಯವನ್ನು ಹಾಡಿಕೊಳ್ಳುತ್ತಿದ್ದರು. ನಿಜಗುಣ ಶಿವಯೋಗಿಗಳ 'ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ' ಎಂಬುದು ಅವರ ಇಷ್ಟದ ಇನ್ನೊಂದು ಭಕ್ತಿಗೀತೆಯಾಗಿತ್ತು.

ಏನೇ ತೊಂದರೆ ತಾಪತ್ರಯಗಳಿದ್ದರೂ ಕುಟುಂಬದ ಅಸ್ತಿತ್ವಕ್ಕೊಂದು ನೆಮ್ಮದಿ ಇದ್ದೇ ಇತ್ತು. ಅಪ್ಪನಿಗೆ ಕುಟುಂಬದ ಬಗ್ಗೆಯೂ ಗಮನ ಇರುತ್ತಿತ್ತು. ಆಯಾಯ ಸೀಜನ್ನಿನಲ್ಲಿ ಬರುವ ಹಣ್ಣುಗಳನ್ನು ಧೋತರದ ಉಡಿಯಲ್ಲಿಟ್ಟುಕೊಂಡು ತರುತ್ತಿದ್ದರು. ಕಾರ್ಯನಿಮಿತ್ತ ಹೊರ ಊರುಗಳಿಗೆ ಹೋದಾಗ ಕುಂದಾ, ಗೋಕಾಕ ಕರದಂಟು ಇತ್ಯಾದಿ ತರುತ್ತಿದ್ದರು. ಅಪ್ರಾಮಾಣಿಕತೆ ಎಂಬುದು ಅವರ ಚಿಂತನೆಯಲ್ಲೇ ಇರಲಿಲ್ಲ. ಸದಾ ಕ್ರಿಯಾಶೀಲರಾಗಿರುತ್ತಿದ್ದರು. ಓದುವದು, ನಿಯಮಿತವಾಗಿ ಅಣ್ಣನಿಗೆ, ಅಕ್ಕಂದಿರಿಗೆ - ಅಳಿಯಂದಿರಿಗೆ ಪತ್ರಗಳನ್ನು ಬರೆಯುವದು, ಉದ್ದನೆಯ ಕೋಲಿಗೆ ಕಟ್ಟಿದ ಪೊರಕೆಯಿಂದ ಮನೆಯ ಮೂಲೆ ಮೂಲೆಯ ಜೇಡನಬಲೆಗಳನ್ನು ನಾಶಗೊಳಿಸುವದು, ಬಲೆಯಲ್ಲಿ ಬಿದ್ದ ಇಲಿಗಳನ್ನು ದೂರ ಬಿಟ್ಟುಬರಲು ಕೊಂಡೊಯ್ಯುವದು, ಮಂಚದ ಕಬ್ಬಿಣದ ಕಾಲು, ಕಟ್ಟಿಗೆಯ ಹಲಗೆಗಳನ್ನು ಬಿಸಿಲಿಗೆ ಇಟ್ಟು ತಿಗಣೆ - ಚಿಕ್ಕಾಡುಗಳನ್ನು ನಿವಾರಿಸುವದು, ಏನೂ ಕೆಲಸವಿಲ್ಲವೆಂದರೆ ಕೊನೆಗೆ ೪ ಗೋಣಿಚೀಲಗಳನ್ನು ಬಿಚ್ಚಿ ಅವುಗಳ ಅಂಚುಗಳನ್ನು ಸೇರಿಸಿ ಡಬ್ಬಣ ಹುರಿ ತೆಗೆದುಕೊಂಡು ಮತ್ತೆ ಹೊಲಿದು ಹಾಸಿಕೊಳ್ಳಲು ತಟ್ಟುಗಳನ್ನು ತಯಾರಿಸುವದು ಒಟ್ಟಿನಲ್ಲಿ ಸದಾ ಏನಾದರೂ ಮಾಡುತ್ತಿದ್ದರು. ರಾತ್ರಿ ಊಟವಾದ ಮೇಲೆ ಮಕ್ಕಳೊಂದಿಗೆ ಕವಡೆ ಆಟ ಹೂಡುತ್ತಿದ್ದರು. ಮನೆಗೆ ದಿನಪತ್ರಿಕೆ ತರುತ್ತಿದ್ದರು. ಅವುಗಳಲ್ಲಿ ಬರುವ ಧಾರಾವಾಹಿಗಳನ್ನು ಗೌರಕ್ಕ ಗಟ್ಟಿಯಾಗಿ ಓದುತ್ತಿದ್ದಳು. ನಮ್ಮ ತಂದೆ ತಾಯಿ ನಾವು

ಮಕ್ಕಳಿಲ್ಲ ಅಲ್ಲದೆ ಶ್ರೋತೃಗಣದಲ್ಲಿ ನೆರೆಹೊರೆಯವರೂ ಸೇರುತ್ತಿದ್ದರು. ನಮ್ಮಪ್ಪ ನಮ್ಮ ಬೇಡಿಕೆಗೆ ಸ್ಪಂದಿಸಿ ಒಂದು ರೇಡಿಯೊ ತರಿಸಿದ ಮೇಲೆ ಮನೆಯಲ್ಲಿ ವಿವಿಧ ಭಾರತಿ, ಸಿಲೋನ್ ಕಾರ್ಯಕ್ರಮಗಳ ಧ್ವನಿ ಮೊಳಗತೊಡಗಿದವು. ನಮ್ಮ ಗೌರಕ್ಕ ಮತ್ತು ನೆರೆಮನೆಯಲ್ಲಿದ್ದ ನನ್ನ ಚಿಕ್ಕವ್ವ ಗಂಗಕ್ಕ ಅಂಗಡಿಗೆ ವ್ಯಾಪಾರಕ್ಕೆ ಬರುತ್ತಿದ್ದ, ಬೀದಿಯಲ್ಲಿ ಹೋಗುತ್ತ ಸ್ವಲ್ಪ ನಿಂತು ಲೋಕಾಭಿರಾಮದ ನಾಲ್ಕು ಮಾತಾಡಿ ಹೋಗುವ, ಕೂಲಿ ನಾಲಿ ಮಾಡುವ ಓಣಿಯ ಜನರ ಭಾಷೆ, ಉಚ್ಚಾರ, ಆಂಗಿಕ ಚಲನೆಗಳಲ್ಲಿನ ವಿಶಿಷ್ಟ ಲಕ್ಷಣಗಳನ್ನು ಥೇಟ್ ಹಾಗೇ ಪುನರುತ್ಪಾದಿಸುವದನ್ನು ದಿನಾರ್ಧದಲ್ಲಿ ಸಾಧಿಸಿ ಮಿಮಿಕ್ರಿ ಮಾಡಿ ರಂಜಿಸಿದಾಗ ನಮ್ಮ ಹೆತ್ತವರೂ ಆ ತಮಾಷೆಯಲ್ಲಿ ಪಾಲ್ಗೊಳ್ಳುತ್ತಿದ್ದರು.

ಓಣಿಯಲ್ಲಿ ಹಲವು ಥರದ ಜನರಿದ್ದರು. ಕಲಹಗಳಾಗುತ್ತಿದ್ದವು. ಕುಡುಕರು ಅಶ್ಲೀಲವಾಗಿ ಬಯ್ದುಕೊಳ್ಳುತ್ತ ತೂರಾಡುತ್ತ ಹೋಗುತ್ತಿದ್ದರು. ನಮ್ಮ ಕುಟುಂಬದವರು ಯಾರ ಉಸಾಬರಿಗೂ ಹೋಗದೇ ತಮ್ಮ ಪಾಡಿಗೆ ತಾವಿರುತ್ತಿದ್ದರು. ಅತ್ತೆಯರು, ಸೊಸೆಯಂದಿರು, ಕೂಲಿ ನಾಲಿ ಮಾಡುವವರು ಹೀಗೆ ಬೀದಿಯಲ್ಲಿ ಸಾಗಿ ಹೋಗುವ ಹಲವರಿಗೆ ನಮ್ಮ ಮನೆ ಕಷ್ಟ ಸುಖ ಹೇಳಿಕೊಳ್ಳಲು ಸ್ವಲ್ಪ ಹೊತ್ತಿನ ನಿಲ್ದಾಣ. ನಮ್ಮವ್ವನಿಂದ ತಮ್ಮ ಸಮಸ್ಯೆಗೆ ಪರಿಹಾರ ಸಿಗುತ್ತದೆಂದಲ್ಲ. ಒಟ್ಟಿನಲ್ಲಿ 'ಶೆಟ್ರ ಈರವ್ವಕ್ಕನ' ಮುಂದೆ ಹೇಳಿಕೊಂಡರೆ, ಅವಳಿಂದ ಸಾಂತ್ವನದ ನಾಲ್ಕು ಮಾತು ಕೇಳಿದರೆ ಅವರಿಗೆ ಸಮಾಧಾನ.

ನಮ್ಮವ್ವನಿಗೆ ನಾನೇ ಒಂದು ಚಿಂತೆಯಾಗಿದ್ದೆ. ನಾನು ೭ ನೇ ಕ್ಲಾಸಿನಲ್ಲಿದ್ದಾಗ ನನಗೆ ಈಜು ಕಲಿಸಲು ನಿರ್ಧರಿಸಿ ನನ್ನ ತಂದೆ ಜೋಳದ ೬೦ ಒಣ ದಂಟುಗಳನ್ನು ಸಮಾನ ಉದ್ದದಲ್ಲಿ ತುಂಡರಿಸಿ ಅವುಗಳದೊಂದು ಪೆಂಡಿ ಮಾಡಿ ಹಗ್ಗ ಬಿಗಿದು ಮುಂಜಾನೆ ಈಜುವ ಬಾವಿಗೆ ಕರೆದೊಯ್ದು ಅದನ್ನು ನನ್ನ ಬೆನ್ನಿಗೆ ಕಟ್ಟಿ ಹಿಡಿದು ಈಜಾಡಿಸತೊಡಗಿದ್ದರು. ಆ ಆವೇಗದ ಕಲಿಕೆಯಲ್ಲಿ ನಾನು ಆಸಕ್ತಿ ಕಳೆದುಕೊಂಡೆ. ಮುಂದೆ ನಾವು ಮೂವರು ಗೆಳೆಯರು ಮನೆಯವರಿಗೆ ಗೊತ್ತಾಗದಂತೆ ಬಾವಿಗೆ ಹೋಗಿ ಮೂಲೆಯ ಸೀಮಿತ ವ್ಯಾಪ್ತಿಯಲ್ಲಿ –ಮುಳುಗುವ ಪ್ರಸಂಗ ಬಂದರೆ ಗಬಕ್ಕನೆ ಮೆಟ್ಟಿಲ ಕಲ್ಲು ಹಿಡಿಯಲನುವಾಗುವಂತೆ– ಈಜು ಬೀಳುತ್ತ ನಾಲ್ಕೇ ದಿನದಲ್ಲಿ ಈಜು ಕಲಿತೆವು. ಹೈಯರ್ ಸೆಕಂಡರಿಯ ೩ ವರ್ಷ ನಮ್ಮ ಈಜಿನ ಅವಧಿ ವಿಶೇಷವಾಗಿ ರಜೆಯ ದಿನಗಳಲ್ಲಿ ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ ವಿಸ್ತರಿಸಿತು. ಹಾಗೆ ನೋಡಿದರೆ ನಾವು ನಮ್ಮದೇ ರಜಾದಿನಗಳನ್ನು ಸೃಷ್ಟಿಸಿಕೊಳ್ಳತೊಡಗಿದ್ದೆವು. ಮನೆಯವರ ತಿಳಿವಳಿಕೆಯಲ್ಲಿ ನಾವು ಮ್ಯುನಿಸಿಪಲ್ ಜಾಕ್ಸನ್ ಹೈಸ್ಕೂಲಿನ ನಂನಮ್ಮ ಕ್ಲಾಸ್‌ರೂಮುಗಳಲ್ಲಿರುತ್ತಿದ್ದೆವು. ಆದರೆ ವಾಸ್ತವವಾಗಿ ನಾವು ಬೆಲ್ಲದ್ ಅಥವ ಮೆಟಗುಡ್ ಅವರ ತೋಟಗಳ ಮಧ್ಯೆ ಇದ್ದ ಈಜುವ ಬಾವಿಗಳ ಜಲಚರಗಳಾಗಿ ಹೋಗಿದ್ದೆವು. ಯಾವಾಗಲಾದರೂ ಬಾವಿಯಲ್ಲಿ ಯಾರೋ ಮುಳುಗಿ ಹೆಣ ತೇಲಿದ್ದು ನೋಡಿದಾಗ ಭಯದಿಂದ ೪ - ೬ ದಿನ ಹೋಗುವದು ಬಿಡುತ್ತಿದ್ದೆವಷ್ಟೆ. ನನ್ನ ಅವ್ವನಿಗೆ ನಾನು ಗೊತ್ತುಗುರಿ ಇಲ್ಲದೆ ಬೆಳೆಯುತ್ತಿದ್ದಂತೆನ್ನಿಸುತ್ತಿತ್ತು. ಅದಕ್ಕಿಂತ ನನ್ನ ಕಿಡಿಗೇಡಿತನ ಅತಿಯಾದುದಾಗಿತ್ತು. ನನ್ನ ಸಲುವಾಗಿ ಆಕೆ ಬಹಳ ಸಲ ಕಣ್ಣೀರಿಟ್ಟಳು. ನಾಲ್ಕಾರು ತಾಸು ನಾನು ಮನೆಗೆ ಬಾರದೇ ಹೋದರೆ ಕಳವಳಪಟ್ಟು ಸುತ್ತಲಿನ ಓಣಿ ಬೀದಿಗಳಲ್ಲಿ ಅವರಿವರನ್ನು ಕೇಳುತ್ತ ಹುಡುಕುತ್ತ ಹೋಗುತ್ತಿದ್ದಳು. ಅತಿಯಾದ ಕೋಪ ಬಂದಾಗ ಹೊಡೆಯುತ್ತಿದ್ದಳಾದರೂ ಅದರಿಂದ ಅವಳ ಕೈಗೇ ನೋವಾಗುತ್ತಿತ್ತು ಅಥವಾ ಮೊಳೇರಿಸಿದ ಬಳೆ ಹೊಡೆಯುವ ಭರದಲ್ಲಿ ಮುಂಗೈಗಿಳಿದು ಒಡೆದು ಅವಳ ಕೈ ರಕ್ತವೇ

ಜಿನುಗುತ್ತಿತ್ತು. ನಾನು ನಗುತ್ತಿದ್ದೆ. ಅದವಳಿಗೆ ಇನ್ನಿಲ್ಲದ ಕಿರಿಕಿರಿಯಾಗುತ್ತಿತ್ತು. ಸೋತು ಕೈಚೆಲ್ಲಿ ಕೊನೆಗೆ ಅವಳು 'ಈವೊತ್ತ ಅವರ ಮಿಲ್ಲಿನಿಂದ ಮನೀಗಿ ಬರ್ಲಿ ನಿಂದ್ರ. ನಿಂದೆಲ್ಲಾ ಹೇಳ್ತsನ. ಇಕೇನ್ ಹೇಳ್ತಾಳ ಬಿಡಂತ ತಿಳಕೊಂಡೀ ಏನ್ನೀಯಲ್ಲೋ. ಈವತ್ತ ನಿಂದೆಲ್ಲಾ ಹೇಳದದ್ರ ನಮ್ಮಪ್ಪನ ಮಗಳs ಅಲ್ಲ ನಾ' ಎಂದೆಲ್ಲ ತಾನೇ ಆಣೆ ಪ್ರಮಾಣ ಹಾಕಿಕೊಂಡು ತನ್ನ ನಿರ್ಧಾರದ ದೃಢತೆಯನ್ನು ಬಿಂಬಿಸಿ ಹೆದರಿಸುತ್ತಿದ್ದಳು. ಹಾಗೆ ಅವಳು ನನ್ನ ತಂದೆಯ ಮುಂದೆ ಹೇಳಿದಾಗ ನನಗೆ ಉಗ್ರ ಶಿಕ್ಷೆಯಾಗುತ್ತಿತ್ತೆಂದು ಯಾರೂ ಭಾವಿಸಬೇಕಿಲ್ಲ. ಅವಳು ಹೇಳುವದನ್ನೆಲ್ಲಾ ಕೇಳಿಯಾದ ಮೇಲೆ ನಮ್ಮ ತಂದೆ 'ಹಂಗೆಲ್ಲಾ ಮಾಡಬಾರದೋ. ಶಾಣ್ಯಾ ಆಗಬೇಕಪಾ' ಎನ್ನುತ್ತಿದ್ದರು ಅಷ್ಟೆ. ಅವರು ಮಕ್ಕಳನ್ನು ಹೊಡೆದದ್ದಾಗಲಿ, 'ಎಲಾ ಲಫಂಗಾ' ಎಂಬುದಕ್ಕಿಂತ ಉಗ್ರವಾಗಿ ನನ್ನನ್ನು ಬೈದದ್ದಾಗಲಿ ನನಗೆ ಗೊತ್ತೇ ಇಲ್ಲ.

ಎಸ್ಸೆಸ್ಸೆಲ್ಸಿಯಲ್ಲಿ ನಾನು ಫೇಲಾದೆ. ಗಣಿತದಲ್ಲಿ ಫೇಲಾಗುವೆನೆಂದುಕೊಂಡಿದ್ದೆ. ಆದರೆ ಸೈನ್ಸ್‌ನಲ್ಲಿ ಫೇಲಾಗಿದ್ದೆ. ಹೀಗಾಗಿ ಸಮಾಧಾನವೇ ಆಗಿತ್ತು. ಮುಂದೆ ಆಕ್ಟೋಬರ್ ಪೂರಕ ಪರೀಕ್ಷೆಯ ಫಲಿತಾಂಶ ಹೊರಬರಲಿದ್ದ ದಿನ ಅಪ್ಪ ಹೇಳಿದರು. 'ಪಾಸಾಗಲಿ ನಪಾಸಾಗಲಿ, ರಿಜಲ್ಟ್ ನೋಡಿಕೊಂಡ ಸೀದಾ ಮನಿಗೇ ಬಾ'. ಆ ಮೇಲೆ ನನ್ನ ಪ್ರಥಮ ಪಿ.ಯು.ಸಿ. ಫಲಿತಾಂಶ ಸೆಕೆಂಡ್ ಕ್ಲಾಸ್ ಆಗಿತ್ತು. ಹಾಗಂತ ನಮ್ಮ ತಂದೆಗೆ ಹೇಳಿದಾಗ 'ಒಟ್ ಪಾಸಾತಿಲ್ಲೋ' ಎಂದಿದ್ದರವರು. ನಮ್ಮ ತಾಯಿಗೂ ಮಗ 'ಹಾದಿಗೆ ಹತ್ತಿದನಲ್ಲ' ಎಂದು ಸಮಾಧಾನವಾಗಿತ್ತು. ಆ ನಡುವೆ ನಾನೊಮ್ಮೆ ಧಾರವಾಡಕ್ಕೆ ಬಂದು ಮುರುಘಾಮಠದ ಹತ್ತಿರವಿದ್ದ ನಮ್ಮ ಶಾಂತಕ್ಕನ ಮನೆಯಲ್ಲಿ ತಿಂಗಳೊಪ್ಪತ್ತು ಇದ್ದು ಹೋಗಿದ್ದೆನಾಗಿ ನಮ್ಮವ್ವನ ತರ್ಕದಲ್ಲಿ ಮುರುಘಾಮಠದ ಅಪ್ಪಗಳ ಕೃಪೆಯಿಂದ ನಾನು ಬದಲಾಗಿದ್ದೆ. ಅವಳ ನಂಬುಗೆಯಲ್ಲಿ ತಥ್ಯವಿರಲಿಲ್ಲ. ಆದರೆ ಹಾಗೆ ನಂಬಿ ಆಕೆ ಪಟ್ಟುಕೊಳ್ಳುತ್ತಿದ್ದ ಸಮಾಧಾನದಿಂದ ಅವಳನ್ನು ಎರವಾಗಿಸುವ ಅಗತ್ಯ ನನಗೂ ಕಾಣಲಿಲ್ಲ.

ಒಮ್ಮೊಮ್ಮೆ ನಮ್ಮವ್ವನ ತರ್ಕಗಳು ಅಸಂಗತವೆನ್ನಿಸುವಷ್ಟು ತಮಾಷೆಯಾಗಿರುತ್ತಿದ್ದವು. ಒಂದು ಸಲ ಅವಳಿಗೊಂದು ಎಮ್ಮೆ ಸಾಕುವ ಯೋಚನೆ ಬಂತು. ಮನೆಯಲ್ಲಿ ಯಾರಿಗೂ ಆ ಕುರಿತು ಉತ್ಸಾಹವಿರಲಿಲ್ಲ. ಸಹಾನುಭೂತಿಯಂತೂ ಮೊದಲೇ ಇರಲಿಲ್ಲ. ಎಲ್ಲ ವಾದಗಳನ್ನೂ ಹೂಡಿದಳು. ಯಾವುದೂ ಫಲಿಸಲಿಲ್ಲ. ಅಂತಿಮವಾಗಿ ಆಕೆ ಹೇಳಿದ್ದು : 'ಹಿತ್ತಲದಾಗ ಒಂದ್ ಚೀಲ ತೌಡ ಕೂಡಿ ಬಿದ್ದsತಿ. ಒಂದ್ ಎಮ್ಮೀ ಸಾಕಿದರ ಉಪೇಗ ಆಕ್ಕsತಿ ಇಲ್ಲೋ ನೀವs ಹೇಳ್ರಿ'. ಒಂದು ಚೀಲ ಹೊಟ್ಟು ಸಂಗ್ರಹವಾಗಿ ಮನೆಯಲ್ಲಿದೆ, ಮತ್ತು ಅದು ಪ್ರಯೋಜನಕ್ಕೆ ಬರಲಿ ಎಂಬುದಕ್ಕೆ ಎಮ್ಮೆ ಸಾಕಬೇಕೆನ್ನುವ ಅವಳ ವಾದಕ್ಕೆ ನಾವು ಮನಸಾರೆ ನಕ್ಕೆವು. ತಾನೂ ನಕ್ಕಳು. ನಮ್ಮವ್ವನ ನಗೆ ತುಂಬ ಚೆಂದ. ಅವಳ ಯೋಜನೆಗೆ ಪ್ರಮುಖವಾಗಿ ಕಲ್ಲು ಹಾಕುವವ ನಾನೇ ಆದ್ದರಿಂದ ಆಕೆ ಆ ಎಮ್ಮೆಯ ಹಾಲು ಕುಡಿದು ನಾನು ಸ್ವಲ್ಪ 'ಮೈ ಹಚ್ಚ'ಬಹುದೆಂದು ನನ್ನನ್ನೇ ಪುಸಲಾಯಿಸಿದಳು. ಆ ಎಮ್ಮೆ ಈದು ಹಾಲು ಕೊಡತೊಡಗಿದ ಹೊತ್ತಿಗೆ ನಾನು ಧಾರವಾಡಕ್ಕೆ ಓದಲು ಹೋದ ಕಾರಣ ವಾಸ್ತವವಾಗಿ ಆಗಲೇ ಸಾಕಷ್ಟು ಮೈ ಹಚ್ಚಿದ್ದ ನನ್ನ ತಮ್ಮ ಶಿವಾನಂದ ಆ ಹಾಲಿನ ಫಲಾನುಭವಿಯಾದ.

೧೯೭೫ ರಲ್ಲಿ ಪದವಿ ವ್ಯಾಸಂಗಕ್ಕಾಗಿ ಧಾರವಾಡಕ್ಕೆ ಹೋಗುವದಾಗಿ ನಾನು ಹಟ ಹಿಡಿದೆ. ಅದು ನನ್ನ ತಂದೆಗೆ ಸಮಸ್ಯೆಯಾಯಿತು. ಆದರೆ ನನ್ನ ಹಟವೂ ದೃಢವಾದುದಾಗಿತ್ತು. ಅದಕ್ಕೆ ಕಾರಣವೂ ಇತ್ತು. ದ್ವಿತೀಯ ಪಿ.ಯು.ಸಿ.ಯಲ್ಲಿದ್ದಾಗ ಒಮ್ಮೆ ಶುಲ್ಕದಿಂದ ವಿನಾಯ್ತಿ ಕೇಳಲೆಂದು ಪ್ರಾಚಾರ್ಯರನ್ನು ಭೇಟಿಯಾಗಿದ್ದೆ. ಬಿಜಾಪುರ ಮೂಲದ. ಗೌರವರ್ಣದ,

ಎಳೆಬಿಸಿಲಿನಲ್ಲಿ ವಿಜಯ ಸೋಶಿಯಲ್ ಕ್ಲಬ್‌ನ ಲಾನ್‌ನಲ್ಲಿ ಬೆವೆಯುತ್ತ ಟೆನಿಸ್ ಆಡುತ್ತಿದ್ದ ಎತ್ತರದ ವ್ಯಕ್ತಿ ಎಸ್. ಜಿ. ಬಿರಾದಾರ ಪಾಟೀಲ್ ಸ್ಟ್ರಿಕ್ಟ್ ಪ್ರಿನ್ಸಿಪಾಲ್ ಎಂದು ಖ್ಯಾತಿ ಪಡೆದಿದ್ದರು. 'ಆಯ್ತು ಕೊಡೋಣ, ನಿನ್ನ ತಂದೆಯವರನ್ನು ಕರೆದುಕೊಂಡು ಬಾ' ಎಂದರು. ನಾನು ಮನೆಗೆ ಬಂದಾಗ ಊಟಕ್ಕೆ ಕುಳಿತಿದ್ದ ತಂದೆ ಊಟವನ್ನು ಅರ್ಧಕ್ಕೇ ನಿಲ್ಲಿಸಿ ಕೈತೊಳೆದು ನನ್ನೊಂದಿಗೆ ಕಾಲೇಜಿಗೆ ಬಂದರು. ನನ್ನ ತಂದೆಯನ್ನು ಮುಂದೆ ಕೂಡ್ರಿಸಿಕೊಂಡು 'ನಿಮ್ಮ ಮಗಾ ಮಿಸ್‌ಚೀವ್ಹಸ್ ಅದಾನ. ಇಂಥವ್ರಿಗೆ ರಿಯಾಯ್ತಿ ಕೊಡಲಾಗೋದಿಲ್ಲ' ಎಂದು ಪ್ರಿನ್ಸಿಪಾಲರು ಹೇಳಿದ್ದು ಕೇಳಿ ನಾನು ಅಪ್ರತಿಭನಾದೆ. ಅದರಲ್ಲಿ ಸತ್ಯದ ಒಂದಂಶವೂ ಇರಲಿಲ್ಲ. ಹಾಗಂತ ಅವರಿಗೆ ಹೇಳಿದೆ. ನನ್ನ ಸಮಸ್ಯೆ ಆ ಪ್ರಿನ್ಸಿಪಾಲ್‌ಗೆ ನನ್ನ ಒಳ್ಳೇತನ ನಿರೂಪಿಸುವದಾಗಿರಲಿಲ್ಲ. ಆ ಶತಪ್ರತಿಶತ ಮಿಥ್ಯಾರೋಪವನ್ನು ನನ್ನ ತಂದೆಯ ಸಮ್ಮುಖದಲ್ಲಿ ಹೊರಿಸಲಾಗಿತ್ತು. ಅದರಿಂದ ನನ್ನ ತಂದೆಗಾದ ನೋವನ್ನು ಹೇಗೆ ತೊಡೆದುಹಾಕುವದು ? ನಿರುಪಾಯವಾಗಿ ಮನೆಗೆ ಮರಳಿದೆವು. ನನ್ನ ತಂದೆ ಒಂದೇ ಮಾತು ಹೇಳಲಿಲ್ಲ. ದೂಷಿಸಲಿಲ್ಲ. ಆ ಮೇಲೆ ತಿಳಿದುಬಂದಂತೆ ಎನ್.ಸಿ.ಸಿ. ಕೆಡೆಟ್‌ಗಳ ಗುಂಪಿನಲ್ಲೊಬ್ಬ ವಿದ್ಯಾರ್ಥಿ ಏನೋ ಉಲಕೋಚಿತನ ಮಾಡಿದ್ದು ಅವನೇ ನಾನೆಂದು ಪ್ರಿನ್ಸಿಪಾಲ್ ಮಹಾಶಯರು ಭಾವಿಸಿದ್ದರು. ಹಾಗೆಂದು ನನಗೆ ಹೇಳಲಾಯಿತು. ಆದರೆ ಪಿ.ಯು.ಸಿ. ಮುಗಿದ ಮೇಲೆ ಈ ಕಾಲೇಜಿನ ಋಣವೂ ಮುಗಿಯಿತೆಂದು ನಾನು ನಿರ್ಧರಿಸಿಯಾಗಿತ್ತು. ತಿಂಗಳೊಪ್ಪತ್ತಿನಲ್ಲಿ ಪರೀಕ್ಷೆ ಮುಗಿದು ಫಲಿತಾಂಶವೂ ಬಂದು ನಾನು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದೆ. ಆಯಾಯ ವರ್ಗಗಳಲ್ಲಿ ಅತ್ಯುನ್ನತ ಅಂಕ ಗಳಿಸಿದ್ದ ವಿದ್ಯಾರ್ಥಿಗಳನ್ನು ಅಭಿನಂದಿಸುವ ಚಿಕ್ಕ ಕಾರ್ಯಕ್ರಮವೊಂದು ಪ್ರಿನ್ಸಿಪಾಲ್‌ರ ಛೇಂಬರ್‌ನಲ್ಲಿ ಏರ್ಪಾಡಾಗಿತ್ತು. ಅಲ್ಲಿ ನನ್ನನ್ನು ಕಂಡು ಪ್ರಿನ್ಸಿಪಾಲರಿಗೆ ಆಶ್ಚರ್ಯವೇ ಆಯಿತು. ನಾನು ಅಲ್ಲಿಯೇ ಪದವಿ ವ್ಯಾಸಂಗ ಮುಂದುವರಿಸುವೆನೆಂಬ ಗ್ರಹಿಕೆಯಲ್ಲಿ ಮಾತಾಡಿದ ಪ್ರಾಚಾರ್ಯರಿಗೆ ನಾನು ಅಲ್ಲಿ ಕಲಿಯುವದಿಲ್ಲವೆಂದೆ. ಅವರು ಕಾರಣ ಕೇಳಿದಾಗ ಅಲ್ಲಿ ಇತಿಹಾಸವನ್ನು ಪ್ರಧಾನ ವಿಷಯವಾಗಿ ಆಯ್ದುಕೊಳ್ಳುವ ಅವಕಾಶವಿಲ್ಲದ್ದರಿಂದ ನಾನು ಧಾರವಾಡಕ್ಕೆ ಹೋಗುವೆ ಎಂದೆ. (ಮುಂದೆ ನಾನು ಎಂ.ಎ. ಓದುತ್ತಿದ್ದಾಗ ಕಾಲೇಜಿನ ಕೆಲಸಗಳಿಗೆಂದು ಅವರು ವಿಶ್ವವಿದ್ಯಾಲಯಕ್ಕೆ ಬಂದಾಗ ನನ್ನನ್ನು ಕಂಡರೆ ನಿಂತು ಮಾತಾಡಿಸಿ ಹೋಗುತ್ತಿದ್ದರು. ಆದರೆ ಆ ಪ್ರಕರಣದ ಬಗ್ಗೆ ನನ್ನ ಮನಸಿನಲ್ಲಿ ಬಹುದಿನಗಳ ವರೆಗೆ ಒಂದು ವಿಷಾದ ಉಳಿದುಕೊಂಡಿತ್ತು.)

ನಾನು ಧಾರವಾಡಕ್ಕೆ ಹೋಗುವದು ನನ್ನ ತಂದೆಗೆ ಸಮ್ಮತವಿರಲಿಲ್ಲ. ಅದಕ್ಕೆ ಪ್ರಮುಖ ಕಾರಣ ಆರ್ಥಿಕವಾದುದಾಗಿತ್ತು. ಈ ನಡುವೆ ನನ್ನಣ್ಣ ಧಾರವಾಡ ಕೃಷಿ ಕಾಲೇಜಿನಲ್ಲಿ ಎಂ.ಎಸ್ಸಿ. ಮುಗಿಸಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕನೆಂದು ನಿಯುಕ್ತನಾಗಿದ್ದರೂ ಆತನ ವಿವಾಹವಾಗಿದ್ದು ಮನೆ ಹೂಡಿದ್ದರಿಂದ ತನ್ನ ಕುಟುಂಬದ ಖರ್ಚು ವೆಚ್ಚಗಳಿಗೆ ಅವನ ವೇತನ ವಿನಿಯೋಗವಾಗಿ ಅವನಿಂದ ನಮಗೆ ವಿಶೇಷ ಧನಸಹಾಯವೇನೂ ಇರಲಿಲ್ಲ. ಈ ಸ್ಥಿತಿ ನನಗೂ ಗೊತ್ತಿತ್ತು. ಕೊನೆಗೆ ಪೋಲೀಸ್ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದ ಅಣ್ಣಿಗೇರಿ ಎಂಬುವವರೊಂದಿಗೆ ವಿವಾಹವಾಗಿ ಧಾರವಾಡದಲ್ಲಿದ್ದ ನನ್ನ ಕಿರಿಯಕ್ಕ ಪ್ರಭಾವತಿಯ ಮನೆಯಲ್ಲಿದ್ದುಕೊಂಡು ನಾನು ಓದುವದೆಂದಾಯಿತು. ಪ್ರತಿ ತಿಂಗಳು ತಾವು ೫೦ ರೂಪಾಯಿ ಕಳಿಸುವದಾಗಿಯೂ ಅದರಲ್ಲಿ ೧೦ ರೂಪಾಯಿ ನಾನಿಟ್ಟುಕೊಂಡು ೪೦ ರೂಪಾಯಿಗಳನ್ನು ನನ್ನಕ್ಕನಿಗೆ ಕೊಡಬೇಕೆಂದೂ ಹೇಳಿ ನನ್ನ ತಂದೆ ಸಮ್ಮತಿಸಿದರು. ಕರ್ನಾಟಕ ಕಾಲೇಜಿಗೆ ಪ್ರವೇಶವೇನೋ

ದೊರೆಯಿತು. ಪ್ರಾರಂಭಿಕ ಶುಲ್ಕ ಸಂದಾಯ ಮಾಡಲು ಹಣ ಬೇಕಿತ್ತು. ಊರಿಗೆ ಹೋದೆ. ನನ್ನ ತಾಯಿ ತನ್ನ ಕೊರಳಲ್ಲಿದ್ದ ಬೋರಮಾಳ ಸರ ತೆಗೆದು ಹಿರಿಯಕ್ಕನ ಕೈಲಿಟ್ಟಳು. ಮಟ ಮಟ ಮಧ್ಯಾಹ್ನ ನಾನೂ ಗೌರಕ್ಕನೂ ಹೋಗಿ ಲೇವಾದೇವಿ ಮಾಡುತ್ತಿದ್ದ ವಕೀಲನೊಬ್ಬನ ಬಳಿ ಅದನ್ನು ಒತ್ತೆ ಇಟ್ಟು ೨೦೦ ರೂಪಾಯಿ ತೆಗೆದುಕೊಂಡು ಬಂದೆವು. ನಾನು ಧಾರವಾಡಕ್ಕೆ ಬಂದು ಕಾಲೇಜಿಗೆ ಪ್ರವೇಶ ಪಡೆದೆ.

ಪ್ರಿನ್ಸಿಪಾಲರು ಹೊರಿಸಿದ ಮಿಥ್ಯಾಪವಾದ ನಾನು ಬೈಲಹೊಂಗಲ ತೊರೆಯಲು ತತ್‌ಕ್ಷಣದ ಕಾರಣವಾಗಿದ್ದ ಹೊರತಾಗಿಯೂ ಇತಿಹಾಸವನ್ನು ಓದಬೇಕೆಂಬ ಆಶೆ ನನಗಿತ್ತು. ಅದಕ್ಕೆ ವಿಶೇಷವಾಗಿ ನನ್ನ ತಂದೆಯೇ ಕಾರಣ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ನನ್ನ ತಂದೆ ಆ ಕಾಲಘಟ್ಟದ ರಾಜಕೀಯ ವಿದ್ಯಮಾನಗಳಲ್ಲಿ ಆಳದ ಆಸಕ್ತಿಯನ್ನಿಟ್ಟುಕೊಂಡವರು. ನನಗೆ ದ್ವಿತೀಯ ಮಹಾಯುದ್ಧದ ಕುರಿತು ಹೇಳುತ್ತಿದ್ದರು. ಗಾಂಧೀ, ನೆಹರೂ, ಜಿನ್ನಾ, ಹಿಟ್ಲರ್, ಸ್ಟಾಲಿನ್, ಮಹಾಜನ್ ಆಯೋಗ, ಇಂದಿರಾ ಗಾಂಧೀ, ಮೊರಾರ್ಜಿ, ವೈ. ಬಿ. ಚವಾಣ್... ತಂದೆಯುತಿರದೇ ಸ್ನೇಹಿತನಂತಿದ್ದ ಅವರು ಇಂಥ ವಿಷಯಗಳ ಕುರಿತು ಆಗಾಗ ಮಾತಾಡುತ್ತಿದ್ದರು.

ನನ್ನ ಅವ್ವ ತುಂಬ ಕಳವಳ ಪಟ್ಟದ್ದು ನಾನು ಎಂ.ಎ. ಮುಗಿಸಿ, ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜಿನಲ್ಲಿ ಒಂದು ವರ್ಷ ಅರೆಕಾಲಿಕ ಉಪನ್ಯಾಸಕನಾಗಿದ್ದು ಬೇಸರವಾಗಿ ೧೯೮೧ ರಲ್ಲಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಓದಲೆಂದು ದೆಹಲಿಗೆ ಹೊರಟು ನಿಂತಾಗ. ಅವಳು ಅತ್ತಳು, ಕರೆದಳು, ದಿಲ್ಲಿಗೆ ಹೋಗಬೇಡವೆಂದು ಹಲುಬಿದಳು. ಕೊನೆಗೆ 'ಇನ್ ನಿನ ಮದಿವೀ ಸುದ್ದೀ ತಗ್ಯೂದುಲ್ಲ ಬಿಡೋ. ನೀ ದಿಲ್ಲಿಗೆ ಹೋಗಬ್ಯಾಡಾ' ಎಂದಳು. (ನನ್ನ ಎಂ.ಎ. ಮುಗಿಯುತ್ತಲೇ ನನ್ನ ಮದುವೆಯ ಪ್ರಸ್ತಾಪ ಮಾಡತೊಡಗಿದ್ದ ಅವಳಿಗೆ 'ನೀ ಹಿಂಗೆಲ್ಲಾ ಗಂಟ್ ಬಿದ್ರ ದಿಲ್ಲಿಗೇರs, ಮುಂಬೈಗೇರs, ಹೋಗಿಬಿಡ್ತೇನ್ ನೋಡ' ಎಂದು ನಾನು ಹೆದರಿಸುತ್ತಿದ್ದೆ. ನಾನು ದಿಲ್ಲಿಗೆ ಹೋಗುವದು ನಿಜವೇ ಎಂದಾದಾಗ ಅದು ಆ ಕಾರಣಕ್ಕೆ ಎಂದು ಅವಳು ಭಾವಿಸಿದ್ದಳು !). 'ಅದಕ್ಕಲ್ಲಬೇ. ಅಲ್ಲಿ ಸ್ಕಾಲರ್‌ಶಿಪ್ ಸಿಕ್ಕರ ಒಂದ್ ನಾಲ್ಕೈದು ವರ್ಷ ಇದ್ದ ಬರ್ತೇನ ಬಿಡಲಾ' ಎಂದೆ. ಅಲ್ಲಿ ಸ್ಕಾಲರ್‌ಶಿಪ್ ಎಷ್ಟು ಕೊಡುತ್ತಾರೆಂದು ಅವಳು ಕೇಳಿದಾಗ ತಿಂಗಳಿಗೆ ನಾಲ್ಕೈದು ನೂರು ರೂಪಾಯಿ ಎಂದೆ. 'ಅಷ್ಟ್ ರೊಕ್ಕಾ ನಾನs ಕೊಡ್ತsನ ತಗೋ. ಮನ್ಯಾಗs ಕಿರಾಣಿ ಅಂಗಡ್ಯೆತಿ. ಯಾಪಾರ ಮಾಡಿಕೊಂಡ ಸುಮ್ನs ನಮ್ ಕಣ್ಮುಂದs ಇರೋ ಯಪ್ಪಾ' ಎಂದಳು. ಸ್ವರ್ಣಪದಕ ಸಮೇತ ಎಂ.ಎ. ಮುಗಿಸಿ ಪ್ರತಿಷ್ಠಿತ ಕಾಲೇಜೊಂದರಲ್ಲಿ ಒಂದು ವರ್ಷ ಪಾಠ ಮಾಡಿದ ನಾನು ಕಿರಾಣಿ ಸಾಮಾನು ಕಟ್ಟಿಕೊಡುತ್ತ ವ್ಯಾಪಾರ ಮಾಡುವ ಚಿತ್ರ ಕಲ್ಪಿಸಿ ನಕ್ಕೆ. ಆದರೆ 'ಹಾಲ ಮಾರಿದ್ದರಾಗ ಇಷ್ಟ್ ಉಳೀತಾವ. ಶೇಂಗಾ ಸುಗ್ಗ್ಯಾಗಂತೂ ಚಿಂತೇ ಇಲ್ಲ' ಎನ್ನುತ್ತ ಆ ೫೦೦ ರೂಪಾಯಿ ತಾನು ಹೇಗೆ ಜಮೆ ಮಾಡಬಲ್ಲಳೆಂದು ನನ್ನ ಅವ್ವ ಗಂಭೀರವಾಗಿ ವಿವರಿಸತೊಡಗಿದಾಗ ನನ್ನ ಕಣ್ಣು ತುಂಬಿ ಬಂದಿದ್ದವು. ಕೊನೆಗೆ 'ವಾರಾ ವಾರಾ ತಪ್ಪದs ಪತ್ರಾ ಬರಕೊಂತ ಇರ'ಬೇಕೆನ್ನುವ ಅವಳ ಕರಾರಿಗೆ ಒಪ್ಪಿ ನಾನು ದಿಲ್ಲಿಗೆ ಹೊರಟೇ ಹೋದೆ. ಬದುಕಿನಲ್ಲಿ ನಾನು ನಿಯಮಿತವಾಗಿ ೫ ವರ್ಷ ಪತ್ರ ಬರೆದ ಒಂದೇ ಅವಧಿ ಅದು. ಈ ಮಧ್ಯೆ ನನ್ನ ತಮ್ಮ ಶಿವಾನಂದನೂ ದಿಲ್ಲಿ ಸ್ಕೂಲ್ ಆಫ್ ಇಕನಾಮಿಕ್ಸ್‌ಗೆ ಸಂಲಗ್ನವಿದ್ದ ಸಮಾಜಶಾಸ್ತ್ರ ಉನ್ನತ ಅಧ್ಯಯನ ಕೇಂದ್ರದಲ್ಲಿ ಎಂ.ಫಿಲ್. ಮಾಡಲೆಂದು ದೆಹಲಿಗೆ ಬಂದು ನನ್ನೊಂದಿಗೇ ವಾಸಿಸತೊಡಗಿದ. ದಿಲ್ಲಿ ಎಂದರೆ ತನ್ನ ಮಕ್ಕಳು ಅಶೋಕ - ಶಿವಾನಂದ ಎಂದು ಸಮೀಕರಿಸಿದ್ದ ನನ್ನ ತಾಯಿ ೧೯೮೪ ರಲ್ಲಿ

ಇಂದಿರಾ ಹತ್ಯೆಯ ನಂತರ ದಿಲ್ಲಿಯಲ್ಲಿ ಹಲವು ದಿನಗಳ ವರೆಗೆ ಭುಗಿಲೆದ್ದ ವ್ಯಾಪಕ ಹಿಂಸಾಚಾರದ ವರದಿಗಳನ್ನು ಕೇಳಿ ಬೆಂಕಿಯ ಮೇಲೆ ನಿಂತಂತೆ ಚಡಪಡಿಸಿದ್ದಳು.

ಈ ಎಲ್ಲ ಬೆಳವಣಿಗೆಗಳ ನಡುವೆ ನನ್ನ ತಂದೆ ಸ್ಥಿತಪ್ರಜ್ಞ. ಇದು ಶಬ್ದದ ಚೆಲುವಿಕೆಗಾಗಿ ಹೇಳುತ್ತಿರುವ ಮಾತಲ್ಲ. ಭಗವದ್ಗೀತೆಯನ್ನು ಆಳವಾಗಿ ಅಭ್ಯಸಿಸುವವರಿದ್ದಾರೆ. ಅದರ ಕುರಿತು ಭಾಷಣ ಬಿಗಿಯುವವರಿದ್ದಾರೆ. ಆದರೆ ನನ್ನಪ್ಪ ಭಗವದ್ಗೀತೆಯನ್ನು ಬದುಕಿದರು. ಅದರ ಸಂದೇಶ ಅವರ ಜೀವನದ ತತ್ವವಾಗಿತ್ತು. ನಾಗರಿ ಲಿಪಿಯ ಸಂಸ್ಕೃತ ಪದ್ಯದಲ್ಲಿ ನನ್ನಪ್ಪ ಅದನ್ನು ತನ್ಮಯರಾಗಿ ಓದುತ್ತಿದ್ದರು. ಫಲಾಪೇಕ್ಷೆಗಳಿಲ್ಲದ ಕರ್ತವ್ಯವಾಗಿ ಮಾಡುವ ಕರ್ಮದ ಕುರಿತಾದ ಅದರ ಸಂದೇಶ ನನ್ನ ತಂದೆಯ ಅತ್ಯಂತ ಶ್ರದ್ಧೆಯ - ಪ್ರೀತಿಯ ಭಾಗವಾಗಿತ್ತು. ಟಿಳಕರ ಗೀತಾರಹಸ್ಯವೆಂಬ ಮರಾಠೀ ಕೃತಿಯನ್ನೊಳಗೊಂಡು ಭಗವದ್ಗೀತೆಯನ್ನು ಅರ್ಥೈಸುವ ಹಲವು ಪುಸ್ತಕಗಳು ನಮ್ಮ ಮನೆಯಲ್ಲಿದ್ದವು. ತನ್ನೊಬ್ಬ ಮೊಮ್ಮಗಳಿಗೆ ನನ್ನ ತಂದೆ ಗೀತಾ ಎಂದು ಹೆಸರಿಟ್ಟರು. 'ಅಲ್ಲಪಾ ಕೃಷ್ಣಾ ಯುದ್ಧಾ ಮಾಡೂ ಅಂತೀ. ಯುದ್ಧ ಅಂದ್ರ ಸಾವು, ಹಿಂಸಾ. ಎದರಿಗಿ ನಿಂತವರರs ಯಾರು ? ನನಗ ವಿದ್ಯಾ ಕಲಿಸಿದ ಗುರು, ನನ್ನಪ್ಪಗ ಒಡಹುಟ್ಟಿದವನ ಮಕ್ಕಳು. ಇಂಥಾ ಯುದ್ಧ ಪಾಪ ಅಲ್ಲೇನೂ ? ಅಂತ ಅರ್ಜುನ ಕೇಳಿದಾಗ ಕೃಷ್ಣ ಹೇಳತಾನ, ಇದು ಕರ್ತವ್ಯದ ಪ್ರಶ್ನೆ. ನೀ ಈಗ ಸ್ಥಿತಪ್ರಜ್ಞ ಆಗಬೇಕು. ಹಂಗಾರ ಸ್ಥಿತಪ್ರಜ್ಞ ಅಂದ್ರ ಯಾರು ? ಅವನ ಲಕ್ಷಣ ಏನು ? ಅಂತ ಅರ್ಜುನ ಕೇಳಿದಾಗ ಕೃಷ್ಣ ಹೇಳತಾನ, ಸುಖೇದುಃಖೇ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ...' ಹೀಗೇ ಸಾಗುತ್ತಿತ್ತು ನನ್ನ ತಂದೆಯ ಮಾತು. ನನ್ನನ್ನು ಮುಂದೆ ಕೂಡ್ರಿಸಿಕೊಂಡು ಇದನ್ನೆಲ್ಲ ಎಷ್ಟ ಸಲ ಹೇಳಿದರೂ ನನ್ನ ತಂದೆಗೆ ಬೇಸರವಿಲ್ಲ. ಕೇಳಿ ಕೇಳಿ ನನಗೇ ಪಾಠವಾಗಿ ಹೋಗಿತ್ತು.

ನನ್ನಪ್ಪ ಎಂಥ ಸ್ಥಿತಪ್ರಜ್ಞನೆಂಬುದನ್ನು ಕಾಣುವ ಸಂದರ್ಭವೂ ಬಂದಿತ್ತು. ೧೯೮೯ ರ ಮೇ ತಿಂಗಳಾಂತ್ಯದ ಒಂದು ದಿನ ನನ್ನ ಗೆಳೆಯ ರವಿ ಬೆಳಗೆರೆಯ ಮದುವೆಗೆಂದು ಬಳ್ಳಾರಿಗೆ ಹೋಗಲು ಸಿದ್ಧನಾಗುತ್ತಿದ್ದಾಗ ಧಾವಿಸಿ ಬಂದ ನನ್ನ ಸೋದರಳಿಯ ಒಂದು ದಾರುಣ ವಾರ್ತೆ ತಂದಿದ್ದ. ಈ ಮಧ್ಯೆ ಬೆಂಗಳೂರಿನಿಂದ ಧಾರವಾಡದ ಕೃಷಿ ಕಾಲೇಜಿಗೆ ಅಧ್ಯಾಪಕನಾಗಿ ಬಂದು ಸಾರಸ್ವತಪುರದ ತನ್ನ ಮಾವನ ಮನೆಯಲ್ಲಿ ನೆಲೆಸಿದ್ದ ನನ್ನ ಅಣ್ಣ ತನ್ನ ಅಧ್ಯಯನ ವಿಭಾಗದಲ್ಲಿ ತಾನು ಅನುಭವಿಸುತ್ತಿದ್ದ ಉಪೇಕ್ಷೆ ಮತ್ತು ತಾರತಮ್ಯಗಳಿಂದ ನೊಂದು ಅಂತರ್ಮುಖಿಯಾಗಿ ಕೊನೆಗೆ ಆತ್ಮಹತ್ಯೆಯ ನಿರ್ಧಾರ ಕೈಗೊಂಡು ಹತನಾಗಿದ್ದ. ಅದು ನಮಗೆ ಅತ್ಯಂತ ಅನಿರೀಕ್ಷಿತವಾದ ಘಟನೆ. ನನ್ನ ಅಳಿಯ ತಂದಿದ್ದ ಸೈಕಲ್ಲೇರಿ ನಾನು ಮರಣೋತ್ತರ ಶವಪರೀಕ್ಷೆ ನಡೆಯುತ್ತಿದ್ದ ಸಿವ್ಹಿಲ್ ಆಸ್ಪತ್ರೆಗೆ ಹೋಗುವಾಗ ಮಾರ್ಗಮಧ್ಯದಲ್ಲೇ APMC ಹತ್ತಿರ ಏಕಾಕಿಯಾಗಿ ಬರುತ್ತಿದ್ದ ನನ್ನಪ್ಪ ಸಿಕ್ಕರು. ನನಗಾಗಿದ್ದ ಶಾಕ್ ನನ್ನ ತಂದೆಯ ಮುಖಭಾವದಲ್ಲೂ ಇತ್ತೆ ? ಗೊತ್ತಾಗಲಿಲ್ಲ. 'ದವಾಖಾನ್ಯಾಗ ಅದೆಲ್ಲಾ ಮುಗೀಬೇಕಾದ್ರ ತಡಾ ಆಗತೈತಿ. ನೀ ಒಂದ್ ಸ್ವಲ್ಪ ಏನರs ತಿಂದ ಚಾ ಕುಡಿವಂತೀ ನಡಿ' ಎಂದರು. ನನ್ನ ಪ್ರಶ್ನೆಗಳಿಗೆ ಚುಟುಕಾಗಿ ಉತ್ತರಿಸಿದರು. ಒಂದೆಡೆ ಸ್ವಲ್ಪ ನಿಂತು ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ ಹೇಳಿದರು : 'ಯಾವಾಗ ಬಸವ ಹಿಂಗಿಂಗ್ ಮಾಡಿಕೊಂಡಾನಂತ ಅವರ ಮಾವನ ಟೆಲಿಗ್ರಾಂ ಬಂದ ನನಗ ವಿಷಯ ತಿಳಿತೂ ಆವಾಗs ನಾ ಬಸವನ್ನ ಮರತ ಬಿಟ್ಟೆ'. ಮೂವರು ಹೆಣ್ಣುಮಕ್ಕಳ ನಂತರ ಹುಟ್ಟಿದ ತಮ್ಮ ಪ್ರೀತಿಯ ಪುತ್ರ, ಕುಟುಂಬದ ಹೆಮ್ಮೆಯ ಸದಸ್ಯ, ಯಾರ ಅಭ್ಯುದಯಕ್ಕಾಗಿ ಕುಟುಂಬದ ಎಲ್ಲರೂ ೧೦ ವರ್ಷಗಟ್ಟಲೇ ಶ್ರಮಿಸಿದ್ದೆವೋ ಆ ಜೀವ ಹೀಗೆ ತನ್ನನ್ನು ಕೊನೆಗೊಳಿಸಿಕೊಂಡ ಬಗ್ಗೆ ನನ್ನ ತಂದೆಗೆ ದುಃಖ ಬೇಸರ ಇತ್ತೆ ? ಇರಲಿಲ್ಲವೆ ?

ಇದಾದ ಕೆಲ ದಿನಗಳ ನಂತರ ಬೈಲಹೊಂಗಲದಲ್ಲಿದ್ದ ಹಿತ್ತಿಲ ಕಡೆಯಿಂದ ನನ್ನ ತಂದೆಯನ್ನು ರಟ್ಟೆ ಹಿಡಿದು ನಡೆಸಿಕೊಂಡು ಬಂದ ನಮ್ಮ ಗೌರಕ್ಕ ನಡುಮನೆಯಲ್ಲಿದ್ದ ನನಗೆ ಹೇಳಿದಳು, 'ಬಚ್ಚಲ ಕಟ್ಟೀ ಮ್ಯಾಲ ಕುಂತ ಅಪ್ಪಾ ಅಳಾಕತ್ತಿದ್ದ'. ಬಹಳ ಹೊತ್ತಿನ ನಂತರ ಅಪ್ಪ ನನಗೆ ವಿವರಣೆ ಕೊಡುವ ರೀತಿಯಲ್ಲಿ ಹೇಳಿದರು, 'ಏನಿಲ್ಲಾ, ಆ ರೈಲಿನ ಗಾಲಿ ಬಸವನ ಶರೀರಾ ಜಕ್ಕೊಂಡ ಹಳೀಗುಂಟ ಓಡುವಾಗ ಆ ಶರೀರಕ್ಕ ಎಷ್ಟ ಹಿಂಸಾ ಆಗಿದ್ದೀತು ಅಂತ ವಿಚಾರ ಬಂದು ಮನಸೀಗಿ ದುಃಖಾತು'.

ಇಂಥ ನನ್ನ ತಂದೆ ೮೦ ವರ್ಷ ವಯಸ್ಸಾಗುವ ವರೆಗೆ ಓಡಾಡಿಕೊಂಡೇ ಇದ್ದರು. ಆ ಮೇಲೆ ಕಾಲುಗಳು ಹಿಡಿದುಕೊಂಡು ಮನೆಯಲ್ಲಿಯೇ ಇರುವ ಸ್ಥಿತಿ ಬಂತು. ಮೂತ್ರ ವಿಸರ್ಜನೆಯ ತೊಂದರೆ ಉಂಟಾದಾಗ ಎರಡು ಸಲ ಧಾರವಾಡದ ಡಾ. ರಾಮನಗೌಡರ್ ನರ್ಸಿಂಗ್ ಹೋಂ ಗೆ ಅಡ್ಮಿಟ್ ಮಾಡಿದೆವು. ವೈದ್ಯರ ಸೂಚನೆಯ ಮೇರೆಗೆ ಶಿವಾನಂದ ಬೆಳಗಾವಿಗೆ ಹೋಗಿ ಡಾ. ಅಚರೇಕರ್ ಎಂಬುವರನ್ನು ಕರೆದುಕೊಂಡು ಬಂದನಾದರೂ ನನ್ನ ತಂದೆಯಲ್ಲಿ ಪಾರ್ಶ್ವವಾಯುವಿನ ಸೂಕ್ಷ್ಮ ಸೂಚನೆಯನ್ನು ಗುರುತಿಸಿದ ವೈದ್ಯರು ಶಸ್ತ್ರಚಿಕಿತ್ಸೆಗೆ ಅವರ ದೇಹಸ್ಥಿತಿ ಪೂರಕವಾಗಿಲ್ಲವೆಂದು ತಿಳಿಸಿ catheterization ವ್ಯವಸ್ಥೆ ಮಾಡಿದರು. ಆಮೇಲೆ ಬೈಲಹೊಂಗಲಕ್ಕೆ ಒಯ್ದೆವು. ಆ ವ್ಯವಸ್ಥೆಯಲ್ಲಿ ಇನ್‌ಫೆಕ್ಷನ್ ಆಗಿ ಜ್ವರ ಬರುವ ಸಾಧ್ಯತೆಗಳಿರುತ್ತಿದ್ದುದರಿಂದ ಶಿವಾನಂದ ತಿಂಗಳಿಗೊಮ್ಮೆ ಬೈಲಹೊಂಗಲಕ್ಕೆ ಹೋಗಿ ಅಲ್ಲಿಯ ವೈದ್ಯರ ನೆರವಿನಿಂದ ಕೆಥೆಟರ್ ಬದಲಾಯಿಸಿ ಬರುತ್ತಿದ್ದ. ಆಮೇಲಾಮೇಲೆ ಪೂರ್ತಿಯಾಗಿ ಹಾಸಿಗೆ ಹಿಡಿದ ತಂದೆ bed sores ನಿಂದಾಗಿ ತಿಂಗಳೊಪ್ಪತ್ತು ತುಂಬ ಯಾತನೆ ಅನುಭವಿಸಿ ಕೊನೆಗೆ ೮ ಜೂನ್ ೧೯೯೫ ರಂದು ನಿದ್ರೆಯಲ್ಲಿದ್ದಾಗಲೇ ಕೊನೆಯುಸಿರೆಳೆದರು. ಈ ನಡುವೆ ನನ್ನ ತಾಯಿಗೆ ಹೈಪೋಗ್ಲೈಸೆಮಿಯಾ (ರಕ್ತದಲ್ಲಿ ಸಕ್ಕರೆ ಪ್ರಮಾಣದ ಇಳಿಕೆ) ಆಗಿ ಒಂದೆರಡು ಸಲ ತಾತ್ಕಾಲಿಕ ವಿಸ್ಮೃತಿ ಉಂಟಾಯಿತು. ನನ್ನ ತಂದೆ ತೀರಿಹೋದ ಎರಡೇ ವರ್ಷಗಳಲ್ಲಿ ೪ ಏಪ್ರಿಲ್ ೧೯೯೭ ರಂದು ನಮ್ಮ ತಾಯಿಯೂ ತೀರ ಅನಿರೀಕ್ಷಿತವಾಗಿ ಸೆರೆಬ್ರಲ್ ಹ್ಯಾಮರೇಜ್‌ನಿಂದ ನಮ್ಮೆಲ್ಲರ ಕಣ್ಮುಂದೆಯೇ ಕೊನೆಯುಸಿರೆಳೆದಳು.

ಬದುಕಿನ ಕೊನೆಯ ವರ್ಷಗಳಲ್ಲಿ ಅವರು ಸೌಕರ್ಯದಿಂದಿರುವಂತೆ ನಾನು ಹಾಗೂ ಶಿವಾನಂದ ೬೦-೭೦ ಸಾವಿರ ರೂಪಾಯಿ ಖರ್ಚು ಮಾಡಿ ಮುಂಚೆ ಇದ್ದ ಮರಮುಟ್ಟುಗಳನ್ನು ಬಳಸಿಕೊಂಡೇ ಬೈಲಹೊಂಗಲದ ಮನೆಯನ್ನು ಪುನರ್ನಿರ್ಮಿಸಿದೆವು. ಪ್ರತಿ ತಿಂಗಳು ಅವರಿಗೆ ನಿಶ್ಚಿತ ಮೊತ್ತದ ಹಣವನ್ನು ನಮ್ಮ ಖಾತೆಗಳಿಂದ ವರ್ಗಾಯಿಸಲು ಬ್ಯಾಂಕಿನವರಿಗೆ ಸೂಚನೆ ಕೊಟ್ಟಿದ್ದೆವು. ಸ್ವಾತಂತ್ರ್ಯಯೋಧರಿಗೆ ಕೊಡಮಾಡುತ್ತಿದ್ದ ಹಣವೂ ಬರುತ್ತಿದ್ದು ಆರ್ಥಿಕ ತೊಂದರೆ ಇರಲಿಲ್ಲ. ಅವರಿಗೆ ಅಗತ್ಯದ ವೈದ್ಯಕೀಯ ಸೌಲಭ್ಯಗಳನ್ನೂ ಒದಗಿಸಿದೆವು. ಅವರ ಪಾರ್ಥಿವ ಶರೀರಗಳನ್ನೇನೋ ಬೀಳ್ಕೊಟ್ಟೆವು. ಅಂಥ ತಂದೆ - ತಾಯಿಯರ ನೆನಪುಗಳನ್ನು ಯಾರು ಹೇಗೆ ತಾನೇ ಬೀಳ್ಕೊಟ್ಟಾರು ? ಅವು ನಮ್ಮಲ್ಲಿ ಹಸಿರಾಗಿಯೇ ಇವೆ.

**ಅಶೋಕ ಶೆಟ್ಟರ್**, ೨.೬, ಶಾಂತಿಸಾಗರ, ತಪೋವನನಗರ, ಧಾರವಾಡ - ೫೮೦ ೦೦೨.
✆: ೦೮೩೬ - ೨೭೭ ೦೪೩೦

# ಅಯ್ದು ಕವಿತೆಗಳು

ಚಂದ್ರಶೇಖರ ತಾಳ್ಯ

## ೧. ಯಾವ ರಂಗ ಸಾಲೆ

ರಂಗ ಸಾಲೆ ರಂಗ ಸಾಲೆ
ಯಾವ ರಂಗ ಸಾಲೆ
ಕುಣಿದು ಕುಣಿದು ಕಾಲು ಸೋಲೆ
ಯಾವ ರಂಗ ಶಾಲೆ.

ಗೆಜ್ಜೆ ಕಟ್ಟಿ ಬಣ್ಣ ಬಳಿದು
ಕಣ್ಣ ತುಂಬ ಬೆಳಕು ತುಳುಕಿ
ಜೀವ ಜೀವ ಧಾರೆ ಎರೆದು
ಕುಣಿದೆವಲ್ಲ ಬಾಗಿ ಬಳುಕಿ.

ಮೌನದೊಂದು ನಾಟ್ಯಗೀತೆ
ಹೊಮ್ಮಲೆಂಬ ಮಾತು ಮಾತೇ–
ಆಡದಂತೆ, ನೋಡದಂತೆ
ಕ್ರಿಯೆಯು ನಡೆದು ನಡೆಯದಂತೆ.

ತಪವೆ ತಪವೆ ಮಾಡಿದಂತೆ
ನೆಪಕೆ ನೆಪವ ಹೂಡಿದಂತೆ
ಶೂನ್ಯದೊಳಗೂ ತುಂಬಿದಂತೆ
ಅದುವೆ ಜಗವು ಆಗುವಂತೆ.

ಹಂಸ ತೇಲಿ ಗಿಳಿಯು ಮಾತು
ಕೋಗಿಲೊಂದು ಮರಕೆ ಆತು
ಮರೆಯಲೊಂದು ಹಾಡ ಹಾಡಿ
ಚಿಗುರಿತಲ್ಲಿ ನೆನಪು ಮೂಡಿ.

ಆ ದನಿಗಳ ಬೆಳಗಿನಲ್ಲಿ, ಸಂಜೆ ರಂಗು ಬೆರಗಿನಲ್ಲಿ
ಚಿಕ್ಕಿ ಮಿನುಗಿ ಮಿನುಗಿನಲ್ಲಿ, ಚಂದ್ರ ನಕ್ಕ ನಗುವಿನಲ್ಲಿ
ನೆಲದ ಮಾಯೆಯೊಂದು ಹೆಜ್ಜೆ, ಶಿವನ ಹೆಜ್ಜೆ ತುದಿಯ ಹೆಜ್ಜೆ
ಗುಡ್ಡ ನಿಮಿರಿ ನಿಂತವು. ಗಗನ ಹಾಸಿ ಹರಿದವು

ಅಂಗ ಭಂಗಿ ಭಂಗಿಯಲ್ಲಿ ಗಾಳಿ ತೆರೆಯ ನಿರಿಗೆಯಲ್ಲಿ
ದಿಕ್ಕು ದಿಕ್ಕು ಕೂಡಿದಂತೆ, ಗಗನ ಕೊಡವಿ ಹರಡಿದಂತೆ
ಲಯದ ತಾಸ ಪ್ರಳಯವೋ, ಹೊಸ ಸೃಷ್ಟಿಯ ತವಕವೋ
ನಮ್ಮೆದೆಗಳ ಮುಮ್ಮೇಳಕೆ ಯಾ ಕಾಲದ ಬಯಕೆಯೋ

ಅಂತೆ ನಾವು ಕುಣಿದೆವಲ್ಲ
ಬೆವರು ಬೆವರು ಬಸಿದೆವಲ್ಲ

ಕುಂತ ಜನರ ಮುಂದೆ ನಕ್ಕು
ನಮ್ಮ ನೋವ ಮರೆತೆವಲ್ಲ.

ಎಷ್ಟು ಕುಣಿದರೇನು ಬಂತು
ನಮ್ಮ ಕಲೆಗೂ ಕಲೆಯು ಕುಂತು
ನಮ್ಮ ಬಟ್ಟೆ ಹರಿದವು, ಕೋಲು ಕಾಲು ದಣಿದವು
ಮಂಗಳದಲಿ ಅಮಂಗಳಾಗಿ ರಾಗ ಮುರಿದು ಮುಗಿದವು.

ನೆಲವು ಮರೆತ ಹಾಡು ನಾವು
ಜಗದ ಕೋಪ ತಾಪ ನಾವು
ರಂಗ ಸಾಲೆ ಸಿಡಿಲಿನೆರಕ
ಅದರಲೆಲ್ಲಿ ನಮಗೆ ಮರುಕ.

## ೨. ಕೇಳಿತೆ ಕೊನೆಯ ಹಾಡಿನ ಮಂಗಳ

ಹೆಣ ಚಿಗಿತ ಎಲುವಿನಲಿ, ಬಿಸಿಹೊಯ್ದ ಎರಕದಲಿ
ಸೂತಕದ ಹಾಡುಗಳು ಹಾಡುತಿವೆ ಕಣಿವೆಯಲಿ
ಹೊರಳು ದಾರಿಯ ಮೇಲೂ ಉಮ್ಮಳಿಕೆ ಉಬ್ಬರಿಕೆ
ತೆವಳುತಿವೆ ದುಃಖಗಳು ನಿರ್ವಾತ ಸಂದಿಯಲಿ.

ಯಾವ ಹೂವಿನ ಪರಾಗವಿದು, ಯಾವ ದುಂಬಿಯ ರಾಗವಿದು
ಯಾವ ಸುಖದ ಕೊನೆಯಾಸರಿದು, ಯಾವ ಯಾತನೆಯ ಆರಂಭವಿದು
ಹೊರಳು ಭೂಮಿಯು ಹೊರಳಿ ಹೋಗುವ ಕಣ್ಣ ನೋಟದ ಕತ್ತಿ ಮೊನೆಯೋ
ಮಿಂಚು ಬಳುಕುವ ಬಳ್ಳಿ ಬಳುಕಲಿ ನೀರು ಜಾರಿನ ಪಾಚಿ ನೆಲವೇ.

ತಂಪು ಚಂದ್ರನ ಕಂಪು ಗಾಳಿಗೆ ಎದೆಯ ಪುಪ್ಪಸ ಉಬ್ಬಿತೆ ?
ರಂಪ ರಾಣದ ಕ್ರಿಮಿಗಳಾಟದ ಉಗುಳು ಲೋಳೆಯೆ ಗೆದ್ದಿತೆ ?
ದೂರ ಗಗನದ ಬಿಂದು ಕರಗುತ ಹಂಗಿನಾಟವೆ ಮುಗಿಯಿತೆ ?
ಚಿಗುರು ಚಿಗುರಿಗೆ, ಹೂವು ಕಾಯಿಗೆ ಮುಗಿಯಿತೆ, ಹಣ್ಣು ಕನಸಿಗೆ ಜಗಿಯಿತೆ ?

ಹೆಣದ ಬಟ್ಟೆಯ ಹೊದ್ದು ನಡೆಯುವ ದಿವ್ಯಯಾನದ ಕೊಂಡಿಯೆ
ಕಂಡ ಬದುಕಿಗೆ ಕಾಣುತಿರುವುದೆ ಕಾಣದಾ ತುದಿ ಕೂಡಿಕೆ ?
ಎಲ್ಲ ಬಿರುಕಿನ ಆಳ ಕತ್ತಲು ತಡಕುತಿದೆ ಒಳ ಅಂಗಳ
ನಡೆದ ಬಳಲಿಕೆಗಲ್ಲಿ ಕೇಳಿತೆ ಕೊನೆಯ ಹಾಡಿನ ಮಂಗಳ.

## ೩. ಹಾಡು ಸುಡಲು

ಕರುಳ ಮೇಲಿನ ಮಾತು
ಕೊರಳು ಹಾಡುವ ಮುನ್ನ
ಬಂತೆ ಮೂಡಣದಲ್ಲಿ ಕೆಂಪು ಕೊರಗು

ಮಂಜು ಮರುಕದಿ ಕರಗಿ
ಬಿಸಿಲೆ ಮಖಮಲ್ಲಾಗಿ
ಮುಖ ಕಮಲ ಬಾಡಿದವೆ ಮದುಬನದ ಗೆಳತಿ
ಗುಡ್ಡದೆದೆಗಳ ಮೇಲೆ ತೊಟ್ಟು ಕಪ್ಪಾದವೇ
ಕಣಿವೆ ಸುರಂಗದಲಿ ಹಸಿರು ಉರಿಯಾದವೇ
ನಿಗಿ ನಿಗಿ ಕೆಂಡದಲಿ ಮೋಡ ಮರೆಯಾದವೇ
ಗಾಳಿ ಸೊರಗಿದ ಸೆರಗು
ಸುಮ್ಮಗೇ ಹಾಸುತಿದೆ
ಬೇಲಿ ರಸ್ತೆಯ ತುಂಬ ಮುಳ್ಳು ಮೊನೆ ಹಾಯ್ದವೇ
ಮೌನ ಕತ್ತಲು ಕವಿದು
ಚುಕ್ಕಿ ಬಳಗವ ತಿವಿದು
ಚಂದ್ರನೂ ಬಾಗಿದನು ಸಂಜೆ ಮುಗಿದು
ಬಿದಿಗೆ ಕಾಲದ ಬೆಳಕು
ಬದಿಗೆ ಕತ್ತಲ ಸೆಳಕು
ಸ್ವಲ್ಪ ಕಾಲದಲಿಲ್ಲಿ ಎಲ್ಲ ಮಸುಕು
ಇರುಳು ಜೋಲ್ಲಾಡಿಸಿದೆ
ಮರುಳು ಸದ್ದುಗಳಲ್ಲಿ
ಚುಕ್ಕಿ ಬೆಳಕಿನ ಸಿವುಡು ಚಿಟಿಲು ಚಿಟಿಲು
ಅಂದು ಕೊಳ್ಳುವೆ ಗೆಳತಿ
ಗೆಲುವಿನಾ ಹಾಡೊಂದ ಹಾಡಬೇಕೆಂದು
ನಿನ್ನ ಮುಖ ಗೆಲುವಾಗಿ ನೋಡಲೆಂದು
ರೆಪ್ಪೆ ಮುಚ್ಚದ ಇರುಳು
ನಿದ್ದೆಗೈಯ್ಯದ ಕಡಲು
ಖಾರ ಕಿವುಚಿದ ಒಡಲು
ಬತ್ತಿದವು ಒರತೆಗಳು ಹಾಡು ಸುಡಲು

## ೪. ಅಹಂ ಅಹಂ

ತಿರು ತಿರುಗಿ ಬಂದೆ
ಮರು ಮರುಗಿ ಬಂದೆ
ತಳವಾರ ತಂದೆ
ಕೈ ಹಿಡಿಯೋ ಎಂದು. ॥ ೧ ॥

ಸುತ್ತಿದೆನು ಬಗುರಿಯೊಲು
ಹಾರಿದೆನು ತರಗಿನೊಲು
ತೇಲಿದೆನು ಗುಳ್ಳೆಯೊಲು
ಒರಲಿದೆನು ಪ್ರಾಣಿಯಂತೆ. ॥ ೨ ॥

ತಿರುವಿನಲಿ ಮರುಗಿದೆನು
ಮರೆವಿನಲಿ ಮರುಗಿದೆನು
ಕೊಲೆಯೊಳಗೆ ಕನಲಿದೆನು
ಕಲೆಯಲ್ಲೂ ನಲುಗಿದೆನು. ॥ ೩ ॥

ನಿದ್ದೆಯೊಳಗೆದ್ದದ್ದು
ಎಚ್ಚರಕೆ ಹರಿಬಿದ್ದು
ಬೆಚ್ಚರದ ಬೆಂತರಕೆ
ಬೆಚ್ಚುತ್ತ ಬಿದ್ದೆನಲ್ಲಾ. ॥ ೪ ॥

ನಲ್ಲೆಯೆಂದೊಡಗೂಡಿ
ಗಲ್ಲವನು ಹಿಡಿದಾಡಿ
'ಗೆಲ್ಲುವೆನು ಎಲ್ಲವನು'
ಎಂದೇನೋ ಗೊಣಗಿದೆನು. ॥ ೫ ॥

ನೆಗೆದೆ ಆ ಗಗನಕ್ಕೆ
ಇಳಿದೆ ನೀರಾಳಕ್ಕೆ
ತೇಲುತ್ತ ಮುಳುಗುತ್ತ
ಗೆದ್ದಂತೆ ಗುಡುಗಿದೆನು. ॥ ೬ ॥

ಗವಿ ಹೊಕ್ಕು ಹುಡುಕಿದೆನು
ಸೂರ್ಯನೆದೆ ತುಡುಕಿದೆನು
ಉರಿಯೊಳಗೆ ಉರಿಯನ್ನೆ
ತಂಪೆಂದು ಭ್ರಮಿಸಿದೆನು. ॥ ೭ ॥

ಉಕ್ಕಿತೋ ಆ ಹರೆಯ
ಮಿಕ್ಕಿತೋ ಆ ಗೆರೆಯ
ಜಾರಿತೋ ಆ ನೆಲೆಯ
ಸೊಕ್ಕಿತೋ ನನ ಗೆಣೆಯಾs... ॥ ೮ ॥

ಸುಳಿ ಸುಳಿಗೆ ಸಿಕ್ಕಿ
ಒಳಗೊಳಗೇ ಹಕ್ಕಿ
ಬಾಯಾರಿ ಬಳಲಿ, ಕೈ ಎತ್ತಿತಯ್ಯಾ
ಚಿತೆ ಹೊತ್ತಿತಯ್ಯಾ. ॥ ೯ ॥

ತಳವಾರ ತಂದೆ
ನಸು ನಕ್ಕನಯ್ಯಾ. ॥ ೧೦ ॥

## ೫. ಒರಟು ಒರಟು ಮೀಟಿದೆ

ರುದ್ರವೀಣೆ ನುಡಿಯುತಿರಲು
ದುಃಖ ಅಳಲು ನುಗ್ಗುತಿದೆ
ಗಾಳಿ ಬೀಸಿ ಹಾಸಿ ನೋವ
ದಿಕ್ಕು ದಿಕ್ಕು ನುಂಗುತಿದೆ. ॥ ೧ ॥

ಎಲ್ಲೋ ನಾಯಿ ಬೊಗಳುತಿದೆ
ಕಾಗೆಯೊಂದು ಕಿರುಚುತಿದೆ
ಗೂಗೆಯೊಂದು ಗುಕ್ಕುತಿದೆ
ಹಗಲಿನಿರುಳು ಕವಿಯುತಿದೆ. ॥ ೨ ॥

ಒಡೆದ ಬಳೆಯ ಚೂರು ಚೂರು
ರಸ್ತೆ ತುಂಬ ಚೆಲ್ಲಿವೆ
ಹೆಣ್ಣುಮಗಳ ಕಣ್ಣ ನೀರು
ಜಾರಿ ಜಾರಿ ಹರಿದಿವೆ. ॥ ೩ ॥

ಮಕ್ಕಳೆಲ್ಲ ನಕ್ಕ ಹಾಗೆ
ಅತ್ತು ಅತ್ತು ಮಲಗಿವೆ
ಸತ್ತಿವೆಯೋ ಬದುಕಿವೆಯೋ
ಮೂರ್ಚೆಯಂತೆ ಒರಗಿವೆ. ॥ ೪ ॥

ಕರಣದಲ್ಲಿ ಹರಣ ತುಂಬಿ
ಕುಣಿವ ಮೊರೆತ ಮೊರೆದಿದೆ
ಕಾಡು ಮೇಡು ಊರು ಕೇರಿ
ಉರಿಯ ಮೇಳ ಮೆರೆದಿದೆ. ॥ ೫ ॥

ತೈಲಬಾವಿ ಬೆಂಕಿಯಾಗಿ
ಹೊಗೆಯ ಮೋಡ ಕವಿದಿದೆ
ಮಳೆಯ ಮೋಡ ಕುಸಿಯುವಂತೆ
ಹಗೆಯ ಬೇಗೆ ಬಿದ್ದಿದೆ. ॥ ೬ ॥

ಅನಾದಿಯಿಂದ ಬುನಾದಿಯಾಗಿ
ಬವಣೆಯೊಂದೆ ಉಳಿದಿದೆ
ಮಂಗಳ ದನಿ ಕೇಳದಾಗಿ
ಕೆಡುಕು ಕೆಡಕ ಕರೆದಿದೆ. ॥ ೭ ॥

ಸರಸ್ವತಿಯ ಕೈಯ ಬೆರಳು
ಒರಟು ಒರಟು ಮೀಟಿದೆ
ರುದ್ರವೀಣೆ ತನ್ನ ದನಿಯ
ಗಡಸು ಗಡಸು ಮಿಡಿದಿದೆ. ॥ ೮ ॥

ಚಂದ್ರಶೇಖರ ತಾಳ್ಯ, ತರ್ಕಶಾಸ್ತ್ರ ಉಪನ್ಯಾಸಕರು, ಕೆ. ಎಸ್. ಪಿ. ಯು. ಕಾಲೇಜು,
ಹೊಳಲ್ಕೆರೆ - ೫೭೭ ೫೨೬, ಜಿ. : ಚಿತ್ರದುರ್ಗ

ಅರುಂಧತಿ ರಮೇಶ್

## ೧. ಉಪ-ಸ್ಥಿತಿ

ಬದುಕಿನಲ್ಲಿ ಒಮ್ಮೆ ಬಂದವರು
ಹೋಗುವುದಿಲ್ಲ, ಹೋಗುವುದೇ ಇಲ್ಲ.
ಏಕೆಂದರೆ ಹೊರಹೋಗುವುದೆಲ್ಲ
ಬೇಡವಾದದ್ದು ಮಾತ್ರ.
ಬೇಕಾಗಿ ಬಂದವರು ಬೇಡವಾಗಿ
(ಅವರಿಗೋ, ಇವರಿಗೋ)
ಹೊರಹೋಗುವುದು ಹೇಗೆ ?
ಅವರ ತಪ್ಪು-ತಡೆ ಮತ್ತೆಲ್ಲ
ಬೇಕೇ ಆಗಿರುವುದರ ಪರಿಯಲ್ಲಿ
ಬಂದವರು ಹೊರಹೋಗುವುದಿಲ್ಲ.
ಅಷ್ಟು ದಿನ ಉಸಿರಿಗೆ ಕಾವಾಗಿ
ಕನಸುಗಳಿಗೆ ದಿನಿಸಾಗಿ
ಆನಂದ ಅನುಭವಗಳಿಗೆ
ಒಡಲಾಗಿ, ಬೆಳಕಿನೆಳೆಗಳಾಗಿ
ದೇಹ-ಮನಸ್ಸುಗಳ ಆವರಿಸಿ
ಹೊತವರು ಹೇಗೆ ಹೋಗುತ್ತಾರೆ ?
ಬದುಕಿನ ಕ್ಷಣ-ಕ್ಷಣಗಳ
ಕೊಂಡಿಗಳಾಗಿ ಬೆಸೆದುಕೊಂಡವರು
ಎಲ್ಲಿ ಹೋಗುತ್ತಾರೆ ?
ಅವರು ಅಲ್ಲೇ ಇರುತ್ತಾರೆ
ಸಿಕ್ಕೇ ಸಿಗುತ್ತಾರೆ, ಹುಡುಕಿ
ಬೇಕಾದರೆ, ಅವರೆಲ್ಲೂ ಹೋಗಿರುವುದಿಲ್ಲ.
ಒಲ್ಲದ ಕಹಿಯಾಗಿ ದೇಹ
ಮನಸ್ಸುಗಳ ಕಾಪಾಡಿದಂತೆ ಇದ್ದವರು
ಎಲ್ಲಿಗೆ ತಾನೇ ಹೋಗುತ್ತಾರೆ ?
ಬಂದವರು ಹೋಗುವುದಿಲ್ಲ
ಆಸರ - ಬೇಸರಗಳಲ್ಲಿ
ಉಳಿದೇ ಬಿಟ್ಟಿರುತ್ತಾರೆ
ಈಗ, ಬೇಡವಾದರೆ ಅವರು
ಅಲ್ಲೇ ಇರಲಿ ಬಿಡಿ
ಹೋಗಿದ್ದಾರೆ ಎಂದೇಕೆ ಹೇಳಬೇಕು ?
ಒಪ್ಪಿದ ಬೆಲ್ಲವಾಗಿ, ಒಲ್ಲದ ಬೇವಾಗಿ
ಮುಗಿದ ಅಧ್ಯಾಯದ ಕೊನೆಯ ಪುಟದ

ಕಟ್ಟಕಡೆಯ ಅಕ್ಷರವಾಗಿ ಉಳಿದೇ ಬಿಟ್ಟಿರುತ್ತಾರೆ.
ತೇಲಿಬಿಟ್ಟ ದೀಪಗಳಂತೆ
ತೇಲುತ್ತಿರುವ ದ್ವೀಪಗಳಂತೆ
ದಡದ ಜೊಂಡಿನಲ್ಲಿ ಸಿಕ್ಕ
ಮೀನಿನ ಚಡಪಡಿಕೆಯಲ್ಲಿ
ಒಡೆದು ತಳ ಸೇರಿದ
ನಿಧಿಯ ನೇವರಿಕೆಯಲ್ಲಿ
ಬೆಳಕಿನ ಮೊತ್ತ ಹೊತ್ತೊಯ್ಯುವ ಗತ್ತಿನಂತೆ
ಪ್ರವಾಹದಲ್ಲಿ ಪರದಾಡುವ
ಸಹವಿನ್ಯಾಸದಂತೆ, ಉಳಿದೇ ಬಿಟ್ಟಿರುತ್ತಾರೆ
ಬೆಳಕಿನ ಹಾಯಿಗೆ, ಕಿರಣಗಳ
ಹರಿಗೋಲನಿಟ್ಟು ಕಾಯುತ್ತಿರುತ್ತಾರೆ
ಬದುಕಿನಲ್ಲಿ ಒಮ್ಮೆ ಬಂದವರು
ಹೋಗುವುದಿಲ್ಲ, ಎಂದೂ ಹೊರಗೆ
ಹೋಗುವುದೇ ಇಲ್ಲ.

## ೨. ದ್ವೈತ

ನಿದ್ದೆ ಮುಗಿದುದು ಎಂದು
ಎದ್ದು ಹೊರಟರೆ ನಲ್ಲೆ
ತಡೆದು ನಿಲಿಸಿದೆ ಹೆಜ್ಜೆ
ಸೆರಗವನ ಕೈಯ್ಯಲ್ಲಿ !
ನಿದ್ದೆಯಾದುದೆ ಎಂದು
ಕೇಳಿದರೆ ನಲ್ಲೆ
ಪಕ್ಕದಲಿ ನೀನಿದ್ದೆಯಲ್ಲೆ
ನಿದ್ದೆ ಮತ್ತೆಲ್ಲಿ ?
ನಲ್ಲೆ ಹೊರಟರೆ ಎದ್ದು
ನಿದ್ದೆ ಬರುವುದೆ ಕದ್ದು
ಪಕ್ಕದಲಿ ನೀನಿಲ್ಲ
ನಿದ್ದೆಯೆಲ್ಲಿ ?
ನಲ್ಲೆ ಇದ್ದರು ಬರದು
ಇಲ್ಲದಿರೆಯೂ ಬರದು
ನಿದ್ದೆಯಾ ದ್ವೈತಕ್ಕೆ ಬೆರಗಾದ ನಲ್ಲ
ನಿದ್ದೆಯೋ ನಲ್ಲೆಯೋ ತಿಳಿಯಲೊಲ್ಲ !

■

ಅರುಂಧತಿ ರಮೇಶ್, ೧೬೮೦/೧೧, ಮಂಜೂಸ್ ಬುಷ್, ಸಿದ್ದವೀರಪ್ಪ ಬಡಾವಣೆ
ದಾವಣಗೆರೆ - ೫೭೭ ೦೦೪ ✆ : ೦೮೧೯ - ೨೨ ೨೪೯೧

# ಶಿಕ್ಷಣದಲ್ಲಿ ಕನ್ನಡಕ್ಕೆ ಆದ್ಯತೆ : ಅಗತ್ಯ ಮತ್ತು ಔಚಿತ್ಯ

**ಅರವಿಂದ ಚೊಕ್ಕಾಡಿ** **ಚಿಕಿತ್ಸೆ**

'ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ' ಎಂದು ಒಂದೊಮ್ಮೆ ಬಿ. ಎಂ. ಶ್ರೀಕಂಠಯ್ಯನವರು ಹೇಳಿದ್ದರು. ಆದರೆ ಇಂದಿನ ಕಾಲಸ್ಥಿತಿಯಲ್ಲಿ ಬದಲಾವಣೆಗಳಾಗಿವೆ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ಪರಿವರ್ತನೆಯಾಗುತ್ತಿದ್ದಂತೆ ಕನ್ನಡ ನಾಡಿಗೂ ಇಂಗ್ಲಿಷ್ ಒಂದೇ ಗತಿ ಎಂಬಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಜ್ಞಾನವಿಕಾಸದ ನಿಟ್ಟಿನಲ್ಲಿ ಇಂಗ್ಲಿಷ್‌ನ ಕೊಡುಗೆಯ ಬಗ್ಗೆ ಮುಕ್ತಕಂಠದ ಪ್ರಶಂಸೆಯನ್ನು ಹೇಳುತ್ತಲೇ ಅದು ಅತಿರೇಕದ ಹಂತವನ್ನು ತಲುಪುತ್ತಿರುವುದರ ಬಗ್ಗೆ ಚಿಂತೆಯನ್ನೂ ವ್ಯಕ್ತಪಡಿಸಬೇಕಾಗಿದೆ.

ಹೇಳೀ ಕೇಳೀ ನಮ್ಮದು ಬಹುಧರ್ಮಗಳ ನಾಡು. ಬಹುಸಂಸ್ಕೃತಿಗಳ ಸಂಗಮದ ನೆಲೆ. ಅದಕ್ಕನುಗುಣವಾಗಿ ಭಾಷೆಗಳೂ ಹಲವು. ಇಥಲ್ಲಿ ಪ್ರತಿಯೊಂದು ಭಾಷೆಗೂ ಅದರದೇ ಆದ ಸಾಂಸ್ಕೃತಿಕ ಹಿನ್ನೆಲೆ ಇರುತ್ತದೆಂಬುದನ್ನು ಗಮನಿಸಬೇಕು. ಆ ಸಾಂಸ್ಕೃತಿಕ ಚಿಂತನೆಯಲ್ಲಿ ಯಾವೆಲ್ಲವು ನಡವಳಿಕೆಗಳ ಮೂಲಕ ವ್ಯಕ್ತವಾಗುತ್ತವೋ ಅವುಗಳನ್ನು ನಿಯಂತ್ರಿಸುವ ಶಕ್ತಿ ಭಾಷೆಗೆ ಇರುತ್ತದೆ. ಹೀಗಿರುವಾಗ ಒಂದು ಸಂಸ್ಕೃತಿಯ ಅಳಿವು - ಉಳಿವು ಭಾಷೆಯ ಅಳಿವು - ಉಳಿವಿನಲ್ಲಿದೆ ಎಂಬುದನ್ನು ಗಮನಿಸಬೇಕು. ಆದ್ದರಿಂದ ಪ್ರಾದೇಶಿಕ ಭಾಷೆಗಳಿಗೆ ಹೆಚ್ಚಿನ ಮಹತ್ವ ಕೊಡಬೇಕಾಗಿದೆ. ಒಂದು ರಾಜ್ಯದ ವ್ಯಾಪ್ತಿಯನ್ನು ತೆಗೆದುಕೊಂಡರೆ ಅಲ್ಲಿನ ಸಂವಿಧಾನದಲ್ಲಿ ಹೆಸರಿಸದ ಭಾಷೆಗಳೂ ಇರುತ್ತವೆ. ಅವಕ್ಕೆ ಪ್ರಾಶಸ್ತ್ಯವಿರಬೇಕು. ಆದರೆ ವಿಶಾಲವ್ಯಾಪ್ತಿಯಲ್ಲಿ ಆ ಭಾಷೆಗಳು ರಾಜ್ಯಾಂಗೀಯ ಅಂಗೀಕೃತವಾದ ರಾಜ್ಯವಾರು ಭಾಷೆಯೊಂದಿಗೆ ಸಂಬಂಧವಿರಿಸಿಕೊಂಡಿರುತ್ತವೆ. ಅಲ್ಲದೆ ಅದು ಸಾಂಸ್ಕೃತಿಕ ಸಂಬಂಧವೂ ಆಗಿರುತ್ತದೆ.

ನಮ್ಮ ರಾಜ್ಯದ ವಿಚಾರಕ್ಕೆ ಬಂದರೆ ಕನ್ನಡ ಇತರೆಲ್ಲ ಭಾಷೆಗಳ ನಾಯಕತ್ವ ವಹಿಸಿಕೊಂಡಿದ್ದು ಕನ್ನಡ ಸಂಸ್ಕೃತಿ ರೂಪುಗೊಂಡಿದೆ. ಇಲ್ಲಿ ಎಲ್ಲ ಭಾಷೆಗಳಿಗೂ ಸಮಾನ ಪ್ರಾಶಸ್ತ್ಯವಿರಬೇಕಾದ್ದು ಅಗತ್ಯವೇ ಆದರೂ ಭಾಷೆಗಳ ಗೊಂದಲದ ದೃಷ್ಟಿಯಿಂದ ಸಾರ್ವತ್ರಿಕ ಅನುಕೂಲಕ್ಕಾಗಿ ಕನ್ನಡವನ್ನು ಮುಖ್ಯ ಆದ್ಯತೆಯಾಗಿ ಪರಿಗಣಿಸುವುದು ಅನಿವಾರ್ಯ. ಸಾಂಸ್ಕೃತಿಕ ದೃಷ್ಟಿಯಿಂದ ನೋಡಿದಾಗಲೂ ಎಲ್ಲ ಭಿನ್ನತೆಗಳ ನಡುವೆ ಸಕಲ ಭಾರತೀಯ ಭಾಷೆ, ಸಂಸ್ಕೃತಿಯ ಮೂಲ ಚಿಂತನೆಯಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಈ ಸ್ಥಿತಿಯಲ್ಲಿ ಸಾಮಾಜಿಕ - ರಾಜಕೀಯ ಅನುಕೂಲತೆಗಾಗಿ ರಾಜ್ಯಾಂಗೀಯವಾಗಿ ಸ್ವೀಕೃತವಾದ ಕನ್ನಡವನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಭಾರತೀಯ ಚಿಂತನೆಯ ಮೂಲದಲ್ಲಿ ಹುಡುಕಬಹುದಾದ ಬಹುಮುಖ್ಯ ಅಂಶವೆಂದರೆ ಬದುಕಿನ ಎಲ್ಲ ಭೌತಿಕ ಸಂಪತ್ತನ್ನು ಅನುಭವಿಸುವ ಕ್ರಿಯೆ ಒಂದಾದರೆ ಬದುಕಿನ ಆಚೆಗೆ ಇರಬಹುದಾದ್ದನ್ನು ಹಂಬಲಿಸುವ ಪ್ರಕ್ರಿಯೆ ಇನ್ನೊಂದು. ಇವೆರಡರ ಸಮನ್ವಯ ಮಾರ್ಗದಿಂದ ಹುಟ್ಟಿಕೊಂಡಂಥದ್ದು ಸರಳ ಜೀವನವಿಧಾನ ಉದಾತ್ತ ಚಿಂತನೆಯೆಂಬ ತತ್ವ. ಈ ದೃಷ್ಟಿ ನಮ್ಮ ಚಿಂತನೆಯನ್ನು ಉಳಿಸಿಕೊಳ್ಳುವುದಕ್ಕೂ ಅಗತ್ಯವಾಗಿದೆ. ಹಾಗೆಯೇ ಆರ್ಥಿಕವಾಗಿ ಅಷ್ಟೊಂದು ಸಮರ್ಥರಲ್ಲದ ನಾವು ಸಂಪತ್ತಿನ ಮರುಹಂಚಿಕೆಯ ಆಶಯವನ್ನು ಸಾಧಿಸುವುದೂ ಆವಶ್ಯಕವಾಗುತ್ತದೆ. ಈ ಚಿಂತನೆಯನ್ನು ರಕ್ಷಿಸುವ ಸಾಮರ್ಥ್ಯ, ನಡೆವಳಿಕೆಯನ್ನು ನಿಯಂತ್ರಿಸುವ ಭಾಷೆಗೆ ಇರುತ್ತದೆ. ಆದ್ದರಿಂದ ಕನ್ನಡವು ನಮಗೆ ಮುಖ್ಯವಾಗುತ್ತದೆ.

ವ್ಯವಹಾರದ ಅನುಕೂಲತೆಯ ದೃಷ್ಟಿಯಿಂದ ನೋಡಿದರೆ ನಮ್ಮ ಬಹುಮಟ್ಟಿನ ಜನಸಮುದಾಯ ಇಂಗ್ಲಿಷ್ ಬಲ್ಲವರೇನಲ್ಲ. ಅಂಥಲ್ಲಿ ಸುಲಭ ಸಂವಹನಕ್ಕೆ ಕನ್ನಡ ಹೆಚ್ಚಿನ ಅನುಕೂಲವನ್ನು ಒದಗಿಸಿಕೊಡಬಲ್ಲದ್ದಾಗಿದೆ. ಆದ್ದರಿಂದ ಕನ್ನಡದ ಬಳಕೆಗೆ ಪ್ರಾಮುಖ್ಯತೆ ದೊರೆಯಬೇಕು. ಆದರೆ ಇಂಗ್ಲಿಷ್‌ಗೆ ಪ್ರಾಮುಖ್ಯತೆ ಕೊಟ್ಟು ಅದನ್ನು ಸರ್ವವ್ಯಾಪಿಯಾಗಿಸಿದಾಗಲೂ ವ್ಯಾವಹಾರಿಕ ಅನುಕೂಲತೆಗಳನ್ನು ಸಾಧಿಸಬಹುದು. ಇಲ್ಲಿ ವ್ಯಾವಹಾರಿಕ ದೃಷ್ಟಿಯಿಂದಷ್ಟೇ ಯೋಚಿಸದೆ ಮೇಲೆ ಹೇಳಿದ ಸಾಂಸ್ಕೃತಿಕ - ಆರ್ಥಿಕ - ಚಿಂತನಾತ್ಮಕ ಸ್ವಂತಿಕೆಯ ದೃಷ್ಟಿಯಿಂದ ನೋಡಿದಾಗ ಕನ್ನಡದ ಪ್ರಾಮುಖ್ಯತೆ ತೆರೆದುಕೊಳ್ಳುತ್ತದೆ.

ಇಂಥಲ್ಲಿ ನಮ್ಮನ್ನು ಆವರಿಸುತ್ತಿರುವ ಇಂಗ್ಲಿಷ್ ನಮ್ಮ ಚಿಂತನಾವಿಧಾನವನ್ನು. ಸಾಂಸ್ಕೃತಿಕ ಹಿನ್ನೆಲೆಯನ್ನು, ಆರ್ಥಿಕ ದೃಷ್ಟಿಕೋನವನ್ನು, ಸಾಮಾಜಿಕ ಸಂಬಂಧಗಳನ್ನು. ವ್ಯಕ್ತಿ ಘನತೆಯನ್ನು - ವೃತ್ತಿಘನತೆಯನ್ನು ನೇತ್ಯಾತ್ಮಕವಾಗಿ ಬದಲಿಸುತ್ತಿದೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು.

ಇಂಗ್ಲಿಷ್ ಹುಟ್ಟಿಕೊಂಡದ್ದು ಪಾಶ್ಚಾತ್ಯ ಚಿಂತನೆಯಲ್ಲಿ. ಪಾಶ್ಚಾತ್ಯ ಚಿಂತನೆ ಭೌತಿಕ ಸಂಪತ್ತಿಗೆ ಪ್ರಮುಖ ಆದ್ಯತೆಯನ್ನು ಕೊಟ್ಟಿದ್ದು ಭೌತಿಕ ಸ್ಥಿತಿಗತಿಗೆ ಮೀರಿದ ಚಿಂತನೆಗೆ ಅಲ್ಲಿ ಎರಡನೆಯ ಆದ್ಯತೆ ಇದೆ. ಅಂಥಲ್ಲಿ ಈ ದೇಶವನ್ನು ವ್ಯಾಪಿಸುತ್ತಿರುವ ಇಂಗ್ಲಿಷ್, ನಮ್ಮ ಜನಸಮುದಾಯದಲ್ಲಿ ಇಂಗ್ಲಿಷ್ ಸಂಸ್ಕೃತಿಯನ್ನು ಹರಡುತ್ತಿದೆ. ಇಂಗ್ಲಿಷ್ ಭಾಷೆಯೊಂದಿಗೆ ಕೋಟು, ಟೈ, ಬೂಟು, ಬ್ರೇಕ್ ಡ್ಯಾನ್ಸ್, ಕ್ಲಬ್ ಸಂಸ್ಕೃತಿಗಳೆಲ್ಲವೂ ಬಂದುಬಿಡುತ್ತವೆ. ಈ ವಾತಾವರಣದಲ್ಲಿ ಸರಳತೆಗೆ ಅವಕಾಶವಿಲ್ಲದೆ ಭೌತಿಕ ಸಿರಿವಂತಿಕೆ ಮಾತ್ರ ಅಲ್ಲಿ ಧ್ವನಿಸುತ್ತದೆ. ಹೀಗೆ ಆದಾಗ ವ್ಯಕ್ತಿಯ ಯೋಗ್ಯತೆಯನ್ನು ಪರಿಗಣಿಸುವ ಮಾನದಂಡಗಳಾಗುವುದು ಆತನ ವೇಷಭೂಷಣಗಳು ಹಾಗೂ ಆರ್ಥಿಕ ಸಾಮರ್ಥ್ಯ ಮಾತ್ರ. ವ್ಯಕ್ತಿಯ ಬೌದ್ಧಿಕ ಸಾಮರ್ಥ್ಯ ಅಲ್ಲಿ ಗೌಣವಾಗಿಬಿಡುವ ಸಾಧ್ಯತೆ ಇದೆ.

ಹೀಗೆ ನಿರ್ಮಿತವಾಗುತ್ತಿರುವ ಇಂಗ್ಲಿಷ್ ಸಂಸ್ಕೃತಿಯಲ್ಲಿ ದಿನಕಳೆದಂತೆ ಇಂಗ್ಲಿಷ್ ಬಲ್ಲವರು ಮೇಲುಮಟ್ಟಕ್ಕೆ ಏರಿಸಲ್ಪಡುತ್ತಿರುವುದು ಇಂಗ್ಲಿಷ್ ತಿಳಿಯದವರು ಕೆಳಮಟ್ಟಕ್ಕೆ ತಳ್ಳಲ್ಪಡುತ್ತಿರುವುದು ಕಂಡುಬರುತ್ತಿದೆ. ನಾವು ದೇಶದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಜಾತಿವ್ಯವಸ್ಥೆಯನ್ನು ನಿರಾಕರಿಸುತ್ತಲೇ ಭಾಷೆಯ ಮೂಲಕ ಜನರನ್ನು ವಿಭಜಿಸುತ್ತಿದ್ದೇವೆ ಎಂಬುದನ್ನು ಗಮನಿಸಬೇಕು. ಆ ವಿಂಗಡನೆಯಿಂದ ಇಂಗ್ಲಿಷ್‌ನ ಬಗ್ಗೆ ಅಜ್ಞರಾಗಿರುವ ಮತ್ತು ಅಲ್ಪ ತಿಳಿದಿರುವ ಬಹುಮಂದಿ ಕೀಳರಿಮೆಗೆ ಒಳಗಾಗುತ್ತಾರೆ. ಹಾಗೆ ಆದಾಗ ಅವರ ಆಚರಣೆಗಳು, ಸಂಸ್ಕೃತಿ ಮುಂತಾದವುಗಳೆಲ್ಲ ಕೀಳುಮಟ್ಟದ್ದು ಅನ್ನಿಸಿಬಿಡಬಹುದು. ಹಿಂದೊಮ್ಮೆ 'ಸಂಸ್ಕೃತ' ಬ್ರಾಹ್ಮಣ ಸಂಸ್ಕೃತಿಯನ್ನು ಎತ್ತಿಹಿಡಿದು ಮಾತೃಪ್ರಧಾನ ಕುಟುಂಬ ವ್ಯವಸ್ಥೆ, ಭೂತಾರಾಧನೆಯಂಥ ಸಂಸ್ಕೃತಿಯನ್ನು ಕೆಳಮಟ್ಟಕ್ಕೆ ತಳ್ಳಿದಂತೆ ಇಂದು ಇಂಗ್ಲಿಷ್ ಸಕಲ ಭಾರತೀಯ ಸಂಸ್ಕೃತಿಯನ್ನು ಕೆಳಹಂತಕ್ಕೆ ತಳ್ಳುತ್ತಿರುವುದನ್ನು ಗಮನಿಸಬಹುದು. ಆದರೆ ಸಂಸ್ಕೃತ ಹಾಗೂ ಇಂಗ್ಲಿಷ್‌ನ ನಡುವೆ ಒಂದು ವ್ಯತ್ಯಾಸವಿದೆ. ಸಂಸ್ಕೃತವೇನಿದ್ದರೂ ಒಂದು ಭಾರತೀಯ ಭಾಷೆಯಾಗಿದ್ದು ಅದರ ವ್ಯಾಪ್ತಿ ಮೂಲ ಭಾರತೀಯ ಚಿಂತನೆಯ ಪರಿಧಿಯೊಳಗೇ ಇರುವಂಥದ್ದು. ಆದರೆ ಇಂಗ್ಲಿಷ್ ಹಾಗಲ್ಲ. ಅದು ನಮ್ಮ ಮೂಲ ಸಂವೇದನೆಗಳನ್ನು ಪಾಶ್ಚಾತ್ಯೀಕರಣಗೊಳಿಸಿ ಬಿಡಬಲ್ಲದು. ಹೀಗಿರುವಲ್ಲಿ ಇಂಗ್ಲಿಷ್‌ಗೆ ಹೊರತಾದ ಭಾಷೆಯನ್ನು ಅನುಸರಿಸುತ್ತಿರುವವರಲ್ಲಿ ಕೀಳರಿಮೆ ಬೆಳೆದಾಗ ಅಪಾಯಕಾರಿ ಸನ್ನಿವೇಶವೊಂದು ನಿರ್ಮಾಣವಾಗುತ್ತದೆ. ನಿಜವಾಗಿ ಈ ದೇಶದ

ಸಂಸ್ಕೃತಿಯನ್ನು ಕಾಯ್ದುಕೊಳ್ಳುತ್ತಿರುವ ಅವರು ಅದಕ್ಕೆ ಮಾನ್ಯತೆ ಇಲ್ಲವಾಗಿ ನಿಧಾನ ಗತಿಯಲ್ಲಿ ಪಾಶ್ಚಾತ್ಯೀಕರಣಕ್ಕೆ ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನೂ ಕೆಲವರು ದೇಶೀಯ ಚಿಂತನೆಯ ಬಗ್ಗೆ ಅಭಿಮಾನ ಉಳ್ಳವರು ದೃಢವಾಗಿ ನಿಲ್ಲಬಲ್ಲರು. ಆದರೆ ಇಂಗ್ಲಿಷ್‌ನ ಪ್ರಬಲ ಅಲೆ ಅವರನ್ನು ಕೊಚ್ಚಿಹಾಕಿಬಿಡಬಲ್ಲುದು.

ನಮ್ಮ ಸಾಂಸ್ಕೃತಿಕ ಹಿನ್ನೆಲೆ ಒಂದು ಹೊಡೆತಕ್ಕೆ ನಲುಗಿ ಬಿಡಬಹುದಾದಷ್ಟು ದುರ್ಬಲವಲ್ಲವೆಂಬುದು ಸಮಾಧಾನದ ವಿಷಯವೇ ಆದರೂ ಇಂಗ್ಲಿಷ್‌ಗೆ ದೊರೆಯುತ್ತಿರುವ ಪ್ರಭುತ್ವದ ಮಾನ್ಯತೆಯನ್ನು ಗಮನಿಸಿದಾಗ, ಮೂಲಭೂತವಾದದ ಮೂಲಕ ಧರ್ಮದ ವಿಕೃತಿ ನಡೆಯುತ್ತಿರುವಾಗ, ಧರ್ಮಚಿಂತನೆಯೆಂಬುದೂ ಹಣಗಳಿಕೆಯ ಮೂಲವಾಗುತ್ತಿರುವಾಗ, ಈಗ ನಮ್ಮ ಸಂಸ್ಕೃತಿಗೆ ಬೀಳುತ್ತಿರುವ ಹೊಡೆತಗಳು ಬಲವಾದ ಹೊಡೆತಗಳೆಂಬುದನ್ನು ಪರಿಗಣಿಸಬೇಕು. ಬಹಳ ಹಿಂದೆ ಥಾಮಸ್ ಬ್ಯಾಬಿಂಗ್ಟನ್ ಮೆಕಾಲೆ, ತನ್ನ ಇಂಗ್ಲಿಷ್ ಶಿಕ್ಷಣದ ಕುರಿತಾದ ಪ್ರಣಾಳಿಕೆಯನ್ನು ವಿಲಿಯಂ ಬೆಂಟಿಕ್‌ಗೆ ಹಸ್ತಾಂತರಿಸುತ್ತಾ, 'ಭಾರತದಲ್ಲಿ ಬ್ರಿಟಿಷರು ಕಟ್ಟಿದ್ದ ಸಾಮ್ರಾಜ್ಯ ಎಂದಿದ್ದರೂ ನಾಶವಾದೀತು. ಆದರೆ ಇಂಗ್ಲಿಷ್ ಶಿಕ್ಷಣದ ಮೂಲಕ ನಾವು ಅವರನ್ನು ಶಾಶ್ವತ ಗುಲಾಮರನ್ನಾಗಿ ಉಳಿಸಿಕೊಳ್ಳಬಹುದು' ಎಂದ ಮಾತನ್ನು ನೆನಪಿಟ್ಟುಕೊಳ್ಳಬೇಕು. ಈಗ ನಡೆಯುತ್ತಿರುವ ಪ್ರಯತ್ನವಾದರೂ ಅದೇ. ಭಾಷಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ನಮ್ಮನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಯುತ್ತಿದೆ. ಯಾವಾಗ ಆರ್ಥಿಕ ದೌರ್ಬಲ್ಯ ಕಾಣಿಸುತ್ತದೋ ಆಗ ಪ್ರಭುತ್ವ ತನ್ನ ಕಾರ್ಯಯೋಜನೆಗಳಿಗೆ ಅನ್ಯರತ್ತ ಅಂಗಲಾಚಬೇಕಾಗುತ್ತದೆ. ಅದು ರಾಜಕೀಯವಾಗಿ ನಮ್ಮನ್ನು ದುರ್ಬಲರನ್ನಾಗಿಸುತ್ತದೆ. ಈ ರೀತಿಯ ರಾಜಕೀಯ ದೌರ್ಬಲ್ಯ ಉಂಟಾದಾಗ ರಾಜಕೀಯ ಶೈಥಿಲ್ಯ ಉಂಟಾಗಿ ಒಟ್ಟು ಸಮಾಜವೇ ನಿರ್ಬಲವಾಗಿ ಬಿಡುತ್ತದೆ.

ಇಷ್ಟೆಲ್ಲ ಹೇಳಿದ್ದು ಇಂಗ್ಲಿಷ್‌ನ ವ್ಯಾಮೋಹದ ಅಪಾಯದ ಬಗ್ಗೆಯೇ ಹೊರತು ಇಂಗ್ಲಿಷ್ ಕಲಿಕೆಯ ಬಗ್ಗೆಯಾಗಲಿ, ಇಂಗ್ಲಿಷ್ ಶಿಕ್ಷಣ ಕೊಟ್ಟ ಹೊಸ ದೃಷ್ಟಿಕೋನದ ಬಗ್ಗೆಯಾಗಲಿ ಅಲ್ಲ. ಇಂಗ್ಲಿಷ್ ಶಿಕ್ಷಣ ಭಾರತೀಯ ಸಮಾಜಕ್ಕೆ ಒಂದು ವಿಮರ್ಶಾತ್ಮಕ ಚಿಂತನೆಯನ್ನು ಕೊಟ್ಟಿದೆ. ಸಮಾಜ ಸುಧಾರಣೆಗೆ ಚಾಲನೆಯನ್ನು ಕೊಟ್ಟಿದೆ. ಎಲ್ಲಕ್ಕೂ ಮುಖ್ಯವಾಗಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಇಂಗ್ಲಿಷ್ ಶಿಕ್ಷಣದಿಂದ, ಪಾಶ್ಚಾತ್ಯ ಚಿಂತನೆಯಿಂದ ಪ್ರಭಾವಿತವಾಗಿರುವಂಥದು. ನಮ್ಮಲ್ಲಿ ಪ್ರಾಚೀನ ಗಣರಾಜ್ಯ ವ್ಯವಸ್ಥೆ ಇದ್ದಿತ್ತಾದರೂ ಇಂದಿನ ಪ್ರಜಾಪ್ರಭುತ್ವದ ಸ್ವರೂಪ ಬ್ರಿಟನ್ ಮಾದರಿಯ ಪ್ರಜಾಪ್ರಭುತ್ವವಾಗಿದೆಯೇ ಹೊರತು ಪ್ರಾಚೀನ ಗಣರಾಜ್ಯದ ಸ್ವರೂಪವಾಗಿರುವಂತಿಲ್ಲ.

ಹೀಗಿರುವಾಗ ಇಂಗ್ಲಿಷ್ ಶಿಕ್ಷಣದ ಮಹತ್ವವನ್ನು ತಳ್ಳಿಹಾಕಲಾಗದು. ಆದರೆ ನಮ್ಮಲ್ಲಿ ದೊರೆಯುತ್ತಿರುವ ಮಹತ್ವ ಇಂಗ್ಲಿಷ್ ಶಿಕ್ಷಣದ ಸ್ವರೂಪಕ್ಕಾಗಿರದೆ ಭಾಷೆಗೆ ಸಂಬಂಧಿಸಿದ್ದಾಗಿದೆ ಎಂಬುದನ್ನು ಗಮನಿಸಬೇಕು. ಭಾಷೆಗೆ ಕೊಡಲಾದ ಮಹತ್ವವೂ ನಿರರ್ಥಕವೆಂದಲ್ಲ. ಹೊಸ ಹೊಸ ವಿಷಯಗಳನ್ನು, ಆಧುನಿಕ ಚಿಂತನೆಯನ್ನು ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದ ಅದು ಮಹತ್ವಪೂರ್ಣವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಭಾಷೆಯ ಕಲಿಕೆಯೆಂಬುದು ತನ್ನ ಅತಿರೇಕದ ಹಂತವಾದ ಭಾಷಾವ್ಯಾಮೋಹಕ್ಕೆ ತಿರುಗಿದಾಗ ಅದರ ಅಪಾಯವನ್ನು ವಿರೋಧಿಸಬೇಕಾಗುತ್ತದೆ. ಅತಿರೇಕ ಎನ್ನುವಂಥದ್ದು ಕೂಡ ಕೇವಲ ಇಂಗ್ಲಿಷ್‌ಗೆ ಸಂಬಂಧಿಸಿದ್ದಲ್ಲ. ಯಾವೊಂದು ವಸ್ತುವೇ ಆದರೂ ಅತಿರೇಕದ ಹಂತವನ್ನು ತಲುಪಿದಾಗ ಅಪಾಯಗಳುಂಟಾಗುವುದು ವಾಸ್ತವ ಸತ್ಯ.

ಇಂಥಲ್ಲಿ ಇಂಗ್ಲಿಷ್ ಭಾಷಾವ್ಯಾಮೋಹ ಅತಿಯಾಗುತ್ತಿದ್ದಂತೆ ಮಕ್ಕಳು ಹಿರಿಯರ ತೆವಲಿಗೆ ಬೆಲೆ ತೆರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಮನೆಯೊಳಗೆ ಮಮ್ಮಿ - ಡ್ಯಾಡಿ ಸಂಸ್ಕೃತಿಗೆ ಮಕ್ಕಳನ್ನು ಹೊಂದಿಸಿಕೊಳ್ಳಲಾಗುತ್ತಿದೆ. ಮಕ್ಕಳ ಆಟದಲ್ಲಿಯೂ ಇಂಗ್ಲಿಷ್ ಶಿಸ್ತು ಕಾಣಿಸುತ್ತದೆ. ಬುಗುರಿ ಆಟ, ಗೋಲಿ ಆಟ, ಚಿನ್ನಿದಾಂಡು, ಲಗೋರಿಗಳೆಲ್ಲ ಮರೆಯಾಗುತ್ತಾ ಅಲ್ಲಿ ಕ್ರಿಕೆಟ್ ಅಥವಾ ಅದೇ ಮಟ್ಟದ ಶ್ರೀಮಂತ ಆಟಗಳು ಪ್ರವೇಶಿಸಿವೆ. ಇನ್ನೂ ಒಂದಷ್ಟು ಮುಂದೆ ಹೋದರೆ ಆಟವಾಡಲು ಸಮಯ ನಿಗದಿಯಾಗುತ್ತದೆ. ದುರಂತವೆಂದರೆ ಮಕ್ಕಳು ಸಹಜವಾಗಿಯೇ ಆಟಗಳನ್ನು ಬಯಸುತ್ತಾರೆ. ಆದರೆ ಅದಕ್ಕೂ ವೇಳೆಯನ್ನು ನಿಗದಿಪಡಿಸುವುದೆಂದರೆ ಮನಸ್ಸನ್ನು ನಿಯಂತ್ರಿಸಿದಂತೆ! ಹರೆಯದಲ್ಲಿ ಈ ನಿಯಂತ್ರಣಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಬಹುದು. ಆಗ ಮನಸ್ಸೂ ಅದಕ್ಕೆ ಸೂಕ್ತವಾಗಿ ಪ್ರತಿಸ್ಪಂದಿಸಬಹುದು. ಆದರೆ ಇನ್ನೂ ಪಕ್ವವಾಗದ ಮನಸ್ಸಿಗೆ ನಿಯಂತ್ರಣ ಹೇರಿಕೆ ಎಷ್ಟರ ಮಟ್ಟಿಗೆ ಸಾಧುವೆನ್ನಲಾದೀತು? ಇಂಥ ನಿಯಂತ್ರಿತ ವೇಳೆಯಲ್ಲಿ ಕಂಪ್ಯೂಟರ್ ಕಲಿಕೆ, ಟ್ಯೂಶನ್‌ಗಳಿಗೆ ವಿಶೇಷ ಪ್ರಾಶಸ್ತ್ಯ ಕೊಡಲಾಗುತ್ತಿದೆ. ೮ - ೧೦ ವರ್ಷ ವಯಸ್ಸಿನೊಳಗೆ ಅಪಾರ ಕಂಪ್ಯೂಟರ್ ಜ್ಞಾನ ಹೊಂದಿದ ಮಕ್ಕಳಿಗೆ ಪತ್ರಿಕಾಪ್ರಚಾರವೂ ದೊರೆತುಬಿಡುತ್ತದೆ. ಆ ಒಂದು ಪ್ರಚಾರ ಮಗುವನ್ನು ಇನ್ನಿತರ ವಲಯಗಳತ್ತ ದೃಷ್ಟಿಸದಂತೆ ಮಾಡಿಬಿಡುವ ಸಾಧ್ಯತೆ ಇದೆ. ಅದಕ್ಕೆ ಪೂರಕವಾಗಿ ಮಗು ಕಲಿಯುವ ಇಂಗ್ಲಿಷ್‌ನ ನಿರರ್ಗಳತೆ ಮಗುವಿಗೆ ಮಾನ್ಯತೆಯನ್ನು ತಂದುಕೊಡುತ್ತಿದೆ. ಶಿಕ್ಷಣ ವ್ಯವಸ್ಥೆಯಲ್ಲಿನ ಅಂಕ ನಿರ್ದೇಶಿತ ಬೌದ್ಧಿಕ ಮಾನದಂಡ ಮಗುವನ್ನು ಮತ್ತು ಪಾಲಕರನ್ನು ಟ್ಯೂಶನ್‌ನತ್ತ ತಳ್ಳುತ್ತಿದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಸ್ವಲ್ಪ ಮಟ್ಟಿಗೆ ಟ್ಯೂಶನ್ ಅಗತ್ಯವಿದೆಯಾದರೂ ಇಂದು ಬುದ್ಧಿವಂತರೆನ್ನಿಸಿಕೊಳ್ಳುವ ಮಕ್ಕಳೇ ಟ್ಯೂಶನ್ ಬಲೆಯೊಳಗೆ ಸಿಲುಕುತ್ತಿದ್ದಾರೆ. ಟ್ಯೂಶನ್‌ನ ಉದ್ದೇಶವೇ ಮಗುವನ್ನು ಅಂಕಗಳಿಕೆಯ ಯಂತ್ರವನ್ನಾಗಿ ಪರಿವರ್ತಿಸುವುದು. ಅದರಿಂದ ಮಕ್ಕಳು ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ವಿಫಲರಾಗಬೇಕಾಗುತ್ತದೆ.

ಇಂಥಲ್ಲಿ ಒಟ್ಟು ಶಿಕ್ಷಣದ ಉದ್ದೇಶ ಅಂಕ ಗಳಿಸುವುದು, ಹಣ ಮಾಡುವುದು ಎಂಬಂತಾಗಿಬಿಟ್ಟಿದೆ. ಅದೂ ಕೂಡ ಶಿಕ್ಷಣದ ಒಂದು ಉದ್ದೇಶವೆಂದು ಒಪ್ಪಿಕೊಳ್ಳೋಣ. ಆದರೆ ಅದೊಂದೇ ಉದ್ದೇಶವೆನ್ನಲಾಗದು. ಅದೊಂದೇ ಉದ್ದೇಶವಾದಾಗ ಹೃದಯವನ್ನು ನವಿರಾಗಿಸುವ ಲಲಿತಕಲೆಗಳು ನಿರ್ಲಕ್ಷಿತವಾಗುತ್ತವೆ. ಹಣ ಗಳಿಕೆಯ ಆಚೆಗಿನ ಬದುಕನ್ನು ದೃಷ್ಟಿಸುವ ಮಾನವಿಕಗಳು ಅರ್ಥಹೀನವೆನ್ನಿಸುತ್ತವೆ. ಇಂಗ್ಲಿಷ್ ಎಂಬ ಭಾಷೆ ಹಣಗಳಿಕೆಯ ವ್ಯಾಪ್ತಿಯನ್ನು ಹಿಗ್ಗಿಸುತ್ತದೆ ಎಂಬ ಕಲ್ಪನೆ ಕಾಣಿಸಿಕೊಳ್ಳುವುದು ಈ ಸ್ಥಿತಿಯಲ್ಲೇ. ಇಲ್ಲೊಂದು ಪ್ರಶ್ನೆ ಕೇಳಿಕೊಳ್ಳಬೇಕು. ನಮ್ಮನ್ನು ನಾವು ಭವ್ಯ ಸಂಸ್ಕೃತಿಯ ವಾರೀಸುದಾರರು, ಭಾರತ ಜಗತ್ತಿನ ಜ್ಞಾನದ ಬೆಳಕು ಎಂದೆಲ್ಲ ಕರೆದುಕೊಳ್ಳುತ್ತೇವೆ. ಹೀಗಿರುವಲ್ಲಿ ಇಂದು ನಾವು ಬಹಳ ಕಷ್ಟಪಟ್ಟು ಇಂಗ್ಲಿಷ್ ಕಲಿತು ಶ್ರೇಷ್ಠರೆಂದುಕೊಳ್ಳುತ್ತೇವೆ. ಅದರ ಬದಲು ಇಂಗ್ಲಿಷರೇ ಕನ್ನಡವನ್ನು, ಇತರ ಭಾರತೀಯ ಭಾಷೆಗಳನ್ನು ಕಲಿಯಲೇಬೇಕಾದ ಅನಿವಾರ್ಯತೆಯನ್ನು ನಾವೇಕೆ ಸೃಷ್ಟಿಸಿಲ್ಲ? ನಮ್ಮಲ್ಲಿ ನಿಜವಾಗಿಯೂ ಶ್ರೇಷ್ಠತೆ ಇರುವುದಾದರೆ ಅಂಥ ಅನಿವಾರ್ಯತೆ ಕಂಡುಬರಬೇಕಿತ್ತು. ಅದರರ್ಥ ಶ್ರೇಷ್ಠತೆ ಇಲ್ಲವೆಂದಲ್ಲ. ಇದೆ ಎಂಬುದಕ್ಕೆ ಮ್ಯಾಕ್ಸ್ ಮುಲರ್ ಅವರಂಥ ವಿದೇಶಿ ವಿದ್ವಾಂಸರು ಸಾಕ್ಷಿ ಒದಗಿಸಿದ್ದಾರೆ. ಆದರೆ ನಮ್ಮಲ್ಲಿನ ಸೋಮಾರಿತನ ನಮ್ಮ ಒಂದು ಭಾಷೆಯನ್ನು

ಇಂಗ್ಲಿಷ್‌ನ ಮಟ್ಟಕ್ಕೆ ಬೆಳೆಸಲಾರದಂತೆ ಮಾಡಿವೆ. ಎಲ್ಲವೂ ಸುಲಭದಲ್ಲಿ ಸಿಗಬೇಕೆಂಬ ನಮ್ಮ ಗ್ರಹಿಕೆಗಳು ಹಾಗೆ ಮಾಡಿಬಿಟ್ಟಿವೆ ಎನಿಸುತ್ತದೆ.

ಈವತ್ತು ನಮ್ಮನ್ನು ಏನೆಲ್ಲ ಸಮಸ್ಯೆಗಳು ಕಾಡುತ್ತಿವೆಯೋ ಅವಕ್ಕೆ ಒಂದು ವ್ಯವಸ್ಥಿತ ಪರಿಹಾರವನ್ನು ಹುಡುಕಬಹುದಾದ್ದು ಶಿಕ್ಷಣಕ್ಷೇತ್ರದಲ್ಲಿ. ನಮ್ಮ ಭಾವೀ ಪೀಳಿಗೆಯಲ್ಲಿ ಪ್ರಜ್ಞಾವಂತಿಕೆಯನ್ನು ಮೂಡಿಸುವ ಮೂಲಕ. ಆದರೆ ಆ ಕ್ಷೇತ್ರವೇ ಅತಿಸ್ವಾರ್ಥದ ಧಾಟಿಯಲ್ಲಿ ಮುಂದುವರಿದರೆ ಭಾವೀ ಪೀಳಿಗೆ ನಮಗಿಂತ ಸಂಕುಚಿತ ಪ್ರವೃತ್ತಿಯದ್ದಾಗಿಬಿಡುತ್ತದೆ. ದೇಶೀಯವಾದ ಸಮಾಜಮುಖೀ ಚಿಂತನೆ ನಷ್ಟವಾಗಿಬಿಡುತ್ತದೆ. ಅಲ್ಲಿ ನಮ್ಮದಾದ ಸ್ವಂತಿಕೆಯೆಲ್ಲವನ್ನೂ ಕಳೆದುಕೊಂಡ ದುರ್ಬಲ ಜನಸಮುದಾಯ ಈ ದೇಶದ ಉತ್ತರಾಧಿಕಾರಿಯಾಗುತ್ತದೆ. ಭಾರತವೆಂಬ ದೇಶ, ಕರ್ನಾಟಕವೆಂಬ ರಾಜ್ಯ ನಾಮಮಾತ್ರವಾಗಿ ಉಳಿದುಕೊಂಡು ನೈಜ ಅರ್ಥದಲ್ಲಿ ಒಂದು ಬ್ರಿಟನ್ನೋ, ಅಮೆರಿಕೆಯೋ ಆಗಿ ಪರಿವರ್ತನೆಗೊಂಡಿರುತ್ತದೆ. ಆ ಸ್ಥಿತಿಯಲ್ಲಿ ನಮ್ಮದಾಗಿರುವುದು ಏನು ಎಂದು ತೋರಿಸುವುದಕ್ಕೆ ಏನೂ ಉಳಿದಿರುವುದಿಲ್ಲ.

ಆದ್ದರಿಂದ ನಮ್ಮನ್ನು ನಾವು ಉಳಿಸಿಕೊಳ್ಳುವ ದೃಷ್ಟಿಯಿಂದ ಕನ್ನಡಕ್ಕೆ ಆದ್ಯತೆ ಕೊಡಬೇಕಾದುದು ಅಗತ್ಯವೂ ಹೌದು, ಔಚಿತ್ಯಪೂರ್ಣವಾದದ್ದೂ ಹೌದು.

● ▼

**ಅರವಿಂದ ಚೊಕ್ಕಾಡಿ**
ಫ್ರಾಂಕೋ ವಿಲ್ಲಾ, ಚರ್ಚ್ ರಸ್ತೆ, ಬೆಳ್ತಂಗಡಿ - ೫೭೪ ೨೧೪ (ದ. ಕ.)

## ನೆನಪುಗಳು

**ಕವಿತೆ - ೮**

**ಅಪ್ಪಾಸಾಹೇಬ ಅಲಿಬಾದಿ**

ಲೊಚಗುಟ್ಟುವ ಹಲ್ಲಿ, ನೀರಿಲ್ಲದ ನಲ್ಲಿ, ತವರಿಗೆ ಹೋದ ನಲ್ಲೆ
ಅನಿರೀಕ್ಷಿತ ಅತಿಥಿ, ಸೈಕ್ಲೋನ್ ಮಳೆ
ಅಲ್ಲಾವುದ್ದೀನನ ದೀಪ ದುಷ್ಯಂತನ ಉಂಗುರ ನಂಬುಗೆಯ ನಾಯಿ
ಸಾಗರದ ಅಲೆಗಳು ನೆರಳುಗಳು, ಉಸಿರುಗಳು
ಮರಕ್ಕೆ ಜೋತುಬಿದ್ದ ಬಾವಲಿ
ಕೆಚ್ಚಲಿಗೆ ಹತ್ತಿದ ಉಣ್ಣೆ
ತಲೆಗೆ ಹತ್ತಿದ ಹೇನು
ಮೊಲೆ ಚೀಪುವ ಮಗುವಿನಂತೆ
ಕೊರೆವ ಮಾಗಿಯ ಚಳಿ
ಪ್ರೇಯಸಿಯ ಬಳೆಯ ನಿನಾದ, ಕದ್ದು ಸೀತೆನು ಮೆಲ್ಲುವ ಕಬ್ಬಕ್ಕಿ
ಕನಸು ಕಂಡ ಮಗು, ತಾಯಿ ಕಂಡ ಕರು.
ಬೆಂಬಿಡದ ಭೂತ ನೆನಪುಗಳು
ಎಂದೂ ಮುಗಿಯದ ಕಣಜ.

● ▼

ಅಪ್ಪಾಸಾಹೇಬ ಅಲಿಬಾದಿ, ಶಾಂತಿನಿಕೇತನ, ಎಚ್.ಪಿ.ಸಿ. ಹತ್ತಿರ, ಅಥಣಿ - ೫೯೧ ೮೦೪

# ಕನ್ನಡ ಪ್ರಗತಿಶೀಲ ಸಾಹಿತ್ಯದ ಮೂರು ಮುಖಗಳು

ಬಸವರಾಜ ಸಾದರ

ಪುನರಾವಲೋಕನ

ಪ್ರಗತಿಶೀಲತೆಯ ಪರಿಕಲ್ಪನೆ ರೂಪಿತವಾದದ್ದು ಶೋಷಣೆಯ ಎದುರಿನ ಸಂಘರ್ಷದ ಮೂಲಕ. ಇಂಥ ಸಂಘರ್ಷ ಅಥವಾ ಹೋರಾಟದ ಧೋರಣೆಗಳನ್ನು ಪ್ರಕಟಿಸುವ ಮತ್ತು ಅವಕ್ಕೆ ಅಗತ್ಯವಿರುವ ಪ್ರೇರಣೆಗಳನ್ನು ಒದಗಿಸುವ ಮುಖ್ಯ ನೆಲೆಗಟ್ಟಿನ ಮೇಲೆ ರಚಿತವಾದದ್ದೇ ಪ್ರಗತಿಶೀಲ ಸಾಹಿತ್ಯ ಘಟ್ಟದ ನಂತರ ಬಂದ ಅಥವಾ ನವೋದಯಕ್ಕೆ ಪ್ರತಿಕ್ರಿಯೆಯಾಗಿ ಬಂದ ಪ್ರಗತಿಶೀಲ ಸಾಹಿತ್ಯ. ಕನ್ನಡ ನವೋದಯ ಸಾಹಿತ್ಯ ಘಟ್ಟ ಹೊಸಗನ್ನಡ ಸಾಹಿತ್ಯಕ್ಷೇತ್ರದಲ್ಲಿ ಹೊಸ ಬಗೆಯ ಸಾಮಾಜಿಕ ಅರಿವನ್ನು ಜಾಗೃತ ಮಾಡಿತು. ಕನ್ನಡದಲ್ಲಿ ಒಂದು ಸಾಹಿತ್ಯ ಧೋರಣೆಗೆ ಮತ್ತೊಂದು ಸಾಹಿತ್ಯ ಧೋರಣೆ ನೇರವಾಗಿ ಎದುರಾದ ಮೊದಲ ಸಂದರ್ಭವದು. ಹಾಗೆಯೇ ಅದು, ಸಾಹಿತ್ಯದ ಸಾಮಾಜಿಕ ಜವಾಬ್ದಾರಿ ಮತ್ತು ಕರ್ತವ್ಯಗಳು ಏನೆಂಬುದು ಹೆಚ್ಚು ಖಚಿತವಾದ ಸಂದರ್ಭ ಕೂಡ. ಹೀಗೆ ಒಂದು ಹೊಸ ಹೊಳಹು ಮೂಡಿದ ಹಿನ್ನೆಲೆಯಲ್ಲಿ ೧೯೪೦ ರ ಸರಿ ಸುಮಾರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ 'ಪ್ರಗತಿಶೀಲ ಸಾಹಿತ್ಯ ಘಟ್ಟ' ನಿಚ್ಚಳವಾಗಿ ಗುರುತಿಸಲ್ಪಟ್ಟಿತು. ಸುಮಾರು ೧೦ ವರ್ಷಗಳ ಕಾಲ ಅದು ತನ್ನ ಜಾಗೃತ ಸ್ಥಿತಿಯನ್ನು ಉಳಿಸಿಕೊಂಡೇ ಇತ್ತು. ಅನಂತರ ಬಂದ ನವ್ಯ ಸಾಹಿತ್ಯ ಘಟ್ಟ ಪ್ರಗತಿಶೀಲತೆಯೆಂಬುದನ್ನು ತರಾಟೆಗೆ ತೆಗೆದುಕೊಂಡ ಕಾರಣ ಆಗ ಅದು ನಿಧಾನವಾಗಿ ಗುಪ್ತಗಾಮಿಯಾಯ್ತು. ಮುಂದೆ ದಲಿತ - ಬಂಡಾಯಗಳ ರೂಪದಲ್ಲಿ ಮರುಹುಟ್ಟು ಪಡೆದು ಇಂದಿಗೂ ತನ್ನ ಪರಂಪರೆಯನ್ನು ನಿರಂತರವಾಗಿ ಮುಂದುವರಿಸುತ್ತಿದೆ.

ಪ್ರಗತಿ, ಬದಲಾವಣೆ ಮತ್ತು ಮುನ್ನಡೆ ಎಂಬುವು ಯಾವುದೇ ಒಂದು ದೇಶ ಅಥವಾ ಕಾಲಕ್ಕೆ ಸೀಮಿತವಲ್ಲದ, ನಿರಂತರವಾದ ಪ್ರಕ್ರಿಯಾತ್ಮಕ ತತ್ತ್ವಗಳಾಗಿದ್ದರೂ ಅವು 'ಪ್ರಗತಿಶೀಲ ಚಳವಳಿ' (Progressive Movement) ಎಂಬ ವಿಶಿಷ್ಟ ಶಬ್ದ ಮತ್ತು ಅರ್ಥದೊಂದಿಗೆ ವಿಶ್ವದಾದ್ಯಂತ ಪ್ರಚಾರಕ್ಕೆ ಬಂದದ್ದು ಐರೋಪ್ಯ ರಾಷ್ಟ್ರಗಳಿಂದ. ಬಂಡವಾಳಶಾಹಿಗಳ ಶೋಷಣೆಯೆದುರು ಸಿಡಿದೆದ್ದ ಕಾರ್ಮಿಕ ಶಕ್ತಿಯ ಸಂಘಟಿತ ಹೋರಾಟವೇ ಪ್ರಗತಿಶೀಲ ಚಳವಳಿಯ ಮೂಲ. ವರ್ಗಸಂಘರ್ಷದ ಪರಿಣಾಮವಾಗಿ ಕ್ರಿಯಾರೂಪ ಪಡೆದ ಈ ಚಳವಳಿ, ಮಾರ್ಕ್ಸ್‌ವಾದಿ ನೆಲೆಯಲ್ಲಿ ತನ್ನ ಹುಟ್ಟು, ಅಸ್ತಿತ್ವ ಮತ್ತು ಬೆಳವಣಿಗೆಯನ್ನು ಕಂಡುಕೊಂಡಿತು. ಕಾರ್ಮಿಕ ಶಕ್ತಿಯ ಸಂಘಟನೆ, ಶೋಷಣೆಯೆದುರು ಹೋರಾಟ ಮತ್ತು ಕಾರ್ಮಿಕರದೇ ಆದ ಆಡಳಿತ ವ್ಯವಸ್ಥೆ ನಿರ್ಮಿಸುವ ಉದ್ದೇಶ ಹೊಂದಿದ್ದ ಪ್ರಗತಿಶೀಲ ಚಳವಳಿಯು ಐರೋಪ್ಯ ರಾಷ್ಟ್ರಗಳ ರಾಜಕೀಯ ಇತಿಹಾಸದಲ್ಲಿ ಒಂದು ಪ್ರಮುಖ ಘಟ್ಟವೆಂದೇ ಹೆಸರಾಯ್ತು. ಈ ಬಗೆಯ ಚಳವಳಿಯು ಹೆಚ್ಚು ಹೆಚ್ಚು ಸಂಘಟಿತವಾಗಿ ಗಟ್ಟಿಗೊಂಡ ಹಾಗೆ ಅದು ಅಲ್ಲಿಯ ಸಾಹಿತ್ಯದ ಮೇಲೂ ವಿಶೇಷವಾದ ಪ್ರಭಾವ ಬೀರಿತು. ವರ್ಗಸಮರವನ್ನು ಚಿತ್ರಿಸುವ, ಸಂಘರ್ಷಕ್ಕಾಗಿ ಕಾರ್ಮಿಕ ಶಕ್ತಿಯನ್ನು ಸಿದ್ಧಪಡಿಸುವ ಮತ್ತು ಶೋಷಣೆರಹಿತ ವ್ಯವಸ್ಥೆಯನ್ನು ನಿರ್ಮಿಸುವ ಧ್ಯೇಯೋದ್ದೇಶಗಳನ್ನೊಳಗೊಂಡ ಸಾಹಿತ್ಯ ಅಲ್ಲಿ ವಿಪುಲವಾಗಿ ಸೃಷ್ಟಿಯಾಗತೊಡಗಿತು. ರಷಿಯಾದ ಸಾಹಿತ್ಯಕ್ಷೇತ್ರದಲ್ಲಿ ಈ ಬಗೆಯ ಸಾಹಿತ್ಯವೇ ಒಂದು ಅತಿ ಮುಖ್ಯವಾದ ಮಜಲಾಯಿತು. ಆರ್ಥಿಕ ಅಸಮಾನತೆಯ ಹಿನ್ನೆಲೆಯಲ್ಲಿ ಒಂದು ಸಂಘಟನೆಯಾಗಿ ರೂಪು ಪಡೆದ ಪ್ರಗತಿಶೀಲ ಚಳವಳಿ ಮತ್ತು ಆ ಚಳವಳಿಯ ಪರಿಣಾಮವಾಗಿ ಹುಟ್ಟಿದ

ಸಾಹಿತ್ಯ– ಇವು ಐರೋಪ್ಯ ರಾಷ್ಟ್ರಗಳಿಗೆ ಅಧ್ಯಯನಕ್ಕೆಂದು ಹೋಗಿದ್ದ ಭಾರತೀಯ ಲೇಖಕರನ್ನು ಆಕರ್ಷಿಸಿದವಷ್ಟೇ ಅಲ್ಲ; ಅವರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದವು. ಆ ಲೇಖಕರು, ಆದಾಗಲೇ ಸಾಂಘಿಕ ಅಸ್ತಿತ್ವ ಪಡೆದುಕೊಂಡಿದ್ದ ಪ್ರಗತಿಶೀಲ ಚಳುವಳಿಯನ್ನು ಭಾರತಕ್ಕೂ ತಂದರು. ಮುಖ್ಯವಾಗಿ ೩೦ ರ ದಶಕದ ಹಿಂದೀ ಲೇಖಕರು ಹೊಸದಾದ ಈ ಧೋರಣೆಯನ್ನು ಪ್ರೀತಿಯಿಂದ ಸ್ವಾಗತಿಸಿದರು. ಅಷ್ಟೇ ಅಲ್ಲ; 'ಭಾರತೀಯ ಪ್ರಗತಿಶೀಲ ಲೇಖಕರ ಸಂಘ'ವನ್ನೂ ಸ್ಥಾಪಿಸಿದ ಅವರು, ವಿವಿಧ ರಾಜ್ಯಗಳ ಪ್ರತಿನಿಧಿಗಳನ್ನು ಆರಿಸಿ, ಅವರ ಮೂಲಕ ಭಾರತದ ತುಂಬೆಲ್ಲಾ ಪ್ರಗತಿಶೀಲ ಚಳುವಳಿಯನ್ನು ಹುಟ್ಟಿಸಿದರು. ಅದರ ಜೊತೆಜೊತೆಗೇ ಪ್ರಗತಿಶೀಲ ಧೋರಣೆಯ ಸಾಹಿತ್ಯವನ್ನೂ ನಿರ್ಮಿಸತೊಡಗಿದರು. ಕನ್ನಡ ನಾಡಿಗೂ ಪ್ರಗತಿಶೀಲ ಚಳುವಳಿ ಬಂದದ್ದು ಈ ಮಾರ್ಗವಾಗಿಯೆ. ಇಲ್ಲಿಯೂ ಆಗ ಅದಕ್ಕೊಂದು ಸಾಂಘಿಕ ಅಸ್ತಿತ್ವವನ್ನು ಕೊಡಲಾಯ್ತು. 'ಕರ್ನಾಟಕ ಪ್ರಗತಿಶೀಲ ಲೇಖಕರ ಸಂಘ' ಸ್ಥಾಪಿತವಾಗಿ ಅ.ನ.ಕೃ. ಅವರು ಅದರ ಅಧ್ಯಕ್ಷರಾದರು, ನಾಡಿಗೇರ ಕೃಷ್ಣರಾಯ ಮತ್ತು ಅನಂತ ಪದ್ಮನಾಭ ಸೋಗಾಲ್ ಇವರಿಬ್ಬರು ಕಾರ್ಯದರ್ಶಿಗಳಾದರು.

ಪ್ರಗತಿಶೀಲ ಚಳುವಳಿಯನ್ನು ರಾಜ್ಯದೆಡೆಯಲ್ಲೆಲ್ಲ ಹರಡುವುದು ತಮ್ಮ ಕರ್ತವ್ಯವೆಂದೇ ಭಾವಿಸಿದ ಅ.ನ.ಕೃ, ಅದನ್ನು ತಲೆಯ ಮೇಲೆ ಹೊತ್ತು ಎಲ್ಲೆಡೆ ಪ್ರಚಾರ ಮಾಡಿದರು. ಅವರ ಅದ್ಭುತವಾದ ಭಾಷಣ - ಘೋಷಣೆಗಳಿಂದ ಆಕರ್ಷಿತರಾದ ಹಲವಾರು ಲೇಖಕರು 'ಕರ್ನಾಟಕ ಪ್ರಗತಿಶೀಲ ಲೇಖಕರ ಸಂಘ'ದ ಸದಸ್ಯರಾದರು. ತ.ರಾ.ಸು, ಅರ್ಚಿಕ ವೆಂಕಟೇಶ್, ಕುಮಾರ ವೆಂಕಣ್ಣ ಅಂಥವರಲ್ಲಿ ಕೆಲವು ಪ್ರಮುಖರು. ಪ್ರಗತಿಶೀಲ ಧೋರಣೆಯಿಂದ ಪ್ರಭಾವಿತರಾದರೂ ನಿರಂಜನ ಮತ್ತು ಬಸವರಾಜ ಕಟ್ಟೀಮನಿಯವರಿಬ್ಬರು ಮಾತ್ರ ಆ ಸಂಘದ ಸದಸ್ಯರಾಗದೆ, ಹೊರಗಿದ್ದುಕೊಂಡೇ ಆ ಬಗೆಯ ವಿಶಿಷ್ಟವಾದ ಸಾಹಿತ್ಯನಿರ್ಮಿತಿಗೆ ತೊಡಗಿದ್ದು ಒಂದು ಬಹುಮುಖ್ಯ ವೈಶಿಷ್ಟ್ಯ. ಪ್ರಗತಿಶೀಲ ಚಳುವಳಿಯ ಸಾಂಘಿಕ ಅಸ್ತಿತ್ವದಿಂದ ದೂರ ಉಳಿದರೂ, ಆ ಘಟ್ಟವನ್ನು ಅತ್ಯಂತ ಸಮರ್ಥವಾಗಿ ಪ್ರತಿನಿಧಿಸುವ ಲೇಖಕರೆಂದು ಇಂದಿಗೂ ಹೆಸರು ಗಳಿಸಿಕೊಂಡವರು ನಿರಂಜನ ಮತ್ತು ಬಸವರಾಜ ಕಟ್ಟೀಮನಿಯವರು ! ಅ.ನ.ಕೃ ಪ್ರಗತಿಶೀಲ ಲೇಖಕರ ಸಂಘಟನೆಯನ್ನು (ಬರವಣಿಗೆಯನ್ನೂ ಮಾಡುತ್ತ) ಮುನ್ನಡೆಸಿದರೆ, ನಿರಂಜನ ಮತ್ತು ಕಟ್ಟೀಮನಿಯವರು ಅಪ್ಪಟ ಪ್ರಗತಿಶೀಲ ಸಾಹಿತ್ಯ ನಿರ್ಮಿಸಿದರು. ಪ್ರಗತಿಶೀಲತೆ ಎಂಬುದು ಕರ್ನಾಟಕದಲ್ಲಿ ಹರಡಿದ್ದರ ಮತ್ತು ಹುಟ್ಟಿದ್ದರ ಸ್ಥೂಲ ಇತಿಹಾಸವಿದು. ಈ ಇತಿಹಾಸದಲ್ಲಿ ಅ.ನ.ಕೃ ನಿರಂಜನ ಮತ್ತು ಬಸವರಾಜ ಕಟ್ಟೀಮನಿಯವರ ಹೆಸರುಗಳು ಪ್ರಮುಖವಾಗಿರುವ ಕಾರಣ, ಪ್ರಗತಿಶೀಲ ಘಟ್ಟದಿಂದ ಈ ಮೂವರೂ ಪಡೆದದ್ದೇನು ? ಮತ್ತು ಅದಕ್ಕೆ ಕೊಟ್ಟದ್ದೇನು ? ಎಂಬ ವಿಷಯವಾಗಿ ವಿಮರ್ಶಾತ್ಮಕ ಅವಲೋಕನ ಮಾಡುವುದು ಅರ್ಥಪೂರ್ಣ ಮತ್ತು ಔಚಿತ್ಯಪೂರ್ಣ.

### ಅ. ನ. ಕೃ :

ಕನ್ನಡ ನವೋದಯ ಸಾಹಿತ್ಯ ಘಟ್ಟ ತನ್ನ ಉತ್ತುಂಗವನ್ನು ತಲುಪಿದ್ದ ಕಾಲವದು. ರಸಪರ ಧೋರಣೆ, ಆದರ್ಶಪರತೆ, ಭಾವಪರವಶತೆ, ಪಾರಂಪರಿಕ ಮೌಲ್ಯಗಳ ಆರಾಧನೆ, ಸಂಸ್ಕೃತಿಯ ಪ್ರಶಂಸೆ, ನಿಸರ್ಗಪ್ರಿಯತೆ– ಇವೇ ಮೊದಲಾದ ಗುಣಲಕ್ಷಣಗಳನ್ನು ಹೊಂದಿದ್ದ ನವೋದಯ ಸಾಹಿತ್ಯ (ಕಾವ್ಯ) ತುಂಬಿದ ನದಿಯಂತೆ ಗಂಭೀರವಾಗಿ ಹರಿಯುತ್ತಿತ್ತು. ವಾದ - ವಿವಾದಗಳಿಂದ ದೂರವಿದ್ದ ಅದು, ಸಾಹಿತ್ಯವೆಂದರೆ ವ್ಯಕ್ತಿಯ ಮನಸ್ಸನ್ನು ಮೃದುಗೊಳಿಸುವ

ಸಾಧನವೆಂದು ಸಾಬಿತ್ತು ಘಟ್ಟವಾಗಿತ್ತು. ಈ ಹಂತದಲ್ಲೇ ಬೀಸಿದ ಪ್ರಗತಿಶೀಲತೆಯ ಗಾಳಿ ಮುಖ್ಯವಾಗಿ ಪ್ರತಿಭಟನಾತ್ಮಕ ನೆಲೆಯಲ್ಲಿಯೇ ತನ್ನ ಆರಂಭದ ಹೆಜ್ಜೆಗಳನ್ನು ಮೂಡಿಸಿತು. ಇಂಥ ಪ್ರತಿಭಟನೆಯನ್ನು ಮೌಖಿಕವಾಗಿ ಮತ್ತು ನೇರವಾಗಿ ಆರಂಭಿಸಿದವರೇ ಅ.ನ.ಕೃ ಅವರು. ಪ್ರಗತಿಶೀಲವೆಂಬ ಗಾಳಿ ಅವರನ್ನು ಭೂತದಂತೆ ಆವರಿಸಿದ ಕಾರಣ ಅವರು ಕನ್ನಡ ನಾಡಿನ ತುಂಬ ಓಡಾಡಿ ಅದನ್ನು ಪ್ರಚಾರ ಮಾಡಿದರು. ಸತ್ವಯುತವಾಗಿ ಬೆಳೆಯಬಲ್ಲ ಸ್ವಯಂಸಾಮರ್ಥ್ಯವುಳ್ಳ ಸಾಹಿತ್ಯ ಚಳವಳಿಗೆ ಈ ಬಗೆಯ ಪ್ರಚಾರ ಅಗತ್ಯವಿಲ್ಲವೆಂಬುದನ್ನೂ ಗಣಿಸದ ಅವರು ಅದನ್ನು ತಮ್ಮ ಭಾಷಣಗಳ ಸರಕನ್ನಾಗಿ ಮಾಡಿಕೊಂಡರು; ಅಸ್ಖಲಿತ ಮತ್ತು ಅದ್ಭುತವಾದ ಭಾಷಣಗಳ ಮೂಲಕ ಅದನ್ನು ಹರಡತೊಡಗಿದರು. ಏಕಕಾಲಕ್ಕೆ ಪ್ರಗತಿಶೀಲ ಸಾಹಿತ್ಯದ ಪ್ರಚಾರವೂ, ನವೋದಯ ಸಾಹಿತ್ಯ ಘಟ್ಟಕ್ಕೆ ತೋರುವ ಪ್ರತಿಭಟನೆಯೂ ಆಗುತ್ತಿದ್ದ ಅವರ ಭಾಷಣಗಳ ಒಂದು ಮಾದರಿ ಹೀಗಿದೆ. "...ಶಾಂತಿ ದುರ್ಬಲತೆಯಿಂದ ದೊರೆಯುವುದಿಲ್ಲ.... ಕ್ರಾಂತಿಯಾದ ನಂತರವೇ ಶಾಂತಿ ಸಾಧ್ಯ. ಎಂದೋ ಆಗಿ ಹೋದ ಹರಿಶ್ಚಂದ್ರ, ರಾಮರ ಸತ್ಯಪ್ರಿಯತೆಯನ್ನು ನೆನೆಯುತ್ತ ಕುಳಿತಲ್ಲಿ ಬಂದ ಲಾಭವೇನು ? ..ಸಾಹಿತ್ಯ ವಿಲಾಸದ ಸಾಧನವಲ್ಲ. ದೇಶೋದ್ಧಾರಕ್ಕೆ, ಆತ್ಮೋದ್ಧಾರಕ್ಕೆ ಸಾಧನವಾಗುವ ಗಾಯತ್ರಿಯದು. ಸಾಹಿತಿ ತನ್ನ ಸುಪ್ತ ಚೇತನದ ಅರಿವನ್ನುಂಟುಮಾಡಿಕೊಂಡು, ಅದರ ಸಂಪೂರ್ಣ ಪ್ರಯೋಜನವನ್ನು ತನ್ನ ನಾಡವರಿಗೆ ಮಾಡಿಕೊಡಬೇಕು. ಅವನ ಕ್ರಾಂತಿ ಖಡ್ಗಕ್ಕೆ ಲೋಕದ ತಾಮಸ ಕಳೆಗಳು ನಡುಗಬೇಕು. ಅದು ದುರ್ಬಲರ, ದಲಿತರ, ಬಡವರ ರಕ್ಷಾಕವಚವಾಗಬೇಕು. ಆಗಲೇ ಸಾಹಿತ್ಯದ ಸಾರ್ಥಕ್ಯ - ಸಾಹಿತಿಯ ಜನ್ಮ ಸಾಫಲ್ಯ... ನಾವು ರೋಲಾ, ಮಾಯಕೋವಸ್ಕಿ, ಗಾರ್ಕಿ, ಸಿಂಕ್ಲೇರ್ ಅವರ ಕೃತಿಗಳನ್ನು ಓದುವಂತೆ ಹೊರಗಿನವರು ನಮ್ಮ ಕೃತಿಗಳನ್ನು ಓದಬೇಡವೆ ?" (೧೯೪೬ ರ ಅಕ್ಟೋಬರ್ ೨೭ ರಂದು, ಧಾರವಾಡ ಜಿಲ್ಲೆಯ ೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಅ.ನ.ಕೃ ಅವರು ಮಾಡಿದ ಭಾಷಣ.)

ಅ.ನ.ಕೃ ಅವರ ಇಂಥ ಭಾಷಣಗಳಲ್ಲಿ ಪ್ರಗತಿಯ ತುಡಿತ ಮತ್ತು ಹೊಸದನ್ನು ಕಾಣುವ - ಕಾಣಿಸುವ ಮಿಡಿತವಿರುವುದು ನಿಚ್ಚಳವಾಗಿ ಗೋಚರಿಸುತ್ತದೆ. ಅವರ ಈ ಬಗೆಯ ಭಾಷಣಗಳನ್ನು ಹಾಗೂ ಅವುಗಳಲ್ಲಿಯ ಘೋಷಣೆಗಳನ್ನೇ ಮಾನದಂಡವಾಗಿಟ್ಟುಕೊಂಡು ಅವರ ೧೧೨ಕ್ಕೂ ಮಿಕ್ಕಿದ ಸಂಖ್ಯೆಯ ಕಾದಂಬರಿಗಳನ್ನು ಪರೀಕ್ಷೆಗೊಳಪಡಿಸಿದರೆ ನಿರಾಶೆಯಾಗುವುದು ಖಂಡಿತ. ಅವರ ಮೊಟ್ಟಮೊದಲ ಕಾದಂಬರಿಯಲ್ಲಿ ಮಾತ್ರ ನಿಜವಾದ ಪ್ರಗತಿಶೀಲ ಲೇಖಕನೊಬ್ಬನ ಕಳಕಳಿ ಕಾಣುತ್ತದೆ. "ವ್ಯಭಿಚಾರ, ರೋಗ, ದಾಸ್ಯಗಳೆಲ್ಲದರ ಹಿಂದೆ ಹಸಿವು ಹೆಬ್ಬಾವಿನಂತೆ ಬಾಯ್ದೆರೆದು ಕುಳಿತಿದೆಯೆಂಬುದನ್ನು ತೋರಿಸಿಕೊಡಲು 'ಜೀವನಯಾತ್ರೆ' ಉದ್ದೇಶಿಸಿದೆ" – ಎಂದು ಮುನ್ನುಡಿಯಲ್ಲಿ ಹೇಳಿರುವ ಅವರ ಮಾತುಗಳಲ್ಲಿ ಅಂಥ ಕಳಕಳಿ ಇರುವುದನ್ನು ಗುರುತಿಸಬಹುದು. ಹಸಿವಿನ ದಾರುಣ ಪರಿಣಾಮಗಳನ್ನು ಚಿತ್ರಿಸುತ್ತಲೇ ಅದರ ಮೂಲ ಬೇರುಗಳು ನಮ್ಮ ಸಮಾಜದ ಅವ್ಯವಸ್ಥಿತ ಅಥವಾ ಅಸಮರ್ಪಕ ಆರ್ಥಿಕ ರಂಗದಲ್ಲಿರುವುದನ್ನು ಅ.ನ.ಕೃ ಗುರುತಿಸುತ್ತಾರೆ. ಅಸಮರ್ಪಕ ಆರ್ಥಿಕ ಕಾರಣದಿಂದಾಗಿಯೇ ಸಮಾಜದಲ್ಲಿ ಶೋಷಣೆ ನಿರಂತರವಾಗಿ ನಡೆಯುವುದರ ಮೇಲೂ ಅವರು ಬೆಳಕು ಬೀರುತ್ತಾರೆ. ಅವರ ಈ ಎಲ್ಲ ಪ್ರಯತ್ನದ ಹಿಂದೆ ಆರ್ಥಿಕ ಸಮಾನತೆ ಮತ್ತು ಸಾಮಾಜಿಕ ಸ್ವಾಸ್ಥ್ಯದ ಕಾಳಜಿ ಪ್ರಧಾನವಾಗಿರುವುದು ಸತ್ಯ. ಆದರೆ ಅ.ನ.ಕೃ ತಮ್ಮ ಮುಂದಿನ ಕಾದಂಬರಿಗಳನ್ನು ರಚಿಸುವ ಸಂದರ್ಭದಲ್ಲಿ ಈ ಬಗೆಯ ಧೋರಣೆ ಮತ್ತು ಕಾಳಜಿಗಳನ್ನು ಉಳಿಸಿಕೊಳ್ಳಲಿಲ್ಲ ವೆಂಬುದು ನಿರಾಶೆ ಹುಟ್ಟಿಸುವ ಸತ್ಯ. ಬಹುಸಂಖ್ಯೆಯ ಅವರ ಸಾಮಾನ್ಯ (ಸಾಮಾಜಿಕವೂ

ಎನ್ನಬಹುದಾದ) ಕಾದಂಬರಿಗಳ ಮಾತು ಒತ್ತಟ್ಟಿಗಿರಲಿ. ಅತ್ಯಂತ ಮಹತ್ವದ ಕೃತಿಗಳೆಂದು ಹೆಸರು ಮಾಡಿದ 'ಉದಯರಾಗ', 'ಸಂಧ್ಯಾರಾಗ', 'ಸಾಹಿತ್ಯರತ್ನ', 'ಕನ್ನಡಮ್ಮನ ಗುಡಿಯಲ್ಲಿ', 'ದೀಪಾರಾಧನೆ', 'ನಟಸಾರ್ವಭೌಮ', 'ಬಣ್ಣದ ಬದುಕು', 'ಹೊನ್ನ ಹೊಳಲು' – ಇವೇ ಮೊದಲಾದ ಕಾದಂಬರಿಗಳಲ್ಲಿ ಅವರು ತಾವು ಭಾಷಣಗಳಲ್ಲಿ ಸಾರುತ್ತಿದ್ದ ಪ್ರಗತಿಶೀಲತೆಯ ಘೋಷಣೆಗಳಿಗೆ ವಿಮುಖರಾಗಿ ಆದರ್ಶ, ಭಾವುಕತೆ, ವೈಭವೀಕರಣಗಳನ್ನೇ ಪುರಸ್ಕರಿಸಿದ್ದು ಸ್ಪಷ್ಟ ಗೋಚರವಾಗುತ್ತದೆ. ಕಲೆ, ಸಂಸ್ಕೃತಿ, ಸಂಗೀತ, ಸಾಹಿತ್ಯಕ್ಷೇತ್ರಕ್ಕೆ ಸಂಬಂಧಿಸಿದ ಈ ಕಾದಂಬರಿಗಳಲ್ಲಿ ಕಲಾವಿದರ ಬದುಕು, ಅವರ ಸಾಧನೆ, ಸೋಲು - ಗೆಲುವುಗಳ ಮನಮಿಡಿಯುವ ಚಿತ್ರಣವಿದೆಯಾದರೂ, ಅ.ನ.ಕೃ ತಮ್ಮ ಭಾಷಣಗಳಲ್ಲಿ ಪ್ರಚಾರ ಮಾಡುತ್ತಿದ್ದ ಪ್ರಗತಿಶೀಲ ಧೋರಣೆಗಳಿಗೂ ಅವರ ಈ ಕಾದಂಬರಿಗಳ ನಡೆಗೂ ದೊಡ್ಡ ಗ್ಯಾಪ್ ಇರುವುದು ವಾಸ್ತವ. ಭಾಷಣ ಮತ್ತು ಘೋಷಣೆಗಳಲ್ಲಿ ಪ್ರಗತಿಶೀಲರಾದಷ್ಟು ಅ.ನ.ಕೃ ತಮ್ಮ ಕಾದಂಬರಿಗಳಲ್ಲಿ ಆಗಲಿಲ್ಲವೆಂಬುದು ಸಾಮಾನ್ಯ ಓದುಗರೂ ಗುರುತಿಸಬಹುದಾದ ವಾಸ್ತವ.

ಅ.ನ.ಕೃ ಒಂದು ಕಾದಂಬರಿ-ಯಂತ್ರದಂತೆ ಅಸಂಖ್ಯ ಕಾದಂಬರಿಗಳನ್ನು ನಿರ್ಮಿಸಿದರು. ಸಂಖ್ಯಾಸಮೃದ್ಧಿಯಾದ ಹಾಗೆಯೇ ಅವರ ಕಾದಂಬರಿಗಳು ಸತ್ವ ಕಳೆದುಕೊಂಡವು. ಅವರು ಸಾಮಾಜಿಕ ಪ್ರಜ್ಞೆಯವೆಂದು ಹೇಳಿಕೊಳ್ಳುತ್ತಿದ್ದ 'ಗೃಹಲಕ್ಷ್ಮಿ', 'ರುಕ್ಮಿಣಿ', 'ತಾಯಿ ಮಕ್ಕಳು', 'ಆಶೀರ್ವಾದ', 'ಅನುಗ್ರಹ', 'ಹೊಗರು' – ಇತ್ಯಾದಿ ಕಾದಂಬರಿಗಳಲ್ಲಿ ಹಳ್ಳಿಯ ಬದುಕಿನ ಚಿತ್ರಣ, ಕೌಟುಂಬಿಕ ವಿವರಗಳ ವರ್ಣನೆಯ ಕಥೆ ಇದೆಯೇ ಹೊರತು, ಅದೇ ಸಮಾಜವನ್ನು ನಿರಂತರ ಕೊರೆಯುವ ಸಮಸ್ಯೆಗಳ ಪೃಥಕ್ಕರಣವಿಲ್ಲ. 'ಶ್ರೀಮತಿ', 'ಮುಡಿಮಲ್ಲಿಗೆ', 'ಧರ್ಮಪತ್ನಿ', 'ಕಾಂಚನಗಂಗಾ', 'ಕಾಗದದ ಹೂ' – ಇಂಥ ಕಾದಂಬರಿಗಳು ಗಂಡು - ಹೆಣ್ಣಿನ ಸಂಬಂಧಗಳನ್ನು ಲೈಂಗಿಕಾಸಕ್ತಿಯ ವಿಷಯಗಳೊಂದಿಗೆ ಬಿಚ್ಚಿಡುವ ನೆಲೆಯಲ್ಲೇ ತೃಪ್ತಿಪಟ್ಟಿವೆ. ವೇಶ್ಯಾಸಮಸ್ಯೆಯ ಮೇಲೆ ಬೆಳಕು ಬೀರಲು ಸಾಧ್ಯವಿದ್ದ ಅವರ 'ನಗ್ನಸತ್ಯ', 'ಶನಿಸಂತಾನ' ಮತ್ತು 'ಸಂಜೆಗತ್ತಲು' – ಕಾದಂಬರಿತ್ರಯಗಳು ಸಮಸ್ಯೆಯ ಸುಳಿಯನ್ನು ಭೇದಿಸುವ ಬದಲು ಓದುಗರನ್ನು ಆ ಸಮಸ್ಯೆಯೊಳಗೇ ಎಳೆದುಕೊಳ್ಳುವ ಅತಿರಂಜಿತ ವರ್ಣನೆಯಿಂದ ತುಂಬಿಕೊಂಡಿವೆ. ಈ ಕಾದಂಬರಿಗಳಲ್ಲಿ ಬರುವ ಕಾಮಪ್ರಚೋದಕ ವಿವರಗಳು, ಭಾವೋದ್ರೇಕ ಉಂಟುಮಾಡುವ ವರ್ಣನೆಗಳು ಅ.ನ.ಕೃ ಅವರ ಓದುಗರ ವಲಯವನ್ನು ದೊಡ್ಡದು ಮಾಡಿದವು. ಆದರೆ ಅದು ಸಕಾರಾತ್ಮಕ ಅಥವಾ ಪ್ರಗತಿಪರ ಬೆಳವಣಿಗೆಯಾಗಿರಲಿಲ್ಲ. ಹೀಗಾಗಿ ಅದೇ ಅ.ನ.ಕೃ ಅವರ ಇಂಥ ಕಾದಂಬರಿಗಳನ್ನು ಕುರಿತಂತೆ ಕಟುವಿಮರ್ಶೆ ವ್ಯಕ್ತವಾಯಿತು. ವಿಪರ್ಯಾಸವೆಂದರೆ ಅ.ನ.ಕೃ ಅವರು ಇಂಥ ವಿಮರ್ಶೆಯನ್ನೂ ಸಕಾರಾತ್ಮಕ ನೆಲೆಯಲ್ಲಿ ಸ್ವೀಕರಿಸದಿದ್ದುದು. ಅ.ನ.ಕೃ ಅಷ್ಟಕ್ಕೇ ಬಿಡದೆ, ತಮ್ಮ ಕಾದಂಬರಿಗಳ ವಿಮರ್ಶಕರನ್ನು ವಿರೋಧಿಸಿ, ತಮ್ಮ ನಿಲುವನ್ನೇ ಸಮರ್ಥಿಸುತ್ತ ಸ್ವಯಂವಿಮರ್ಶೆ ಬರೆದುಕೊಂಡರು. 'ಸಾಹಿತ್ಯ ಮತ್ತು ಕಾಮಪ್ರಚೋದನೆ' ಎಂಬ ಕೃತಿ ಅವರಿಂದ ಬಂದದ್ದು ಇದಕ್ಕೆ ಸಾಕ್ಷಿ. ಆಕರ್ಷಕವಾಗಿ ಜೋಡಿಸಿಟ್ಟ ಹಣ್ಣು ಮತ್ತು ಮಾಂಸದಂಗಡಿಗಳ ಹಾಗೆ ಅವರ ಕಾದಂಬರಿಗಳು ವರ್ಣಮಯವಾದ ಲೈಂಗಿಕ ವಿವರಗಳೊಂದಿಗೆ ಹದಿಹರೆಯದ ಮನಸ್ಸುಗಳನ್ನು ಆಕರ್ಷಿಸಿದವು ಮತ್ತು ಉದ್ರೇಕಿಸಿದವು. ಈ ಕಾರಣಕ್ಕಾಗಿಯೇ ಅವರ ಕಾದಂಬರಿಗಳಿಗೆ ಅಂದು ಬೇಡಿಕೆಯೂ ಹೆಚ್ಚಾಯಿತು. ಹೆಚ್ಚಾದ ಬೇಡಿಕೆಯನ್ನು ಪೂರೈಸಲು ಅವರು ಬರೆಯುತ್ತಲೇ ಹೋದರು. ಹೋಟೆಲು ರೂಮು ಬೆಲೆವೆಣ್ಣುಗಳು, ಅಲ್ಲಿನ ಕಾಮಕೇಳಿ – ಇತ್ಯಾದಿ ಆಕರ್ಷಕ ಸರಕುಳ್ಳ ಕಾದಂಬರಿಗಳನ್ನು ಅವರು ಅಕ್ಷರಶಃ ಯಂತ್ರದ ಹಾಗೆ ನಿರ್ಮಿಸಿದರು. ಹೀಗೆ ಮಾಡುತ್ತ ಹೋದ ಹಾಗೆಯೇ ಅವರೊಳಗಿನ [illegible]

ಕಾದಂಬರಿಕಾರರಾಗಿಬಿಟ್ಟರು. ಇಷ್ಟೆಲ್ಲ ಮಾಡುವಷ್ಟರಲ್ಲಿಯೇ ಅ.ನ.ಕೃ ತಮ್ಮ ಮೊದಲಿನ ಭಾಷಣ - ಘೋಷಣೆ. ಪ್ರಗತಿಶೀಲತೆಯ ವಿಚಾರಗಳಿಂದ ಬಲುದೂರ ಹೋಗಿಬಿಟ್ಟಿದ್ದರು. ಆಗಾಗ ತಮ್ಮ ಧೋರಣೆಯನ್ನು ಸಮರ್ಥಿಸಲು ಕಾದಂಬರಿಗಳಲ್ಲಿ ಏಕಾಏಕಿಯಾಗಿ ತರುತ್ತಿದ್ದ ಅವರ ಪ್ರಗತಿಪರ ವಿಚಾರಗಳು ಸಹಿತ ವಿಮರ್ಶಕರಿಂದ ಕಟುವಾದ ಗೇಲಿಗೊಳಗಾದವು. ಅಷ್ಟೇ ಅಲ್ಲ: "ಅ.ನ.ಕೃ ಅವರ ಸೃಜನಶೀಲ ಕೃತಿಗಳಲ್ಲಿ ಕಂಡುಬರುವ ನೈತಿಕ ಉನ್ನತಿಯ ದೃಷ್ಟಿಗೂ, ಅವರು ಬದುಕಿದ ರೀತಿಗೂ ಬಿರುಕು ಸ್ಪಷ್ಟವಾಗಿ ಕಂಡುಬಂತು" ಎಂದು ವಿಮರ್ಶಕರು ಸ್ಪಷ್ಟವಾಗಿ ಸಾರಿದರು. ಪ್ರತಿಭಟನಾತ್ಮಕ ನೆಲೆಯಲ್ಲಿ ಹೊರಟು, ಹೊಸ ಸಾಹಿತ್ಯ ಘಟ್ಟವೊಂದರ ನಿರ್ಮಾಣಕ್ಕೆ ಕರೆಕೊಟ್ಟ ಅ.ನ.ಕೃ ಅವರೇ ತಮ್ಮ ಮೊದಲಿನ ಧ್ಯೇಯ ಧೋರಣೆಗಳಿಗೆ ಬೆನ್ನು ಮಾಡಿದ್ದು ಪ್ರಗತಿಶೀಲ ಚಳವಳಿಯ ದೊಡ್ಡ ವಿಪರ್ಯಾಸ. ಇಷ್ಟೆಲ್ಲ ಆದ ನಂತರ ಅ.ನ.ಕೃ ಅವರ ಕಾದಂಬರಿಗಳಲ್ಲಿ ಒಬ್ಬ ಪ್ರಗತಿಶೀಲ ಲೇಖಕನನ್ನು ಹುಡುಕಿದರೆ ಆತ ಸಿಕ್ಕಾನೆಯೆ ? ಅಸಂಖ್ಯ ಕಾದಂಬರಿಗಳ ನಿರ್ಮಾತೃವಾಗಿ ಅ.ನ.ಕೃ ಕನ್ನಡ ಸಾಹಿತ್ಯದಲ್ಲಿ ದೊಡ್ಡ ಹೆಸರು ಮಾಡಿದ್ದು ವಾಸ್ತವವಾದರೂ ಅವರು ಪ್ರಗತಿಶೀಲ ಘಟ್ಟದ ಮಹತ್ವದ ಲೇಖಕರೆಂದು ಹೇಳಲು ಸಾಧ್ಯವಾಗುವುದಿಲ್ಲ.

ಇಷ್ಟಾಗಿಯೂ ಅ.ನ.ಕೃ ಇಂದೂ ನಮಗೆ ನೆನಪಾಗುವುದು ಅವರ 'ಸಂಧ್ಯಾರಾಗ', 'ನಟಸಾರ್ವಭೌಮ', 'ಕನ್ನಡಮ್ಮನ ಗುಡಿಯಲ್ಲಿ' – ಇಂಥ ಕೆಲವಾದರೂ ಕಾದಂಬರಿಗಳ ಮೂಲಕ. ಮುಂದಿನ ನಡೆ ಭಿನ್ನವಾದರೂ, ಪ್ರಗತಿಶೀಲ ಚಳವಳಿಯ ಆರಂಭದ ದಿನಗಳಲ್ಲಿ ಅದಕ್ಕೆ ವ್ಯಾಪಕ ಪ್ರಚಾರ ಕೊಟ್ಟ ಹೆಗ್ಗಳಿಕೆ ಅ.ನ.ಕೃ ಅವರಿಗೇ ಸಲ್ಲುತ್ತದೆ. ಕನ್ನಡದಲ್ಲಿ ಓದುಗರ ವೃತ್ತವನ್ನು ಹಿಗ್ಗಲಿಸಿದ ಕೀರ್ತಿಗೂ ಅವರು ಪಾತ್ರರಾಗುತ್ತಾರೆ. ಕನ್ನಡ ನಾಡು - ನುಡಿ - ಸಂಸ್ಕೃತಿಗಳ ಪ್ರಚಾರಕರಾಗಿ ಅವರು ಮಾಡಿದ ಕೆಲಸ ಅನನ್ಯವಾದದ್ದು. ಕಲಾವಿದರ ಬದುಕುಗಳನ್ನು ಕುರಿತಾಗಿ ಅವರಿಗಿದ್ದ ಕಾಳಜಿ ಗಮನಾರ್ಹವಾದದ್ದು. 'ಕರ್ನಾಟಕ ಕಲಾವಿದರು' ಮತ್ತು 'ಬರಹಗಾರನ ಬದುಕು' – ಇಂಥ ಕೃತಿಗಳೇ ಇದಕ್ಕೆ ಉದಾಹರಣೆ.

ಕಾದಂಬರಿಕಾರ ಅ.ನ.ಕೃ ಅವರ ಬಗೆಗೆ ಮಾತಾಡುವಾಗಲೆಲ್ಲ ವಿಮರ್ಶಕರು ಅಸಮಾಧಾನದ ಮಾತುಗಳನ್ನೇ ಬರೆದಿರುವಲ್ಲಿ ಅಸತ್ಯವಿರಲಿಕ್ಕಿಲ್ಲ. ಆದರೆ ಕನ್ನಡ ಪ್ರಗತಿಶೀಲ ಘಟ್ಟದ ಚರ್ಚೆ ಆರಂಭವಾಗುವುದು ಅ.ನ.ಕೃ ಅವರಿಂದಲೇ ಎಂಬುದು ಆಶ್ಚರ್ಯಕರ ಸತ್ಯ. ಅದು ಪ್ರಗತಿಶೀಲ ಘಟ್ಟದ ವಿರೋಧಾಭಾಸವಾಗಿರಲೂ ಸಾಕು.

## ನಿರಂಜನ :

ಸಂಘಟಿತ ಪ್ರಗತಿಶೀಲ ಚಳವಳಿಯ ಸದಸ್ಯರಾಗದೆ, ಅ.ನ.ಕೃ ಅವರ ಹಾಗೆ ಭಾಷಣ - ಘೋಷಣೆಗಳನ್ನು ಮಾಡದೆ, ಪ್ರಗತಿಪರ ವಿಚಾರಧಾರೆಯನ್ನು ಬದುಕು ಮತ್ತು ಬರಹ ಎರಡರಲ್ಲೂ ಅಳವಡಿಸಿಕೊಂಡ ನಿರಂಜನರು ಕನ್ನಡದ ಅಗ್ರಶ್ರೇಣಿಯ ಪ್ರಗತಿಶೀಲ ಕಾದಂಬರಿಕಾರರು. ಬಾಲ್ಯಾವಸ್ಥೆಯ ಕ್ರೂರ ವಿದ್ಯಮಾನಗಳು ಕೊಟ್ಟ ಕೆಟ್ಟ ಅನುಭವಗಳು ಹಾಗೂ ಬಡತನದಿಂದ ಗಟ್ಟಿಗೊಂಡ ನಿರಂಜನರು ತಮ್ಮ ಆರಂಭದ ಶೈಕ್ಷಣಿಕ ದಿನಗಳಲ್ಲೇ ಎಡಪಂಥೀಯ ರಾಜಕೀಯ ವಿಚಾರಧಾರೆಯಿಂದ ಆಕರ್ಷಿತರಾದರು. ಅದಾಗ ನಡೆಯುತ್ತಿದ್ದ ರಾಷ್ಟ್ರೀಯ ಆಂದೋಲನಗಳು ಅವರನ್ನು ವಿಶೇಷವಾಗಿ ಎಚ್ಚರಿಸಿದವು. ಬ್ರಿಟಿಶ್ ವಸಾಹತುಶಾಹಿಯ ಕರಾಳ ಬಂಧನದಲ್ಲಿ ನಲುಗುತ್ತಿದ್ದ ದೇಶ ಹಾಗೂ ಈ ನೆಲದಲ್ಲಿಯೇ ಆಳ ಬೇರು ಬಿಟ್ಟಿದ್ದ ಭೂಮಾಲಿಕರು ಮತ್ತು ಬಂಡವಾಳಶಾಹಿಗಳು ಜನಸಾಮಾನ್ಯರ ಮೇಲೆ, ದುಡಿವ ಜನವರ್ಗದ ಮೇಲೆ ನಡೆಸುತ್ತಿದ್ದ

ಶೋಷಣೆ – ಇವೆಲ್ಲ ನಿರಂಜನರನ್ನು ಆಳವಾಗಿ ಕಲಕಿದುವು. ವರ್ಗತಾರತಮ್ಯ ಮತ್ತು ಅದರ ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ ಅವರು ಶೋಷಣೆರಹಿತ ವ್ಯವಸ್ಥೆಯ ಅಪೇಕ್ಷೆಯನ್ನಿಟ್ಟುಕೊಂಡು ತಮ್ಮ ಬರವಣಿಗೆ ಮೊದಲು ಮಾಡಿದರು. ಆ ಸಂದರ್ಭದಲ್ಲಿ ವಿದೇಶದಿಂದ ಬೀಸುತ್ತಿದ್ದ ಪ್ರಗತಿಶೀಲತೆಯ ಗಾಳಿ ನಿರಂಜನರನ್ನು ವಿಶೇಷವಾಗಿ ಆಕರ್ಷಿಸಿತು. ವರ್ಗರಹಿತ ಮತ್ತು ಶೋಷಣೆರಹಿತ ವ್ಯವಸ್ಥೆಯನ್ನು ತರುವಲ್ಲಿ ಸಂಘಟನಾತ್ಮಕ ಪಥ ನಿರ್ಮಿಸಿದ್ದ ಕಮ್ಯುನಿಸ್ಟ್ ವಿಚಾರಧಾರೆ ನಿರಂಜನರಿಗೆ ಅತ್ಯಂತ ಆಪ್ತವಾಯಿತು. ಪಕ್ಷದ ಸಕ್ರಿಯ ಸದಸ್ಯರೂ ಆಗಿದ್ದ ಅವರು ಅಂದಿನ ಬಂಧನಕಾರಿ ವ್ಯವಸ್ಥೆಯ ವಿರುದ್ಧ ಭೂಗತರಾಗಿದ್ದುಕೊಂಡೇ ಹೋರಾಟ ನಡೆಸಿದರು.

ತಾವು ನಂಬಿದ್ದ ಮತ್ತು ತಮ್ಮ ಮೇಲೆ ಪ್ರಭಾವ ಬೀರಿದ್ದ ಎಡಪಂಥೀಯ ವಿಚಾರಧಾರೆಗೆ ಬದ್ಧರಾಗಿದ್ದ ನಿರಂಜನರು ಮುಖ್ಯವಾಗಿ ಪತ್ರಿಕೋದ್ಯಮದಲ್ಲಿ ಆ ವಿಚಾರಗಳಿಗೆ ಗಟ್ಟಿ ಅಭಿವ್ಯಕ್ತಿ ಕೊಟ್ಟರು. ಅವರ ಇತರ ಬರವಣಿಗೆಯಲ್ಲೂ ಇದನ್ನು ಕಾಣಬಹುದು. ಪ್ರಗತಿಶೀಲ ಲೇಖಕರ ಗಮನಾರ್ಹ ಸಾಹಿತ್ಯರೂಪವಾದ ಕಾದಂಬರಿ ಪ್ರಕಾರದಲ್ಲೂ ನಿರಂಜನರು ಸಾಧಿಸಿದ್ದು ಅದನ್ನೇ. ನಿರಂಜನರ ಎಲ್ಲ ಕಾದಂಬರಿಗಳ ಸಂಖ್ಯೆ ೨೫ನ್ನು ಮೀರುವುದಿಲ್ಲ. ಇತರ ಪ್ರಗತಿಶೀಲ ಲೇಖಕರಿಗೆ ಹೋಲಿಸಿದರೆ ಈ ಸಂಖ್ಯೆ ತುಂಬಾ ಸಣ್ಣದು. ಆದರೆ ವಸ್ತುವಿನ ಆಯ್ಕೆ, ಅದನ್ನು ನಿರ್ವಹಿಸಿದ ರೀತಿ, ಪ್ರಗತಿಪ್ರಜ್ಞೆಯನ್ನು ನಿರಂತರವಾಗಿ ಹಾಗೂ ಎಚ್ಚರದಿಂದ ಬಳಸಿದ ಬಗೆ, ತೋರಿದ ಸಾಹಿತ್ಯಿಕ ಸಂಯಮ –ಇವೆಲ್ಲ ಅನನ್ಯವಾಗಿವೆ.

ನಿರಂಜನರ ಮೊದಲ ಕಾದಂಬರಿ 'ವಿಮೋಚನೆ'. ಈ ಕಾದಂಬರಿಯ ಚಂದ್ರಶೇಖರ ಬಾಲ್ಯದಲ್ಲೇ ತಂದೆ - ತಾಯಿಯನ್ನು ಕಳೆದುಕೊಂಡು, ಓದನ್ನು ಅನಿವಾರ್ಯವಾಗಿ ಅರ್ಧಕ್ಕೆ ನಿಲ್ಲಿಸಿ, ಪರಿಸ್ಥಿತಿಯ ಒತ್ತಡದಿಂದ ಜೇಬುಗಳ್ಳನೂ, ಖದೀಮನೂ ಸಮಾಜಕಂಟಕನೂ ಆಗಿ ಜೇಲು ಸೇರುತ್ತಾನೆ. ಕಾಯಿಲೆ ಬಿದ್ದು ನರಳುತ್ತಾನೆ. ಹಾಗಾದ ಸ್ಥಿತಿಯಲ್ಲೇ ತನ್ನ ಮೊದಲಿನ ಬದುಕಿನ ಎಲ್ಲ ವಿವರಗಳನ್ನೂ 'ವಿಮೋಚನೆ'ಯ ರೀತಿಯಲ್ಲಿ ಕಾದಂಬರಿ ರೂಪದಲ್ಲಿ ದಾಖಲಿಸುತ್ತಾನೆ. ಈ ವಿಮೋಚನೆ ವಿಶಿಷ್ಟ ಅರ್ಥದ್ದು. ಅದು ದಾರುಣ ಬದುಕಿನ ವಿಮೋಚನೆಯೂ ಹೌದು, ಸಮಾಜಕಂಟಕನಾಗಿದ್ದ ಅವನ ದುಷ್ಟತನದ ವಿಮೋಚನೆಯೂ ಹೌದು. ಮೂಲತಃ ಸುಸಂಸ್ಕೃತ, ಸಂವೇದನಾಶೀಲ, ಸಾಹಿತ್ಯಾಸಕ್ತ ಚಂದ್ರಶೇಖರ ಪರಿಸ್ಥಿತಿಯ ಒತ್ತಡದಿಂದ ತಾನು ಇಷ್ಟಪಡದ ಬದುಕಿಗೆ ತಳ್ಳಲ್ಪಡುತ್ತಾನೆ. ಅದು ಕ್ರೂರ ವ್ಯವಸ್ಥೆಯ ಬಂಧನ. ಈ ಬಂಧನದಿಂದ ಬಿಡುಗಡೆ ಪಡೆಯುವ ಅವನ ತುಡಿತ ಪ್ರಗತಿಪರ ನಡೆಯ ಸಂಕೇತವಾಗುತ್ತದೆ. ಗಾಢ ಸಾಮಾಜಿಕ ಪ್ರಜ್ಞೆ, ಅದನ್ನು ವಾಸ್ತವ ನೆಲೆಯಲ್ಲಿ ಅಭಿವ್ಯಕ್ತಪಡಿಸುವ ಕ್ರಮ, ಶೋಷಿತ ವ್ಯಕ್ತಿಯನ್ನು ಮಾನವೀಯ ದೃಷ್ಟಿಯಿಂದ ಕಾಣುವ ಹೃದಯವಂತಿಕೆ ಹಾಗೂ ಬಿಟ್ಟಾರೆ ಸ್ಥಿತಿಯಲ್ಲಿ ಬದಲಾವಣೆ ಮತ್ತು ಪ್ರಗತಿಯನ್ನು ಬಯಸುವ ಹಂಬಲ – ಈ ಎಲ್ಲ ಅಂಶಗಳಿಂದ ನಿರಂಜನರ 'ವಿಮೋಚನೆ' ಒಂದು ಮಹತ್ವದ ಪ್ರಗತಿಶೀಲ ಕಾದಂಬರಿಯೆಂದೇ ಪರಿಗಣಿತವಾಗುತ್ತದೆ.

'ರಂಗಮ್ಮನ ವಠಾರ', 'ಬನಶಂಕರಿ', 'ಅಭಯ', 'ನಂದಗೋಕುಲ' –ಇವೆಲ್ಲ ನಿರಂಜನರು ಸಾಮಾಜಿಕ ಪ್ರಗತಿಯ ಕಳಕಳಿಯಿಂದಲೇ ರಚಿಸಿದ ಕಾದಂಬರಿಗಳು. ಕೆಳವರ್ಗದ ಮತ್ತು ಅನಾಥ ಜನತೆಯ ಬದುಕಿನ ವಿವರಗಳನ್ನು ಯಥಾವತ್ತಾಗಿ ದಾಖಲಿಸುವ ಇವು ಆ ಬದುಕಿನ ಬವಣೆ, ಅಲ್ಲಿ ನಡೆಯುವ ಶೋಷಣೆ, ಆ ಕೂಪದಿಂದ ಹೊರಬರಲು ಸಾಮಾನ್ಯ ಜನವರ್ಗ ನಡೆಸುವ ಪ್ರಯತ್ನ ಇವನ್ನೆಲ್ಲ ಮಾನವೀಯ ಹಾಗೂ ಪ್ರಗತಿಪರ ನೆಲೆಯಲ್ಲಿ ಕಟ್ಟಿಕೊಡುತ್ತವೆ.

'ಕಲ್ಯಾಣಸ್ವಾಮಿ', 'ಸ್ವಾಮಿ ಅಪರಂಪಾರ' – ಇವು ನಿರಂಜನರು ರಚಿಸಿದ ಚಾರಿತ್ರಿಕ ಕಾದಂಬರಿಗಳು. ಇಲ್ಲಿ ಅವರು ಚರಿತ್ರೆಯನ್ನು ನೋಡುವ ಕ್ರಮವೇ ಭಿನ್ನವಾಗಿದೆ ಹಾಗೂ ಅದು ಸಾಮ್ಯವಾದಿ ಚಿಂತನಾಕ್ರಮದ್ದಾಗಿದೆ. "ಇತಿಹಾಸವೆನ್ನುವುದು ರಾಜರಾಣಿಯರ ಕಥೆಯಲ್ಲ. ವಿಶಿಷ್ಟರೆನಿಸಿದ ಕೆಲವು ವ್ಯಕ್ತಿಗಳ ಚಿತ್ರವಲ್ಲ. ಕಾಲಕಾಲಕ್ಕೂ ಬದಲಾಗುತ್ತ ಬಂದ ಬದುಕು. ಆಗಿನ ಕಾಲಧರ್ಮ, ಅದರಿಂದ ಪ್ರಭಾವಿತವಾದ ಜನರ ರೀತಿ - ನೀತಿಗಳು, ಆ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಶಕ್ತಿಗಳು" ಎಂದು ಹೇಳುವ ಅವರ ಇತಿಹಾಸದ ವ್ಯಾಖ್ಯೆ ಪ್ರಗತಿಶೀಲ ಮನೋಧರ್ಮದ ಪ್ರತಿರೂಪದಂತಿದೆ. ಇತಿಹಾಸವನ್ನು ಪ್ರಗತಿಪರ ಧೋರಣೆಯ ಹಿನ್ನೆಲೆಯಲ್ಲಿ ಅರಿಯುವ ಮತ್ತು ಅರ್ಥೈಸುವ ಈ ವಿಶಿಷ್ಟ ದೃಷ್ಟಿಯಿಂದಾಗಿ ಅವರ ಚಾರಿತ್ರಿಕ ಕಾದಂಬರಿಗಳಿಗೆ ವರ್ತಮಾನದ ಸಂದರ್ಭದಲ್ಲೂ ಅರ್ಥ ಪ್ರಾಪ್ತವಾಗುತ್ತದೆ. ಬ್ರಿಟಿಶರ ವಿರುದ್ಧ ಸಿಡಿದೆದ್ದ ಹಳ್ಳಿಗಾಡಿನ ಜನರು ಜಾತಿ - ಮತ ಭೇದಗಳನ್ನು ಮರೆತು ಕಲ್ಯಾಣಸ್ವಾಮಿಯ ನೇತೃತ್ವದಲ್ಲಿ ಮಾಡಿದ ದಾಳಿಗಳೇ ಈ ಕಾದಂಬರಿಗಳ ವಸ್ತು. ಈ ಕಾರಣಕ್ಕಾಗಿ ಕಾದಂಬರಿಗಳು ರಾಜರ ಇತಿಹಾಸದ ದಾಖಲೆಗಳಾಗದೆ, ಜನಸಾಮಾನ್ಯರ ಆಂದೋಲನಗಳ ಚರಿತ್ರೆಗಳೇ ಆಗಿವೆ. ಇಲ್ಲೂ ನಿರಂಜನರ ಪ್ರಗತಿಪರ ಧೋರಣೆಯನ್ನು ಗುರುತಿಸುವುದು ಕಷ್ಟವೇನಲ್ಲ.

ನಿರಂಜನರ ಹೆಸರನ್ನು ಚಿರವಾಗಿ ದಾಖಲಿಸುವ 'ಚಿರಸ್ಮರಣೆ' ಮತ್ತು 'ಮೃತ್ಯುಂಜಯ', ಅವರ ಪ್ರಗತಿಪರ ಸಿದ್ಧಾಂತಗಳನ್ನು ಭಟ್ಟಿಯಿಳಿಸಿಕೊಂಡು ಗಟ್ಟಿಯಾಗಿ ಬೆಳೆದ ಎರಡು ಬಹುಮುಖ್ಯ ಕಾದಂಬರಿಗಳು. ಪ್ರಗತಿಶೀಲ ಚಳುವಳಿಗೆ ಪ್ರೇರಣೆಯೊದಗಿಸಿದ ಮೂಲ ಆಶಯಗಳೇ ಇಲ್ಲಿ ಹರಳುಗಟ್ಟಿದಂತಿವೆ. ನಮ್ಮ ದೇಶದ ಶ್ರಮಜೀವಿಗಳು ನಿರಂತರ ನಡೆಸುತ್ತ ಬಂದಿರುವ ವರ್ಗಸಂಘರ್ಷದ ಇತಿಹಾಸದಲ್ಲಿ ಒಂದು ಮಹತ್ವದ ಮೈಲುಗಲ್ಲಾಗಿರುವ ಕೈಯೂರಿನ ರೈತರ ಹೋರಾಟವೇ ಈ ಕಾದಂಬರಿಯ ವಸ್ತು. ವರ್ಗಸಮರದ ಹೋರಾಟವುಳ್ಳ ಕನ್ನಡದ ಕಾದಂಬರಿಗಳಲ್ಲಿ 'ಚಿರಸ್ಮರಣೆ'ಗೆ ಅಗ್ರಸ್ಥಾನ ಸಲ್ಲುವುದು ಅದು ಒಳಗೊಂಡ ವಸ್ತು ಮತ್ತು ಆಶಯಗಳ ಹಿನ್ನೆಲೆಯಲ್ಲಿ. 'ದುಡಿಯುವ ಜನರೆಲ್ಲ ಒಂದಾದರೆ ಸುಲಿಯುವ ಜನರೆಲ್ಲ ಸೋತು ಹೋಗುತ್ತಾರೆ. ನಮ್ಮನ್ನು ಬಿಗಿದಿರುವ ಬೇಡಿಗಳು ಪುಡಿಪುಡಿಯಾಗುತ್ತವೆ.' – ಎಂಬ ಗಟ್ಟಿ ಸಿದ್ಧಾಂತ ಹೊತ್ತು ಸ್ಥಾಪಿತವಾದ ಕೈಯೂರು ರೈತಸಂಘ, ಕೆಂಪು ಬಾವುಟ ಹಾರಿಸಿ ಜಮೀನ್ದಾರಿ ಮತ್ತು ಪಾಳೆಯಗಾರಶಾಹಿ ವ್ಯವಸ್ಥೆಯೆದುರು ಹೋರಾಟಕ್ಕಿಳಿಯುತ್ತದೆ. ವರ್ಗಭೇದದ ಕ್ರೂರ ಪರಿಣಾಮಗಳನ್ನು ಶಾಲಾ ಹಂತದಲ್ಲೇ ಅರಿತಿದ್ದ ಅಪ್ಪು ಮತ್ತು ಚಿರಕುಂಡರು ಸಂಘಟನೆಗೆ ಸೇರಿ, ಶೋಷಿಸುವ ಶಕ್ತಿಗಳ ದಮನಕ್ಕಾಗಿ ಕ್ರಾಂತಿಕಹಳೆ ಮೊಳಗಿಸುತ್ತಾರೆ. ಆದರೆ ಜಮೀನ್ದಾರಿ ತಂತ್ರ ಮತ್ತು ಪಾಳೆಯಗಾರಶಾಹಿಯ ದಮನಕಾರಿ ಹೊಡೆತಗಳು ರೈತರ ಹೋರಾಟವನ್ನು ಅತ್ಯಂತ ಕ್ರೂರ ರೀತಿಯಲ್ಲಿ ನಿಯಂತ್ರಿಸುತ್ತವೆ. ಅವರ ಮನೆಮನೆಗಳಿಗೆ ನುಗ್ಗಿದ ಪೋಲೀಸರು ಅಮಾನವೀಯ ಕೃತ್ಯವೆಸಗುತ್ತಾರೆ. ಕ್ರಾಂತಿಯಲ್ಲಿ ಕಾನ್‌ಸ್ಟೇಬಲ್‌ನೊಬ್ಬ ಸತ್ತಾಗ, ಆ ಸಾವಿಗೆ ಸಾಮೂಹಿಕ ಜವಾಬ್ದಾರಿ ಹೊರಿಸಿ ಅಪ್ಪು - ಚಿರಕುಂಡರನ್ನೂ ಒಳಗೊಂಡಂತೆ ಇನ್ನೂ ಹಲವರನ್ನು ನೇಣು ಬಿಗಿದು ಕೊಲ್ಲುತ್ತಾರೆ. ಈ ದಾರುಣ ಚರಿತ್ರೆಯನ್ನೇ 'ಚಿರಸ್ಮರಣೆ' ಅದ್ಭುತ ರೀತಿಯಲ್ಲಿ ಕಟ್ಟಿಕೊಟ್ಟಿದೆ. ಮಲಯಾಳಂ, ತಮಿಳು, ತೆಲುಗು, ಮರಾಠಿ, ಹಿಂದಿ, ಬಂಗಾಲಿ ಹಾಗೂ ಇಂಗ್ಲೀಷ್ ಭಾಷೆಗಳಿಗೆ ಅನುವಾದಗೊಂಡ 'ಚಿರಸ್ಮರಣೆ' ಭಾರತೀಯ ವರ್ಗಸಮರದ ಚರಿತ್ರೆಯ ಒಂದು ಗಮನಾರ್ಹ ಅಧ್ಯಾಯವಾಗಿದೆ. ನಿರಂಜನರ ಚಿರಸ್ಮರಣೆಗೂ ಅವರ ಈ ಕಾದಂಬರಿ ಕಾರಣವಾಗುತ್ತದೆ.

ನಿರಂಜನರು ತಮ್ಮ ಕೊನೆಯ ದಿನಗಳಲ್ಲಿ ರಚಿಸಿದ 'ಮೃತ್ಯುಂಜಯ' ಕಾದಂಬರಿ ಕೂಡ ಚಿರಸ್ಮರಣೆಯ ಹಾಗೆಯೇ ಚಿರವಾಗಿ ಉಳಿಯಬಲ್ಲ ಮೌಲಿಕ ಕೃತಿ. ಗುಲಾಮ

ಉಳಿಗಮಾನ್ಯ ವ್ಯವಸ್ಥೆಯ ಸಂಕೀರ್ಣ ವಸ್ತುವನ್ನು ಹೊಂದಿರುವ ಈ ಕಾದಂಬರಿ ಒಂದು ಮಹಾಕಾವ್ಯದಂತೆಯೇ ಗೋಚರಿಸುತ್ತದೆ. ಈಜಿಪ್ಟಿನ ಚರಿತ್ರೆಯಲ್ಲಿರುವ ಉಲ್ಲೇಖವೊಂದರಿಂದ ಪ್ರೇರಣೆ ಪಡೆದ ನಿರಂಜನರು ಆ ಕುರಿತು ಆಳವಾಗಿ ನಡೆಸಿದ ಅಧ್ಯಯನದ ಫಲವಾಗಿ ಈ ಕಾದಂಬರಿ ರೂಪ ತಾಳಿದ್ದು, ಶ್ರಮಿಕ ವರ್ಗದ ಹೋರಾಟ, ಸೋಲು - ಗೆಲುವು - ಆಶಾವಾದಗಳೇ ಇದರ ಮೂಲವಸ್ತು. ಚಾರಿತ್ರಿಕವಾದ ಹೋರಾಟವೊಂದನ್ನು ವರ್ಗಹೋರಾಟದ ಪರಿಕಲ್ಪನೆಯಲ್ಲಿ ಅದ್ಭುತವೆಂಬಂತೆ ಚಿತ್ರಿಸಿ ತಮ್ಮ ಪ್ರಗತಿಪರ ಧೋರಣೆಗಳನ್ನು ನಿರಂಜನರು ಇಲ್ಲಿಯೂ ದಾಖಲಿಸುತ್ತಾರೆ. ಒಂದು ಚಿಕ್ಕ ಭೂಭಾಗದ ಗುಲಾಮಿ ಜನವರ್ಗ, ತಮ್ಮನ್ನು ನಿರಂತರವಾಗಿ ಶೋಷಣೆಗೆ ಗುರಿಮಾಡುತ್ತಿದ್ದ ಭೂಮಾಲೀಕರು, ರಾಜಕೀಯ ಅಧಿಕಾರಸ್ಥರು ಹಾಗೂ ಪುರೋಹಿತಶಾಹಿಗಳೆದುರು ಸಂಘಟಿತ ಬಂಡಾಯ ಸಾರಿ ಸ್ವಯಮಾಡಳಿತ ಸ್ಥಾಪಿಸಿಕೊಂಡದ್ದು ಈ ಕಾದಂಬರಿಯ ಒಂದು ಹಂತದ ವಸ್ತು. ಸ್ವಯಮಾಡಳಿತ ಸ್ಥಾಪಿಸಿಕೊಂಡೂ, ಸಾಮಾನ್ಯ ಪ್ರಜೆಯಾಗಿಯೇ ಉಳಿದ ಗುಲಾಮಿ ಜನವರ್ಗದ ಮುಖಂಡ ಮೆನೆಪ್‌ಟಾ ಆ ಪ್ರಾಂತದ ಸರ್ವಾಂಗೀಣ ಪ್ರಗತಿ ಸಾಧಿಸುತ್ತಾನೆ. ಆದರೆ ಜಮೀನ್ದಾರಿ, ಅಧಿಕಾರಶಾಹಿ ಮತ್ತು ಪುರೋಹಿತಶಾಹಿ ಜನವರ್ಗ ಇದನ್ನು ಸಹಿಸದೇ ತಂತ್ರಗಾರಿಕೆ ಹೂಡಿ ಆತನನ್ನು ಆಮಂತ್ರಿಸಿ, ರಾಜದ್ರೋಹ, ಧರ್ಮದ್ರೋಹ ಮತ್ತು ಬಂಡಾಯದ ಆರೋಪ ಹೊರಿಸಿ (ಮೆನೆಪ್‌ಟಾನ) ಶಿರಚ್ಛೇದನ ಮಾಡಿಸುತ್ತಾರೆ. ಮತ್ತೆ ಹಿಂದಿನ ವ್ಯವಸ್ಥೆಯೇ ಸ್ಥಾಪಿತವಾಗುತ್ತದೆ. ಇದು ಇನ್ನೊಂದು ಹಂತದ ಕಥೆ. ಈ ನಡುವೆ ಮೆನೆಪ್‌ಟಾನ ಗರ್ಭಿಣಿ ಪತ್ನಿ ನೆಫಿಸ್, ಸೇನಾಪತಿ ಖೆಮ್‌ಹೊಟೆಪ್, ಪುರೋಹಿತ ಮೆನ್ನಯ್ಯ ಮೊದಲಾದ ಹತ್ತು ಜನರು ಹೇಗೊ ತಪ್ಪಿಸಿಕೊಂಡು ಪಾರಾಗಿ ಹೋಗಿ ಹೊಸ ಬಾಳನ್ನು ಹೂಡುವ ಕನಸು ಕಾಣುತ್ತಾರೆ. 'ಮೃತ್ಯುಂಜಯ' ಕಾದಂಬರಿಯ ವಸ್ತು ಇದು. "ನಮಗೆ - ಜನರಿಗೆ ಸಿಟ್ಟು ಬಂದಾಗ ಅದು ಮಹಾಪ್ರವಾಹವಾಗುತ್ತದೆ. ಅದರಲ್ಲಿ ನೀವೆಲ್ಲ ಕೊಚ್ಚಿ ಹೋಗ್ತೀರಿ. ಮಹಾಪೂರ ಇಳಿದಾಗ ಕಂಡುಬರೋ ಜಗತ್ತು ಹೊಚ್ಚ ಹೊಸದು. ಆ ನೂತನ ಸೃಷ್ಟಿ ನಿರಂತರವಾಗಿ ಸಾಗಲಿ" – ಎಂದು ಈ ಕಾದಂಬರಿಯ ನಾಯಕ ಮೆನೆಪ್‌ಟಾ ಹೇಳುವ ಮಾತು ನಿರಂಜನರ ಪ್ರಗತಿಪ್ರಜ್ಞೆಯ ಘನೀಕೃತ ರೂಪವೆಂದೇ ಹೇಳಬೇಕು. ಸ್ಥಾಪಿತ ವ್ಯವಸ್ಥೆಯ ನಿರಂತರ ಶೋಷಣೆ, ಅದರ ವಿರುದ್ಧ ಸಾಮಾನ್ಯ ಜನವರ್ಗ ನಡೆಸಿದ ಹೋರಾಟದ ವಸ್ತುವಿರುವ ಈ ಕಾದಂಬರಿ ಅಪ್ಪಟ ಪ್ರಗತಿಶೀಲ ಧೋರಣೆಗಳನ್ನೇ ಸಾರುತ್ತದೆ.

ಸಾಮಾಜಿಕ ಪ್ರಜ್ಞೆ, ಬಂಡಾಯ ಪ್ರವೃತ್ತಿಗಳನ್ನು ಅತ್ಯಂತ ಖಚಿತ ಅರ್ಥದಲ್ಲಿ ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದವರೇ ನಿರಂಜನರೆಂದು ಹೇಳಲಾಗುತ್ತದೆ. ಕಮ್ಯುನಿಜಂನಿಂದ ಒಂದು ಸೈದ್ಧಾಂತಿಕ ಬದ್ಧತೆಯನ್ನು ಪಡೆದ ನಿರಂಜನರು ಅಪ್ಪಟ ಪ್ರಗತಿಶೀಲರಾಗಿ ಬದುಕಿದರು, ಹಾಗೆಯೇ ಬರೆದರು ಕೂಡ. ಪಾರ್ಟಿಯ ಸಕ್ರಿಯ ಸದಸ್ಯತ್ವಕ್ಕೆ ಕಾರಣಾಂತರಗಳಿಂದ ಮುಂದೆ ರಾಜೀನಾಮೆ ಕೊಟ್ಟರೂ, ಕಮ್ಯುನಿಸ್ಟ್ ವಿಚಾರಧಾರೆಯನ್ನು ಹಾಗೂ ಪ್ರಗತಿಶೀಲ ಧೋರಣೆಯನ್ನು ಅವರು ಕೊನೆಯ ವರೆಗೂ ನಿರಂತರವಾಗಿ ಉಳಿಸಿಕೊಂಡೇ ಬಂದರು. ಪ್ರಗತಿಶೀಲ ಸಂಘಟನೆಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಎಂದೂ ಇಷ್ಟಪಡದೇ, ಅದರ ಧೋರಣೆಗಳಿಗೆ ಬದ್ಧರಾಗಿ ಬರೆದ ಇಬ್ಬರು ಮಹತ್ವದ ಕಾದಂಬರಿಕಾರರಲ್ಲಿ ನಿರಂಜನರಿಗೆ ಮೊದಲ ಸ್ಥಾನ ಸಲ್ಲುತ್ತದೆ. ಪ್ರಗತಿಶೀಲರೆಂದು ಹೇಳಿಕೊಂಡು ಕೂಗಾಡುತ್ತಿದ್ದ ಅ.ನ.ಕೃ ಅವರನ್ನು ನಿರಂಜನರು ಅದೊಂದು ಘೋಸಂತಾನವೆಂದು ಕರೆದು ವ್ಯಂಗ್ಯ ಮಾಡಿದ್ದಿದೆ. ಆಳವಾದ ಅಧ್ಯಯನ, ತರ್ಕಬದ್ಧ ವೈಚಾರಿಕತೆ, ಬರವಣಿಗೆಯಲ್ಲಿನ ತಾಳ್ಮೆ, ತಾವು ನಂಬಿದ್ದ ಸಿದ್ಧಾಂತಗಳಿಗೆ ನಿರಂತರವಾಗಿ ಬದ್ಧರಾಗಿದ್ದು, ಮೊದಲಿಂದ ಕೊನೆಯ ವರೆಗೂ ಪ್ರಗತಿಯನ್ನೇ ಬಯಸಿದ್ದು – ಇವೆಲ್ಲ ಕಾರಣಗಳಿಂದ ನಿರಂಜನರು

ಪ್ರಗತಿಶೀಲ ಘಟ್ಟದ ಅತ್ಯಂತ ಮಹತ್ವದ ಕಾದಂಬರಿಕಾರರೆಂದೇ ಗುರುತರಾಗುತ್ತಾರೆ. ಕನ್ನಡ ಕಾದಂಬರಿ ಸಾಹಿತ್ಯಕ್ಷೇತ್ರದಲ್ಲೂ ಅವರಿಗೆ ಉನ್ನತ ಸ್ಥಾನವಿದೆ.

**ಬಸವರಾಜ ಕಟ್ಟೀಮನಿ :**

ಸಿದ್ಧಾಂತಗಳಿಗೆ ಬದ್ಧರಾಗುವ ವಿಷಯದಲ್ಲಿ ನಿರಂಜನರ ಹಾಗೆ ಖಚಿತ ನಿಲುವು ಹೊಂದಿರದಿದ್ದರೂ, ಒಟ್ಟಾರೆ ಸ್ಥಾಪಿತ ವ್ಯವಸ್ಥೆಯ ವಿರುದ್ಧ ನಿರಂತರ ಕಿಡಿಕಾರುತ್ತಲೇ ಕಾದಂಬರಿಗಳನ್ನು ರಚಿಸಿದ ಬಸವರಾಜ ಕಟ್ಟೀಮನಿಯವರೂ ಪ್ರಗತಿಶೀಲ ಘಟ್ಟದ ಇನ್ನೊಬ್ಬ ಮಹತ್ವದ ಲೇಖಕರು. ಪ್ರಗತಿಶೀಲ ಚಳವಳಿಯ ಗಾಳಿಯಿಂದ ಒಂದಿಷ್ಟು ಪ್ರಭಾವಿತರಾದರೂ –ನಿರಂಜನರ ಹಾಗೆ –ಕಟ್ಟೀಮನಿಯವರೂ ಅ.ನ.ಕೃ ನೇತೃತ್ವದ ಸಂಘಟನೆಯ ಸದಸ್ಯರಾಗದೆ, ಅದರ ಹೊರಗಿದ್ದುಕೊಂಡೇ ಬರವಣಿಗೆ ಮಾಡಿದವರು. ನಿರಂಜನರ ಹಾಗೆ ಕಟ್ಟೀಮನಿಯವರೂ ಕಮ್ಯುನಿಜಂನಿಂದ ಪ್ರಭಾವಿತರಾದರೂ ಅದರ ಆಳಕ್ಕಿಳಿಯಲಿಲ್ಲ. ಎಡಪಂಥೀಯ ಧೋರಣೆ ಕಟ್ಟೀಮನಿಯವರನ್ನು ಆಕರ್ಷಿಸಿತು ನಿಜ, ಆದರೆ ಅದೇ ಅವರನ್ನು ಒಬ್ಬ ಕ್ರಾಂತಿಕಾರಿ ಲೇಖಕನನ್ನಾಗಿ ಮಾಡಲಿಲ್ಲ. ಬಡತನ, ಹಸಿವು, ಶೋಷಣೆ, ಅಲೆದಾಟದ ಅಲೆಗಳಿಗೆ ಬಾಲ್ಯದಿಂದಲೇ ಸಿಕ್ಕ ಕಟ್ಟೀಮನಿಯವರು ಅವುಗಳಿಗೆ ಕುಗ್ಗದೆ, ಪ್ರತಿಭಟನೆ ಮಾಡುತ್ತಲೇ ಬೆಳೆದರು. ಬದುಕು ಕೊಟ್ಟ ಕ್ರೂರ ಅನುಭವಗಳ ಹಿನ್ನೆಲೆಯಲ್ಲಿ, ಶೋಷಣೆಯೆದುರು ಸಿಡಿದು ನಿಲ್ಲುವ ಬಂಡಾಯ ಪ್ರವೃತ್ತಿ ಅವರಲ್ಲಿ ಸಣ್ಣ ವಯಸ್ಸಿನಲ್ಲೇ ಜಾಗೃತವಾಯ್ತು. ಅನ್ನಕ್ಕಾಗಿ ನಿರಂತರ ಅಲೆದಾಡಿದ ಅವರಿಗೆ ಎಲ್ಲೂ ಒಂದು ನಿಶ್ಚಿತ ನೆಲೆ ಸಿಗಲಿಲ್ಲ. ಬದಲಾಗಿ ಶೋಷಣೆಯ ವಿವಿಧ ಮುಖಗಳ ದರ್ಶನವೇ ಆಯ್ತು. ವೈಯಕ್ತಿಕ ನೋವುಗಳನ್ನು ಅನುಭವಿಸುತ್ತಲೇ ಕಟ್ಟೀಮನಿಯವರು ಸಮಾಜದ ಕಡೆ ದೃಷ್ಟಿ ಹಾಯಿಸಿದಾಗ ಆ ಸಮಾಜದ ಬಹುಪಾಲು ಜನವರ್ಗ ತನ್ನಂತೆಯೇ ಶೋಷಣೆಗೀಡಾಗುತ್ತಿದ್ದ ವಾಸ್ತವ ಸ್ಥಿತಿ ಅವರಿಗೆ ಗೋಚರವಾಯ್ತು. ನಮ್ಮ ಸಮಾಜವನ್ನು ಕಿತ್ತು ತಿನ್ನುತ್ತಿದ್ದ ಬಡತನ, ನಿರುದ್ಯೋಗ, ಜಾತಿಸಮಸ್ಯೆ, ವೇಶ್ಯಾಸಮಸ್ಯೆಗಳು ಒಂದೆಡೆಯಾದರೆ, ಮತ್ತೊಂದೆಡೆ ಉಳ್ಳವರ ಅಟ್ಟಹಾಸ, ಅಧಿಕಾರಸ್ಥರ ದರ್ಪ, ಧರ್ಮಾಂಧರ ಅಡ್ಡನಡೆ, ಮೇಲ್ವರ್ಗದವರ ಶೋಷಣೆ –ಇವು ಇಡೀ ಸಮಾಜದಲ್ಲಿ ಉಂಟುಮಾಡಿದ ತರ - ತಮಗಳು –ಈ ಎಲ್ಲವನ್ನೂ ತೆರೆದ ಕಣ್ಣಿನಿಂದ ಹಾಗೂ ಮುಕ್ತ ಮನಸ್ಸಿನಿಂದ ಗಮನಿಸಿದ ಕಟ್ಟೀಮನಿಯವರಲ್ಲಿ ಮೊದಲು ಜಾಗೃತವಾದದ್ದು ಬಂಡಾಯ ಪ್ರವೃತ್ತಿ. ಪರಕೀಯರ ದಾಸ್ಯ, ದೇಶೀಯ ರಾಜಕಾರಣಿಗಳ ಭ್ರಷ್ಟತೆ ಇವೆಲ್ಲವೂ ಅವರಲ್ಲಿಯ ಬರಹಗಾರನನ್ನು ಬಡಿದೆಬ್ಬಿಸಿದವು. ಈ ಎಲ್ಲ ವಿಕೃತಿಗಳನ್ನು ನಮ್ಮ ಸಾಮಾಜಿಕ ಸ್ತರದಲ್ಲಿಯೇ ಪರಿವೀಕ್ಷಿಸುತ್ತ ಬರೆಯತೊಡಗಿದ ಅವರು ಮುಖ್ಯವಾಗಿ ಕಾಣುವುದು ಒಬ್ಬ ಗಾಢ ಸಾಮಾಜಿಕ ಕಾಳಜಿಯ ಕಾದಂಬರಿಕಾರರಾಗಿ. ಇದೇ ಸಂದರ್ಭದಲ್ಲಿ ಹೊಸದಾಗಿ ಪ್ರಚಾರಕ್ಕೆ ಬಂದ ಪ್ರಗತಿಶೀಲ ಚಳವಳಿಯೂ ಅವರ ಮೇಲೆ ಪ್ರಭಾವ ಬೀರಿತು.

ಸಣ್ಣಕಥೆ, ಪತ್ರಿಕೋದ್ಯಮದ ಮೂಲಕ ಬರವಣಿಗೆಗೆ ಆರಂಭಿಸಿದ ಕಟ್ಟೀಮನಿಯವರು, ಕಾದಂಬರಿ ಕ್ಷೇತ್ರ ಪ್ರವೇಶಿಸಿದ್ದು 'ಸ್ವಾತಂತ್ರ್ಯದೆಡೆಗೆ' ಕಾದಂಬರಿಯ ಮೂಲಕ. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದಿದ್ದ ಆ ದಿನಗಳಲ್ಲಿ ಕಟ್ಟೀಮನಿಯವರು ಗಾಂಧೀಜೀಯ ವ್ಯಕ್ತಿತ್ವ ಹಾಗೂ ಸಂದೇಶಗಳಿಗೆ ಮಾರುಹೋಗಿದ್ದರು. ಭಾರತವು ಪರಕೀಯರಿಂದ ಸ್ವಾತಂತ್ರ್ಯ ಪಡೆಯುವ ಮೊದಲು ಆ ಸ್ವಾತಂತ್ರ್ಯವನ್ನು ಸಮರ್ಥವಾಗಿ ಸದುಪಯೋಗಪಡಿಸಿಕೊಳ್ಳುವ ರೀತಿಯಲ್ಲಿ ಜನತೆಯನ್ನು ಸಿದ್ಧಪಡಿಸಬೇಕೆಂದಿದ್ದ ಗಾಂಧೀಜಿಯ ಕರೆಯನ್ನೇ ಕಟ್ಟೀಮನಿಯವರು ಈ ಕಾದಂಬರಿಯಲ್ಲಿ

ಪ್ರಾಯೋಗಿಕ ರೀತಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ದೇಶದಲ್ಲಿ ತಾಂಡವವಾಡುತ್ತಿದ್ದ ಹಲವಾರು ಸಮಸ್ಯೆಗಳನ್ನು ಗಮನಿಸಿದ ಅವರು ಆ ಸಮಸ್ಯೆಗಳಿಗೆ ಕಮ್ಯುನಿಜಂನಲ್ಲಿ ಉತ್ತರವಿದೆಯೆಂದು ಮೊದಮೊದಲು ನಿರ್ಧರಿಸಿಬಿಟ್ಟದ್ದು ಈ ಕಾದಂಬರಿಯಲ್ಲಿ ಗೋಚರವಾಗುತ್ತದೆ. ಆದರೆ ಕೆಲದಿನಗಳಲ್ಲಿಯೇ ಕಟ್ಟೀಮನಿಯವರ ವಿಚಾರ ಬದಲಾಗುತ್ತದೆ. ಆಗ ಗಾಂಧೀಜಿಯವರ ವಿಚಾರಧಾರೆಯೇ ಲೇಸೆನಿಸಿ, ಆ ವಿಚಾರಧಾರೆಯ ಆಧಾರದ ಮೇಲೆಯೇ ಗ್ರಾಮಸುಧಾರಣೆಗೆ ತೊಡಗುತ್ತಾರೆ. ಸರ್ವಾಂಗೀಣ ಪ್ರಗತಿ ಸಾಧಿಸಿಕೊಂಡ ಗ್ರಾಮೀಣ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸಿದ್ಧರಾಗುವವರೊಂದಿಗೆ ಕಾದಂಬರಿ ಅಂತ್ಯವಾಗುತ್ತದೆ. ಅತ್ಯುತ್ಸಾಹದಿಂದ ರಚಿಸಿದ ಈ ಕಾದಂಬರಿಯಲ್ಲಿ ಹಲವಾರು ದೋಷಗಳಿದ್ದರೂ ಸ್ವಾತಂತ್ರ್ಯ ಸಂಪಾದನೆಯ ಅದಮ್ಯ ಬಯಕೆ ಪ್ರಧಾನವಾಗುವ ಕಾರಣ ಇಲ್ಲಿ ಪ್ರಗತಿಶೀಲ ಧೋರಣೆ ಎದ್ದುಕಾಣುತ್ತದೆ. ಅವರ 'ಮಾಡಿ ಮಡಿದವರು' ಕಾದಂಬರಿ ಇದರ ಮುಂದಿನ ಭಾಗ. ವಸಾಹತುಶಾಹಿ ವ್ಯವಸ್ಥೆಯೆದುರು ಸಾಮಾನ್ಯ ಜನರೇ ಸಿಡಿದೆದ್ದು ಹೋರಾಟ ಮಾಡಿದ ಕಥೆ ಈ ಕಾದಂಬರಿಯದು. ಗಾಂಧೀಜಿಯ 'ಮಾಡು ಇಲ್ಲವೆ ಮಡಿ' ಎಂಬ ಕರೆಗೆ ಓಗೊಟ್ಟ ಸಾಮಾನ್ಯ ಜನತೆ, ಕಾಲೇಜ್ ವಿದ್ಯಾರ್ಥಿಗಳು, ರೈತರು –ಎಲ್ಲ ಸಂಘಟಿತರಾಗಿ ನಡೆಸಿದ ಹೋರಾಟಗಳು ಈ ಕಾದಂಬರಿಯಲ್ಲಿ ಜೀವಂತವಾಗಿ ಚಿತ್ರಿತವಾಗಿವೆ. ಕಟ್ಟೀಮನಿಯವರನ್ನು ನಾಡಿಗೆಲ್ಲ ಪರಿಚಯಿಸಿದ ಕಾದಂಬರಿಯಿದು.

ಪ್ರಗತಿಶೀಲ ಚಳವಳಿ ಯಾವ ಹಿನ್ನೆಲೆ ಮತ್ತು ಆಶಯಗಳೊಂದಿಗೆ ಆರಂಭವಾಗಿತ್ತೋ ಅದೇ ಬಗೆಯ ಹಿನ್ನೆಲೆ ಮತ್ತು ಆಶಯಗಳನ್ನು ಮೇಳವಿಸಿಕೊಂಡು ರೂಪುದಳೆದ 'ಜ್ವಾಲಾಮುಖಿಯ ಮೇಲೆ' ಕಟ್ಟೀಮನಿಯವರ ಒಂದು ಗಮನಾರ್ಹ ಪ್ರಗತಿಶೀಲ ಕಾದಂಬರಿ. ಕಾರ್ಮಿಕರ ಸಂಘಟಿತ ಹೋರಾಟದ ಕಥೆಯನ್ನು ಹೊಂದಿರುವ ಈ ಕಾದಂಬರಿ, ಕಟ್ಟೀಮನಿಯವರ ಅನುಭವಗಳ ಪ್ರತಿರೂಪವಾಗಿ ಮೂಡಿಬಂದಿದೆ. ಬಂಡವಾಳಶಾಹಿಗಳ ಅಟ್ಟಹಾಸದ ಬದುಕು, ರಾಜಕೀಯ ಶಕ್ತಿಯೊಂದಿಗೆ ಅವರಿಟ್ಟುಕೊಳ್ಳುವ ಅನೈತಿಕ ಸಂಬಂಧ, ಇವೆಲ್ಲ ಸೇರಿ ಕಾರ್ಮಿಕರನ್ನು ಕ್ರೂರವಾಗಿ ಶೋಷಿಸುವ ರೀತಿ ಇವೆಲ್ಲವನ್ನು ವಾಸ್ತವ ನೆಲೆಯಲ್ಲಿ ಕಟ್ಟಿಕೊಡುವ ಈ ಕಾದಂಬರಿ, ಸಂಘಟಿತ ಕಾರ್ಮಿಕ ಶಕ್ತಿಯ ಹೋರಾಟ ಜ್ವಾಲಾಮುಖಿಯಾಗಿ ಸಿಡಿದು ಬಂಡವಾಳಶಾಹಿಗಳನ್ನು ದಮನ ಮಾಡಬಲ್ಲದೆಂಬ ತಾತ್ವಿಕ ವಿಚಾರವನ್ನು ತಾರ್ಕಿಕವಾಗಿ ಬಿಡಿಸುತ್ತದೆ. ಆರ್ಥಿಕ ವಿಷಮತೆ ನಾಶವಾದ ಹೊರತು ದೇಶದ ಜನತೆಗೆ ನಿಜವಾದ ಸ್ವಾತಂತ್ರ್ಯ ದೊರೆಯಲಾರದೆಂದು ಈ ಕಾದಂಬರಿಯಲ್ಲಿ ಸಾರುವ ಕಟ್ಟೀಮನಿಯವರು ಆ ವಿಚಾರವನ್ನೇ ಇಲ್ಲಿ ತಾತ್ವಿಕವಾಗಿ ಪ್ರತಿಪಾದಿಸುತ್ತಾರೆ. ವರ್ಗಸಂಘರ್ಷದ ನೈಜ ಚಿತ್ರಣವುಳ್ಳ 'ಜ್ವಾಲಾಮುಖಿಯ ಮೇಲೆ' ಕಾರ್ಮಿಕ ಶಕ್ತಿಯ ಸಂಘಟಿತ ಹೋರಾಟಕ್ಕೆ ಖಂಡಿತ ಜಯವಿದೆಯೆಂಬುದನ್ನು ಸಾರುವ ಒಂದು ಪ್ರಗತಿಶೀಲ ಕಾದಂಬರಿ.

ಕಟ್ಟೀಮನಿಯವರು ರಚಿಸಿದ ಕಾದಂಬರಿಗಳ ಸಂಖ್ಯೆ ೪೦. ಇವುಗಳಲ್ಲಿ ಕೆಲವು ಅಗ್ರಶ್ರೇಣಿಯ ಕಾದಂಬರಿಗಳಿರುವ ಹಾಗೆಯೇ ಮತ್ತೆ ಕೆಲವು ಸಾಮಾನ್ಯ ದರ್ಜೆಯ ಕಾದಂಬರಿಗಳೂ ಇವೆ. ಸಮಾಜದಲ್ಲಿ ಕಾಣುವ ಎಲ್ಲ ಸಮಸ್ಯೆಗಳೆದುರೂ ಹೋರಾಡುವ ಉತ್ಸಾಹ ಕಟ್ಟೀಮನಿಯವರಿಗಿದ್ದ ಕಾರಣ ಅವರು ತಮ್ಮ ಪ್ರತಿಯೊಂದು ಕಾದಂಬರಿಯಲ್ಲೂ ಬೇರೆ ಬೇರೆ ಸಮಸ್ಯೆಗಳನ್ನೇ ವಸ್ತುವನ್ನಾಗಿಸಿಕೊಳ್ಳುತ್ತಾರೆ. ಸಮಾಜದ ಪ್ರಗತಿಗೆ ಆತಂಕವಾಗುವ ಯಾವುದೇ ವ್ಯಕ್ತಿಗಳಿರಲಿ, ಸಂಘಟನೆಗಳಿರಲಿ, ಸಮಸ್ಯೆಗಳಿರಲಿ –ಅವನ್ನೆಲ್ಲ ಕಟ್ಟೀಮನಿಯವರು ತಮ್ಮ ನೇರ ಮತ್ತು ಹರಿತ ಶೈಲಿಯ ಮೂಲಕ ಬಯಲಿಗೆಳೆದರು. ಅವರ 'ಮೋಹದ ಬಲೆಯಲ್ಲಿ' ಮತ್ತು 'ಜರತಾರಿ ಜಗದ್ಗುರು' ಕಾದಂಬರಿಗಳು ಕಾವಿ ತೊಟ್ಟ ಕೆಲವರು, ಅದರ ಮರೆಯೊಳಗೆ ನಡೆಸುವ ಕಾಮದಾಟವನ್ನು ಬಯಲಿಗೆಳೆದು ತೋರಿಸಿದವು. ಅವರ ಲೇಖನಿಗೆ ಸಿಕ್ಕ ಸ್ವಾಮಿಗಳು ಇಲ್ಲಿ ಸಂಪೂರ್ಣ

ಪರವಾಗಿದ್ದಾರೆ. ಜಾತಿಪ್ರಜ್ಞೆ ನಮ್ಮ ಸಮಾಜದಲ್ಲಿ ನಿರ್ಮಿಸಿರುವ ಆತಂಕಕಾರಿ ಬೆಳವಣಿಗೆಯನ್ನು ಅವರ 'ಜಮೀನ್ದಾರ ಮತ್ತು ಗೇಣಿದಾರ', 'ನೀ ನನ್ನ ಮುಟ್ಟಬೇಡ' ಹಾಗೂ 'ಹರಿಜನಾಯಣ' ಕಾದಂಬರಿಗಳು ಚಿತ್ರೀಕರಿಸುತ್ತವೆ. ವೇಶ್ಯಾ ಸಮಸ್ಯೆಯನ್ನು ಕುರಿತ 'ಖಾನಾವಳಿ ನೀಲಾ', 'ಪಾತರಗಿತ್ತಿ', 'ಬೀದಿಯಲ್ಲಿ ಬಿದ್ದವಳು' – ಇತ್ಯಾದಿ ಕಾದಂಬರಿಗಳು ಅ.ನ.ಕೃ ಅವರ ಜಾಡು ಹಿಡಿಯುವೆ. ಆ ಸಮಸ್ಯೆಯ ಮೂಲ ಬೇರುಗಳನ್ನು ಆರ್ಥಿಕ ವಿಷಮತೆಯಲ್ಲಿ ತೋರಿಸಿಕೊಡುತ್ತವೆ. ವೇಶ್ಯಾವೃತ್ತಿಗೆ ಇಳಿದ ಮಹಿಳೆಯರ ಅನಿವಾರ್ಯ ಸ್ಥಿತಿಯನ್ನು ಕಟ್ಟೀಮನಿಯವರು ಮಾನವೀಯ ಅನುಕಂಪದ ಹಿನ್ನೆಲೆಯಲ್ಲಿ ಚಿತ್ರಿಸಿರುವುದು ಅವರ ಸಮಾಜವಾದಿ ಪ್ರಗತಿಶೀಲ ಧೋರಣೆಗೆ ಸಾಕ್ಷಿ. ನಾಗರಿಕರೆನಿಸಿಕೊಂಡವರ ದೃಷ್ಟಿಯಲ್ಲಿ ಅಪರಾಧಿವೃತ್ತಿಯ ಜನರೆಂದು ನಿರ್ಲಕ್ಷ್ಯತನಕ್ಕೆ ಗುರಿಯಾದ ಜನವರ್ಗವೊಂದರ ಜರ್ಜರಿತ ಬದುಕನ್ನು ಅನುಕಂಪದ ದೃಷ್ಟಿಯಿಂದ ಚಿತ್ರಿಸುವ 'ಬೆಳಗಿನ ಗಾಳಿ' ಕಾದಂಬರಿ ಆ ಜನವರ್ಗದ ಬದುಕಿನಲ್ಲಿ ಬೆಳಕು ಬೀರುವತ್ತ ತುಡಿಯುತ್ತದೆ. 'ಗೋವಾದೇವಿ', 'ಜಲತರಂಗ', 'ಕತ್ತರಿ ಪ್ರಯೋಗ', 'ದ್ರೋಹಿ', 'ಪ್ರಪಾತ', 'ಗ್ರಾಮಸೇವಿಕಾ' – ಇತ್ಯಾದಿ ಹಲವಾರು ಕಾದಂಬರಿಗಳಲ್ಲಿ ಕಟ್ಟೀಮನಿಯವರು ನಮ್ಮ ಸಾಮಾಜಿಕ, ರಾಜಕೀಯ ರಂಗದ ವಿಭಿನ್ನ ವಿಕೃತ ಮುಖಗಳನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಅವರ ಯಾವುದೇ ಕಾದಂಬರಿಯಿರಲಿ ಅಲ್ಲಿ ಎದ್ದುಕಾಣುವುದು ಒಂದು ಶೋಷಕ ವರ್ಗ ಮತ್ತೊಂದು ಶೋಷಿತ ವರ್ಗ. ಇಲ್ಲಿ ಕಟ್ಟೀಮನಿಯವರು ಶೋಷಕ ವರ್ಗದೆಡೆ ಕಿಡಿಕಾರುತ್ತಾರೆ. ಅಷ್ಟೇ ಶೋಷಿತ ವರ್ಗದೆಡೆ ಪ್ರೀತಿ - ಅನುಕಂಪದ ಧಾರೆಯನ್ನೇ ಹರಿಸುತ್ತಾರೆ. ಸಮಾನತೆ ಬಯಸುವ ಸಮಾಜವಾದಿ ಪ್ರಗತಿಶೀಲನೊಬ್ಬನ ಪ್ರಗತಿಯ ಕಾಳಜಿ ಇಲ್ಲೆಲ್ಲ ಗಾಢವಾಗಿರುವುದು ವಾಸ್ತವ.

ಕಟ್ಟೀಮನಿಯವರು ರಚಿಸಿದ 'ನರಗುಂದದ ಬಂಡಾಯ', 'ಸಂಗೊಳ್ಳಿ ರಾಯನಾಯಕ', 'ಪೌರುಷ ಪರೀಕ್ಷೆ' – ಎಂಬ ಐತಿಹಾಸಿಕ ಕಾದಂಬರಿಗಳು ಚಾರಿತ್ರಿಕ ಕಥೆಗಳನ್ನೊಳಗೊಂಡೂ ಮುಖ್ಯವಾಗಿ ಸಾಮಾಜಿಕ ದೃಷ್ಟಿಕೋನವನ್ನು ಬಿಂಬಿಸುತ್ತವೆ. ಐತಿಹಾಸಿಕ ಕಾದಂಬರಿಗಳಲ್ಲಿ ಕಾಲ್ಪನಿಕವಾದ ಜನಸಾಮಾನ್ಯರ ಪಾತ್ರಗಳನ್ನು ತಂದು, ಅವುಗಳಿಗೆ ಅಗ್ರಪಂಕ್ತಿಯೊದಗಿಸುವ ಕಟ್ಟೀಮನಿಯವರ ರೀತಿ ವಿನೂತನವಾಗಿರುವ ಹಾಗೆಯೇ ಅರ್ಥಪೂರ್ಣವಾಗಿದೆ. ಅವರ ರಾಜಕೀಯ ಕಾದಂಬರಿಗಳು ರಾಜಕೀಯರಂಗದ ಕೊಳಕು, ಭ್ರಷ್ಟತೆ ಹಾಗೂ ಹಾವರವನ್ನು ಬಯಲಿಗೆಳೆಯುತ್ತವೆ. ಆದರೆ ಇವು ಸೈದ್ಧಾಂತಿಕವಾದ ರಾಜಕೀಯವನ್ನು ಕುರಿತು ಮಾತಾಡುವುದಿಲ್ಲ. ಇದು ಇಲ್ಲಿ ದೊಡ್ಡ ಕೊರತೆ. ಕಟ್ಟೀಮನಿಯವರ 'ಗಿರಿಯ ನವಿಲು' ಅಕ್ಕಮಹಾದೇವಿಯನ್ನು ಮನುಷ್ಯನ ಸಹಜವಾದ ಆಶೋತ್ತರಗಳ ಹಿನ್ನೆಲೆಯಲ್ಲಿ ಪರಿವೀಕ್ಷಿಸುವ ಐತಿಹಾಸಿಕ ಛಾಯೆಯ ವೈಚಾರಿಕ ಕಾದಂಬರಿ.

ಕೆಟ್ಟದ್ದು, ಕೆಟ್ಟವರು, ಶೋಷಕರು, ಶೋಷಣೆ, ಬಂಡವಾಳಶಾಹಿ, ಭ್ರಷ್ಟತೆ, ಅನೈತಿಕತೆ ಹಾಗೂ ಒಟ್ಟಾರೆ ಸ್ಥಗಿತ ವ್ಯವಸ್ಥೆಯೆಂದರೆ ಒಮ್ಮೆಲೇ ಸಿಡಿದೇಳುವ ಕಟ್ಟೀಮನಿಯವರು ಆ ಸಿಟ್ಟನ್ನು ಅದು ಇದ್ದಂತೆಯೇ ಹೊರಹಾಕಿದ್ದು ಅವರ ಎಲ್ಲ ಕಾದಂಬರಿಗಳಲ್ಲಿ ಸ್ಪಷ್ಟ ಗೋಚರವಾಗುತ್ತದೆ. ಆ ಸಿಟ್ಟು ಸಕಾರಣವಾದದ್ದೇನೋ ನಿಜ, ಆದರೆ ಸಾಹಿತ್ಯಕವಾಗಿ ಅದನ್ನು ಹೊರಹಾಕುವಾಗ ಬೇಕಿದ್ದ ತಾಳ್ಮೆ, ಸಂಯಮ ಅಗತ್ಯವಾಗುತ್ತದೆ. ಈ ಅಂಶದಲ್ಲಿ ಕಟ್ಟೀಮನಿಯವರು ಸೋತದ್ದು ಹೆಚ್ಚು. ಆದರೆ ಹಾಗೆ ಮಾಡುವುದರ ಹಿಂದೆ ಅವರಿಗಿರುವ ಪ್ರಗತಿಯ ಕಳಕಳಿ. ನೊಂದವರ ಬಗೆಗಿನ ಅನುಕಂಪ. ಸಾಮಾಜಿಕ ಪರಿವರ್ತನೆಯ ಅಪೇಕ್ಷೆ ಮಾತ್ರ ಅನನ್ಯವಾದವುಗಳು.

ಬರವಣಿಗೆಯಿಂದಲೇ ಬದುಕು ನಿರ್ವಹಿಸುವ ಅನಿವಾರ್ಯ ಸಂದರ್ಭದಲ್ಲಿ ಕಟ್ಟೀಮನಿಯವರೂ ಕೆಲವೊಂದು ಮೂರನೆಯ ದರ್ಜೆಯ ಕಾದಂಬರಿಗಳನ್ನು ರಚಿಸಿದ್ದುಂಟು. ಅಂಥ ಕೃತಿಗಳಲ್ಲೂ ಅವರು ಪ್ರಯತ್ನಪಟ್ಟು ಸಾಮಾಜಿಕ ಪ್ರಗತಿಯ ಕಳಕಳಿಯನ್ನು ಬಿಂಬಿಸಹೊರಟು ಪೇಚಾಡಿದ್ದುಂಟು. 'ಜಲತರಂಗ', 'ಪಾತರಗಿತ್ತಿ', 'ಗೆಳೆಯನ ಮಡದಿ', 'ಪ್ರಪಾತ'ದಂಥ ಕಾದಂಬರಿಗಳನ್ನು ಅವರು ಬರೆಯದಿದ್ದರೂ ನಡೆಯುತ್ತಿತ್ತೆನಿಸುತ್ತದೆ.

ತಮ್ಮ ಕೆಲವೊಂದು ಕಾದಂಬರಿಗಳ ವಸ್ತುವಿನ ಆಯ್ಕೆ ಮತ್ತು ಅಭಿವ್ಯಕ್ತಿಯಲ್ಲಿ ಕಟ್ಟೀಮನಿಯವರು ತಾಳ್ಮೆ ಮತ್ತು ಸಂಯಮ ತೋರುವ ಅಗತ್ಯವಿತ್ತು. ಆದರೆ ಅದರ ಕಡೆ ಅವರು ಗಮನ ಕೊಡಲಿಲ್ಲ. ಹೀಗಿದ್ದರೂ, ತಮ್ಮ ಸ್ವಾನುಭವದ ಮೂಲಕ ಜಾಗೃತಗೊಳಿಸಿಕೊಂಡ ಸಾಮಾಜಿಕ ಪ್ರಜ್ಞೆಯನ್ನು ಹೆಚ್ಚಿನ ಸಂಖ್ಯೆಯ ಕಾದಂಬರಿಗಳ ರಚನೆಯಲ್ಲಿ ಜಾಗೃತವಾಗಿ ಇಟ್ಟುಕೊಂಡದ್ದು ಹಾಗೂ ಅದನ್ನು ಪ್ರಗತಿಶೀಲ ನೆಲೆಯಲ್ಲಿ ಬಿಂಬಿಸಿದ್ದು ತುಂಬ ಮಹತ್ವದ ಅಂಶ. ತಮ್ಮ ಬದುಕು ಮತ್ತು ಬರಹ – ಎರಡರಲ್ಲೂ ತಾವು ನಂಬಿಕೊಂಡು ಬಂದಿದ್ದ ಸಿದ್ಧಾಂತಗಳಿಗೆ ಬದ್ಧರಾಗಿದ್ದು ಮತ್ತು ಅವುಗಳೆರಡರಲ್ಲೂ ಸಮನ್ವಯ ಸಾಧಿಸಿದ್ದು ಇನ್ನೂ ಹೆಚ್ಚಿನ ಅಂಶ. ಇಷ್ಟಾಗಿಯೂ ಒಪ್ಪಿಕೊಳ್ಳಲೇಬೇಕಾದ ಸತ್ಯವೆಂದರೆ, ಕಟ್ಟೀಮನಿಯವರು ತಮ್ಮ ಕಾದಂಬರಿಗಳ ರಚನೆಯಲ್ಲಿ, ನಿರಂಜನರು ಸಾಧಿಸಿದ ಗಟ್ಟಿತನ, ತೋರಿದ ವೈಚಾರಿಕತೆ ಮತ್ತು ಮೆರೆದ ಗಾಂಭೀರ್ಯಕ್ಕೆ ಸಮನಾಗುವುದಿಲ್ಲ ಎಂಬುದು.

ತ.ರಾ.ಸು, ಅರ್ಚಿಕ ವೆಂಕಟೇಶ, ಕುಮಾರ ವೆಂಕಣ್ಣ, ಕೋ. ಚೆನ್ನಬಸಪ್ಪ, ಪಾಟೀಲ ಪುಟ್ಟಪ್ಪ ಮುಂತಾದವರೆಲ್ಲ ಪ್ರಗತಿಶೀಲ ಘಟ್ಟದಲ್ಲಿ, ಆ ಧೋರಣೆಯಿಂದಲೇ ಬರೆದ ಇನ್ನಿತರ ಕಾದಂಬರಿಕಾರರು. ಇವರು ರಚಿಸಿದ ಕೃತಿಗಳಲ್ಲಿ ಮುಖ್ಯವಾಗಿ ಸಾಮಾಜಿಕ ಪ್ರಗತಿಯ ಕಳಕಳಿ ಎದ್ದು ಕಾಣುತ್ತದೆ. ಪ್ರಗತಿಶೀಲ ಸಾಹಿತ್ಯ ಘಟ್ಟಕ್ಕೆ ಈ ಎಲ್ಲ ಲೇಖಕರು ತಮ್ಮದೇ ಆದ ಕೊಡುಗೆ ಕೊಟ್ಟಿದ್ದಾರೆ.

ಬದುಕು ಕಲಿಸಿದ ಪಾಠಗಳಿಂದ ಗಟ್ಟಿಗೊಂಡ ನಿರಂಜನ ಮತ್ತು ಕಟ್ಟೀಮನಿಯವರು ಮೊದಲಿಂದ ಕೊನೆಯ ವರೆಗೂ ತಾವು ನಂಬಿದ್ದ ಹಾಗೂ ಕಂಡುಕೊಂಡಿದ್ದ ಧೋರಣೆಗಳನ್ನು ಜಾಗೃತವಾಗಿಟ್ಟುಕೊಂಡೇ ಕಾದಂಬರಿಗಳನ್ನು ರಚಿಸಿದರು. ಈ ಅಂಶದಲ್ಲಿ ಅ.ನ.ಕೃ ಇವರಿಬ್ಬರಿಗಿಂತ ಭಿನ್ನರಾಗಿರುವಂತೆ ಕಾಣುತ್ತಾರೆ. 'ಸಾಮ್ಯವಾದಿ' ಪ್ರಗತಿಶೀಲ ಲೇಖಕರಾದ ನಿರಂಜನರಾಗಲಿ, 'ಸಮಾಜವಾದಿ' ಪ್ರಗತಿಶೀಲ ಲೇಖಕರಾದ ಕಟ್ಟೀಮನಿಯವರೇ ಆಗಲಿ – ಒಟ್ಟಾರೆ ಬಯಸಿದ್ದು ಸರ್ವರ ಪ್ರಗತಿಯನ್ನು. ಅದರಲ್ಲೂ ಮುಖ್ಯವಾಗಿ ಶೋಷಿತರ ಪ್ರಗತಿಯನ್ನು. ಈ ಹಿನ್ನೆಲೆಯಲ್ಲಿ ನಿರಂಜನ ಮತ್ತು ಬಸವರಾಜ ಕಟ್ಟೀಮನಿಯವರು ಕನ್ನಡ ಪ್ರಗತಿಶೀಲ ಸಾಹಿತ್ಯ ಘಟ್ಟದ ಅಗ್ರಗಣ್ಯ ಲೇಖಕರೆಂದು ಪರಿಗಣಿತರಾಗುತ್ತಾರೆ. ಇವರಿಬ್ಬರು ಬರೆದವುಗಳೆಲ್ಲ ಉನ್ನತ ಮಟ್ಟದ ಕಾದಂಬರಿಗಳೆಂದು ಸಾರಾಸಗಟಾಗಿ ಹೇಳಲಾಗದಿದ್ದರೂ, ಈ ಘಟ್ಟವನ್ನು ತಾತ್ವಿಕವಾಗಿ, ಸೈದ್ಧಾಂತಿಕವಾಗಿ ಪ್ರತಿನಿಧಿಸುವ ಕೆಲವಾದರೂ ಮಹತ್ವದ ಕೃತಿಗಳನ್ನು ಅವರು ಕೊಟ್ಟಿರುವುದು ವಾಸ್ತವ. ನಿರಂಜನರ 'ವಿಮೋಚನೆ', 'ಚಿರಸ್ಮರಣೆ' ಮತ್ತು 'ಮೃತ್ಯುಂಜಯ', ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ', 'ಸ್ವಾತಂತ್ರ್ಯದೆಡೆಗೆ', 'ಮಾಡಿಮಡಿದವರು', 'ಖಾನಾವಳಿಯ ನೀಲಾ', 'ಗಿರಿಯ ನವಿಲು' – ಈ ಕೆಲವು ಕಾದಂಬರಿಗಳು ಪ್ರಗತಿಶೀಲ ಸಾಹಿತ್ಯಘಟ್ಟದ ನಿರ್ಮಿತಿಗಳೆಂಬುದು ನಿರ್ವಿವಾದ.

ಡಾ. ಬಸವರಾಜ ಸಾದರ, ಸಹಾಯಕ ಕೇಂದ್ರ ನಿರ್ದೇಶಕ, ಆಕಾಶವಾಣಿ, ಧಾರವಾಡ - ೫೮೦ ೦೦೩
✆ : ೦೮೩೬ - ೨೪೪ ೭೦೨೪

## ಕಂನಾಡಿಗಾ ನಾರಾಯಣ

### ವ್ಯಾಸ

ದಟ್ಟವಾದ ಕಾಡಿನಲ್ಲೊಂದು ಆಶ್ರಮ ಕಟ್ಟಿಕೊಂಡು ಸುಂದರವಾದ ಹೂದೋಟಗಳನ್ನು ಬೆಳೆಸಿಕೊಂಡು ಅಗತ್ಯವಾದಾಗಲೆಲ್ಲಾ ಏಕಾಂತತೆಯನ್ನು ಅನುಭವಿಸುತ್ತಾ, ಸಾಗಿಷ್ಟವಾದ್ದನ್ನೆಲ್ಲಾ ಚಿಂತಿಸುತ್ತಾ ಕಾಲ ಕಳೆಯುವುದೆಂದರೆ ನನಗೆ ಬಲು ಖುಶಿ. ಈ ಬೆಟ್ಟಗುಡ್ಡಗಳು, ಹಸಿರು ಕಾನನಗಳು, ನಡುವೆ ಝುಳುಝುಳನೆ ಹರಿಯುವ ಝರಿಗಳು, ಪಶು ಪಕ್ಷಿಗಳು ಕಾಡುಮೃಗಗಳು ಎಲ್ಲಾ ಮನುಷ್ಯಸಂಬಂಧಗಳನ್ನು ಮೀರಿ ನಿಂತವುಗಳು. ಆ ಕಪಟ ರಾಜಕಾರಣಗಳ ಶೋಷಣೆಗೆ ಬಲಿಯಾಗಿ ಬದುಕುತ್ತಿರುವ ಆ ಪ್ರಜೆಗಳ, ಅವರವರ ಮೋಸ, ವಂಚನೆ, ಪರಸ್ಪರ ದೋಷಾರೋಪಣೆಗಳ ಆ ಕುಹಕ ನಗರವಾಸ ಅಸಹ್ಯಕರ. ಏನೆಲ್ಲಾ ಪ್ರಯತ್ನಿಸಿದರೂ ಇಂತಹ ಒಂದು ಏಕಾಗ್ರತೆ ಅಲ್ಲಿ ಸಿಗಲು ಸಾಧ್ಯವೇ ಇಲ್ಲ. ಅಂತಹದರಲ್ಲಿ ನನ್ನ ತಾಯಿ ಸತ್ಯವತಿ ಯಾಕೆ ಈ ಅರಸೊತ್ತಿಗೆಗೆ ಆಸೆಪಟ್ಟಳೋ ತಿಳಿಯುತ್ತಿಲ್ಲ. ನಾನಿನ್ನೂ ಮೊಲೆಯುಣ್ಣುವ ಕೂಸಲ್ಲದಿದ್ದರೂ ಸ್ವಲ್ಪ ಮಟ್ಟಿನ ತಿಳಿವಳಿಕೆ ಬರುತ್ತಿದ್ದಂತಹ ವಯಸ್ಸಿನಲ್ಲಿಯೇ ನನ್ನನ್ನು ತೊರೆದು ಶಂತನು ರಾಜನನ್ನು ಹಿಂಬಾಲಿಸಿ ನಡೆದುಬಿಟ್ಟಳು. ನಂತರ ಯಮುನಾ ನದಿಯಲ್ಲಿ ಮೀನನ್ನು ಹಿಡಿಯುವ ಕಾಯಕದವನಾಗಿದ್ದ ನಮ್ಮ ಅಜ್ಜ ದಾಶ ನನ್ನನ್ನು ಸಾಕಿದ. ಈ ಸಂದರ್ಭದಲ್ಲಿಯೇ ಮಂಜಿಗಿಂತಲೂ ತಣ್ಣಗಿನ ನೀರಿಗೆ ದಡಕ್ಕನೆ ಧುಮುಕಿ ಈಜಾಡುವುದನ್ನು ಕಲಿತದ್ದು.

ಅವತ್ತು ರಾತ್ರಿ ಬಹಳ ಹೊತ್ತಿನ ವರೆಗೆ ನಿದ್ರೆಯ ಸುಳಿವೇ ಇರಲಿಲ್ಲ. ಒಂದು ರೀತಿಯ ಧಾವಂತ ನನ್ನನ್ನು ಕಾಡುತ್ತಿತ್ತು. ಹೊರಗೆ ಧಾರಾಕಾರವಾಗಿ ಮಳೆ ಸುರಿಯುತ್ತಲೇ ಇತ್ತು. ಸಿಡಿಲಿನ ಆರ್ಭಟ ಮುಂಗಾರಿನಂತಿರದಿದ್ದರೂ ಮಿಂಚಿನ ಬೆಳಕು ಮಾತ್ರ ಆಶ್ರಮದ ಬಾಗಿಲ ಸಂದಿಯಿಂದ ತೂರಿಬರುತ್ತಲೇ ಇತ್ತು. ಮುಗಿಲೂ ಯಾವುದೋ ಸಂಗೀತದ ಅಪಸ್ವರ ಆಡುತ್ತಿರುವಂತೆ ಗುಡುಗುತ್ತಲೇ ಇತ್ತು. ಇಂತಹ ಸಂದರ್ಭದಲ್ಲೇ ನಿಸರ್ಗ ನನ್ನನ್ನು ತನ್ನ ಮಡಿಲಿನಲ್ಲಿ ಮಲಗಿಸಿಕೊಳ್ಳುವುದು; ನಾನು ಅವಳ ತೊಡೆಯ ಮೇಲೆ ತಲೆಯಿಟ್ಟು ಮಲಗಿ ಕನಸು ಕಾಣುವುದು. ಕಂಡ ಕನಸನ್ನು ಅಕ್ಷರರೂಪದಲ್ಲಿ, ವಾಚನರೂಪದಲ್ಲಿ ಸಾಹಿತ್ಯೀಕರಣಗೊಳಿಸುವುದು. ಅವತ್ತೂ ಯಾವುದೋ ವಸ್ತು ನನ್ನನ್ನು ತನ್ನಲ್ಲಿ ಅಂತರ್ಧಾನನ್ನಾಗಿಸಿಕೊಂಡಿತ್ತು.

ಅಂತಹ ವೇಳೆಯಲ್ಲಿ ಯಾರೋ ನನ್ನನ್ನು ಹುಡುಕಿಕೊಂಡು ಬಂದಿದ್ದರು. ದುರ್ಗಮವಾದ ಕಾಡಿನಲ್ಲಿ ರಥವನ್ನು ತೆಗೆದುಕೊಂಡು ಬಂದು, ಅದು ಅತಿಯಾದ ಮಳೆಯಿಂದ ಉಂಟಾದ ಕೆಸರಿನಲ್ಲಿ ಸಿಕ್ಕಿಹಾಕಿಕೊಂಡು ಅವರು ಪಡಬಾರದ ಪಾಡು ಪಟ್ಟುಕೊಂಡು ಬಂದಿದ್ದರು. ಅವರ ವಸ್ತ್ರಗಳೆಲ್ಲಾ ಮಳೆಯ ನೀರಿನಲ್ಲಿ ನೆನೆದು ತೊಪ್ಪೆಯಾಗಿದ್ದವು. ಅವರೆಲ್ಲರೂ ಗಡಗಡನೇ ನಡುಗುತ್ತಿದ್ದರು. ಕಾಲ ಮಧ್ಯರಾತ್ರಿಯನ್ನು ದಾಟಿ ಹೋಗಿತ್ತು. ಅವರ ಊಟ ಉಪಚಾರವನ್ನು ನೆರವೇರಿಸುವ ಸ್ಥಿತಿಯಲ್ಲಿ ನಾನಿರದಿದ್ದರೂ, ಅವರೇ ತಂದಿದ್ದ ಬುತ್ತಿಯನ್ನು ಹಸಿವಿನ ತೀವ್ರತೆಯಲ್ಲಿ ತಿಂದು ಮುಗಿಸಿದರು. ಆಶ್ರಮದ ಮುಂದಿನ ಚಪ್ಪರದ ಕೆಳಗೆ ಮಳೆಯಿಂದ ಆಶ್ರಯ ಪಡೆಯುತ್ತ ತೂಕಡಿಸುತ್ತಿದ್ದ ಕುದುರೆಗಳು ಆಗಾಗ ಕೆನೆಯುತ್ತಿದ್ದವು.

ವಿಷಯಕ್ಕೆ ಬಂದಾಗ. ಅವರನ್ನು ಆಪದ್ಧರ್ಮದಲ್ಲಿ ಸಿಲುಕಿರುವ ತಾಯಿ ಸತ್ಯವತಿ ಕಳಿಸಿರುವಳೆಂದು ತಿಳಿಯಿತು. ಅವರು ಬಂದ ಕಾರಣ ಅವರಿಗೇ ತಿಳಿಯದೇ ಕೇವಲ ಭೀಷ್ಮನ ಆದೇಶದಂತೆ ನನ್ನನ್ನು ರಾಜಧಾನಿಗೆ ಕರೆದೊಯ್ಯಲು ಬಂದಿದ್ದರು. ಹಸ್ತಿನಾಪುರದ ಪಟ್ಟದರಸಿಯಾಗಿ

ಮೆರೆಯುತ್ತಿದ್ದ ತಾಯಿಗೆ ಬಂದ ಕಷ್ಟವಾದರೂ ಏನೆಂದು ತಿಳಿಯಬರಲಿಲ್ಲ. ಅಂತಹ ಘನ ಕಾರ್ಯವಿಲ್ಲದೇ. ಇಷ್ಟು ವರ್ಷ ಮರೆತಿದ್ದ ಮಗನನ್ನು ನೆನೆಸಿಕೊಳ್ಳಲು ಸಾಧ್ಯವಿಲ್ಲವೆಂದು ಭಾವಿಸಿ ಹೊರಟು ಬರುವುದಾಗಿ ಹೇಳಿ ಅವರನ್ನು ಸಮಾಧಾನಪಡಿಸಿ ಮಲಗಿಸಿದೆ. ಒಳಗೆ ಇನ್ನಷ್ಟು ಒಣಸೌದೆ ತುರುಕಿ ವಾತಾವರಣವನ್ನು ಬಿಸಿಯಾಗಿಸಲು ಪ್ರಯತ್ನಿಸುತ್ತಲೇ, ಮನಸ್ಸು ನಿರಾಳಗೊಂಡು ನಿದ್ರೆಯನ್ನು ಬಯಸಿತು.

## ಸತ್ಯವತಿ

ಯಮುನಾ ನದಿಯಲ್ಲಿ ಮೀನು ಹಿಡಿಯುತ್ತ ಹೊಟ್ಟೆ ಹೊರೆಯುತ್ತಿದ್ದ ನನ್ನನ್ನು ಆ ಕಾಡಿನಲ್ಲಿ ಬೇಟೆಗೆಂದು ಬಂದಿದ್ದ ಶಂತನು ಮಹಾರಾಜನು ಅಕಸ್ಮಾತ್ತಾಗಿ ಕಂಡು ಮೋಹಗೊಂಡನು. ಕಾಡಿನಲ್ಲಿ ವಾಸಿಸುವ ನನಗೆ ಅದಾವ ಸುಸ್ಕೃತಿ– ಅವರನ್ನು ಸೆಳೆಯುವಂಥದು –ಇತ್ತೋ ತಿಳಿಯಲಿಲ್ಲ. ಒಂದು ದೇಶದ ರಾಜನಿಗೆ ಹೆಣ್ಣು ಕೊಡಲು ಎಂತೆಂತಹವರು ಮುಂದೆ ಬರುತ್ತಾರೆ. ಯಾವ ದೇಶದ ರಾಜಕುಮಾರಿಗೂ ಆ ಯೋಗವಿರಲಿಲ್ಲವೇ ? ಅಥವಾ ನಾಗರಿಕರಲ್ಲಿ ಯಾರೂ ಆ ಮಟ್ಟದ ಸುಂದರಿಯರಿರಲಿಲ್ಲವೇ ? ಇದ್ದರೂ ಶಂತನುವಿಗೆ ಹೀಗೆ ಕಾಡಿನಲ್ಲಿ ಸಿಕ್ಕುವ ಹೆಣ್ಣುಗಳಲ್ಲಿಯೇ ನಿಜವಾದ ಸೌಂದರ್ಯವಿರುವುದು ಎಂಬುದು ತಿಳಿದಿರಬೇಕು. ಅವರ ಮೊದಲ ಹೆಂಡತಿ ಗಂಗೆಯೂ ಸಹ ನನ್ನ ಹಾಗೆಯೇ ಬೆಸ್ತರವಳಲ್ಲವೇ ? ಗಂಗಾನದಿಯ ಪಕ್ಕದ ಕಾಡಿನಲ್ಲೇ ಹುಟ್ಟಿ ಬೆಳೆದು, ಕೊನೆಗೆ ಮದುವೆಯಾದರೂ ಕಾಡಿನಲ್ಲೇ ಇದ್ದು ಸಂಸಾರ ಮಾಡಿದವಳು. ಹುಟ್ಟಿದ ಎಂಟು ಮಕ್ಕಳಲ್ಲಿ ಏಳು ಮಕ್ಕಳು ಹುಟ್ಟುತ್ತಿದ್ದಂತೆಯೇ ಸಾಯುತ್ತಿದ್ದವು; ಅಥವಾ ಸತ್ತೇ ಹುಟ್ಟಿರುತ್ತಿದ್ದವು. ಆದರೆ ಎಂಟನೆಯ ಮಗುವಿಗೆ ಹೆರಿಗೆಯಾದಾಗ ಮಾತ್ರ ಅವಳೇ ನಿಶ್ಶಕ್ತಿಯಿಂದ ಮರಣಹೊಂದಿದಳು. ವಿಚಿತ್ರವೆಂಬಂತೆ ಮಗು ಮಾತ್ರ ಗಟ್ಟಿಮುಟ್ಟಾಗಿತ್ತು. ಬಹುಶಃ ಪ್ರಸವದ ಪ್ರಕ್ರಿಯೆಯಲ್ಲಿ ಬಲಶಾಲಿಯಾದ ಮಗನ ಮುಂದೆ ಅವಳು ಸೋಲಲೇಬೇಕಾಯಿತೇನೋ. ಹೀಗೆ ತಾಯಿಯನ್ನು ಕೊಂದುಕೊಂಡೇ ಹುಟ್ಟಿದ ಮಗನೆ ದೇವವ್ರತ– ಭೀಷ್ಮನೆಂದು ಖ್ಯಾತನಾದವನು.

ಗಂಗೆಯಂತೆಯೇ ನಾನೂ ಯಮುನಾ ನದಿಯ ತಡಿಯಲ್ಲಿಯೇ ಜೀವಿಸಿಕೊಂಡಿದ್ದೆ. ಶಂತನು ಮಹಾರಾಜರೊಂದಿಗೆ ಸಂಸಾರ ನಡೆಸಿದ್ದರೆ ಚೆನ್ನಾಗಿತ್ತೇ ಅನಿಸುತ್ತದೆ. ಆದರೆ ತಂದೆಯವರು, ಶಂತನು ನನ್ನ ಮೇಲೆ ಮೋಹಪರವಶನಾಗಿರುವುದನ್ನು ಅರಿತು, ನನ್ನನ್ನು ರಾಣಿಯನ್ನಾಗಿಸಬಹುದೆಂಬ ಸ್ವಾರ್ಥದಿಂದ ಕೆಲವು ನಿರ್ಬಂಧನೆಗಳನ್ನು ವಿಧಿಸಿದರು. ನನಗೆ ಹುಟ್ಟುವ ಮಗನೇ ಮುಂದಿನ ರಾಜನಾಗಬೇಕೆಂದರು. ಲೋಕರೂಢಿಯಂತೆ ಹಿರಿಯ ಮಗನಿಗೇ ಪಟ್ಟವಾಗಬೇಕು. ಅದರಂತೆ ಈಗಾಗಲೇ ಪ್ರವರ್ಧಮಾನಕ್ಕೆ ಬಂದಿರುವ ಮಗ ದೇವವ್ರತನನ್ನು ಬಿಟ್ಟು ನನ್ನ ಮಗನಿಗೆ ಪಟ್ಟವಾಗಲೇಬೇಕೆಂದಾಗ ಅವರಿಗೆ ಕಸಿವಿಸಿಯಾಗಿರಬೇಕು. ನನ್ನ ಮೇಲಿನ ವ್ಯಾಮೋಹವನ್ನೂ ಬಿಡಲಾರದೇ, ಅತ್ತ ಮಗನ ಮೇಲಿನ ಮಮತೆಯನ್ನೂ ಬಿಡಲಾಗದೇ ವಿಮನಸ್ಕರಾಗಿ ರಾಜಧಾನಿಗೆ ಹೊರಟುಹೋದರು.

ಚಿಂತಾಮಗ್ನರಾಗಿದ್ದ ಶಂತನು ಮಹಾರಾಜರ ಸ್ಥಿತಿಗೆ ಕಳವಳಗೊಂಡ ಮಗ ದೇವವ್ರತ, ತಮ್ಮ ಆಸ್ಥಾನದ ಹಿರಿಯ ಮಂತ್ರಿಗಳೊಂದಿಗೆ ಚರ್ಚಿಸಿ ಕೆಲವರು ಕ್ಷತ್ರಿಯರೊಂದಿಗೆ ಕೆಲವೇ ದಿನಗಳಲ್ಲಿ ನಮ್ಮಲ್ಲಿಗೆ ಬಂದುಬಿಟ್ಟ. ಮೀನುಗಾರರ ನಾಯಕರಾಗಿದ್ದ ನಮ್ಮ ತಂದೆ ದಾಶರಾಜರನ್ನು ಭೆಟ್ಟಿ ಮಾಡಿದರು. ನನ್ನ ಅಭಿಮತವೇನೆಂದು ಒಂದೇ ಒಂದು ಮಾತನ್ನೂ ಕೇಳಲಿಲ್ಲ. ಬಹಳ ಹೊತ್ತಿನವರೆಗೆ ಮಾತುಕತೆಯಾಯಿತು. ಆಗ ದೇವವ್ರತನು, "ದಾಶರಾಜರೆ, ನನಗೆ ನನ್ನ ಹಿತಕ್ಕಿಂತಲೂ

ಮುಖ್ಯವಾಗಿ ನಿಮ್ಮ ತಂದೆಯವರು ಚೆನ್ನಾಗಿರಬೇಕೆಂಬುದೇ ನನ್ನ ಅಭಿಲಾಷೆ. ನಿಮ್ಮ ಸ್ವಪ್ನ ಸುಂದರಿ ಸತ್ಯವತಿಯನ್ನು ಅಪಹರಿಸುವುದು ನಮಗೇನು ಕಷ್ಟದ ಕೆಲಸವಲ್ಲ. ಆದರೆ ಕಳಂಕಿತ ಮನಸ್ಸುಗಳು ನಿಜವಾದ ಸುಖವನ್ನು ನೀಡಲಾರವು. ಇಂದು ಮಾತ್ರ ನಿಮ್ಮನ್ನು ಇಷ್ಟೊಂದು ಕೇಳಿಕೊಳ್ಳುತ್ತಿರುವುದು ನಿಮ್ಮ ಇಚ್ಛೆಯಂತೆಯೇ ಈ ಸತ್ಯವತಿಗೆ ಹುಟ್ಟಿದ ಮಗನನ್ನೇ ರಾಜನನ್ನಾಗಿ ಮಾಡುತ್ತೇನೆ. ಆಗಬಹುದೇ ?" ಎಂದನು. ಆಗಲೂ ತಂದೆಯವರು. "ನಿಮ್ಮ ಅಂತಸ್ತಿಗೆ ತಕ್ಕುದಾದ ಮಾತನ್ನೇ ಆಡಿದಿರಿ. ನಿಜ. ನೀವೇನೋ ಆಡಿದ ಮಾತಿಗೆ ತಪ್ಪಲಾರಿರಿ ಎಂಬ ಭರವಸೆ ಇಟ್ಟುಕೊಳ್ಳೋಣ. ಆದರೆ ನಿಮಗೆ ಹುಟ್ಟುವ ಮಕ್ಕಳು, ಸತ್ಯವತಿಗೆ ಹುಟ್ಟುವ ಮಕ್ಕಳು ಮುಂದೆ ಪರಸ್ಪರ ಹಗೆ ಸಾಧಿಸಲಾರರೇ ?" ಎಂದು ಮೊಮಕ್ಕಳ ಬಗ್ಗೆ ಅತೀವ ಆಸ್ಥೆ ವಹಿಸಿದರು. ಆವೇಶದಲ್ಲಿದ್ದ ದೇವವ್ರತ ಹಿಂದೆ ಮುಂದೆ ನೋಡದೇ, "ಆಗಲಿ. ನಾನು ಮದುವೆಯನ್ನೇ ಮಾಡಿಕೊಳ್ಳುವುದಿಲ್ಲ" ಎಂದು ನಿರ್ಧಾರಿತ ಧ್ವನಿಯಲ್ಲಿ ಭೀಷಣವಾದ ಪ್ರತಿಜ್ಞೆ ಮಾಡಿ, "ಈಗಲಾದರೂ ಕಳಿಸಿಕೊಡುವಿರಾ ?" ಎಂದು ಕೋರಿಕೊಂಡನು. ತಂದೆಗೆ ಬೇರೆ ದಾರಿ ಇರಲಿಲ್ಲ. ಕಳಿಸಿಕೊಟ್ಟರು.

ಹೀಗೆ ಶಂತನುವನ್ನು ಕೂಡಿಕೊಂಡ ನನಗೆ ಚಿತ್ರಾಂಗದ, ವಿಚಿತ್ರವೀರ್ಯ ಎಂಬ ಇಬ್ಬರು ಗಂಡುಮಕ್ಕಳಾದರು.

ಮಕ್ಕಳು ಪ್ರೌಢಾವಸ್ಥೆಗೆ ಬರುವ ಮೊದಲೇ ಶಂತನು ಮಹಾರಾಜರು ಮರಣಹೊಂದಿದರು. ಮಕ್ಕಳ ಉಸ್ತುವಾರಿಯನ್ನು ಹೊತ್ತಿದ್ದ ಭೀಷ್ಮನು ಶಪಥದಂತೆ ನನ್ನ ಹಿರಿಯ ಮಗ ಚಿತ್ರಾಂಗದನನ್ನು ಪಟ್ಟಕ್ಕೆ ತಂದನು. ಎಷ್ಟೋ ಜನರು, ಮಂತ್ರಿಗಳು ಈ ಪ್ರಕ್ರಿಯೆಯನ್ನು ವಿರೋಧಿಸಿ, ಭೀಷ್ಮನೇ ಮಹಾರಾಜನಾಗಬೇಕೆಂದು ಪಟ್ಟು ಹಿಡಿದರೂ ಆತ ಜಗ್ಗಲಿಲ್ಲ. "ನಾನು ಸತ್ಯವತಿಗೆ ನೀಡಿರುವ ಮಾತಿನಂತೆ ನಡೆದುಕೊಳ್ಳುತ್ತಿದ್ದೇನೆ. ದಯವಿಟ್ಟು ಪ್ರತಿರೋಧಿಸಬೇಡಿ"ರೆಂದು ವಿನಂತಿಸಿಕೊಂಡವನು, "ನಾನು ಕೇವಲ ರಾಜನಾಗುವುದಿಲ್ಲ. ರಾಜರುಗಳನ್ನು ಸೃಷ್ಟಿಸುವವನಾಗುತ್ತೇನೆ" ಎಂದಂದು ಜನರನ್ನೂ ಮರುಳು ಮಾಡಿದನು. ಚಿತ್ರಾಂಗದ ಹೆಸರಿಗೆ ರಾಜನಾದರೂ ಪ್ರತಿಯೊಂದು ನಡೆಯುತ್ತಿದ್ದುದೂ ಭೀಷ್ಮನ ಆಣತಿಯಂತೆಯೇ.

ಹೀಗಿದ್ದಾಗ ತನ್ನನ್ನು ಮೀರಿ ಚಿತ್ರಾಂಗದನ ಕೀರ್ತಿ ಬೆಳೆಯುತ್ತಿದ್ದುದನ್ನು ಸಹಿಸಲಾರದ ಅದೇ ಹೆಸರಿನ ಗಂಧರ್ವ ಬೇಟೆಗೆಂದು ಹೋಗಿದ್ದಾಗ ಆಕ್ರಮಣ ಮಾಡಿದನಂತೆ. ಕುರುಕ್ಷೇತ್ರದ ಸರಸ್ವತಿ ನದೀತೀರದಲ್ಲಿ ಅವರಿಬ್ಬರಿಗೂ ದ್ವಂದ್ವಯುದ್ಧ ನಡೆದು ಮೋಸದಿಂದ ನನ್ನ ಮಗನನ್ನು ಕೊಲೆ ಮಾಡಿಬಿಟ್ಟನಂತೆ. ಮಗನ ಹೆಣವನ್ನು ಈ ರೀತಿ ಸ್ವಾಗತಿಸಬೇಕಾಗುತ್ತದೆಯೆಂದು ನಿರೀಕ್ಷಿಸಿರಲಿಲ್ಲ. ಬೆಳೆಯುವ ಮಕ್ಕಳನ್ನು ಯಾರು ಯಾರು ಯಾವ ರೀತಿಯಲ್ಲಿ ದ್ವೇಷಿಸುತ್ತಾರೆ ಎಂದು ಹೇಳಲಾಗುವುದಿಲ್ಲ. ಒಂದು ಕ್ಷಣ ಭೀಷ್ಮನ ಬಗ್ಗೆಯೇ ಸಂಶಯ ಬರದಿರಲಿಲ್ಲ. ತನಗೆ ಸಿಂಹಾಸನ ದಕ್ಕದಂತೆ ಮಾಡಿದನೆಂಬ ಅಸೂಯೆ ಯಾಕಿರಲಿಕ್ಕಿಲ್ಲ.

ಆಡಳಿತದ ಪೂರ್ಣ ಹಿಡಿತವನ್ನು ತನ್ನ ಕೈಯಲ್ಲಿ ಇಟ್ಟುಕೊಂಡಿರುವ ಭೀಷ್ಮ, ಅನಿವಾರ್ಯವಾಗಿ, ತನ್ನ ಮಾತಿನಂತೆಯೇ, ಇನ್ನೊಬ್ಬ ಮಗ ವಿಚಿತ್ರವೀರ್ಯನನ್ನು ಸಿಂಹಾಸನದ ಮೇಲೆ ಕೂರಿಸಿದ. ನನಗೆ ಸಿಂಹಾಸನ ಬೇಡವೆಂದು ಬಾಯಲ್ಲಿ ಹೇಳುತ್ತಿದ್ದರೂ ನನ್ನ ಮಕ್ಕಳಿಬ್ಬರನ್ನೂ ನಿವಾರಿಸಿ, ಅನಿವಾರ್ಯವಾಗಿ ವಿಧಿಯಿಲ್ಲದೇ ತಾನೇ ರಾಜನಾಗಬೇಕಾಗಿದೆಯೆಂದು ಜನರನ್ನು ನಂಬಿಸಿ, ತನ್ಮೂಲಕ ತನ್ನ ವಾಕ್ಯಪರಿಪಾಲನೆ ಮಾಡಿದನೆಂಬ ಕೀರ್ತಿಯನ್ನೂ ಪಡೆಯಬಹುದೆಂಬ ದ್ವಿಮುಖ ರಾಜಕಾರಣ ಇದರಲ್ಲಿ ಅಡಗಿರುವ ಸತ್ಯ ನನ್ನ ಗಮನಕ್ಕೆ ಬರಲು ತಡವಾಗಲಿಲ್ಲ. ವಿಚಿತ್ರವೀರ್ಯ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಅವನನ್ನೂ ಯಾವುದಾದರೂ ನೆಪವೊಡ್ಡಿ ಕೊಂದು

ಬಿಡಬಹುದೆಂಬ ಭಯದಿಂದ ಹಗಲಿರುಳೂ ಕಾದೆ. ಇನ್ನೂ ಬಾಲಕನಾದ ವಿಚಿತ್ರವೀರ್ಯ ಈ ಕಪಟಕ್ಕೆ ಬಲಿಯಾಗಬಾರದೆಂಬ ಪೂರ್ವಾಲೋಚನೆ ನನ್ನದು.

ವಿಚಿತ್ರವೀರ್ಯ ಯುವಕನಾಗುತ್ತಿದ್ದಂತೆಯೇ ಅವನಿಗೆ ಮದುವೆ ಮಾಡಿಸಿ ಕೂಡಲೇ ಸಂತಾನ ಪಡೆಯುವುದು ನನ್ನ ಅಭಿಲಾಷೆಯಾಗಿತ್ತು. ನನಗಿರುವ ಒಂದೇ ಒಂದು ಕುಡಿ ಕಳಚಿಹೋದರೆ ಸಿಂಹಾಸನ ಸಲೀಸು ಭೀಷ್ಮನಿಗೇ ಸಲ್ಲುತ್ತಿದ್ದುದರಲ್ಲಿ ಯಾವ ಅನುಮಾನವೂ ಇರಲಿಲ್ಲ.

ಇದೇ ವೇಳೆಗೆ ಕಾಶೀರಾಜ ತನ್ನ ಮೂವರು ಹೆಣ್ಣುಮಕ್ಕಳ ಮದುವೆ ಮಾಡಲು ಸ್ವಯಂವರವನ್ನು ಏರ್ಪಡಿಸಿದ್ದ ಸುದ್ದಿ ಬಂತು. ಒಂದು ಕ್ಷಣ, ಒಬ್ಬಳೇ ಹೆಂಡತಿಯಿದ್ದು ಆಕೆಗೆ ಮಕ್ಕಳಾಗದಿದ್ದರೆ. ಮತ್ತೊಬ್ಬಳನ್ನು ಮದುವೆ ಮಾಡಿ ಪ್ರಯೋಗಿಸಿ ನೋಡುವಷ್ಟರಲ್ಲಿ ಏನಾದರೂ ಅಚಾತುರ್ಯ ಸಂಭವಿಸಿ ವಿಚಿತ್ರವೀರ್ಯನ ಆಯಸ್ಸು ಕೊನೆಗೊಂಡರೆ ಎಂಬ ಸಂಶಯ ಮೂಡಿ, ಮೂವರನ್ನೂ ಯಾಕೆ ತರಬಾರದು, ಒಬ್ಬಳಲ್ಲವಿದ್ದರೆ ಇನ್ನೊಬ್ಬಳಿಗೆ ಮಕ್ಕಳಾಗುವುದಂತೂ ಖಾತ್ರಿ ಎಂದುಕೊಂಡೆ. ಭೀಷ್ಮನನ್ನು ಕರೆದು ಕಾಶೀರಾಜನ ಮೂರೂ ಮಕ್ಕಳನ್ನು ತಂದುಕೊಳ್ಳುವ ಬಗ್ಗೆ ಹೇಳಿದೆ. ಈ ಮಾತನ್ನು ಕಾಶೀರಾಜ ಯಾವ ಕಾರಣಕ್ಕೂ ಒಪ್ಪಿಕೊಳ್ಳುವುದಿಲ್ಲವೆಂದ. ಹಾಗಿದ್ದಲ್ಲಿ ಅವರನ್ನು ಅಪಹರಿಸಿ ತಂದು ಮದುವೆ ಮಾಡುವುದಾಗಿ ಹೇಳಿದೆ. ಭೀಷ್ಮ ಒಪ್ಪಲಿಲ್ಲ. ನಾನೂ ಪ್ರತಿರೋಧಿಸಿದೆ. ಅವನಿಗೆ ಸಿಟ್ಟು ಬರುವಂತೆ ಮಾತನಾಡಿದೆ. ಅಧಿಕಾರದ ಆಸೆಗಾಗಿ ವಿಚಿತ್ರವೀರ್ಯನಿಗೆ ಅನ್ಯಾಯ ಮಾಡಬೇಕೆಂದು ನಿರ್ಧರಿಸಿರುವಿಯೋ ಎಂದು ಕೇಳಿದೆ. ಚಿತ್ರಾಂಗದ (ವಿಚಿತ್ರವೀರ್ಯ ಪ್ರಸಿದ್ಧನಾದಮೇಲೆ ಚಿತ್ರವೀರ್ಯ ಎಂದೂ ಕರೆಯಲಾಗುತ್ತಿತ್ತು) ನನ್ನು ಉದ್ದೇಶಪೂರ್ವಕವಾಗಿ ನೀನೇ ಕೊಲೆ ಮಾಡಿಸಿದ್ದಾಗಿ ಜನಗಳಿಗೆ ತಿಳಿಸಿಬಿಡುವುದಾಗಿ ಬೆದರಿಕೆ ಹಾಕಿದೆ. ವಿಚಿತ್ರವೀರ್ಯನನ್ನೂ ಕೊಲ್ಲಲು ಪ್ಲ್ಯಾನ್ ರಚಿಸಿರುವುದಾಗಿ ಬಹಿರಂಗಪಡಿಸುವುದಾಗಿ ಹೇಳಿದೆ. ನಿನಗೆ ನಿನ್ನ ಪ್ರತಿಜ್ಞೆಯಂತೆ ಇರಲು ಮನಸಾ ಇಚ್ಛೆ ಇರದಿದ್ದರೆ ಹೇಳಿಬಿಡು. ನನ್ನ ಮಗನೊಂದಿಗೆ ಯಮುನಾ ನದಿ ತೀರಕ್ಕೆ ವಾಪಸು ಹೋಗಿಬಿಡುವೆ. ಕೊನೇಪಕ್ಷ ನನ್ನ ಮಗನ ಪ್ರಾಣವಾದರೂ ಉಳಿಯುತ್ತದೆ ಎಂದೆ.

ಭೀಷ್ಮನಿಗೆ ಸಿಟ್ಟು ಬಂದಿರಬೇಕು. ಇಲ್ಲವೇ ತನ್ನ ಆಂತರಿಕ ರಹಸ್ಯ ಬಯಲಾಗುವುದೆಂಬ ಭಯ ಬಂದಿರಬೇಕು. ಒಪ್ಪಿಕೊಂಡ.

ರಥದೊಂದಿಗೆ ವಾರಣಾಸಿಗೆ ಹೋಗಿ ಸ್ವಯಂವರದಿಂದ ಮೂವರು ಕನ್ಯೆಯರನ್ನೂ ಅಪಹರಿಸಿ ತಂದ. ಪ್ರತಿರೋಧಿಸಿದ ಹಲವರನ್ನು ನಿಗ್ರಹಿಸಿದ. ಅವರಲ್ಲಿ ಅಂಬೆಯನ್ನು ಪ್ರೀತಿಸುತ್ತಿದ್ದ ಸಾಲ್ವನ ಪ್ರತಿಭಟನೆ ಹೆಚ್ಚಾಗಿದ್ದರೂ ಭೀಷ್ಮನ ಪರಾಕ್ರಮದ ಮುಂದೆ ಸೋತು ಹೋದನಂತೆ. ಬಲಾತ್ಕಾರದಿಂದ ಮೂವರನ್ನೂ ಎಳೆತಂದು ನನ್ನ ಮುಂದೆ ನಿಲ್ಲಿಸಿದ. ಅವರಲ್ಲಿ ಅಂಬಾಲಿಕೆ ಅಂಬಿಕೆಯರು ಸ್ವಯಂವರದಲ್ಲಿ ಭಾಗವಹಿಸಿದ್ದ ಯಾವನೋ ಸುಂದರ ಸದೃಢ ರಾಜಕುಮಾರರನ್ನೂ ವರಿಸಲು ಮನಸ್ಸು ಮಾಡಿದ್ದರೆ, ಹಿರಿಯವಳಾದ ಅಂಬೆ ಮಾತ್ರ ಸಾಲ್ವರಾಜನನ್ನು ಪ್ರೇಮಿಸುತ್ತಿದ್ದುದರಿಂದ ಆತನಿಗೇ ಸ್ವಯಂವರ ಮಾಲೆಯನ್ನು ಹಾಕಲು ನಿರ್ಧರಿಸಿದ್ದಳಂತೆ. ಭೀಷ್ಮನಿಗೆ ದಾರಿಯುದ್ದಕ್ಕೂ ಎಷ್ಟೆಲ್ಲಾ ಬೇಡಿಕೊಂಡರೂ ಅವರನ್ನು ಬಿಟ್ಟುಬಿಡುವ ಕನಿಕರವನ್ನು ತೋರಲಿಲ್ಲವಂತೆ. ಅಂಬೆ ನನ್ನಲ್ಲಿ ಅಂಗಲಾಚಿ ಬೇಡಿಕೊಂಡಳು. ಶಂತನುವನ್ನು ನಾನು ಒಪ್ಪಿಕೊಂಡು ಬಂದಿದ್ದರಿಂದ, ನನಗೂ ಪ್ರೀತಿಯ ತೀವ್ರತೆಯ ಅರಿವಿದ್ದುದರಿಂದ– ಮೇಲಾಗಿ ಯಾರನ್ನೋ ಇಷ್ಟಪಟ್ಟವಳನ್ನು ಮಗನಿಗೆ ತಂದುಕೊಳ್ಳಲು ನ್ಯಾಪಿತ ಮನಸ್ಸು ಒಪ್ಪಿಕೊಳ್ಳದಿದ್ದುದರಿಂದ– ಅವಳನ್ನು ತಿರುಗಿ ಸಾಲ್ವನಿಗೆ ಕೊಟ್ಟುಬಿಡಲು ಭೀಷ್ಮನಿಗೆ ತಿಳಿಹೇಳಿದೆ. "ಬೇಕೆಂದಾಗ ಅಪಹರಿಸಿ

ತರಲು. ಬೇಡವೆಂದಾಗ ವಾಪಸು ಬಿಟ್ಟುಬರಲು ನನ್ನನ್ನು ಏನೆಂದು ತಿಳಿದುಕೊಂಡಿರುವೆ ಚಿಕ್ಕಮ್ಮ" ಎಂದ. ಆತನ ಬಾಯಲ್ಲಿ ಚಿಕ್ಕಮ್ಮ ಎಂಬ ಶಬ್ದ ಬಂದದ್ದು ಇದೇ ಮೊದಲು. "ಅಷ್ಟೊಂದು ಮಮತೆಯಿಂದಲೇ ಹೇಳುತ್ತಿದ್ದೇನೆ ಮಗನೇ. ಪ್ರಣಯಿಗಳನ್ನು ದೂರ ದೂರ ಮಾಡಬಾರದು. ನೀನು ಹೆಣ್ಣಿನ ಸಹವಾಸವನ್ನು ಕೇವಲ ಲೈಂಗಿಕವಾಗಿ, ಕಾಮತೃಷೆಯ ಶಮನಕ್ಕಾಗಿ ಮಾತ್ರ ಅನುಭವಿಸಿರುವೆಯೇ ಹೊರತು ಅದರ ಸಂಬಂಧದ ತುಡಿತ, ತೀವ್ರತೆ ನಿನಗಿಲ್ಲ. ಪರಸ್ಪರ ಒಪ್ಪಿತ ಮನಸುಗಳ ಮಧುರತೆ ನಿನಗೆ ಗೊತ್ತಿಲ್ಲ. ಅವರ ಅಗಲಿಕೆಯಿಂದ ಬರುವ ನಿಟ್ಟುಸಿರು ಬಹಳ ಕೆಟ್ಟದ್ದು. ಅವರು ಶಪಿಸುವುದರಿಂದ ನಿನಗೆ, ನನಗೆ ಮಾತ್ರವಲ್ಲ; ಯಾರಿಗೂ ಒಳಿತಾಗುವುದಿಲ್ಲ. ಆದ್ದರಿಂದ ದಯವಿಟ್ಟು ಅಂಬೆಯನ್ನು ವಾಪಸು ವಾರಾಣಸಿಗಾಗಲೀ ಅಥವಾ ಸಾಲ್ವನಿಗಾಗಲೀ ಒಪ್ಪಿಸಿ ಬಾ" ಎಂದು ಮನವೊಲಿಸಿದೆ. ಆತ ಹಾಗೇ ಮಾಡಿದ.

ಉಳಿದಿಬ್ಬರನ್ನು ವಿಚಿತ್ರವೀರ್ಯನಿಗೆ ಮದುವೆ ಮಾಡಲಾಯಿತು. ಇದುವರೆಗೆ ಹೆಣ್ಣಿನ ಸೌಂದರ್ಯದ, ಸಾಮೀಪ್ಯದ ಅನುಭವವಿರದ ವಿಚಿತ್ರವೀರ್ಯ ಮದುವೆಯ ನಂತರ ರಾಜಕಾರ್ಯವನ್ನು ಸಂಪೂರ್ಣವಾಗಿ ಮರೆತುಬಿಟ್ಟು ಯಾವಾಗಲೂ ರಾಣಿವಾಸದಲ್ಲೇ ಇರುತ್ತಿದ್ದನು. ಕಡ್ಡಾಯವಾಗಿ ವಂಶಾಭಿವೃದ್ಧಿಯಾಗಬೇಕೆಂದು ನಾನು ಬೇರೆ ಹೇಳಿದ್ದರಿಂದ ಆತನಿಗೆ ಇನ್ನಷ್ಟು ಪುಷ್ಟಿ ದೊರೆಯಿತು. ಹೀಗೆ ಇಬ್ಬರೊಂದಿಗೆ ರತಿಕ್ರಿಯೆಯಲ್ಲಿ – ಏಕಕಾಲದಲ್ಲಿ – ತೊಡಗಿದ್ದರಿಂದ ಯಾವುದೋ ಲೈಂಗಿಕ ರೋಗ ಕಾಣಿಸಿಕೊಂಡಿತು. ಮಕ್ಕಳಂತೂ ಆಗಲೇ ಇಲ್ಲ. ನನ್ನ ಆತಂಕ ಜಾಸ್ತಿಯಾಯಿತು. ರಾಜವೈದ್ಯರನ್ನು ಕರೆಸಿ ಪರಿಶೀಲಿಸಿದೆ. ಪ್ರಯೋಜನ ಕಂಡುಬರಲಿಲ್ಲ. ದಿನದಿನಕ್ಕೂ ಕೃಶನಾಗುತ್ತ ನಡೆದ. ರೋಗವನ್ನು ಪ್ರತಿರೋಧಿಸುವ ಶಕ್ತಿಯೇ ಕಳೆದುಹೋಗಿರುವುದಾಗಿ ವೈದ್ಯರು ತಿಳಿಸಿದರು. ಕಾಮುಕನಾಗಿದ್ದರಿಂದ ಬಂದ ಕಾಯಿಲೆ ಇದೆಂದು ಹೇಳಿದರೆ ರಾಜನ ಹೆಸರಿಗೆ ಕಳಂಕ ಬರುತ್ತದೆಯೆಂದು, ಕ್ಷಯರೋಗ ಬಂದಿದೆಯೆಂದು ಪ್ರಚುರಪಡಿಸಲಾಯಿತು. ಆದರೇನು. ನಾನು ಯಾವುದು ಆಗಬಾರದೆಂದುಕೊಂಡಿದ್ದೆನೋ ಅದೇ ಆಗಿಹೋಗಿತ್ತು. ವಿಚಿತ್ರವೀರ್ಯ ಕೊನೆಯುಸಿರೆಳೆದುಬಿಟ್ಟ. ನನ್ನ ಸಂತತಿ ಹೀಗೆ ತಾನಾಗಿಯೇ ಅಂತ್ಯಗೊಂಡುದರಿಂದ ಯಾರನ್ನೂ ನಿಷ್ಠುರ ಮಾಡುವಂತಿರಲಿಲ್ಲ.

ಆಮೇಲೆ ಒಂದು ದಿನ ಭೀಷ್ಮನನ್ನು ಕರೆಕಳಿಸಿದೆ. ಸಂತಾನಾಭಿವೃದ್ಧಿಗೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಚರ್ಚಿಸಿದೆ. ಶಂತನುವಿನ ಸಂತತಿಯೆಂದು ಉಳಿದಿರುವುದು ನೀನೊಬ್ಬನೇ ಎಂದೆ. ವಿಚಿತ್ರವೀರ್ಯನ ಹೆಂಡತಿಯರು ಇನ್ನೂ ಫಲವತ್ತಾಗಿರುವುದರಿಂದ ಅವರಿಂದ ಹುಟ್ಟುವ ಮಕ್ಕಳೂ ಸಹ ಅವನವೇ ಆಗುತ್ತವೆಯಲ್ಲವೇ ಎಂದೆ. ಭೀಷ್ಮ ಆಸ್ಥಾನದಲ್ಲಿರುವ ನೂರಾರು ಹೆಂಗಳೆಯರನ್ನು ಗೌಪ್ಯವಾಗಿ ಅನುಭೋಗಿಸಿ ಅವರ ಕನ್ಯತ್ವವನ್ನು ಕಳೆದಿರುವುದು ನನಗೇನು ಗುಟ್ಟಾಗಿ ಉಳಿದಿರಲಿಲ್ಲವಾದರೂ ಸಂತಾನಾಭಿವೃದ್ಧಿಗೆ ತಾನು ಒಪ್ಪುವುದಿಲ್ಲವೆಂದು ಸಿಡುಕಿದ. ಬಹುಶಃ ಈಗಾಗಲೇ ವಿಚಿತ್ರವೀರ್ಯ ಸಂಭೋಗಿಸಿರುವುದರಿಂದ ಹಾಗೆಂದನೋ ಅಥವಾ ತನ್ನಿಂದಲೂ ಮಕ್ಕಳಾಗುವುದಿಲ್ಲವೆಂಬ ಸತ್ಯ ಸಖಿಯರೊಡನಿರುವ ಸಂಬಂಧದಿಂದ ತಿಳಿದಿದೆಯೋ; ಇಲ್ಲವೇ ಹುಟ್ಟುವ ಮಕ್ಕಳು ವಿಚಿತ್ರವೀರ್ಯನ ಹೆಸರು ಹೇಳುವುದರಿಂದ ತನ್ನ ವಂಶ ಅಧಿಕಾರಕ್ಕೆ ಬರುವುದಿಲ್ಲವೆಂಬ ಸ್ವಾರ್ಥವೋ ಗೊತ್ತಿಲ್ಲ.

ಈ ಕೆಲಸಕ್ಕೆ ಯೋಗ್ಯರಾದವರು ಯಾರೆಂದು ಚಿಂತಿಸಲಾರಂಭಿಸಿದೆ. ಕೇವಲ ತಾಯಿ ಮಾತ್ರವಲ್ಲ; ತಂದೆಯೂ ಇದೇ ಸಂತತಿಯವನಾಗಿರಬೇಕೆಂಬುದು ನನ್ನ ಬಯಕೆಯಾಗಿತ್ತು. ಶಂತನುವಿನ ಕಡೆಯಿಂದ ಭೀಷ್ಮನನ್ನುಳಿದು ಬೇರಾರೂ ರಕ್ತಸಂಬಂಧಿಗಳು ಇರದುದರಿಂದ ನನ್ನ

ಸಂಬಂಧವಿಂದಲಾದರೂ ಸಂತಾನಾಭಿವೃದ್ಧಿಗೊಳಿಸಬೇಕೆಂಬುದು ನನ್ನ ಉದ್ದೇಶವಾಗಿತ್ತು. ವಿಚಿತ್ರವೀರ್ಯನಿಗೆ ಈಗ ಸೋದರ ಸಂಬಂಧಿಯಾಗುಳಿದಿರುವವನು ವ್ಯಾಸನೊಬ್ಬನೇ.

ವ್ಯಾಸ ನನ್ನ ಹೊಟ್ಟೆಯಲ್ಲಿಯೇ ಹುಟ್ಟಿದ್ದ ಮಗ.

ನನ್ನ ನಿಜವಾದ ತಂದೆಯ ಹೆಸರು ಉಪರಿಚರವಸು ಎಂದು. ದಾಶರಾಜನು ನನ್ನನ್ನು ಸಾಕುತ್ತಿದ್ದ ತಂದೆ. ಅವರೆಲ್ಲ ಮೀನು ಹಿಡಿದೇ ಜೀವನ ನಡೆಸುತ್ತಿದ್ದರು. ಆದರೆ ನನ್ನನ್ನು ಯಾತ್ರಾರ್ಥಿಗಳಿಗೆ ಯಮುನಾ ನದಿಯನ್ನು ದಾಟಿಸುವ ಸಲುವಾಗಿ ಒಂದು ದೋಣಿಯನ್ನು ಕೊಟ್ಟು ನಿಯೋಜಿಸಿದ್ದರು. ಆಗ ಅಸಿತರೆಂಬ ಬ್ರಹ್ಮರ್ಷಿಗಳು ನನ್ನ ಸೌಂದರ್ಯ ಕಂಡು ಮಾರುಹೋಗಿ ಮದುವೆಯಾಗುವುದಾಗಿ ದಾಶರಾಜರನ್ನು ಕೇಳಿದ್ದರು. ಆದರೆ ತಂದೆ ಅನೇಕ ಕಾರಣಗಳಿಂದ ನಿರಾಕರಿಸಿದ್ದರು. ಇನ್ನೊಮ್ಮೆ ಹೀಗೆಯೇ ದೋಣಿ ಹಾಯಿಸಿ ಯಮುನಾ ನದಿಯನ್ನು ದಾಟಿಸುತ್ತಿದ್ದಾಗ ಇನ್ನೊಬ್ಬ ಋಷಿಗಳು ನನ್ನನ್ನು ಕಾಮುಕ ದೃಷ್ಟಿಯಿಂದ ನೋಡಲಾರಂಭಿಸಿದ್ದರು– ಬಹುಶಃ ಅಸಿತರು ತಮ್ಮನ್ನು ನಿರಾಕರಿಸಿದ್ದಾಗಿ ಹೇಳಿರಬೇಕು– ಪರಾಶರರೆಂಬ ಈ ಋಷಿಯು ಇನ್ನೂ ಯುವಕರಾಗಿದ್ದರು. ಅವರ ಕಣ್ಣುಗಳಲ್ಲಿ, ತೋಳು ಎದೆಗಳಲ್ಲಿ ಯೌವನ ತುಂಬಿ ತುಳುಕುತ್ತಿತ್ತು. ಸವಿಮಾತುಗಳಿಂದ ಅನುನಯಗೊಳಿಸಿ ನನ್ನನ್ನು ಮರುಳು ಮಾಡಿದರು. ಮೀನುಗಾರಳಾಗಿದ್ದರಿಂದ ಮೀನಿನ ವಾಸನೆಯೇ ನನ್ನಿಂದ ಹೊಮ್ಮುತ್ತಿದ್ದರೂ ನನ್ನ ಸೌಂದರ್ಯ ಅಪರಿಮಿತವಾದದ್ದೆಂದು ಬಣ್ಣಿಸಿದರು. ಕೆನ್ನೆಗಳನ್ನು ಸವರಿದರು. ಚುಂಬಿಸಿದರು. ಕ್ರಮೇಣ ಅವರ ಬಾಹುಬಂಧನದಲ್ಲಿ ಸಿಕ್ಕಿಕೊಂಡೆ. ಒಂದು ರೀತಿಯಲ್ಲಿ ನನಗೂ ಹದಿಹರೆಯದಲ್ಲಿನ ಪುರುಷನ ಸಾಮೀಪ್ಯ ಹಿತವೆನಿಸುತ್ತಿದ್ದರೂ ತಂದೆಯವರ ಭಯ ನನ್ನನ್ನು ಕಾಡುತ್ತಿತ್ತು. ನಿರಾಕರಿಸಿದರೆ ಎಲ್ಲಿ ಋಷಿಗಳು ಶಾಪ ಕೊಟ್ಟಾರೋ ಎಂಬ ಆತಂಕವೂ ನನ್ನಿಂದ ಪ್ರತಿರೋಧಿಸುವ ಶಕ್ತಿಯನ್ನು ಕಿತ್ತುಕೊಂಡಿತ್ತು. ಅವರಿಗೆ ವಶಳಾಗಿಹೋದೆ. ಯಮುನಾ ನದಿಯ ನೀರಿನ ಮೇಲೆ ತೇಲುತ್ತಲೇ ಇರುವ ದೋಣಿಯೊಳಗೇ ನಮ್ಮಿಬ್ಬರ ಸಮಾಗಮವಾಗಿತ್ತು. ಅವರ ಬಿರುಸಾದ ತುಡಿತಕ್ಕೆ ನಾನು ಹಿತವಾಗಿ ನರಳುತ್ತ ನಲುಗಿ ಹೋದೆ. ಸ್ವಲ್ಪ ಹೊತ್ತಿನ ನಂತರ ಸ್ಖಲಿತಗೊಂಡ ಋಷಿಗಳು ನನ್ನಿಂದ ಮೇಲೆದ್ದರು. ನೋಡಿದರೆ ದೋಣಿಯು ತೇಲುತ್ತಾ ನೀರಿನ ಹರಿವಿನ ದಿಕ್ಕಿನಲ್ಲಿ ಬಹಳ ದೂರ ಬಂದುಬಿಟ್ಟಿತ್ತು. ಪರಾಶರರು ಅಲ್ಲಿಯೇ ದೋಣಿಯನ್ನು ನದಿದಂಡೆಗೆ ಹಾಯಿಸಿ ಇಳಿದು ಹೋದರು. ಈವರೆಗೆ ಏನೂ ನಡೆಯಲೇ ಇಲ್ಲವೇನೋ ಎಂಬಂತೆ ನಿರ್ಲಿಪ್ತರಾಗಿಯೇ ಹೊರಟು ಹೋದರು. ಈ ಗಂಡು ಸಂತತಿಯೇ ಹಾಗೆ ಏನೋ ಎನಿಸುತ್ತದೆ. ಕ್ರಿಯೆ ಮುಗಿದ ಮೇಲೆ ತಮ್ಮಲ್ಲಿಯ ವೀರ್ಯವನ್ನು ನಮಗೆ ತುಂಬಿ, ನಮ್ಮನ್ನು ಸಕ್ರಿಯಗೊಳಿಸಿ ತಾವು ನಿಷ್ಕ್ರಿಯರಾಗಿ ಬಿಡುತ್ತಾರೆ.

ಭಯಗೊಂಡ ನಾನು ಸುಮಾರು ದಿನಗಳ ವರೆಗೆ ತಂದೆಯ ಬಳಿ ಏನನ್ನೂ ಹೇಳಲಿಲ್ಲ. ನಾನು ಬಾಯಿಬಿಟ್ಟು ಹೇಳದಿದ್ದರೇನು; ಬಸಿರು ಎಲ್ಲವನ್ನೂ ಹೇಳಿತು. ನನ್ನ ಭವಿಷ್ಯದ ಬಗ್ಗೆ ಆತಂಕಗೊಂಡರು. ಪರಾಶರರನ್ನು ಹುಡುಕಲು ಪ್ರಯತ್ನಪಟ್ಟರು. ಗರ್ಭಪಾತ ಮಾಡಲೂ ಯಾವ್ಯಾವುದೋ ಗಿಡಮೂಲಿಕೆಗಳನ್ನು ತಿನ್ನಿಸಿ, ಕುಡಿಸಿ ನೋಡಿದರು. ಗರ್ಭ ಶಕ್ತಿಯುತವಾಗಿತ್ತು. ಬೆಳೆದೇ ಬಿಟ್ಟಿತು. ಅನಿವಾರ್ಯವಾಗಿ ಹೆತ್ತೆ. ಅವನೇ ವ್ಯಾಸ.

ವ್ಯಾಸ ಈಗ ಮಹಾಋಷಿ. ತಂದೆಯ ವೀರ್ಯದ ಗುಣ ಎಲ್ಲಿ ಹೋಗಬೇಕು ! ಬೆಸ್ತರ ಮನೆಯಲ್ಲಿ ಹುಟ್ಟಿ ಬೆಳೆದರೂ ಬ್ರಾಹ್ಮಣತ್ವ ಕಳೆದುಕೊಳ್ಳಲಿಲ್ಲ. ವೇದಗಳನ್ನು ಅಭ್ಯಸಿಸಿ ನಾಲ್ಕು ಭಾಗಗಳಾಗಿ ವಿಂಗಡಣೆ ಮಾಡಿದ ವ್ಯಾಸ –ನನ್ನ ಮಗ– ಸದಾ ಶಾಂತ ಸ್ವಭಾವದ ತಪಸ್ವಿ, ಸತ್ಯವಂತ, ಧರ್ಮವಂತ, ಮಾತ್ರವಲ್ಲ ಪರಾಕ್ರಮಿ ಸಹ.

# ಅಂಬೆ

ವಾರಾಣಸಿಯು ಅಂದು ಅದ್ದೂರಿಯಾಗಿ ಅಲಂಕಾರಗೊಂಡಿತ್ತು. ತಂದೆ ಕಾಶೀರಾಜರು ನಾವು ಮೂವರನ್ನೂ ಒಟ್ಟಿಗೇ ಮದುವೆ ಮಾಡಿಬಿಡಲು ನಿರ್ಧರಿಸಿದ್ದರು. ಅದಕ್ಕೋಸ್ಕರ ಸ್ವಯಂವರವನ್ನು ಏರ್ಪಡಿಸಲಾಗಿತ್ತು. ಎಲ್ಲಾ ಪ್ರಮುಖ ರಾಜಧಾನಿಗಳಿಂದಲೂ ರಾಜಕುಮಾರರು ಆಮಂತ್ರಿತರಾಗಿದ್ದರು. ನಾವು ಯಾರಿಗೆ ಮಾಲೆಯನ್ನು ಹಾಕುತ್ತೇವೆಯೋ ಎಂಬ ಕುತೂಹಲದಿಂದ ಸಾವಿರಾರು ನಾಗರಿಕರೂ ನೆರೆದಿದ್ದರು.

ಸ್ವಲ್ಪ ಎತ್ತರವಾದ ಸ್ಥಳದಲ್ಲಿ ವೇದಿಕೆಯನ್ನು ನಿರ್ಮಿಸಲಾಗಿತ್ತು. ವೃತ್ತಾಕಾರದ ವೇದಿಕೆಯ ಸುತ್ತಲೂ ಯುವರಾಜಕುಮಾರರು ತನಗೆ ಹಾರ ಬೀಳಬಹುದೆಂದು; ತನ್ನನ್ನು ಇವಳೂ, ತನ್ನನ್ನು ಅವಳೂ ಒಪ್ಪಬಹುದೆಂದೂ ನಿರೀಕ್ಷಿಸುತ್ತಾ, ಕನಸು ಕಾಣುತ್ತಾ ಕುಳಿತಿದ್ದರು. ಮಂಟಪದ ಕೆಳಗೆ ಅದೇ ರೀತಿಯಲ್ಲಿ ವೃತ್ತಾಕಾರವಾಗಿ ರಾಜರೂ ಚಕ್ರವರ್ತಿಗಳೂ ಕಾತರರಾಗಿ ಕುಳಿತು, ತಮ್ಮ ತಮ್ಮ ಮಕ್ಕಳು ತೋರ್ಪಡಿಸುತ್ತಿರುವ ಗತ್ತು, ದವಲತ್ತುಗಳನ್ನು ವೀಕ್ಷಿಸಿ ಖುಷಿಪಡುತ್ತಿದ್ದರು. ಕೇಂದ್ರಸ್ಥಾನದಲ್ಲಿದ್ದ ನಾನು, ಅಂಬಿಕೆ ಮತ್ತು ಅಂಬಾಲಿಕೆ ಮೂವರೂ, ಈ ರಾಜಕುಮಾರರಲ್ಲಿ ಯಾರನ್ನು ವರಿಸುವುದೆಂದು ಆಯ್ಕೆ ಮಾಡುತ್ತಿದ್ದೆವು.

ನಾನಂತೂ ಸಾಲ್ವರಾಜನಿಗೇ ಮಾಲೆ ಹಾಕುವುದಾಗಿ ಮೊದಲೇ ಘೋಷಿಸಿಬಿಟ್ಟಿದ್ದೆ. ಹಾಗಾಗಿ ಅವನನ್ನುಳಿದು ಇತರೆಯವರಲ್ಲಿ ಸುಂದರನೂ, ಸಬಲನೂ ಆದವನೊಬ್ಬನನ್ನು ಆರಿಸಿಕೊಳ್ಳಬೇಕಿತ್ತು. ಅಂಬಾಲಿಕೆ ಸಾಲ್ವನಿಂದ ಎಂಟನೆಯವನಾಗಿ ಕುಳಿತಿದ್ದವನನ್ನು ಗಂಭೀರನೂ ಸೌಮ್ಯನೂ ಆಗಿ ಕಂಡದ್ದರಿಂದ ಅವನನ್ನೇ ವರಿಸಿದರೆ ಹೇಗೆ ಎಂದು ನನ್ನ ಅಭಿಪ್ರಾಯ ಕೇಳಿದಳು. ಆದರೆ ಅವಳಿಗಿಂತಲೂ ಮೊದಲು, ಅಂದರೆ ನನ್ನ ನಂತರ ಮಾಲೆ ಹಾಕಲು ಹಕ್ಕುಳ್ಳವಳಾಗಿದ್ದ ಅಂಬಿಕೆಯೇನಾದರೂ ಅವನನ್ನೇ ವರಿಸಿದರೆ ಏನು ಮಾಡುತ್ತೀಯೆಂದು ನಾನು ಕೇಳಿದಾಗ ಗಾಬರಿಗೆ ಬಿದ್ದ ಆಕೆ, ಅಂಬಿಕೆಯನ್ನು ಕೇಳಕ್ಕ ಎಂದು ಗಂಟುಬಿದ್ದಳು. ಹಾಗೆ ಕೇಳುವುದರಿಂದ ಇಲ್ಲದ ಗಮನವನ್ನು ಆತನ ಮೇಲೆ ಕೇಂದ್ರೀಕರಿಸಿದಂತಾಗುತ್ತದೆಂದು ನಾನೇ ಬೇಡವೆಂದೆ. ಒಂದು ವೇಳೆ ಅಂಬಿಕೆಯೇನಾದರೂ ಅವನಿಗೇ ಮಾಲೆ ಹಾಕಿದರೆ ಉಂಟಾಗಬಹುದಾದ ಗೊಂದಲವನ್ನು ನಿವಾರಿಸಿಕೊಳ್ಳಲು ಎರಡನೆಯವನೊಬ್ಬನನ್ನು ಆರಿಸಿಟ್ಟುಕೊಳ್ಳುವಂತೆ ಅವಳಿಗೆ ಸಲಹೆ ನೀಡಿದೆ. ಅವಳ ಆಯ್ಕೆ ಸುಲಭಗೊಳಿಸಲು ನಾನೂ ಹಾಗೆಯೇ ಕಣ್ಣಾಡಿಸುತ್ತಿದ್ದೆ.

ಅಷ್ಟರಲ್ಲಿ ಹೊರಗಡೆ ದೊಡ್ಡ ಗದ್ದಲ ಪ್ರಾರಂಭವಾಯಿತು. ಯಾವುದೋ ಒಂದು ರಥ. ಅದರ ಹಿಂದೆ ನೂರಾರು ಜನ ಸೈನಿಕರು ಕುದುರೆಗಳನ್ನೇರಿ ಬಂದರು. ಬಂದವರು ಯಾರ ಯಾವ ಪ್ರತಿಭಟನೆಯನ್ನೂ ಲೆಕ್ಕಿಸದೇ ವೇದಿಕೆಯತ್ತ ನುಗ್ಗಿದರು. ಅಷ್ಟರಲ್ಲಿ ಕೆಲವರು ರಾಜಕುಮಾರಿಯರನ್ನು ರಕ್ಷಿಸಿ ಎಂದು ಕೂಗಿಕೊಂಡರು. ಇದು ಅನಿರೀಕ್ಷಿತ ಧಾಳಿಯಾದ್ದರಿಂದ ಸಾಕಷ್ಟು ಸಂಖ್ಯೆಯ ಸೈನ್ಯವೂ ಅಲ್ಲಿರಲಿಲ್ಲ. ಮೇಲಾಗಿ ಇಂತಹ ಶುಭ ಸಂದರ್ಭದಲ್ಲಿ ಈ ರೀತಿಯ ಗೊಂದಲವುಂಟಾಗುವುದೆಂದು ನಿರೀಕ್ಷಿಸಲು ಶಾಂತ ಸ್ವಭಾವದವರಾದ ನಮ್ಮ ತಂದೆ ಕಾಶೀರಾಜರಿಗೆ ಅಂತಹ ಯಾವ ವೈರಿಗಳೂ ಇರಲಿಲ್ಲ.

ರಥದಲ್ಲಿ ಕುಳಿತಿದ್ದ ವ್ಯಕ್ತಿಯೆಂದ : "ನಾನು ಹಸ್ತಿನಾಪುರದ ರಾಜ ವಿಚಿತ್ರವೀರ್ಯನ ಅಣ್ಣ, ಭೀಷ್ಮ...." ಭೀಷ್ಮನ ಬಗ್ಗೆ ಎಲ್ಲರೂ ಕೇಳಿ ತಿಳಿದಿದ್ದರು. ಅವನು ಮಹಾಪರಾಕ್ರಮಿಯೆಂದು ಗೊತ್ತಿತ್ತು. ತನ್ನ ತಂದೆಯ ಸುಖಕ್ಕಾಗಿ ಮಲತಾಯಿ ಸತ್ಯವತಿಗೆ ವಚನ ನೀಡಿ ತಾನು ಮದುವೆಯಾಗದೇ ಬ್ರಹ್ಮಚಾರಿಯಾಗಿಯೇ ಇರುವುದಾಗಿ ಘೋಷಿಸಿದ್ದೂ ಗೊತ್ತಿತ್ತು.

"ಹಸ್ತಿನಾವತಿಯಲ್ಲಿರುವ ರಾಜರೆಲ್ಲಾ ಸತ್ತುಹೋಗಿದ್ದಾರೇ ? ಸ್ವಯಂವರಕ್ಕೆ ನಮಗೇಕೆ ಆಹ್ವಾನ ಕಳಿಸಲಿಲ್ಲ ?" ಎಂದು ತಂದೆಯ ಮೇಲೆ ಜಗಳಕ್ಕೆ ಬಂದ. ಅಪ್ಪ ಜಯವಂತನಾದರೋ ಶಾಂತಚಿತ್ತನಾಗಿಯೇ. "ನೀನು ಕಲ್ಯಾಣ ಮಾಡಿಕೊಳ್ಳುವುದಿಲ್ಲವೆಂದು ಶಪಥ ಮಾಡಿರುವೆ. ಚಿತ್ರಾಂಗದ ಯುದ್ಧದಲ್ಲಿ ಮಡಿದಿದ್ದಾನೆ. ಇನ್ನು ವಿಚಿತ್ರವೀರ್ಯನಿಗಾದರೋ ಮದುವೆಯ ವಯಸ್ಸೇ ಆಗಿಲ್ಲ. ಹಾಗಾಗಿ ಕರೆ ಕಳುಹಿಸಲಿಲ್ಲ...." ಎಂದು ಸಮರ್ಥಿಸಿಕೊಂಡರು.

ಭೀಷ್ಮ ಕೇಳುವ ಸ್ಥಿತಿಯಲ್ಲಿರಲಿಲ್ಲ. "ಇಲ್ಲ. ನೀವು ಹಸ್ತಿನಾವತಿಗೆ ಅವಮಾನ ಮಾಡಬೇಕೆಂದೇ ಉದ್ದೇಶಪೂರ್ವಕವಾಗಿ ಹೀಗೆ ಮಾಡಿದ್ದೀರಿ. ಇದಕ್ಕೆ ತಕ್ಕ ಪ್ರಾಯಶ್ಚಿತ್ತವಾಗಲೇ ಬೇಕು" ಎಂದು ಗುಡುಗಿದ. ಆತನ ಆದೇಶದಂತೆ ಅವನ ಸೈನಿಕರೆಲ್ಲರೂ ನಾವು ಮೂವರನ್ನೂ ಸುತ್ತುವರಿದರು. ಭೀಷ್ಮ ನಮ್ಮನ್ನುದ್ದೇಶಿಸಿ ರಥವನ್ನು ಏರುವಂತೆ ಗದರಿಸಿದ. ನಾವು ತತ್ತರಿಸಿದೆವು. ನಾವು ಮೂವರಲ್ಲಿ, ಇದ್ದುದರಲ್ಲಿ ನಾನೇ ಸ್ವಲ್ಪ ಧೈರ್ಯವಂತೆ. ಪರಿಸ್ಥಿತಿಯ ವಿಕೋಪವನ್ನರಿತ ನಾನೇ ಗಡಗಡ ನಡುಗುತ್ತಿರುವಾಗ ಪಾಪ ಅಂಬಿಕೆ, ಅಂಬಾಲಿಕೆಯರೇನು ಮಾಡಿಯಾರು. ನಾನು ಸಾಲ್ವನನ್ನು ವರಿಸುವುದೆಂದು ಪೂರ್ವ ನಿರ್ಧಾರಿತವಾಗಿದ್ದರಿಂದ ಸಾಲ್ವ ನಮ್ಮ (ವಿಶೇಷವಾಗಿ ನನ್ನ) ಬಿಡುಗಡೆಗಾಗಿ ಏಕಾಂಗಿಯಾಗಿ ಪ್ರತಿಭಟಿಸಿದ. ಅಷ್ಟೊಂದು ಜನ ಶಸ್ತ್ರಸಜ್ಜಿತ ಸೈನಿಕರ ಎದುರು ನಿಶ್ಶಸ್ತ್ರನಾದ ಸಾಲ್ವನೊಬ್ಬನೇ ಏನು ಮಾಡಬಲ್ಲ, ಪಾಪ ! ಭೀಷ್ಮನು ನಾವು ಮೂವರನ್ನು ಒಂದು ರೀತಿಯ ಬಲಾತ್ಕಾರದಿಂದಲೇ ಹಿಡಿದೆಳೆದುಕೊಂಡು ಹೋಗಿ ರಥಕ್ಕೆ ಹತ್ತಿಸಿದ.

ವಿವಾಹ ಪದ್ಧತಿಗಳಲ್ಲಿರುವ ವಿಧಗಳಲ್ಲೆಲ್ಲಾ ಶೌರ್ಯದಿಂದ ಕನ್ಯೆಯನ್ನು ಅಪಹರಿಸುವುದೇ ಶ್ರೇಷ್ಠವೆಂದು ಹೇಳುತ್ತಾ, "ಇವರನ್ನು ಎತ್ತಿಕೊಂಡು ಹೋಗುವ ಗಂಡಸರು ಯಾರಿದ್ದೀರಿ ಬನ್ನಿ; ಯುದ್ಧಕ್ಕೆ ಸಿದ್ಧನಾಗಿಯೇ ಬಂದಿದ್ದೇನೆ...." ಎಂದು ಸವಾಲು ಹಾಕಿ ಜೋರಾಗಿ ರಥವನ್ನು ನಡೆಸಿದ. ವರರಾಗಿ ಮಂಟಪದ ಮೇಲೆ ಕುಳಿತಿದ್ದ ಕ್ಷತ್ರಿಯ ಯುವಕರು ಆಭರಣಗಳನ್ನೆಲ್ಲಾ ಬಿಚ್ಚಿಟ್ಟು, ಶಸ್ತ್ರಕವಚಗಳನ್ನು ಧರಿಸಿ ನಮ್ಮನ್ನು ರಕ್ಷಿಸಲು ಬರುವ ವೇಳೆಗೆ ನಾವು ರಥದಲ್ಲಿ ಬಹಳ ದೂರ ಬಂದುಬಿಟ್ಟಿದ್ದೆವು. ಭೀಷ್ಮನ ಕಡೆಯ ಸೈನಿಕರು ವಾರಾಣಸಿಯ ಅನೇಕ ಜನರನ್ನು ಕೊಂದು ಹಾಕಿದ್ದರು. ಸೈನಿಕರೂ ಬರಲಿ ಎಂದು ಕಾಯದೇ, ಭೀಷ್ಮ ರಥವನ್ನು ಬಹಳ ಜೋರಾಗಿ ಓಡಿಸುತ್ತಿದ್ದ. ಬಹುಶ: ಸೈನಿಕರನ್ನು ಹಿಂದೆ ಬಿಟ್ಟುಬರಲು ಕಾರಣ, ನಮ್ಮ ಸೈನಿಕರೇನಾದರೂ ಬಂದರೆ ಅವರನ್ನು ಮಾರ್ಗಮಧ್ಯದಲ್ಲಿ ನಿಗ್ರಹಿಸಲು; ತನ್ಮೂಲಕ ವಿಳಂಬಗೊಳಿಸಲು ಅಥವಾ ದಾರಿತಪ್ಪಿಸಲು ಇರಬೇಕು.

## ಅಂಬಿಕೆ

ದಾರಿಯುದ್ದಕ್ಕೂ ಅಕ್ಕ ಅಂಬೆ ತೀವ್ರವಾಗಿ ಪ್ರತಿಭಟಿಸುತ್ತಿದ್ದಳು. ನಾವೂ ದನಿಗೂಡಿಸುತ್ತಿದ್ದೆವು. ಒಮ್ಮೆ ಅಂಬೆ, ಇಷ್ಟವಿಲ್ಲದವನನ್ನು ಕಟ್ಟಿಕೊಳ್ಳುವುದಕ್ಕಿಂತ ಸಾಯುವುದೇ ಮೇಲು ಎಂದು ರಥದಿಂದ ಕೆಳಗೆ ಹಾರಲು ಪ್ರಯತ್ನಿಸಿದಳು. ಭೀಷ್ಮ ತಕ್ಷಣ ರಥ ನಿಲ್ಲಿಸಿದ. ಅಂಬೆಯನ್ನು ದುರುಗುಟ್ಟಿ ನೋಡಿದ. ಆತನ ನೋಟದ ಭಯಾನಕತೆಗೆ ನಾವಿಬ್ಬರೂ ನಡುಗಿದೆವು. ಆದರೆ ಅಂಬೆ ಆ ನೋಟವನ್ನು ತಿರಸ್ಕರಿಸಿ ಕತ್ತು ಕೊಂಕಿಸಿದಳು. ಭೀಷ್ಮ ಛಟಾರನೆ ಆಕೆಯ ಕೆನ್ನೆಗೆ ಹೊಡೆದ. ಆ ಏಟಿಗೆ ಅಂಬೆ ತತ್ತರಿಸಿದಳು. ನಾವಿಬ್ಬರೂ ಬೆದರಿ ಅಪ್ಪಿಕೊಂಡೆವು. ಪ್ರಾಣಭಯದಿಂದ ತುಟಿಗಳು ಕಂಪಿಸಿದವು. ಬಿಸಿ ಉಸಿರುಗಳು ಹೊರಹೊಮ್ಮಿದವು. ಎಷ್ಟು ರಾಜವಂಶದ ಮಹಿಳೆಯರೆಂದರೂ ನಾವು ಹೆಂಗಸರಲ್ಲವೇ ?

ತೆಪ್ಪಗೆ ಅವನ ನಿರ್ದೇಶನದಂತೆ ನಡೆದುಕೊಳ್ಳುವುದನ್ನು ಬಿಟ್ಟರೆ ನಮಗೆ ಅನ್ಯ ಮಾರ್ಗವಿರಲಿಲ್ಲ.

ಹಸ್ತಿನಾಪುರಕ್ಕೆ ಕರೆದೊಯ್ದು ನಮ್ಮನ್ನು ಸತ್ಯವತಿ ಎದುರು ನಿಲ್ಲಿಸಿದ. ನೀನು ಹೇಳಿದಂತೆ ಮೂವರನ್ನೂ ಎಳೆತಂದಿರುವೆನೆಂದ. ಅವನ ನಡವಳಿಕೆಯಲ್ಲಿ ನಮ್ಮನ್ನು ಆತ ಕನಿಷ್ಠ ಮನುಷ್ಯರೆಂದೂ ಪರಿಗಣಿಸಿದಂತಿರಲಿಲ್ಲ. ನಾವು ಮೂವರೂ ಯಾವುದೋ ದೇವತೆಗೆ ಅರ್ಪಿಸಲು ಎಳೆತಂದಿರುವ ಬಲಿಪಶುಗಳಂತಾಗಿದ್ದೆವು.

ಭೀಷ್ಮ ಹೊರಟುಹೋದ ನಂತರ ಸತ್ಯವತಿ ನಾಲ್ಕು ಪ್ರೀತಿಯ ಮಾತುಗಳನ್ನಾಡಿದಳು. ಎಂಥ ಬಲಿಯುಂತಹ ಸಂದರ್ಭ ನೋಡಿ ತಾನು ಸಾಲ್ವನನ್ನು ಪ್ರೀತಿಸುತ್ತಿದ್ದುದಾಗಿಯೂ, ದಯವಿಟ್ಟು ತನ್ನನ್ನು ಸಾಲ್ವನಿಗೇ ಕೊಟ್ಟು ಮದುವೆ ಮಾಡಿಕೊಡಬೇಕೆಂದೂ ಅಂಬೆ ಅಂಗಲಾಚಿದಳು. ಪ್ರೀತಿಯ ತೀವ್ರತೆಯ ಅರಿವಿದ್ದ ಸತ್ಯವತಿ ಆಗಲೆಂದು ಒಪ್ಪಿ ಭೀಷ್ಮನನ್ನು ಕರೆಕಳಿಸಿದಳು.

ಸತ್ಯವತಿ ಈ ವಿಚಾರವನ್ನು ಭೀಷ್ಮನಿಗೆ ಹೇಳಿದಾಗ ಆತ ಸಿಟ್ಟಿಗೆದ್ದ, ಬೇಕೆಂದಾಗ ಅಪಹರಿಸಿ ತರಲು, ಬೇಡವೆಂದಾಗ ವಾಪಸು ಬಿಟ್ಟುಬರಲು ತನ್ನನ್ನು ಏನೆಂದುಕೊಂಡಿರುವಿ ? ಎಂದು ಪ್ರತಿಭಟಿಸಿದ. ಸತ್ಯವತಿ ಅಂಬೆಯ ಪರವಾಗಿ ಸೌಜನ್ಯದ ಮಾತನಾಡಿ ಕೊನೆಗೂ ಭೀಷ್ಮನನ್ನು ಒಪ್ಪಿಸುವಲ್ಲಿ ಯಶಸ್ವಿಯಾದಳು.

## ಅಂಬಾಲಿಕೆ

ಭೀಷ್ಮ, ಅಂಬೆಯನ್ನು ಸಾಲ್ವನಲ್ಲಿಗೆ ಕರೆದೊಯ್ದ. ಆದರೆ ಸಾಲ್ವರಾಜನು ಅಂಗೀಕರಿಸದೇ ತಿರಸ್ಕರಿಸಿದ. ಸ್ವಯಂವರ ಮಂಟಪದಿಂದ ತನ್ನನ್ನು ಸೋಲಿಸಿ ಅಂಬೆಯನ್ನು ಗೆದ್ದುಕೊಂಡು ಹೋಗಿದ್ದುದರಿಂದಾಗಿ ಭೀಷ್ಮನೇ ಅಧಿಕೃತ ವಾರಸುದಾರ ಎಂದುಬಿಟ್ಟ. ಅಪಹರಿಸಿದ್ದ ವೇಳೆಯಲ್ಲಿ ಅವಳ ಶೀಲಕ್ಕೆ ಯಾವುದೇ ಧಕ್ಕೆಯಾಗಿಲ್ಲವೆಂಬುದಕ್ಕೆ ಏನು ಖಾತ್ರಿ ? ಎಂದು ತನ್ನ ಒಳಮನಸ್ಸು - ಪ್ರೀತಿಯನ್ನು ಮೀರಿ - ಪ್ರತಿಕ್ರಿಯಿಸಿದ್ದನ್ನು ಸಾಲ್ವ ವ್ಯಕ್ತಪಡಿಸಿದ. ಬೇರೊಬ್ಬನು ಹೊತ್ತೊಯ್ದವಳನ್ನು ತಾನು ವಿವಾಹವಾಗುವುದಿಲ್ಲವೆಂದು ಸ್ಪಷ್ಟಪಡಿಸಿದ.

ಭೀಷ್ಮನ ಬಳಿಗೆ ಓಡಿಬಂದಳು ಅಂಬೆ. “ಸಾಲ್ವನು ನನ್ನನ್ನು ತಿರಸ್ಕರಿಸಲು ನೀನೇ ಮುಖ್ಯ ಕಾರಣ. ನೀನು ನನ್ನ ಕೈಹಿಡಿದು ಎಳೆದೊಯ್ದಿದ್ದೀಯ. ಶಾಸ್ತ್ರಸಮ್ಮತವಾಗಿ – ದೇವಯಾನಿ ಪ್ರತಿಪಾದಿಸಿದಂತೆ– ನೀನೇ ನನ್ನನ್ನು ವರಿಸಬೇಕು. ನೀನು ಹೀಗೆ ಅಪಹರಿಸಿರುವುದರಿಂದಲೇ ಸಾಲ್ವನು ನನ್ನಲ್ಲಿ ಸಂಶಯಗೊಂಡು ತಿರಸ್ಕರಿಸಿರುವುದು. ಇಲ್ಲದಿದ್ದರೆ ಆತನೇ ನನ್ನನ್ನು ವರಿಸುತ್ತಿದ್ದ. ನನ್ನ ಜೀವನ ಹಾಳು ಮಾಡಿದ ನೀನೇ ಅದನ್ನು ಸರಿಪಡಿಸಬೇಕು ನೀನೇ ನನ್ನನ್ನು ಮದುವೆಯಾಗಬೇಕು” ಎಂದು ಪಟ್ಟುಹಿಡಿದಳು.

ಭೀಷ್ಮನಾದರೋ ತಾನು ವಿವಾಹವಾಗುವುದಿಲ್ಲವೆಂದು ಶಪಥಗೈದಿರುವುದರಿಂದ ನಿನ್ನನ್ನೇ ಅಲ್ಲ; ಯಾರನ್ನೂ ಮದುವೆಯಾಗಲಾರೆ ಎಂದುಬಿಟ್ಟ. ವಿಚಿತ್ರವೀರ್ಯನಿಗೆಂದೇ ತನ್ನನ್ನು ಅಪಹರಿಸಿದ್ದರಿಂದ ಅವನಲ್ಲಿಗೇ ನಡೆದಳು. ವಿಚಿತ್ರವೀರ್ಯನೂ, ಬೇರೊಬ್ಬನಲ್ಲಿ ಅನುರಕ್ತಳಾಗಿದ್ದವಳನ್ನು ತಾನು ಮದುವೆಯಾಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿಬಿಟ್ಟ. ಪ್ರೀತಿಸಿದವನೂ ಕೈಬಿಟ್ಟ ! ಹೊತ್ತು ತಂದವನೂ ಕೈಬಿಟ್ಟ ! ಯಾರಿಗೆಂದು ಹೊತ್ತು ತರಲಾಗಿತ್ತೋ ಅವನೂ ಕೈಬಿಟ್ಟ ! ಯಾವ ಅಪರಾಧಕ್ಕಾಗಿ ಈ ಶಿಕ್ಷೆ ?

ತನ್ನದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸಲು ಸಿದ್ಧಳಿಲ್ಲದ ಸ್ವಾಭಿಮಾನಿ ಅಂಬೆ. ತವರು ಮನೆಗೂ ಹೋಗಲು ಒಪ್ಪದೇ ನೇರವಾಗಿ ಪರಶುರಾಮರಲ್ಲಿಗೆ ಹೋದಳು. ಹೋದವಳು ಅವರ ಶಿಷ್ಯನಾದ ಭೀಷ್ಮ ಮಾಡಿದ ಮೋಸವನ್ನು ನಿವೇದಿಸಿದಳು. ಅವರು ಭೀಷ್ಮನಿಗೆ ಅಂಬೆಯನ್ನು ಪರಿಗ್ರಹಿಸುವುದೇ ಉಚಿತವೆಂದು ಸಲಹೆ ಮಾಡಿದರು. ಒಪ್ಪದಿದ್ದಾಗ ಧರ್ಮಸೂಕ್ಷ್ಮಗಳನ್ನು ವಿವರಿಸಿ, ಅವಳನ್ನು ಮದುವೆಯಾಗಬೇಕಾದ್ದು ನಿನ್ನ ಕರ್ತವ್ಯವೆಂದು ಆಜ್ಞೆ ಮಾಡಿದರು.

ಹ್ಞಾ ! ತಿರಸ್ಕರಿಸುವೇ ಬಿಟ್ಟ. ಪ್ರಸಿದ್ಧ ಗುರುಶಿಷ್ಯರ ನಡುವೆಯೇ ಆರೋಪ ಪ್ರತ್ಯಾರೋಪಗಳು ನಡೆದು ಪರಸ್ಪರ ಬಲಾಬಲ ಪರೀಕ್ಷೆ ನಡೆಯಿತು. ಭೀಷ್ಮನ ಬಲದ ಮುಂದೆ ಪರಿಪಕ್ವ ವಿದ್ಯೆಗಳ ಪರಶುರಾಮರು ಸೋತುಹೋದರು. ಇದಕ್ಕಿಂತಲೂ ಯಾವ ಹೆಚ್ಚಿನ ಸಹಾಯವನ್ನೂ ತನ್ನಿಂದ ನಿರೀಕ್ಷಿಸಬೇಡವೆಂದು ಅವರು ನಿಸ್ಸಹಾಯಕನಾಗಿ ಹೇಳಿಬಿಟ್ಟರು.

ಅಂಬೆಗೆ ಬೇರೆ ಯಾವ ದಾರಿಯೂ ಉಳಿದಿರಲಿಲ್ಲ. ಭೀಷ್ಮನನ್ನು ವಾಚಾಮಗೋಚರ ನಿಂದಿಸಿದಳು. ಹೆಣ್ಣಿನ ಜೀವ ಹಾಳು ಮಾಡಿದ ಪಾಪಿ. ಲಂಪಟ. ಕೃತಘ್ನ, ಅಧರ್ಮಿ... ಇತ್ಯಾದಿ. ಅಂಬೆ ಹಟಮಾರಿ. ತಾನು ಹಿಡಿದದ್ದನ್ನ ಸಾಧಿಸಿ ತೋರಿಸದೇ ಬಿಡುತ್ತಿರಲಿಲ್ಲ. ಆದರೆ ಮಾನಸಿಕ ವ್ಯಾಪಾರದ ಪ್ರೀತಿಯನ್ನು ಯಾರಿಂದಲೂ ಬಲವಂತವಾಗಿ ಪಡೆದುಕೊಳ್ಳಬಾರದು ಎಂಬ ಸತ್ಯವನ್ನು ಒಪ್ಪಲು ಸಿದ್ಧಳಿರಲಿಲ್ಲ. ನನ್ನಂತೆಯೇ ವಿಚಿತ್ರವೀರ್ಯನನ್ನೇ ಮದುವೆಯಾಗಿ, ಮಾನಸಿಕವಾಗಿ ಸುಖಿಯಲ್ಲದಿದ್ದರೂ, ದೈಹಿಕವಾಗಿಯಾದರೂ ಬದುಕಬಹುದಿತ್ತು. ಆದರೆ ಅವಳದು ಬಂಡಾಯ ಪ್ರವೃತ್ತಿ. ಅಂತಹ ಜೀವನ ನಡೆಸುವುದಕ್ಕಿಂತ ಸಾಯುವುದೇ ಮೇಲೆಂದು ನಿರ್ಧರಿಸಿದಳು. (ನನ್ನಲ್ಲೂ ಆಂತರಿಕವಾಗಿ ಸವತಿ ಮತ್ಸರ ಇರಲಿಲ್ಲವೆಂದರೆ ಆತ್ಮವಂಚನೆಯಾದೀತು.)

ಅಂಬೆ ಹಠ ತೊಟ್ಟಳು. ಭೀಷ್ಮನಿಗೆ, "ಒಂದು ಹೆಣ್ಣಿನ ಜೀವನ ಹಾಳು ಮಾಡಿದ ನೀನೂ ಒಬ್ಬ ಗಂಡಸಾ ? ಷಂಡ... ನಪುಂಸಕ... ಶಿಖಂಡಿ... ನಿನ್ನನ್ನು ಗಂಡಸಾದವನು ಕೊಂದರೂ ಪಾಪ. ಹೆಂಗಸಾದವಳು ಕೊಂದರೂ ಪಾಪ. ನಿನ್ನನ್ನು ನಿನ್ನಂತಹ ನಪುಂಸಕ ಶಿಖಂಡಿಯೇ ಕೊಲ್ಲಬೇಕು" ಎಂದು ಶಾಪ ಹಾಕಿ ಬೈಯುತ್ತಾ, ಭೀಷ್ಮನನ್ನು ಎದುರಿಸಿ ತನ್ನ ಮನಸ್ಸಿನ ಕ್ರೋಧವನ್ನೆಲ್ಲಾ ಕಾರಿಕೊಂಡಳು.

**ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಳು !**

ಅಂಬೆ ಕೈಗೊಂಡ ನಿರ್ಧಾರ ಸರಿಯೋ ತಪ್ಪೋ ಎಂದು ವಿವೇಚಿಸುವುದಕ್ಕಿಂತ, ಭೀಷ್ಮನ ನಡೆವಳಿಕೆಗಳನ್ನು ವಿವೇಚಿಸುವುದು ಸೂಕ್ತ. ಸತ್ಯವತಿಯು ಹೇಳಿದಳೆಂದು ನಮ್ಮನ್ನು ಅಪಹರಿಸಿದುದು, ಆಕೆ ಹೇಳಿದಳೆಂದು ನಮ್ಮನ್ನು ವಿಚಿತ್ರವೀರ್ಯನಿಗೆ ಮದುವೆ ಮಾಡಿದುದು, ಅವಳು ಹೇಳಿದಳೆಂದು ಅಂಬೆಯನ್ನು ಸಾಲ್ವನಲ್ಲಿಗೆ ಕರೆದೊಯ್ದದ್ದು... ಹಾಗಿದ್ದಲ್ಲಿ ಆತನಿಗೆ ಸ್ವತಃ ಬುದ್ಧಿಯೂ ಇಲ್ಲ; ಸ್ವಂತಿಕೆಯೂ ಇಲ್ಲ ಎಂದಂತಾಯಿತು. ಸತ್ಯವತಿ ತನ್ನ ಮಗ ಪ್ರಬುದ್ಧಮಾನಕ್ಕೆ ಬರುವವರೆಗೆ ಈತನನ್ನು ಸಂದರ್ಭಾನುಸಾರ ಸ್ವಾರ್ಥಕ್ಕೋಸ್ಕರ ಬಳಸಿಕೊಳ್ಳುತ್ತಾಳೆ ಎಂಬುದಾದರೂ ತಿಳಿಯಬಾರದೇ ?

ಮದುವೆಯ ನಂತರವಂತೂ ವಿಚಿತ್ರವೀರ್ಯನೂ ನಮ್ಮಿಬ್ಬರೊಂದಿಗೆ ರತಿವಿಲಾಸದಲ್ಲಿ ಕಳೆದನೇ ಹೊರತು ರಾಜಕಾರ್ಯದಲ್ಲಿ ತಲೆಹಾಕಲಿಲ್ಲ. ಸತ್ಯವತಿಯ ನಿರ್ದೇಶನದಂತೆ ಭೀಷ್ಮನೇ ವಿಚಿತ್ರವೀರ್ಯನ ಹೆಸರಿನಲ್ಲಿ ರಾಜ್ಯಭಾರ ಮುಂದುವರಿಸಿದ.

ನಮ್ಮಿಬ್ಬರಲ್ಲಿ ಸ್ವಲ್ಪ ಮಟ್ಟಿನ ಸವತಿ ಮತ್ಸರ ಬೇರೆಯಾದರೂ ಸುಳಿಯುತ್ತಿತ್ತು. ಆದರೆ ಅಕ್ಕನಲ್ಲವೇ ಎಂದು ನಾನೇ ಸುಧಾರಿಸಿಕೊಳ್ಳುತ್ತಿದ್ದೆ. ಆದರೆ ಕ್ರಮೇಣ ವಿಚಿತ್ರವೀರ್ಯನಿಗೆ ಗುಹ್ಯರೋಗ ಅಂಟಿಕೊಂಡಿದೆಯೆಂದು ತಿಳಿದ ಮೇಲಂತೂ ಅಂಬಿಕೆ ನಿಧಾನಕ್ಕೆ ಅವನಿಂದ ದೂರಾಗಲಾರಂಭಿಸಿದಳು. ಅಂಬೆಯಷ್ಟಲ್ಲದಿದ್ದರೂ ನನಗಿಂತಲೂ ಹೆಚ್ಚಿನ ಮಟ್ಟಿಗೆ ಅವಳಿಗೆ ಅಹಂಕಾರ, ಗರ್ವ ಇದ್ದುದರಲ್ಲಿ ಯಾವ ಅನುಮಾನವೂ ಇರಲಿಲ್ಲ, ಆದ್ದರಿಂದಲೇ ತಿರಸ್ಕಾರ ಮನೋಭಾವದಿಂದ ನೋಡಲಾರಂಭಿಸಿದಳು. ಗಂಡನ ಸೌಖ್ಯಕ್ಕಿಂತಲೂ ಅವಳಿಗೆ ರಾಜ್ಯವೈಭೋಗ ಮುಖ್ಯವಾಗಿತ್ತು. ಎಂದೂ ಗಂಡನ ಶುಶ್ರೂಷೆ ಮಾಡಲಿಲ್ಲ. ಎಲ್ಲವನ್ನೂ ನಾನೇ ನೋಡಿಕೊಳ್ಳಬೇಕಿತ್ತು. ರಾಜವೈದ್ಯರುಗಳು ನೀಡುವ ಪ್ರತಿಯೊಂದು ಔಷಧಗಳನ್ನು, ಪಥ್ಯಗಳನ್ನು ನಾನೇ ನೋಡಿಕೊಳ್ಳಬೇಕಾಗಿತ್ತು. ಅಂತೆಯೇ ಆತನ ಲೈಂಗಿಕ ತೃಷೆಯೂ ಸಹ.

ವಿಚಿತ್ರವೀರ್ಯನಿಗೆ ಹೆಸರಿಗೆ ತಕ್ಕಹಾಗೆ ವಿಚಿತ್ರವಾದ ವೀರ್ಯರೋಗವೇ ತಗುಲಿತ್ತು. ರಾಜವೈದ್ಯರುಗಳಿಗೂ ಸಹ ಮೊದಲಲ್ಲಿ ಈ ರೋಗದ ಲಕ್ಷಣಗಳನ್ನು ಗುರುತಿಸುವುದೂ ಸಾಧ್ಯ

ವಾಗಲಿಲ್ಲ. ಅದೊಂದು ಲೈಂಗಿಕ ರೋಗವಾದ್ದರಿಂದ ನನಗೂ ತಗಲೀತೆಂಬ ಭಯ ನನಗೆ. ಇದು ಅವನಿಗೆ ಹೇಗೆ ತಗಲಿತ್ತು ಎಂಬುದೊಂದು ರಹಸ್ಯ. ಬಹುಶಃ ನಮ್ಮಿಬ್ಬರಲ್ಲೂ ಏಕಕಾಲಕ್ಕೆ ಸಂಪರ್ಕ ಹೊಂದುತ್ತಿದ್ದುದರಿಂದ ಬಂದಿರಬಹುದು; ಇಲ್ಲವೇ ನಾವಿಬ್ಬರನ್ನೂ ಬಿಟ್ಟು ಬೇರೆ ಸ್ತ್ರೀಯರೊಂದಿಗೆ ಸಂಪರ್ಕ ಹೊಂದಿ ಅಂಟಿಸಿಕೊಂಡು ಬಂದಿರಬಹುದು.

ಈ ಕಾಯಿಲೆ ಕಾಣಿಸಿಕೊಂಡ ಕೆಲ ವರ್ಷಗಳಲ್ಲಿ ವಿಚಿತ್ರವೀರ್ಯ ಅಸುನೀಗಿದ. ತನ್ನೊಂದಿಗೆ ಈ ರೋಗವನ್ನು ಕರೆದೊಯ್ಯದೇ ನನ್ನಲ್ಲಿ ಸ್ವಲ್ಪ ಉಳಿಸಿಹೋದ. ಅಂಬಿಕೆ ಅವನ ಸಹವಾಸ ಮಾಡಲಿಲ್ಲವಾದ್ದರಿಂದ ಸುರಕ್ಷಿತವಾಗಿದ್ದಳು. ಒಮ್ಮೆಲೇ ರೋಗಿಯನ್ನು ಕೊಲ್ಲದೆ ದಿನೇ ದಿನೇ ಸ್ವಲ್ಪ ಸ್ವಲ್ಪವೇ ಕೊಲ್ಲುವ ಈ ಮಹಾಮಾರಿ ನನ್ನನ್ನು ಯಾವಾಗ ಸೆಳೆಯುವುದೋ ಗೊತ್ತಿಲ್ಲ.

ಸಂತಾನವಿಲ್ಲದೇ ವಿಚಿತ್ರವೀರ್ಯ ಸತ್ತದ್ದರಿಂದ ಹೆಂಡತಿಯರಾದ ನಮಗಿಂತಲೂ ನಿಜವಾಗಿ ದುಃಖವಾದುದು ಸತ್ಯವತಿಗೇ. ಏಕೆಂದರೆ ಯಾರು ತನ್ನ ಸಂತತಿಯೇ ರಾಜ್ಯಭಾರ ಮಾಡಬೇಕೆಂದು ನಿರ್ಧರಿಸಿ ಬಂದಿದ್ದಳೋ ಅವಳ ಮಕ್ಕಳೇ ಮಕ್ಕಳಾಗದಂತೆ ಸತ್ತುಹೋದದ್ದು ದುಃಖದ ಪರಮಾವಧಿಯೇ ಸರಿ. ಯಾವ ಬ್ರಾಹ್ಮಣ– ಪರಾಶರ ಮುನಿ– ಈಕೆಯನ್ನು ಅನುಭವಿಸಿ, ಸುಖವುಂಡು ಹೋಗಿದ್ದನೋ ಆ ಎಲ್ಲಾ ಮೋಸವನ್ನು, ಅನ್ಯಾಯವನ್ನು, ಅಕ್ರಮವನ್ನು ತನ್ನನ್ನು ನಿಜವಾಗಿಯೂ ಪ್ರೀತಿಸಿದ ಕ್ಷತ್ರಿಯನಲ್ಲಿ ಪಡೆಯುವ ಉಮೇದಿಯ ಸತ್ಯವತಿಗೆ ಹೀಗಾಗಬಾರದಾಗಿತ್ತು.

ಆದಾಗ್ಯೂ ಛಲ ಬಿಡದೇ ಪರಾಶರ ಮುನಿಯಿಂದ ತನ್ನಲ್ಲಿ ಹುಟ್ಟಿದ್ದ ಮಗನನ್ನು ಕರೆಸಿದಳು. ಈ ಮೂಲಕವಾದರೂ ತನ್ನ ಸಂತತಿ ಮುಂದುವರಿಯಲೆಂದು, ಅಂಬಿಕೆ ಮತ್ತು ನನ್ನನ್ನು ಕರೆಸಿ ಆತನೊಂದಿಗೆ ನಿಯೋಗಕ್ಕೆ ಸಿದ್ಧರಾಗುವಂತೆ ತಿಳಿಸಿದಳು. ಅಂಬಿಕೆ ನೇರವಾಗಿ ತಿರಸ್ಕರಿಸಿದಳು. ನನಗೆ ಆ ಧೈರ್ಯವಾಗಲಿಲ್ಲ. ಆದರೆ ಸತ್ಯವತಿಯ ಅಧಿಕಾರದ ಮುಂದೆ ನಮ್ಮ ಮಾತು ನಡೆಯಲಿಲ್ಲ. ವಿಚಿತ್ರವೀರ್ಯ ಸತ್ತುಹೋದ ಸ್ವಲ್ಪ ದಿನಗಳೊಳಗೇ ಆತನ ಹೆಂಡತಿಯರು ಗರ್ಭವತಿಯರಾಗಿದ್ದರೆಂದರೇ, ಮುಂದೆ ಹುಟ್ಟುವ ಮಕ್ಕಳು ಅವನವೇ ಎಂದು ಜನ ನಂಬುತ್ತಾರೆ ಎಂಬುದು ಅವಳ ವಾದ. ಅದಕ್ಕಾಗಿಯೇ ಎಷ್ಟೂ ತಡಮಾಡದೇ ಈ ಪ್ರಕ್ರಿಯೆಗೆ ಮುಂದಾದಳು. ನಂತರ ನಮ್ಮೊಂದಿಗೆ ಸಮಾಗಮಕ್ಕೆ ನಿಯೋಜಿತನಾಗಿದ್ದ ವ್ಯಾಸ ಯಾವುದೋ ಕಾರಣದಿಂದ ಒಂದು ವರ್ಷ ಕಾಲಾವಕಾಶ ಕೇಳಿದ್ದರೂ ನಿರಾಕರಿಸಿದ್ದಳು.

ನಮ್ಮನ್ನು ಎಲ್ಲ ಕಾಲಕ್ಕೂ ಕೇವಲ ಪ್ರಾಣಿಗಳಂತೆ ಮಕ್ಕಳನ್ನು ಹೆರುವ ಯಂತ್ರಗಳಂತೆ ನೋಡಿದರೇ ವಿನಃ ಮನುಷ್ಯರಂತೆ ಕಾಣಲಿಲ್ಲ. ನಾವು ಅಪಹೃತರಾಗಿ ಬಂದಾಗಿನಿಂದಲೂ ಈ ಸ್ಥಿತಿಯಲ್ಲಿ ವ್ಯತ್ಯಾಸಗಳೇನೂ ಆಗಿಲ್ಲ.

ಅಂಬಿಕೆ ಋತುಸ್ನಾನ ಮಾಡಿದ್ದ ಹದಿನಾಲ್ಕನೆಯ ದಿನ ರಾತ್ರಿ ವ್ಯಾಸ ಅನಿರೀಕ್ಷಿತವಾಗಿ ಅವಳ ಕೋಣೆ ಪ್ರವೇಶಿಸಿದ. ಮೊದಲೇ ಆಕೆ ಪ್ರತಿಭಟಿಸಿದ್ದರಿಂದ, ಯಾವ ಕಾರಣದಿಂದಲೂ ಆಕೆ ಆತನ ಸಂಪರ್ಕದಿಂದ ವಿಮುಖಳಾಗದಂತೆ ನೋಡಿಕೊಳ್ಳಲಾಗಿತ್ತು. ಮನಸಿಲ್ಲದ ಮನಸ್ಸಿನಿಂದಲೇ ಅವನೊಡನೆ ಬೆರೆತಳು. ಸತ್ಯವತಿಗೆ ಕೇವಲ ವಂಶೋದ್ಧಾರಕರನ್ನು ನೀಡುವುದೇ ಮುಖ್ಯವಾಗಿತ್ತು.

ಸುಮಾರು ಎಂಟು ದಿನಗಳ ನಂತರ. ಅಂದರೆ ನನ್ನ ರಜಸ್ಸು ಕಳೆದ ಹತ್ತು ದಿನಗಳ ನಂತರ ವ್ಯಾಸ ನನ್ನ ಕೋಣೆಯನ್ನೂ ಪ್ರವೇಶಿಸಿದ. ಅಂಬಿಕೆಯಂತಲ್ಲದಿದ್ದರೂ ನನಗೆ ಮೂರು ದಿನಗಳ ಮೊದಲೇ ಆತ ಬರುವ ದಿನ ನಿಗದಿಯಾಗಿತ್ತು. ರಾತ್ರಿಯ ದೀಪದ ಬೆಳಕಿನಲ್ಲಿ ವ್ಯಾಸ ತುಂಬಾ ಕಪ್ಪಾಗಿರುವ, ಗಡ್ಡ ಮೀಸೆ ಯದ್ವಾತದ್ವವಾಗಿ ಬೆಳೆದಿರುವ, ಕಾಡುಸನ್ಯಾಸಿಯ ವೇಷ ಧರಿಸಿದಂತಿರುವ, ಬೆವರಿನ ವಾಸನೆಯುಕ್ತ ಮನುಷ್ಯನಾಗಿ ಕಂಡ. ನನ್ನ ಕೋಮಲತೆಯನ್ನು ದಹಿಸಲೆಂದೇ ಬಂದ. ಬೇಕಂತೆ ನನ್ನನ್ನು ಭಯವಿಹ್ವಲಳನ್ನಾಗಿಸಿದ. ಆ ಭಯದಿಂದ ನನ್ನಲ್ಲಿ

ರಕ್ತಸಂಚಾರವೇ ಸ್ಥಗಿತಗೊಂಡಂತಾಗಿ ಬೆದರಿಕೊಂಡೆ. ಸಮಾಗಮದ ಸಮಯದಲ್ಲಿ ಅತ್ಯಂತ ಪ್ರಶಾಂತಳಾಗಿ, ನಿರ್ಲಿಪ್ತಳಾಗಿ ಇರಬೇಕೆಂಬ ನನ್ನ ಪ್ರಯತ್ನವೇನೂ ಸಾಧ್ಯವಾಗಲಿಲ್ಲ.

ಆಮೇಲೂ ಸುಮಾರು ೮ - ೧೦ ದಿನಗಳೂ ವ್ಯಾಸರು ರಾತ್ರಿಯನ್ನು ನನ್ನ ಶಯ್ಯಾಗೃಹದಲ್ಲಿ ಕಳೆದ. ವಿಚಿತ್ರವೆಂದರೆ ಕೇವಲ ಹದಿನೈದು ದಿನಗಳೊಳಗೆ ಫಲಿತಾಂಶ ತಿಳಿದುಹೋಯಿತು. ನಾವಿಬ್ಬರೂ ಹೊರಗಾಗಲಿಲ್ಲ.

ಅತ್ತೆಯವರಂತೆ ಸತ್ಯವತಿ ನಮ್ಮನ್ನು ಉಪಚರಿಸಲಾರಂಭಿಸಿದಳು. ನಿಗದಿತ ಸಮಯಕ್ಕೆ ಸರಿಯಾಗಿ ನಮಗೆ ಊಟ ಉಪಚಾರಗಳು. ಹಬ್ಬದ ಸಡಗರವೇ ನಡೆಯುತ್ತಿತ್ತು. ಗರ್ಭವತಿಯಾಗುವ ಸೌಖ್ಯ ಆಗಲೇ ನಮಗೆ ಅರ್ಥವಾದದ್ದು. ಇಷ್ಟು ವರ್ಷ ವಿಚಿತ್ರವೀರ್ಯನೊಂದಿಗೆ ನಿರಂತರವಾಗಿ ಸಂಯೋಗಗೊಂಡಿದ್ದರೂ ಸಹ ಯಾಕೆ ನಾವು ಫಲಿತಗೊಳ್ಳಲಿಲ್ಲ ಎಂಬುದೇ ತಿಳಿಯುತ್ತಿರಲಿಲ್ಲ. ಎಲ್ಲರಂತೆ ಆತನೂ ವೀರ್ಯ ಸ್ಖಲನಗೊಳಿಸುತ್ತಿರಲಿಲ್ಲವೇ ? ಬಹುಶ ಅದು ವೀರ್ಯಕ್ಕೆ ಫಲಿತಗೊಳಿಸುವ ಶಕ್ತಿ ಇರಲಿಲ್ಲವೇನೋ ಅನಿಸುತ್ತದೆ. ಆದರೆ ವ್ಯಾಸ ನನ್ನೊಂದಿಗೆ ಹತ್ತು ದಿನ ಕಳೆದಿದ್ದರೂ ಅಂಬಿಕೆಯೊಡನೆ ಕಳೆದದ್ದು ಕೇವಲ ಒಂದೇ ಒಂದು ರಾತ್ರಿ. ಅದೂ ಪ್ರತಿಭಟನೆಯೊಂದಿಗೆ. ಬಹುಶಃ ಅಂಬಿಕೆಯು ಪ್ರತಿಭಟಿಸದಿದ್ದರೆ ಸತ್ಯವತಿಯು ನನ್ನೊಂದಿಗೆ ವ್ಯಾಸನನ್ನು ಸಮಾಗಮಕ್ಕೆ ಕಳುಹಿಸುತ್ತಲೇ ಇರಲಿಲ್ಲವೇನೋ. ಆಕೆಯ ಅಸಹಕಾರದಿಂದ ನನ್ನಲ್ಲಾದರೂ ಮಕ್ಕಳಾಗಲೀ ಎಂಬುದು ಆಕೆಯ ಆಶಯವಾಗಿದ್ದೀತು.

ದಿನದಿನಕ್ಕೂ ಗರ್ಭ ಬೆಳೆಯಲಾರಂಭಿಸಿತು. ತಿಂಗಳು ತುಂಬಲಾರಂಭಿಸಿದವು.

ಅಂಬಿಕೆಗೆ ಪ್ರಸವ ವೇದನೆ ಪ್ರಾರಂಭವಾಯಿತು. ಸೂಲಗಿತ್ತಿಯರು, ಅದರಲ್ಲೂ ಅತ್ಯಂತ ಅನುಭವಸ್ಥರು ತಮ್ಮ ಕರ್ತವ್ಯದ ಮೇಲೆ ಹಾಜರಾದರು. ಅಂಬಿಕೆ ಅನುಭವಿಸಿದ ವಿಚಿತ್ರ ನೋವನ್ನು ನೋಡಿಬಿಟ್ಟೆ. ವಾಸ್ತವವಾಗಿ ನನಗಿನ್ನೂ ದಿನಗಳು ತುಂಬಿರದಿದ್ದರೂ ನನಗೂ ನೋವು ಕಾಣಿಸಿಕೊಂಡಂತಾಯಿತು. ಸ್ವಲ್ಪ ಪುಕ್ಕಲು ಸ್ವಭಾವದವಳಾದ ನಾನು, ಈ ಪಿಂಡವು ಇನ್ನಷ್ಟು ದಿನ ಒಳಗೇ ಇದ್ದರೆ ನನ್ನನ್ನೇ ಕೊಲ್ಲುವುದೇನೋ ಎಂದು ಭಯಭೀತಳಾಗಿ ಬಲವಂತವಾಗಿ ಒತ್ತಡ ನೀಡಿ ಹೊರದೂಡಲಾರಂಭಿಸಿದ್ದೆ. ಮಗು ತನಗಿನ್ನೂ ದಿನಗಳು ತುಂಬಿಲ್ಲವೆಂದು ಹೊರಬರಲು ನಿರಾಕರಿಸುತ್ತಿತ್ತು.

ಅಂಬಿಕೆಯ ಮಗು ದಷ್ಟಪುಷ್ಟವಾಗಿದ್ದುದರಿಂದ ಹೊರಬರಲು ಅಸಾಧ್ಯ ಕಿರುಕುಳ ನೀಡಿರಬೇಕು. ಸೂಲಗಿತ್ತಿಯರು ಗರ್ಭದ್ವಾರದೊಳಕ್ಕೆ ಕೈಹಾಕಿ ಮಗುವನ್ನು ಹೊರತೆಗೆದರು. ಹುಟ್ಟುತ್ತಿದ್ದಂತೆಯೇ ಅಳಲಾರಂಭಿಸಿದ್ದ ಗಂಡುಮಗು ಆರೋಗ್ಯಪೂರ್ಣವಾಗಿತ್ತು. ಸತ್ತ ವಿಚಿತ್ರವೀರ್ಯನಿಗೆ ವರುಷ ತುಂಬುವ ಮೊದಲೇ ಗಂಡುಮಗುವಾದ ಸುದ್ದಿ ಊರಲ್ಲೆಲ್ಲಾ ಹರಡಿ ಜನರೆಲ್ಲಾ ಪುಳಕಿತರಾದರು. ಆದರೆ ದಿನದೆರಡು ದಿನಗಳಾದರೂ ಕಣ್ಣು ತೆರೆಯದಿದ್ದನ್ನು ಕಂಡು ಎಲ್ಲರೂ ಆಘಾತಗೊಂಡರು. ರೆಪ್ಪೆ ಬಿಡಿಸಿ ನೋಡಿದರು. ಕಪ್ಪುಗುಡ್ಡೆಗಳೇ ಕಾಣಲಿಲ್ಲ. ಪರೀಕ್ಷಿಸಿದ ರಾಜವೈದ್ಯರೆಲ್ಲಾ ದೃಷ್ಟಿ ಬರುವ ಸಾಧ್ಯತೆಯನ್ನು ಬಲವಾಗಿ ಅಲ್ಲಗಳೆದರು.

ಕುರುಡುಮಗುವಿಗೆ ಪಟ್ಟಾಭಿಷೇಕದ ಯೋಗವಿಲ್ಲವೆಂದರಿತ ಸತ್ಯವತಿ ಚಿಂತಾಕ್ರಾಂತಳಾದಳು. ಶಂತನು ತನ್ನನ್ನು ಮೋಹಿಸಿದ ತಪ್ಪಿಗೆ ಆತನ ರಾಜ್ಯಕ್ಕೆ ತನ್ನ ಮಕ್ಕಳೇ ಉತ್ತರಾಧಿಗಳಾಗಬೇಕೆಂದು ಪಟ್ಟು ಹಿಡಿದು, ಏನೇನೋ ಕನಸುಗಳನ್ನು ಕಂಡರೆ ವಿಧಿ ಈ ರೀತಿ ಆ ಕನಸುಗಳನ್ನೆಲ್ಲಾ ಕೊಲ್ಲುತ್ತದೆಯೆಂದು ಆಕೆ ನಿರೀಕ್ಷಿಸಿರಲಿಲ್ಲ.

ಅಂಬಿಕೆಗೆ ಕುರುಡು ಮಗು ಹುಟ್ಟಿದ್ದರಿಂದ ಎಲ್ಲರೂ ನನ್ನ ಗರ್ಭದತ್ತ ಭರವಸೆಯ ದೃಷ್ಟಿ ಹಾಯಿಸಲಾರಂಭಿಸಿದರು. ಇದರಿಂದಾಗಿ ನನಗೂ ಆತಂಕ ಜಾಸ್ತಿಯಾಯಿತು. ಜೊತೆಗೆ ನನ್ನಲ್ಲಿ ಹುಟ್ಟುವ ಮಗುವೇನಾದರೂ ಅಂಗವಿಕಲವಾದರೆ ಎಂಬ ಭಯವೂ ಕಾಡಿತು. ನನ್ನಲ್ಲಿ ಪರಿಪೂರ್ಣ

ಗಂಡುಮಗು ಹುಟ್ಟಬೇಕೆಂದೂ, ಅದು ಈ ರಾಜ್ಯದ ರಾಜನಾಗಬೇಕೆಂದೂ ಬಯಸಿದಿರುವಷ್ಟು ನಿರಾಶಾವಾದಿ ನಾನಾಗಿರಲಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ನನ್ನ ತವಕ ದಿನದಿನಕ್ಕೂ ಅತಿಯಾಯಿತು. ಈ ಎಲ್ಲದರ ತೀವ್ರತೆಯ ಫಲವೋ ಏನೋ ಮೂರು ದಿನ ಮೊದಲೇ ನೋವು ಕಾಣಿಸಿಕೊಂಡಿತು. ಅಂಬಿಕೆಯ ಬಗೆಗಿಂತಲೂ ಹೆಚ್ಚಿನ ಕಾಳಜಿಯನ್ನು ನನ್ನ ಕಡೆ ಹರಿಸಿದರು.

ಪ್ರಸೂತಿಗೆಂದು ಬಂದ ಸೂಲಗಿತ್ತಿಯರು ನನ್ನ ಮರ್ಮಾಂಗ ಪ್ರದೇಶಕ್ಕೆ ಹರಡಿರುವ ರೋಗವನ್ನು ಗುರುತಿಸಿದರು. ಕಿಬ್ಬೊಟ್ಟೆಯಿಂದ ಹಿಡಿದು ಮೂತ್ರನಾಳದ ಕೆಳಗಿನ ತೊಡೆಯ ವರೆಗೆ ಆ ರೋಗದ ವ್ಯಾಪ್ತಿ ಪಸರಿಸಿತ್ತು. ಕೆಂಪಗೆ ಒರಟೊರಟಾಗಿ ಗಾಯದ ಗುಂದೆಗಳು ಹರಡಿದ್ದವು. ಈ ರೋಗಕ್ಕೆ ಮದ್ದೇ ತಮಗೆ ತಿಳಿದಿಲ್ಲವೆಂದು ಅವರು ಪರಿತಪಿಸಿದರು. ಈಗಿನ್ನೂ ಪ್ರಾರಂಭದ ಅವಸ್ಥೆಯಲ್ಲಿದ್ದು ಮುಂದೆ ಯಾವ ರೀತಿ ವ್ಯಾಪಿಸಬಹುದೋ ಎಂಬ ಯೋಚನೆಯೇ ನನ್ನನ್ನು ಇನ್ನಷ್ಟು ನಡುಗಿಸಿತು. ವಿಚಿತ್ರವೀರ್ಯ ಇದೇ ರೋಗದಿಂದಲೇ ಮರಣ ಹೊಂದಿದ್ದು. ರೋಗ ಅವರಿಗೆ ತಗುಲಿದ ನಂತರ ಅಂಬಿಕೆ ತನಗೆಲ್ಲಿ ಅಂಟೀತೋ ಎಂಬ ಭಯದಿಂದ ಅವರ ಹತ್ತಿರಕ್ಕೆ ಬರಲಿಲ್ಲ. ನಾನು ಅನಿವಾರ್ಯವಾಗಿ ಅವರ ಸೇವೆಯಲ್ಲಿ ತೊಡಗಬೇಕಾಗಿತ್ತು. ಮತ್ತು ಈ ಸಂದರ್ಭದಲ್ಲಿಯೇ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದಾಗ ಅನಿವಾರ್ಯ ಸಂಭೋಗ ಕ್ರಿಯೆಯಲ್ಲಿಯೂ ಪಾಲ್ಗೊಳ್ಳಬೇಕಾಗುತ್ತಿತ್ತು. ಆ ಕಾರಣದಿಂದಲೇ ಈ ರೋಗ ನನಗೂ ಬಂದಿರುವುದರಲ್ಲಿ ಯಾವುದೇ ಅನುಮಾನವಿರಲಿಲ್ಲ.

ಪ್ರಸವ ಕ್ರಿಯೆಯಲ್ಲಿ ನಿರೀಕ್ಷೆಗಿಂತಲೂ ಹೆಚ್ಚಿನ ವೇದನೆಯಾಯಿತು. ಮೊದಲೇ ಗಾಯವಾಗಿದ್ದ ಯೋನಿಗೋಡೆ ಹೆಚ್ಚು ವಿಕಸನ ಹೊಂದಲು ಭಯಂಕರ ನೋವನ್ನು ಕೊಟ್ಟಿತು. ಆ ಭಾಗದ ಚರ್ಮ ಹರಿದಂತಾಗಿ ರಕ್ತಸ್ರಾವವಾಯಿತು. ನಂತರ ಅತೀವ ವೇದನೆಯಿಂದ ಪ್ರಜ್ಞೆ ಕಳೆದುಹೋಯಿತೋ ಏನೋ. ಕಣ್ಣುಬಿಟ್ಟಾಗ ಪಕ್ಕದಲ್ಲಿ ಗಂಡುಮಗುವಿತ್ತು. ಈವರೆಗಿನ ಕಷ್ಟ, ನೋವುಗಳೆಲ್ಲಾ ಮರೆತು ಹೋಗಿ ನಗುವಿನ ಛಾಯೆ ಮೂಡಿತು. ಕಣ್ಣು ಬಿಟ್ಟುಕೊಂಡು ಕೈಕಾಲು ಆಡಿಸುತ್ತ ಆರೋಗ್ಯಕರವಾಗಿದ್ದ ಮಗುವನ್ನು ಕಂಡು, ಮುಂದಿನ ಈ ನಾಡಿನ ರಾಜನಿಗೆ ಜನ್ಮ ನೀಡಿದ ಸಂತಸ ನನ್ನದಾಯಿತು. ಆದರೆ ನಾನಂತೂ ಇನ್ನು ಕೆಲವೇ ವರ್ಷಗಳಲ್ಲಿಯೇ ವಿಚಿತ್ರವೀರ್ಯರಂತೆ ಸಾಯುವುದು ನಿಶ್ಚಿತ. ನನ್ನ ಮಗನಿಗೆ ಮಾತ್ರ ಈ ರೋಗ ವಂಶಪಾರಂಪರ್ಯವಾಗಿ ಬರದಿರಲಿ ಎಂಬುದೇ ನನ್ನ ಹಾರೈಕೆ.

## ಅಂಬಿಕೆ

ನನ್ನಲ್ಲಿ ಕುರುಡುಮಗು ಹುಟ್ಟೀತೆಂದು ಯಾರೂ ನಿರೀಕ್ಷಿಸಿರಲಿಲ್ಲ. ಸತ್ಯವತಿಯ ಗರ್ವಕ್ಕೆ ಇದರಿಂದ ಬಲವಾದ ಪೆಟ್ಟು ಬಿದ್ದಿತ್ತು. ಮೇಲಾಗಿ ಅಂಬಾಲಿಕೆಗೆ ವಿಚಿತ್ರವೀರ್ಯನ ರೋಗ ಅಂಟಿಕೊಂಡಿದ್ದು ಮುಂದೆ ಅವಳಿಗೆ ಮಕ್ಕಳಾಗುವ ಸಾಧ್ಯತೆ ಇರಲಿಲ್ಲ. ಅಲ್ಲದೇ ಅವಳ ಮಗುವು ನನ್ನ ಮಗುವಿನಂತೆ ದಷ್ಟಪುಷ್ಟನಾಗಿರದೇ ತುಂಬಾ ಬಿಳಿಚಲು ಬಿಳಿಚಲಾಗಿತ್ತು. ಆದ್ದರಿಂದ ಅದೂ ಸಹ ಆಯಸ್ಸು ಪೂರ್ತಿ ಬದುಕುವ ಸಾಧ್ಯತೆ ಕಡಿಮೆಯಿತ್ತು.

ಒಂದು ದಿನವನ್ನು ನಿಗದಿಪಡಿಸಿ ಎರಡೂ ಮಕ್ಕಳಿಗೆ ನಾಮಕರಣ ಮಾಡಲಾಯಿತು. ನನ್ನ ಮಗನಿಗೆ ಧೃತರಾಷ್ಟ್ರನೆಂದೂ, ಅಂಬಾಲಿಕೆಯ ಮಗನಿಗೆ ಪಾಂಡುವೆಂದೂ ಹೆಸರಿಡಲಾಯಿತು.

ಇದಾಗಿ ಮೂರು ತಿಂಗಳೂ ಕಳೆದಿರಲಿಲ್ಲ. ಸತ್ಯವತಿ ಮತ್ತೆ ನನ್ನ ಬಳಿ ಬಂದವಳು ಅದೂ ಇದೂ ಮಾತನಾಡುತ್ತ ಮತ್ತೊಮ್ಮೆ ನಿಯೋಗಕ್ಕೆ ಸಿದ್ಧವಾಗಲು ತಿಳಿಸಿದಳು. ನಾನು ನಿರಾಕರಿಸಿದೆ. ಮೊದಲಿಗಿಂತಲೂ ಜೋರಾಗಿಯೇ ಪ್ರತಿಕ್ರಿಯಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಸತ್ಯವತಿ ನಿರ್ಧರಿಸಿಯಾಗಿತ್ತು. ಸರ್ವಾಧಿಕಾರಿಯಾದ ಅವಳ ನಿರ್ಧಾರವನ್ನು ಯಾರೂ

ನಿರಾಕರಿಸುವ ಧೈರ್ಯ ಮಾಡಬಹುದಾಗಿದ್ದರೂ ನಾನಂತೂ ವಿರೋಧಿಸುತ್ತಿದ್ದೆ. ನನ್ನನ್ನು ಅವರಿಬ್ಬರ ತಮ್ಮ ಭೋಗಿಸ್ಟ ಮಗನಿಗೆ ಕಟ್ಟಿ ನನ್ನನ್ನು ವಿಧವೆಯನ್ನಾಗಿಸಿದ್ದರಿಂದ. ಆ ನೈತಿಕ ಸ್ಥೈರ್ಯ ನನಗಿತ್ತು.

ಧೃತರಾಷ್ಟ್ರನಿಗೆ ಗರ್ಭ ಧರಿಸುವಾಗಲೂ ನಾನು ಬೇಡವೆಂದರೂ ಸತ್ಯವತಿ ತನ್ನ ಸ್ವಾರ್ಥಕ್ಕಾಗಿ, ಬಲವಂತವಾಗಿ ನನ್ನನ್ನು ಕಳುಹಿಸಿದ್ದಳು. ಅನಾಗರಿಕನಂತಿದ್ದ ಸತ್ಯವತಿಯ ಅಕ್ರಮ ಸಂತಾನ ವ್ಯಾಸನೊಂದಿಗೆ ನಾನು ಸಮಾಗಮವಾಗಬೇಕಂತೆ! ಹೇಯಂತೂ ಮತ್ಸ್ಯಗಂಧಿಯಾಗಿದ್ದರಿಂದ ತನ್ನ ಮಗನ ಮೇಲೆ ಪ್ರೀತಿಯಿರಬಹುದು. ಆದರೆ ತನ್ನ ಅನಧಿಕೃತ ಮಗನನ್ನು ಈ ರಾಜ್ಯದ ರಾಜನನ್ನಾಗಿ ಮಾಡಲು ಸಾಧ್ಯವಿಲ್ಲವಾದುದರಿಂದ ಅವನ ಮಕ್ಕಳಾದರೂ ರಾಜರಾಗಲಿ ಎಂಬುದು ಅವಳ ಉದ್ದೇಶ. ನಿಜವಾದ ವಾರಸುದಾರ ಭೀಷ್ಮ ಇನ್ನೂ ಜೀವಂತವಿದ್ದರೂ, ಈಗಲೂ ಈ ರಾಜ್ಯದ ಆಗುಹೋಗುಗಳನ್ನು ತಿಳಿದು ನಡೆಸಿಕೊಂಡು ಹೋಗುತ್ತಿದ್ದ ಅವನಿಗೇ ಯಾಕೆ ರಾಜ್ಯಭಾರ ಬಿಟ್ಟು ಕೊಡಬಾರದು? ಈ ಸತ್ಯವತಿಗೆ ಯಾಕಿಷ್ಟು ದುರಾಸೆ ಎಂಬುದೇ ತಿಳಿಯುತ್ತಿಲ್ಲ. ಅಂದು ಪರಾಶರನೆಂಬ ಬುದ್ಧಿವಂತ ಬ್ರಾಹ್ಮಣ ಈಕೆಯ ಮೇಲೆ ಅತ್ಯಾಚಾರ ಮಾಡಿ ಯಾವ ಜವಾಬ್ದಾರಿಯನ್ನೂ ಹೊರದೇ ಹೋದಾಗ ಸುಮ್ಮನಿದ್ದ ಈಕೆ, ಶಂತನು ಎಂಬ ಮೂರ್ಖ ಕ್ಷತ್ರಿಯ ತನ್ನನ್ನು ನಿಜವಾಗಿ ಪ್ರೀತಿಸುತ್ತೇನೆಂದು ಬಂದಾಗ ತನ್ನ ಮಕ್ಕಳಿಗೇ ರಾಜ್ಯ ಸಿಗಬೇಕೆಂದು ಪಟ್ಟು ಹಿಡಿದು ತನ್ನ ದುರಾಸೆಯನ್ನು ವ್ಯಕ್ತಪಡಿಸಿದ್ದು ಜಗಜ್ಜಾಹೀರಾಗಿದೆ. ಶಂತನು ಮಹಾರಾಜರಾದರೂ ಇವಳ ಮೇಲೆ ಆಸೆಯಾದಾಗಲೆಲ್ಲಾ ಮುಲಾಜಿಲ್ಲದೇ ಸಂಭೋಗಿಸಿ ಅಲ್ಲಿಯೇ ಬಿಟ್ಟು ಬರಬೇಕಿತ್ತು. ಆಗ ತಿಳಿಯುತ್ತಿತ್ತು!

ಧೃತರಾಷ್ಟ್ರ ಕುರುಡನಾದರೂ ದಷ್ಟಪುಷ್ಟವಾಗಿ ಹುಟ್ಟಿದನೆಂದು ಹೇಳಿ ಅಂಬಾಲಿಕೆಗಿಂತ ಹೆಚ್ಚಾಗಿ ನನಗೇ ಮತ್ತೊಮ್ಮೆ ವ್ಯಾಸನೊಂದಿಗೆ ಕೂಡುವಂತೆ ಕೇಳುತ್ತಿದ್ದಾಳೆ. ನನಗೆ ಗೊತ್ತಿದೆ– ನಾನು ಸಾಧ್ಯವಿಲ್ಲವೆಂದರೂ ನನ್ನ ಕೈಕಾಲು ಕಟ್ಟಿಹಾಕಿಯಾದರೂ ನನಗೆ ಮಕ್ಕಳಾಗುವಂತೆ ಮಾಡುತ್ತಾರೆಂದು. ಮೊದಲ ನನ್ನ ಪ್ರತಿರೋಧಕ್ಕೆ ಆಕೆ ಒಪ್ಪದಾದಾಗ ನಾನೇ ಸುಮ್ಮನಾಗಿ ಮೌನದಿಂದಲೇ ಸಮ್ಮತಿ ಸೂಚಿಸಿದೆ.

ವ್ಯಾಸ ನಿಗದಿತ ದಿನದ ರಾತ್ರಿ ಬರುವುದಾಗಿ ತಿಳಿಯಿತು. ಆ ಕಾಡಿನ ಪ್ರಯಾಣದಿಂದಾಗಿ ದಣಿದು ಬರುವ ಆತನಿಗೆ ಆ ರಾತ್ರಿ ತಾನು ಯಾರೊಂದಿಗೆ ಕಳೆಯುತ್ತಿದ್ದೇನೆಂದೇ ತಿಳಿಯುವುದಿಲ್ಲ.

ಆ ದಿನ ಅಗತ್ಯಕ್ಕಿಂತಲೂ ಹೆಚ್ಚಿಗೆ ಸಿಂಗರಿಸಿಕೊಂಡೆ. ಸತ್ಯವತಿಗೆ ಆಶ್ಚರ್ಯವಾಗಿರಬೇಕು– ತನ್ನ ಸೊಸೆಯೇ ಸ್ವಇಚ್ಛೆಯಿಂದ ಸಿದ್ಧಳಾಗಿದ್ದಾಳಲ್ಲ ಎಂದು. ರಾತ್ರಿ ವ್ಯಾಸ ಭೋಜನವನ್ನು ಮುಗಿಸಿ ಶಯ್ಯಾಗೃಹಕ್ಕೆ ಆಗಮಿಸುವ ವೇಳೆಗೆ ನನ್ನ ದಾಸಿಯೊಬ್ಬಳನ್ನು, ನನ್ನ ಒಡವೆಗಳನ್ನು ಹಾಕಿ ಸಿದ್ಧಪಡಿಸಿ ಕೂರಿಸಿದ್ದೆ. ವ್ಯಾಸ, ಇಷ್ಟು ಉದ್ದನೆಯ ಗಂಟು ಕೂದಲ ಗಡ್ಡದ ವ್ಯಾಸ, ಕೊಳಕು ಕಾವಿಯ ಬೆವರು ವಾಸನೆಯ ವ್ಯಾಸ, ನನ್ನ ದಾಸಿಯನ್ನು ನಾನೇ ಎಂದು ಭ್ರಮಿಸಿದ್ದ. ಆಕೆಯೂ ಯಾವುದೇ ಮುಜುಗರವಿಲ್ಲದೇ ಉಪಚರಿಸಿದಳು. ಕಳೆದ ಬಾರಿಯ ನೆನಪಿನಲ್ಲಿ ಅವತ್ತಿಗೂ ಇವತ್ತಿಗೂ ಇರುವ ವ್ಯತ್ಯಾಸವನ್ನು ಗುರುತಿಸಿದನಂತೆ. ಕುರುಡು ಮಗುವಿನ ಬಗ್ಗೆಯೂ ಕೇಳಿದನಂತೆ. ಹಾಗೆಂದು ಬೆಳಿಗ್ಗೆ ದಾಸಿ ಹೇಳಿದಳು. ಆಕೆಯೂ ಜಾಣೆ. ತಾನೇ ಅಂಬಿಕೆಯೆಂಬಂತೆ ವರ್ತಿಸಿದ್ದಳಂತೆ. ವ್ಯಾಸ ಹೊರಟುಹೋದ ನಂತರ ಈ ವಿಚಾರ ಬಹಿರಂಗವಾಗಿ ಸತ್ಯವತಿಯ ಸಿಟ್ಟನ್ನು ಎದುರಿಸಬೇಕಾಯಿತು. ಅಲ್ಲಿಂದ ಮುಂದೆ ಮಕ್ಕಳನ್ನು ಪಡೆಯುವ ಪ್ರಯತ್ನವನ್ನು ಸತ್ಯವತಿ ಮಾಡಲಿಲ್ಲ. ಹೀಗೆ ದಾಸಿಯಿಂದ ಹುಟ್ಟಿದ ಮಗುವಿಗೆ ವಿದುರ ಎಂದು ನಾಮಕರಣ ಮಾಡಲಾಯಿತು.

▼

●

ಕಂನಾಡಿಗಾ ನಾರಾಯಣ, ರಾಷ್ಟ್ರೀಯ ಹೆದ್ದಾರಿ ವಿಭಾಗ. ಚಿತ್ರದುರ್ಗ - ೫೭೭ ೫೦೧
✆: ೯೪೪೮೧ - ೫೪೪೫೪

# ನಮ್ಮ ಪ್ರೇಕ್ಷಕ ವರ್ಗ

## ದೇಶಪಾಂಡೆ ಸುಬ್ಬರಾಯ

ಯಾವುದೇ ಕಲೆಯಲ್ಲಿಯೂ ಎರಡು ಘಟಕಗಳಿರುತ್ತವೆ. ಒಂದು ಕೊಡುವ ಘಟಕ, ಇನ್ನೊಂದು ಸ್ವೀಕರಿಸುವ ಘಟಕ. ಕಲೆಯ ಭಾಷೆಯಲ್ಲಿಯೇ ಹೇಳುವದಾದರೆ ಒಂದು ಸೃಷ್ಟಿಸುವ ಘಟಕ, ಇನ್ನೊಂದು ಆಸ್ವಾದಿಸುವ ಘಟಕ. ಆದರೆ, ಕಲೆಯಿಂದ ಕಲೆಗೆ. ಈ ಕೊಡುಕೊಳ್ಳುವಿಕೆಯ ಕ್ರಿಯೆಯಲ್ಲಿ ಸ್ವಲ್ಪ ಭಿನ್ನತೆ ಬರುತ್ತದೆ ಎಂಬುದನ್ನೂ ನಾವು ಗಮನಿಸಬೇಕು. ಲೇಖಕನೊಬ್ಬನ ಬರೆಯುವ ಕ್ರಿಯೆಗೂ ವಾಚಕನೊಬ್ಬನ ಓದುವ ಕ್ರಿಯೆಗೂ ನೇರ ಸಂಬಂಧವೇ ಅನಗತ್ಯ. ಚಿತ್ರಕಾರನೊಬ್ಬನಿಗೂ ಯಥಾರ್ಥವಾಗಿ ಅನ್ವಯಿಸುವ ಮಾತು ಇದು. ಗಾಯಕನೊಬ್ಬ ನಮಗೆ ದೃಷ್ಟಿಗೋಚರನಾಗಿರದಿದ್ದರೂ ಆತನ ಗಾಯನ ನಮ್ಮನ್ನು ತಣಿಸುವ ಸಾಧ್ಯತೆ ಇದ್ದೇ ಇದೆ. ಆದರೆ ಈ ಮಾತು ರಂಗಭೂಮಿಗೆ ಖಂಡಿತಕ್ಕೂ ಅನ್ವಯಿಸಲಾಗದ್ದು. ಕೊಡುಕೊಳ್ಳುವಿಕೆಯ ಕ್ರಿಯೆ ಇಲ್ಲಿ ನೇರವಾಗಿ ಮತ್ತು ಪ್ರತ್ಯಕ್ಷವಾಗಿ ನಡೆಯುವಂತಹದು. ಆದ್ದರಿಂದ, ಸೃಷ್ಟಿ ಮತ್ತು ಆಸ್ವಾದನೆಗಳ ತಾಜಾ ಮುಖಾಮುಖಿ ಎಂತಲೂ ಇದನ್ನು ಗುರುತಿಸಬಹುದೇನೋ. ಅಥವಾ, ಇನ್ನೊಂದು ದೃಷ್ಟಿಯಿಂದ, ಪ್ರೇಕ್ಷಕರೂ ಒಂದು ಸಮೂಹವಾದ್ದರಿಂದ ಮತ್ತು ನಾಟಕಕಾರ, ನಟ, ನಿರ್ದೇಶಕರಾದಿಗಳೂ ಒಂದು ಸಮೂಹವಾದ್ದರಿಂದ, ಎರಡು ಸಮೂಹಗಳ ಮಧ್ಯೆ ಮುಖಾಮುಖಿ ಉದ್ಭವಿಸುವ ಒಂದು ಸೃಷ್ಟಿಶೀಲ ಪರಸ್ಪರ ಪ್ರಕ್ರಿಯೆ ಎಂದೂ ಇದನ್ನು ಬಣ್ಣಿಸಬಹುದೇನೋ. ನಾನು ಇಷ್ಟೆಲ್ಲ ವಿವರಿಸುವುದರ ಉದ್ದೇಶವಿಷ್ಟೇ; ರಂಗಸೃಷ್ಟಿಯಂತಹ ಒಂದು ಸೃಜನಶೀಲ ಕಾರ್ಯದೊಳಗೆ, ನಾಟಕಕಾರ, ನಟ, ನಿರ್ದೇಶಕರಾದಿಗಳು ಎಷ್ಟು ಮಹತ್ವದವರೋ ಅಷ್ಟೇ ಮಹತ್ವದವನು ಪ್ರೇಕ್ಷಕ ಅನ್ನುವದು. ಈ ಸೃಷ್ಟಿಕಾರ್ಯದೊಳಗೆ, ರಂಗಭೂಮಿಯಲ್ಲಿ ನಟನಿರಬೇಕಾದದ್ದು ಎಷ್ಟು ಅವಶ್ಯವೋ ಅಷ್ಟೇ ಅವಶ್ಯ ಸಭಾಗೃಹದಲ್ಲಿ (ಪ್ರೇಕ್ಷಾಗೃಹ ?) ಪ್ರೇಕ್ಷಕನಿರಬೇಕಾದದ್ದು. ಈ ದೃಷ್ಟಿಯಿಂದ, ಇನ್ನಾವುದೇ ಕಲೆಯಲ್ಲಿ ಆಸ್ವಾದಕನಿಗೆ ಇಲ್ಲದೇ ಇರುವ ಮಹತ್ವ ರಂಗಸೃಷ್ಟಿಯ ಕ್ರಿಯೆಯಲ್ಲಿ ಪ್ರೇಕ್ಷಕನಿಗೆ ಇದೆ. ತಾತ್ಪರ್ಯದಲ್ಲಿ ಹೇಳುವದಾದರೆ, ಪ್ರೇಕ್ಷಕ, ರಂಗಸೃಷ್ಟಿಯ ಒಂದು ಅನಿವಾರ್ಯ ಮತ್ತು ಅವಿಭಾಜ್ಯ ಅಂಗವಾಗಿದ್ದಾನೆ. ತಾತ್ಪರ್ಯದ ಮಾತಿನ ಈ ಕೊನೆಯ ಅಂಶವೇ ನನ್ನ ಮುಂದಿನ ಮಾತುಗಳಿಗೆ ಆರಂಭದ ಅಂಶವಾಗುತ್ತದೆ.

ಈಗ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಒಂದು ಸೃಷ್ಟಿಕ್ರಿಯೆಯ ಅನಿವಾರ್ಯ ಮತ್ತು ಅವಿಭಾಜ್ಯ ಅಂಗವಾಗುವ ಹಕ್ಕನ್ನು ಸ್ವೀಕರಿಸುವವ ಕೆಲವೊಂದು ಕರ್ತವ್ಯಗಳಿಗೂ ಬದ್ಧನಾಗಿರಬೇಕಾಗುತ್ತದೆ ಎನ್ನುವದು. ಒಂದು ಸೃಷ್ಟಿಕ್ರಿಯೆ ಯಶಸ್ವಿಯಾಗಬೇಕಾದರೆ, ಸಂಪೂರ್ಣವಾಗಬೇಕಾದರೆ, ಅದರ ಪ್ರತಿಯೊಂದು ಘಟಕವೂ ತನ್ನ ಗುಣಮೌಲ್ಯಗಳಿಂದ ಅದನ್ನು ಶ್ರೀಮಂತಗೊಳಿಸಬೇಕಾಗುತ್ತದೆ. ಆದ್ದರಿಂದ, ಈಗ, ರಂಗಸೃಷ್ಟಿ ಕ್ರಿಯೆಯಲ್ಲಿ ಒಂದು ಅನಿವಾರ್ಯ ಘಟಕವೆನಿಸಿದ ಪ್ರೇಕ್ಷಕ ಎಂತಹ ಗುಣಮೌಲ್ಯಗಳಿಂದ ಈ ಸೃಷ್ಟಿಯನ್ನು ಶ್ರೀಮಂತಗೊಳಿಸಬೇಕು ಎನ್ನುವ ಪ್ರಶ್ನೆ ಉದ್ಭವಿಸುವದು ಸಹಜ.

ಆದರೆ, ಈ ಪ್ರಶ್ನೆ ಉದ್ಭವಿಸಿದ್ದು ಇವತ್ತಲ್ಲ; ನಮ್ಮ ಎಲ್ಲ ಸಾಂಸ್ಕೃತಿಕ ವ್ಯವಹಾರದಂತೆ, ಇತಿಹಾಸದುದ್ದಕ್ಕೂ ನಮ್ಮ ರಂಗಭೂಮಿ ನಡೆದು ಬಂದಿರುವದರಿಂದ, ನಾಕನ್ನು ಒಂದೆಯೇ ಕೇಳಲ್ಪಟ್ಟ ಈ ಪ್ರಶ್ನೆಗೆ ಭರತಮುನಿ ತನ್ನ 'ನಾಟ್ಯಶಾಸ್ತ್ರ'ದಲ್ಲಿ ಉತ್ತರಿಸಿದ್ದಾನೆ. ಪ್ರೇಕ್ಷಕನಲ್ಲಿ ಆತ ಅಪೇಕ್ಷಿಸುವ ಗುಣಗಳು ಇವು :

೧. ಇಂದ್ರಿಯಗಳು ಜಾಗ್ರತವಾಗಿರಬೇಕು. ೨. ಗ್ರಹಣಶಕ್ತಿ ತೀಕ್ಷ್ಣವಾಗಿರಬೇಕು. ೩. ಊಹೆಯಲ್ಲಿ ಮತ್ತು ಅನ್ವೇಷಣೆಯಲ್ಲಿ ನಿಪುಣನಾಗಿರಬೇಕು. ೪. ನಿಸ್ಪೃಹನಾಗಿರಬೇಕು. ೫. ಆಸಕ್ತಿಯುಳ್ಳವನಾಗಿರಬೇಕು. ೬. ಇನ್ನೊಬ್ಬರ ಸಂತೋಷಕ್ಕೆ ಸಂತುಷ್ಟ. ಇನ್ನೊಬ್ಬರ ದುಃಖಕ್ಕೆ ದುಃಖಿತ ಮತ್ತು ಇನ್ನೊಬ್ಬರ ವ್ಯಕ್ತಿತ್ವದೆಡೆಯು ವಿನೀತನಾಗಿರಬೇಕು.

ಈಗ, ಇಂಥದೇ ರೀತಿಯ ಅರ್ಥ ಬರುವಂತಹ, ಕಾಳಿದಾಸ, ಭವಭೂತಿ ಇತ್ಯಾದಿಯವರ ಮಾತುಗಳನ್ನು ಹೇಳಿ ಇನ್ನಷ್ಟು ಬೆಳೆಸುವುದಕ್ಕಿಂತ, ಇಂಥ ಮಾತುಗಳಿಂದ ದಕ್ಕುವ ಒಟ್ಟು ಕ್ರೋಡೀಕೃತಗಳನ್ನು ಹೇಳಬಹುದು.

ತನ್ನ ವಿವೇಚನಾಶಕ್ತಿಯನ್ನು ಜಾಗ್ರತವಾಗಿಟ್ಟುಕೊಂಡೂ ಭಾವನಾತ್ಮಕವಾಗಿ, ನಾಟಕದೊಂದಿಗೆ ತಾದಾತ್ಮ್ಯವನ್ನು ಹೊಂದಿರಬೇಕು. ಹೀಗೆ ತಾದಾತ್ಮ್ಯವನ್ನು ಹೊಂದಿದರೂ, ಭಾವನೆಗಳ ಓಘಕ್ಕೆ ತನ್ನ ವ್ಯಕ್ತಿತ್ವವನ್ನು ಹರಿಬಿಡದೆ ತನ್ನ ವಿವೇಚನಾಶಕ್ತಿಯಿಂದ ನಾಟಕದ ಒಟ್ಟು ಮೌಲ್ಯವನ್ನು ವಿಶ್ಲೇಷಿಸುವ ಶಕ್ತಿಯುಳ್ಳವನಾಗಿರಬೇಕು.

ಯಾವ ಕಾಲಕ್ಕೂ ಸ್ವೀಕರಿಸಬಹುದಾದಂತಹ ಕೆಲವಾದರೂ ಮೌಲ್ಯಾತ್ಮಕ ಗುಣಗಳನ್ನು ಈ ವಿಶ್ಲೇಷಣೆ ಹೊಂದಿರುವುದರಿಂದ, ಇವುಗಳ ಬೆಳಕಿನ ಹಾದಿಯಲ್ಲಿಯೇ ನಾವು ಇಂದಿನ ನಮ್ಮ ಪ್ರೇಕ್ಷಕ ಘಟಕವನ್ನು ನೋಡಬಹುದೇನೋ.

ಈಗ, ನಮ್ಮ ಪ್ರೇಕ್ಷಕರನ್ನು ವಿಶ್ಲೇಷಿಸುವಾಗ, ನಾವು, ರಂಗಪ್ರಕಾರ, ಪರಿಸರ, ಶಿಕ್ಷಣ, ನಂಬಿಕೆಗಳು, ಜೀವನ ಕ್ರಮಗಳು, ಜೀವನ ಮೌಲ್ಯಗಳು ಇತ್ಯಾದಿ ಸಂಗತಿಗಳನ್ನು ಅವಶ್ಯವಾಗಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ನಮ್ಮ ಪ್ರೇಕ್ಷಕರಲ್ಲಿ ನಾವು ಮೂರು ವಿಭಾಗಗಳನ್ನು ಮಾಡಬಹುದು :

೧. ಜಾನಪದ ರಂಗಭೂಮಿಯ (ಗ್ರಾಮೀಣ) ಪ್ರೇಕ್ಷಕರು,
೨. ವೃತ್ತಿ / ವ್ಯವಸಾಯಿ ರಂಗಭೂಮಿಯ ಪ್ರೇಕ್ಷಕರು,
೩. ಹವ್ಯಾಸಿ ರಂಗಭೂಮಿಯ ಪ್ರೇಕ್ಷಕರು.

ಇಲ್ಲಿಯ ಮೊದಲ ಎರಡು ಬಗೆಯ ಪ್ರೇಕ್ಷಕರ ಬಗ್ಗೆ ನಾವು ಹೆಚ್ಚು ವಿವೇಚಿಸಬೇಕಾದ ಅಗತ್ಯವಿಲ್ಲ. ಏಕೆಂದರೆ;

೧. ಸಣ್ಣಾಟ, ದೊಡ್ಡಾಟ, ಬಯಲಾಟ, ರಾಧಾನಾಟ ಇತ್ಯಾದಿ ರಂಗಗಳು ಆತುಕೊಂಡ ನಂಬಿಕೆ ಜಗವೇ ಭೂಯಿಷ್ಠವಾದ ಮಂಡನೆಗಳಿಂದ ತಾವು ಏನನ್ನು ಪಡೆಯಬಯಸುತ್ತೇವೆ ಎಂಬುದು, ಈ ರಂಗವನ್ನು ನಂಬಿದ ಗ್ರಾಮೀಣ ಪ್ರೇಕ್ಷಕರಿಗೆ ಚೆನ್ನಾಗಿ ಗೊತ್ತು.
೨. ಅಳು - ನಗು, ಕೋಪ - ತಾಪ, ಮದ - ಮತ್ಸರ, ರಾಗ - ದ್ವೇಷಾದಿ, ಕಪ್ಪು - ಬಿಳುಪು ವ್ಯಾಪಾರಗಳೇ ಭೂಯಿಷ್ಠವಾದ ರಚನೆಯಿಂದ ತಾವು ಏನನ್ನು ಕೊಳ್ಳಬಯಸುತ್ತೇವೆ ಎಂಬುದು ವ್ಯವಸಾಯೀ ರಂಗವನ್ನು ನಂಬಿದ ಪ್ರೇಕ್ಷಕರಿಗೂ ಚೆನ್ನಾಗಿ ಗೊತ್ತು.

ತೊಂದರೆದಾಯಕ ವಿಶ್ಲೇಷಣೆ ಎಂದರೆ, 'ಹವ್ಯಾಸಿ' ರಂಗಭೂಮಿಯತ್ತ ನೋಡುವ 'ಶಿಕ್ಷಿತ' ಪ್ರೇಕ್ಷಕರದ್ದು. ಆದರೆ, ಈ ಬಗೆಯ ಪ್ರೇಕ್ಷಕರ ವಿಶ್ಲೇಷಣೆಗಿಂತಲೂ ಮುಂಚಿತವಾಗಿ ಮತ್ತು ಮುಖ್ಯವಾಗಿ ಹೇಳಲೇಬೇಕಾದ ಅಂಶವೆಂದರೆ; ನಮ್ಮಲ್ಲಿ ಈ ಬಗೆಯ 'ಹವ್ಯಾಸಿ ಪ್ರೇಕ್ಷಕ' ಎಂಬ ನಿಶ್ಚಿತವಾದ ವರ್ಗದ 'ಅಸ್ತಿತ್ವ'ವೇ ಸ್ಪಷ್ಟವಾಗಿ ಇಲ್ಲದ್ದು ಎಂಬುದು. ಪ್ರತಿಯೊಂದು 'ಹವ್ಯಾಸಿ' ನಾಟಕದ ಒಂದೊಂದು ಪ್ರಯೋಗದ ಟಿಕೆಟ್ಟು ಮಾರಾಟಕ್ಕೆ ಸ್ನೇಹಿತರ, ಸಹೋದ್ಯೋಗಿಗಳ, ನೆರೆಹೊರೆಯವರ ಮುಖಗಳನ್ನು ನೋಡುತ್ತ, ತಿರುಗುವ ಹವ್ಯಾಸಿ ತಂಡಗಳು ನನ್ನ ಈ ಮಾತನ್ನು ನಿರಾಕರಿಸಲಾರವು. ಒಂದು ಬದಿಯಲ್ಲಿ ನೂರಾರು

ಪ್ರಯೋಗಗಳನ್ನು ಮಾಡುವ ಪ್ರಮಾಣದ ಕಲಾವಿದರು ಕನ್ನಡದ ರಂಗದಲ್ಲಿ. ಒಂದೊಂದು ಪ್ರಯೋಗವೂ ಪರದಾಡುವ ಹವ್ಯಾಸಿ ತಂಡಗಳು. ಇದು ನನ್ನ 'ಪ್ರೇಕ್ಷಕ'ರನ್ನು ಕುರಿತು ಮಾತಿಗೆ ಹೇಳುತ್ತಿವಾದ್ದರಿಂದ. ಈ ಬಗ್ಗೆ ವಿವರವಾಗಿ ಮುಂದಿನ ಭಾಗಕ್ಕೆ ಬರುತ್ತೇನೆ.

ಈಗ, ನಾನು ಮೇಲೆ ಹೇಳಿದ ಅಂಶವನ್ನು ಉಲ್ಲೇಖಿಸಿ, ನಮ್ಮ ಹವ್ಯಾಸಿ ಪ್ರಯೋಗಕ್ಕೆ 'ಪ್ರೇಕ್ಷಕರು' ಒಂದನ್ನೇ ಅವರ. ಅವರನ್ನು ಪ್ರಧಾನ ಎರಡು ರೀತಿಯಲ್ಲಿ ವರ್ಗೀಕರಿಸಬಹುದು : ೧. ಆಸಕ್ತರು, ೨. ಆಢ್ಯರು.

ಮೊದಲನೆಯ ವರ್ಗದವರು, ಸಾಹಿತ್ಯದ ಮತ್ತೆ ಇತರ ಹವ್ಯಾಸಿ ತಂಡಗಳ ಸದಸ್ಯರುಗಳೇ ಆಗಿರುತ್ತಾರೆ. ಒಂದು ದೃಷ್ಟಿಯಿಂದ, ಹೊಸ ಕೃತಿಗಳ ಪರಿಚಯವಾದಂತೆಯೇ ಇದೂ ಕೂಡ ಒಬ್ಬ ಕವಿ ಬರೆಯುವುದನ್ನು ಇನ್ನೊಬ್ಬ ಕವಿಯೇ ಓದುವಂತಹ ಪರಸ್ಪರ ಪರಿಸ್ಥಿತಿ ನಿರ್ಮಾಣವಾದಂತೆ ಇದು. ಪ್ರಸ್ತುತವಾಗಿ ಪ್ರಯೋಗಗೊಳ್ಳುತ್ತಿರುವ ತಂಡ ಹೇಗೆ ಅಭಿನಯಿಸಬಹುದು ಎಂಬ ಒಳ್ಳೆಯ ಅಥವಾ ಕೆಟ್ಟ ಕುತೂಹಲವೇ ಇಲ್ಲಿಯ 'ಆಸಕ್ತರ' ಹಾಜರಿಯ ಹಿಂದಿರುವ ಸಾಧ್ಯತೆ ಹೆಚ್ಚು. ಆದರೆ, ಇವರಾದರೂ, ಮುಂದೆ, ಒಂದಿಲ್ಲೊಂದು ದಿನ ತಮ್ಮನ್ನೂ ಪ್ರಯೋಗಕ್ಕೆ ಒಡ್ಡಿಕೊಳ್ಳುವವರೇ ಆಗಿರುವವರಿಂದ ಇವರನ್ನು ಬೇರೆಯಾಗಿ ನೋಡುವ ಅಗತ್ಯವೇನೂ ಇಲ್ಲ.

ಆದರೆ, ನಿಜವಾಗಿಯೂ ನಾವು ಗಂಭೀರವಾಗಿ ಪರಿಗಣಿಸಬೇಕಾದ ವರ್ಗವೆಂದರೆ, ನಾನು ಹೇಳಿದ 'ಆಢ್ಯರ' ವರ್ಗ. ಬದುಕಿನ ಇನ್ನು ಅನ್ಯ ವ್ಯವಹಾರ ಕ್ಷೇತ್ರಗಳಲ್ಲಿ, ವಿಶೇಷವಾಗಿ, ಹಣ ಮತ್ತು ಅಧಿಕಾರ ಎತ್ತಿ ಹಿಡಿದಿರಬಹುದಾದ ಕ್ಷೇತ್ರಗಳಲ್ಲಿ ಕೊಂಚ ಮೇಲ್ಸ್ತರದಲ್ಲಿರುವ ಈ ಜನ, ತಮ್ಮ ಆ ಕ್ಷೇತ್ರಗಳಲ್ಲಿಯ ಪ್ರತಿಷ್ಠೆಗಳನ್ನು ಇಲ್ಲಿಯೂ ಕೂಡ ಮುಂದಿನ ಕುರ್ಚಿಗಳಿಗೇ ಬದಲಾಯಿಸಿಕೊಳ್ಳುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಪ್ರಕಟ ಪಾಸುಗಳೇ ಇವರಿಗೆ ಫ್ರೀಪ್ಯಾಕ್ ಆಗಿರುತ್ತವೆ. ಎಷ್ಟೋ ಸನ್ನಿವೇಶಗಳಲ್ಲಿ ಈ ಜನ, ವೇದಿಕೆಯ ಮೇಲಕ್ಕೂ ನಿಂತು, ತಮಗೆ ಗೊತ್ತೇ ಇಲ್ಲದ ರಂಗಭೂಮಿಯ ಬಗ್ಗೆ ಅಣಿಮುತ್ತುಗಳನ್ನು ಉದುರಿಸುವುದೂ ಉಂಟು. ರಂಗಭೂಮಿಯ ಭೂತ ಭವಿತವ್ಯಗಳ ಬಗ್ಗೆ ವ್ಯಾಖ್ಯಾನಿಸುವುದೂ ಉಂಟು. ಇವರ ಇಂಥ ಸುವಿಚಾರಗಳನ್ನು ಸಡಗರದಿಂದ ಧರಿಸಿ, ಇವರ ದಿವ್ಯ ಉಪಸ್ಥಿತಿಯೇ ರಂಗಭೂಮಿಗೊಂದು ಪೌರಾತ್ಮಿಕ ಎತ್ತರವೆಂದು ಆಪಾದಮಸ್ತಕ ಸ್ವೀಕರಿಸುವುದಷ್ಟೇ ಹವ್ಯಾಸಿಗಳ ಕರ್ಮವಾಗಿಬಿಡುತ್ತದೆ. ಈ ಕರ್ಮಕಾಂಡಕ್ಕೆ ಕಾರಣ : ಎಷ್ಟೋ ಸಂದರ್ಭಗಳಲ್ಲಿ, ಅನೇಕ ಕಾರಣಗಳಿಂದಾಗಿ, ಒಂದೊಂದು ಪ್ರಯೋಗಕ್ಕೂ ನಮ್ಮ ಹವ್ಯಾಸಿಗಳು ಇಂಥ ಕೆಲವು ಆಢ್ಯರನ್ನೇ ಆಶ್ರಯಿಸಿಕೊಂಡಿರಬೇಕಾದ ಅನಿವಾರ್ಯತೆ.

ಇದೆಲ್ಲವನ್ನೂ ಹೀಗೆ ವಿವರಿಸುವುದಕ್ಕೆ ಕಾರಣ ಯಾರನ್ನೇ ಆಗಲಿ ಟೀಕೆ ಮಾಡುವ ಉದ್ದೇಶ ಖಂಡಿತಕ್ಕೂ ಅಲ್ಲ; ಆದರೆ, ಹವ್ಯಾಸಿ ನಾಟಕಗಳನ್ನು ನೋಡಬೇಕೆನ್ನುವ 'ಹವ್ಯಾಸ'ವನ್ನು ಬೆಳೆಯಿಸಿಕೊಂಡ ಪ್ರೇಕ್ಷಕವರ್ಗ ನಮ್ಮಲ್ಲಿ ಇಲ್ಲವೇ ಇಲ್ಲ ಎಂಬುದನ್ನು ಒತ್ತಿ ಹೇಳುವುದಕ್ಕಾಗಿ ಮಾತ್ರ; ಒಂದು ಅತ್ಯುತ್ತಮ ಸೃಷ್ಟಿಶೀಲ ಕಾರ್ಯಕ್ಕಾಗಿ ನಮ್ಮ ಹವ್ಯಾಸಿಗಳು ಎಂತೆಂಥವರನ್ನೆಲ್ಲ ಕಟ್ಟಿಕೊಂಡು ಗುದ್ದಾಡಬೇಕಾಗಿದೆ ಎಂಬ ನೋವನ್ನು ಹೇಳಿಕೊಳ್ಳುವುದಕ್ಕಾಗಿ ಮಾತ್ರ.

ಹಾಗಿದ್ದೂ ಕೂಡ, ರಂಗಭೂಮಿಯ ಇತರ ಪರಿಕರಗಳನ್ನು ಬಿರುಗೊಳಿಸುವುದರೊಂದಿಗೆ, ಅದರ ಇನ್ನೊಂದು ಅನಿವಾರ್ಯ ಅಂಗವಾದ ಪ್ರೇಕ್ಷಕರ ಅಭಿರುಚಿಯನ್ನು ಹಂತಹಂತ ವಾಗಿಯಾದರೂ ತಿದ್ದುವ ಕಾರ್ಯ ನಡೆದೇ ಇಲ್ಲ ಎನ್ನುವ ದಾರ್ಷ್ಟ್ಯವನ್ನು ನಾನು ತೋರಲಾರೆ. ಈ ದಿಸೆಯಲ್ಲಿ ಅಗತ್ಯವಾದ ಕೆಲವಾದರೂ ಪ್ರಾಮಾಣಿಕ ಕಾರ್ಯಗಳು ಅನೇಕ ವಲಯಗಳಲ್ಲಿ ನಡೆದಿವೆ ಎಂಬುದನ್ನು ಒಪ್ಪುತ್ತೇನೆ. ಹಾಗಿದ್ದೂ ಕೂಡ, ವಿಭಿನ್ನ ದೃಷ್ಟಿಕೋನಗಳ ಚೌಕಟ್ಟಿನಲ್ಲಿ, ವಿಭಿನ್ನ ಗತಿಗಳಲ್ಲಿ, ವಿಭಿನ್ನ ಆಯಾಮಗಳಲ್ಲಿ ನಡೆಯುತ್ತಿರುವ ಬಹಳಷ್ಟು ರಂಗಪ್ರಯೋಗಗಳು

ನಮ್ಮ ಪ್ರೇಕ್ಷಕರ ಅಭಿರುಚಿಯನ್ನು ಬದಲಾಯಿಸುವದರಲ್ಲಾಗಲೀ ಅವರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸುವವದರಲ್ಲಾಗಲೀ ಸಫಲವಾಗಿಲ್ಲ ಎನ್ನುವ ಮಾತನ್ನೂ ನಾನು ಸ್ಪಷ್ಟಪಡಿಸುತ್ತೇನೆ. ಈ ವಿಫಲತೆಗೆ ಮುಖ್ಯ ಕಾರಣಗಳು, ಪ್ರಾಯಶಃ ಎರಡು :

ಒಂದು : ಈಗಾಗಲೇ ಒಂದೆಡೆಗೆ ಹೇಳಿದಂತೆ, ನಮ್ಮ ರಂಗಭೂಮಿ, ಇತಿಹಾಸದುದ್ದಕ್ಕೂ ನಡೆದು ಬಂದ ನಮ್ಮ ರಂಗಭೂಮಿ, ನಮ್ಮ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿ ಬೆಳೆದು ಬಂದದ್ದು. ಎಂದರೆ; ನಮ್ಮ ಆಲೋಚನಾಕ್ರಮ, ಜೀವನವಿಧಾನಕ್ರಮ, ನಂಬಿಕೆಗಳ ನೆಲೆ, ಪರಿಸರದ ಒತ್ತಾಸೆ, ಸಾಮಾಜಿಕ ನೀತಿ ನಡಾವಳಿ, ಸ್ವೀಕೃತವಾದ ನ್ಯಾಯಾನ್ಯಾಯ ವಿವೇಚನೆ ಇವುಗಳಿಂದಲೇ ನಮ್ಮ ರಂಗಭೂಮಿ ಮತ್ತು ನಮ್ಮ ಪ್ರೇಕ್ಷಕರಿಬ್ಬರೂ ಪರಸ್ಪರ ಪೋಷಿತರಾಗುತ್ತ ಬಂದದ್ದು. ಹೀಗಾಗಿ, ಎಂಥ ಆಧುನಿಕ ಶಿಕ್ಷಣವೂ ಥಟ್ಟನೇ ಬದಲಾಯಿಸಲಾಗದ, ಸಾಂಸ್ಕೃತಿಕವಾಗಿ ಖಚಿತವಾದ ಮತ್ತು ವಿಶಿಷ್ಟವಾದ ಕೊಡುಕೊಳ್ಳುವಿಕೆ ಇವರಿಬ್ಬರ ಮಧ್ಯೆ ಅಬಾಧಿತವಾಗಿ ನಡೆದುಬಂದದ್ದು ಒಂದು ಐತಿಹಾಸಿಕ ಸತ್ಯ. ಈ ಹಿನ್ನೆಲೆಯಲ್ಲಿ ನಮ್ಮ ಇತಿಹಾಸಕ್ಕೆ ಸಂಬಂಧಿಸಿದಂತಹ ಒಂದು ವಿಚಿತ್ರವಾದ ಸತ್ಯದ ಅಂಶವನ್ನು ನಾವು ನೆನಪಿಸಿಕೊಳ್ಳಬೇಕು.

೧೯ ಮತ್ತು ೨೦ ನೆಯ ಶತಮಾನಗಳಲ್ಲಿ, ನಮ್ಮ ಬದುಕಿನ ಬಹುತೇಕ ರಂಗಗಳಲ್ಲಿಯೂ ಆದಂತೆ, ನಮ್ಮ ರಂಗಭೂಮಿಯ ಮೇಲೂ ಪಾಶ್ಚಾತ್ಯರ ಪ್ರಭಾವ ಆಗಿಯೇ ಆಯಿತು. ಆದರೆ, ವಿಚಿತ್ರವೆಂದರೆ, ಇತರ ಕ್ಷೇತ್ರಗಳಲ್ಲಿ ಆದಂತಹ ಬದಲಾವಣೆಗಳನ್ನು ಒಪ್ಪಿದಷ್ಟು ಸುಲಭವಾಗಿ, ನಮ್ಮ ರಂಗಮಾಧ್ಯಮಗಳಲ್ಲಾದ ಬದಲಾವಣೆಗಳನ್ನು ನಮ್ಮ ಪ್ರೇಕ್ಷಕರು ಒಪ್ಪಲೇ ಇಲ್ಲ ಎನ್ನುವದು. ಇದಕ್ಕೆ ಮುಖ್ಯ ಕಾರಣ : ನಾನು ಈಗಾಗಲೇ ವಿವರಿಸಿದಂತೆ, ನಮ್ಮ ರಂಗಭೂಮಿಯ ಕೊಡುಕೊಳ್ಳುವಿಕೆಯ ಮಧ್ಯೆ ಇದ್ದಂತಹ ಒಂದು ಸಾಂಸ್ಕೃತಿಕ ಒಡಂಬಡಿಕೆ. ಇದಕ್ಕೆ ಧಕ್ಕೆ ತರುವಂತಹ, ರಂಗದ ಯಾವುದೇ ದೃಶ್ಯವೂ ನಮ್ಮ ಪ್ರೇಕ್ಷಕರ ಕಣ್ಣನ್ನು ತುಂಬುವದು ಕಷ್ಟ. ಯಾವುದೇ ಸದ್ದೂ ನಮ್ಮ ಪ್ರೇಕ್ಷಕರ ಕಿವಿಯನ್ನು ನಿನದಿಸುವದು ಅಸಾಧ್ಯ.

ಎರಡು : ಇನ್ನು ನಮ್ಮ ರಂಗಭೂಮಿಯ ದೃಷ್ಟಿಯಿಂದ ಹೇಳುವದಾದರೆ, ನಮ್ಮ ಪ್ರಸ್ತುತ ರಂಗಭೂಮಿ, ಒಂದಿಲ್ಲೊಂದು ಬಗೆಯಲ್ಲಿ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಪರ್ಕಗಳನ್ನು ಇಟ್ಟುಕೊಂಡಿರುವದರಿಂದ, ಅಲ್ಲಿಂದ ಆಮದಿಸಿಕೊಂಡಂತಹ ಎಲ್ಲ ಬಗೆಯ ಹೊಸತನ್ನು ಹೇಳುವ ಅನಿವಾರ್ಯ ಸಹಜ ಉತ್ಸಾಹಗಳೂ ತವಕಗಳೂ ನಮ್ಮಲ್ಲಿವೆ. ಆದರೆ, ಇಲ್ಲಿಯ ರಂಗಸೃಷ್ಟಿಗೆ ತಳಪಾಯವಾಗಿರುವಂತಹ ನಮ್ಮ ಸಾಂಸ್ಕೃತಿಕ ದ್ರವ್ಯ, ಐತಿಹಾಸಿಕವಾಗಿ ಹರಿದುಕೊಂಡು ಬಂದಂತಹ ಸಾಂಸ್ಕೃತಿಕ ದ್ರವ್ಯ, ಆ ಹೊಸತನ್ನು ಸ್ವೀಕರಿಸುವಲ್ಲಿ ಮತ್ತು ಒಪ್ಪುವಲ್ಲಿ ತನ್ನ ಅಸಹಾಯಕತೆ ಮತ್ತು ಅನಾಸಕ್ತಿಯನ್ನು ವ್ಯಕ್ತಮಾಡುತ್ತಿರುವ ಸತ್ಯಾಂಶವೂ ನಮ್ಮ ಮಧ್ಯದಲ್ಲಿದೆ. ಹೀಗಾಗಿ, ನಾವು ಕೊಡಬೇಕೆಂದಿರುವದಕ್ಕೂ ಕೊಡುತ್ತ ಇರುವದಕ್ಕೂ ಕಂದರ ಬಿದ್ದು, ಎಲ್ಲೋ ಒಂದು ಕಡೆಗೆ ನಮ್ಮ ರಂಗಭೂಮಿ ಅಸ್ಪಷ್ಟವಾಗುತ್ತಿದೆ. ಆದ್ದರಿಂದ ಸಾಮಾನ್ಯ ಪ್ರೇಕ್ಷಕನೊಬ್ಬನಿಗೆ, ನಮ್ಮ ರಂಗಭೂಮಿ, ಒಂದು ಬಗೆಯ ಖಾಲೀ ಗೊಂದಲವಾಗಿಯೋ ಅಥವಾ ಅರ್ಧಸತ್ತ ಸದ್ದುಗಳ ಸಂತೆಯಾಗಿಯೋ ಕಂಡಿದ್ದರೆ ಆಶ್ಚರ್ಯವಿಲ್ಲ.

ಆದರೆ, ಇದಕ್ಕಾಗಿ ನಾನು ಯಾರನ್ನೂ ನೇರವಾಗಿ ದೂಷಿಸುತ್ತಿಲ್ಲ. ನಾನು ಯಾವ ಐತಿಹಾಸಿಕ ಹಿನ್ನೆಲೆಯೊಳಗೆ ಈ ಎಲ್ಲ ಮಾತುಗಳನ್ನು ಹೇಳಿದೆನೋ, ಅಂತಹದೇ ಆದ ಒಂದು ಐತಿಹಾಸಿಕ ಕಾರಣ ಈ ನಮ್ಮ ದೀನಾವಸ್ಥೆಯ ಎದುರಿಗೇ ಇದೆ ಎಂಬುದು ಮಾತ್ರ ಮರೆಯಬಾರದ ಸಂಗತಿಯಾಗಿದೆ.

ಪರಂಪರಾಗತವಾಗಿ ಬಂದಂತಹ ಸಾಂಸ್ಕೃತಿಕ ಮೌಲ್ಯಗಳನ್ನು ನಿರಾಕರಿಸಿ ನಿಲ್ಲುವ ಧೈರ್ಯವೂ ನಮ್ಮಲ್ಲಿಲ್ಲ; ಹೊಸ ಬದುಕಿನ ಅನಿವಾರ್ಯ ಮೌಲ್ಯಗಳನ್ನು ರೂಪಿಸಿಕೊಳ್ಳುವ ತಾಕತ್ತೂ ನಮ್ಮಲ್ಲಿಲ್ಲ, ಅದ್ದರಿಂದ, ಇಂತಹ ಒಂದು ಸಂಧಿಕಾಲದಲ್ಲಿರುವಂತಹ, ಐತಿಹಾಸಿಕವಾದ ಇಬ್ಬಂದಿಗಳಿಂದಲೂ, ಚೈತನ್ಯಹೀನವಾಗುತ್ತಿರುವ ವ್ಯಕ್ತಿತ್ವಗಳಿಂದಲೂ ಅಸ್ಪಷ್ಟತೆ ಹೊರತು ಇನ್ನೇನು ತಾನೇ ಇಲ್ಲಿ ಮೂಡಿಬರಲು ಸಾಧ್ಯ ? ರಂಗಭೂಮಿ ಖಂಡಿತಕ್ಕೂ ಇದಕ್ಕೆ ಹೊರತಾಗಿಲ್ಲ. ಕನಿಷ್ಟ ಸದ್ಯದ ಮಟ್ಟಿಗೆ.

ಸದ್ಯದ ಮಟ್ಟಿಗೆ ಎಂದೆ; ಏಕೆಂದರೆ, ಇಷ್ಟೆಲ್ಲ ಹೇಳಿದ ಮೇಲೂ ಕೊನೆಗೊಂದು ಮುಗ್ಧ ಮಾತನ್ನು ಹೇಳಲೂ ನನ್ನ ಮನಸ್ಸು ಹಾತೊರೆಯುತ್ತಿದೆ : ಎಲ್ಲ ಬಗೆಯ ಕತ್ತಲೆಗಳಿಗೂ ಕೊನೆ ಎಂಬುದು ಇದ್ದೇ ಇರುತ್ತದೆ. ಅದರ ಆಚೆ ಒಂದು ಬೆಳಕು ಎಂಬ ಭರವಸೆಯೂ ಇದ್ದೇ ಇರುತ್ತದೆ. ಇಂಥ ಒಂದು ಮುಗ್ಧ ಆಸೆಯೊಂದೇ ನನ್ನಂಥವರಿಗೆ, ನನ್ನಂಥವರು ನೆಚ್ಚಿಕೊಂಡ ರಂಗಭೂಮಿಗೆ ಆಚೆಯಲ್ಲಿಯ ಆಸರೆಯಾಗಿದೆ. ಆದರೆ ಹೇಗೆ ? ಎಂದು ? ಮತ್ತೆ ಮತ್ತೆ ಪ್ರಶ್ನೆ : Where is the bloody horse ?

● ▼

ದೇಶಪಾಂಡೆ ಸುಬ್ಬರಾಯ. ೧೩, ನೆಲೆ, ಶ್ರೀರಂಗಮಾರ್ಗ, ಕುಸುಮನಗರ, ಧಾರವಾಡ - ೮.
✆ : ೦೮೩೬ - ೨೭೭ ೧೩೨೬

## ಕಾವ್ಯಕ್ಕೆ ಒದಗಿರುವ ಆಪತ್ತು

ವಿಶ್ಲೇಷಣೆ

ಇಂಗ್ಲಿಶಿನಲ್ಲಿ : ಎಚ್.ಎಸ್.ಶಿವಪ್ರಕಾಶ್ — ರಾ. ಕ. ನಾಯಕ

*(ಬಿಕ್ಕರಿಯ ಲೋಹಿಯಾ ಪ್ರಕಾಶನ ಸಂಸ್ಥೆಯವರು ತಮ್ಮ ೯ ಪುಸ್ತಕಗಳನ್ನು ಬೆಳಗಾವಿಯಲ್ಲಿ ಬಿಡುಗಡೆ ಮಾಡಿದ್ದರು. ಆ ಕಾಲಕ್ಕೆ ನಡೆದ 'ಬಹುಭಾಷಾ ಕವಿಗೋಷ್ಠಿ'ಯನ್ನು ಉದ್ಘಾಟಿಸಿದವರು ಎಚ್. ಎಸ್. ಶಿವಪ್ರಕಾಶ್. ಶಿವಪ್ರಕಾಶ್ ಅವರು ಇಂಗ್ಲಿಷಿನಲ್ಲಿ ಬರೆದು ತಂದಿದ್ದ ಭಾಷಣದಲ್ಲಿಯೇ ಕಾವ್ಯದ ಸಾಕಷ್ಟು ಲಕ್ಷಣ ಮತ್ತು ಸಾಮಗ್ರಿ ಇದ್ದು ಅದು ಇಂದಿನ ಕಾವ್ಯವ್ಯವಹಾರಕ್ಕೆ ಒದಗಿರುವ ಆತಂಕಕಾರಿ ಸ್ಥಿತಿಯನ್ನು ವಿಶ್ಲೇಷಿಸುವ ಪ್ರಯತ್ನವಾಗಿದ್ದರಿಂದ ಅದನ್ನು ಇಲ್ಲಿ ಅನುವಾದಿಸಿ ಕೊಡುತ್ತಿರುವೆ. ಶಿವಪ್ರಕಾಶರ ಮೌಖಿಕ ಭಾಷಣಕ್ಕೆ ತಲೆಬರಹ ಇರಲಿಲ್ಲ. ಈಗ ಅದಕ್ಕೆ ಈ ಶೀರ್ಷಿಕೆ ಅನುವಾದಕನು ಇಟ್ಟ ಟೊಪ್ಪಿಗೆ. —ರಾ. ಕ. ನಾ.)*

ಯಾತಕ್ಕೆ ಬೇಕು ಕಾವ್ಯ ?

ತುಚ್ಛತೆಯಿಂದ ಅವಲೋಕಿಸುವ ಸಿನಿಕ್ ಜನರು ನಮ್ಮತ್ತ ಈ ಪ್ರಶ್ನೆ ಚೆಲ್ಲುವರುಂಟು. ಏಕೆಂದರೆ ಅವರು ಸುಲಭ ಸಂಪಾದನೆಗೆ ಪರಾಕು ಹೇಳುವವರು. ಅವರೊಂದಿಗೇ ದನಿಗೂಡಿಸುತ್ತ ಪರಾಕು ಹೇಳುವ ವಿಮರ್ಶಕರೂ ಸಿದ್ಧಾಂತಿಗಳೂ ಅದೇ ರಾಗ ತುಸು ಬೇರೆ ಶಬ್ದಗಳಲ್ಲಿ ಎಳೆಯುವರು. ಏಕೆಂದರೆ ಇವರೂ ಕವಿಗಳ ರಕ್ತ, ಬೆವರಿನ ಮೇಲೇ ಬೆಳೆಯುವವರು. ಇವರು ಕೇಳುವರು, 'ಕಾವ್ಯಕ್ಕೆ ಸಮಕಾಲೀನ ಸಂದರ್ಭವೇನು ?'

ಪರಿಶ್ರಮ ಬೇಕಿಲ್ಲದ ಬಹುಸಂಖ್ಯ ಕವಿಗಳೂ ವಾತಾವರಣದ ಒತ್ತಡಕ್ಕೆ ಮಣಿದರು. ಕಾವ್ಯವನ್ನು ಸರಕಿನ ರೂಪಕ್ಕಿಳಿಸುವ ಕರಕುಶಲ ಕಸರತ್ತಿಗೂ ವಂಚನೆಗೂ ತಮ್ಮನ್ನು ಒಗ್ಗಿಸಿಕೊಂಡಿದ್ದಾರೆ. ಏಕೆಂದರೆ ಇದು ಅವರನ್ನು ಒಂದು ಒಳ್ಳೆ ಅನುಕೂಲಕರ ವಿಮರ್ಶೆಯತ್ತ ಒಯ್ಯುವದು. ಈ ವಿಮರ್ಶೆ ಪ್ರಕಟವಾಗುವ ಪತ್ರಿಕೆಯನ್ನು ಬಿಟ್ಟು ಮಾನವಸ್ನೇಹ ನಡೆಸುತ್ತಾನೆ.

ಆತ ಕಾವ್ಯದ ರಕ್ತಹೀರುವ ಜಿಗಣೆ. ಆತ ಒಂದು ಬಗೆಯ ಸಾಹಿತ್ಯದ ಗುತ್ತಿಗೆದಾರ. ಅಥವಾ ದಲಾಲ. ಈತ ಅವರನ್ನು ಒಳ್ಳೆ ವಿಮರ್ಶೆಯಿಂದ ಮೊದಲು ಮಾಡಿ ಸರಕಾರ ಹಾಗೂ ಇತರ ಹಂಚಲಾಗುವ ಪ್ರಶಸ್ತಿ-ಪುರಸ್ಕಾರಗಳು ದೊರೆಯುವಂತೆ ಮಾಡುತ್ತಾನೆ. ಅಲ್ಲಿಂದ ಮುಂದೆ ರಾಷ್ಟ್ರಮಟ್ಟದ ಪುರಸ್ಕಾರಕ್ಕೂ ಒಯ್ಯುತ್ತಾನೆ. ಆಮೇಲೆ ಅಂತಾರಾಷ್ಟ್ರೀಯ ವಿದ್ಯುನ್ಮಾನ ಮಾಧ್ಯಮಗಳಲ್ಲೂ ಮನ್ನಣೆ ಸಿಗುವಂತೆ ಮಾಡುತ್ತಾನೆ. ಆನಂತರ ವಿಶ್ವದ ಎಲ್ಲಾ ಕೇಬಲ್ ಜೋಡಿಸಿದ ತೆರೆತೆರೆಗಳಲ್ಲಿ ಖ್ಯಾತಿ ಪತಾಕೆ ಹಾರಿಸುವನು.

ಇದು ಸಂತ ಆಗಸ್ಟೀನ್ ಹೇಳಿದ್ದು : 'ಈ ಲೋಕದ ಪ್ರಶಸ್ತಿ-ಪುರಸ್ಕಾರಗಳೆಂದರೇನು ? ಉಫ್ ಎಂದು ಊದಿಬಿಡುವ ಗಾಳಿಯ ಗುಳ್ಳೆ, ಅಷ್ಟೆ!' ಧನ, ದೌಲತ್ತು, ಅಧಿಕಾರ, ಅರಸೊತ್ತಿಗೆಗಳನ್ನು ಕೇವಲ ಸಾಧುಸಂತರು ಮಾತ್ರ ಬಿಟ್ಟಿರುವರೆಂದಲ್ಲ; ಅವಕ್ಕಾಗಿ ಜನರು ಒಬ್ಬರನ್ನೊಬ್ಬರು ಸುಲಿಯುತ್ತಾರೆ. ನಿಸರ್ಗದ ಗರ್ಭದಿಂದೇ ಕಸಿದುಕೊಳ್ಳಲು ಮುಂದಾಗುತ್ತಾರೆ. ಅಂಥ ಐಹಿಕ ಸಂಪತ್ತನ್ನು ಕವಿಗಳೂ ಪ್ರೇಮಿಗಳೂ ಬಿಟ್ಟುಬಿಟ್ಟಿದ್ದಾರೆ. ಯಾವದೇ ಸಮಾಜದಲ್ಲಾದರೂ ಕಾವ್ಯ ಮತ್ತು ಪ್ರೇಮದ ಕ್ರಮವು ಯಾವ ಕಾಲಕ್ಕೂ ಹಗುರಾಗಿಲ್ಲ; ಬಿರುಸಾಗಿಯೇ ಇರುತ್ತದೆ. ಕ್ರಾಂತಿಕಾರಿ ಸಂತರಂತೆ ಇವರ ಬದುಕೂ ಮುಳ್ಳಿನ ಹಾಸಿಗೆಯಾಗಿರುತ್ತದೆ. ಆದರೂ ಕವಿಗಳ ಜೀವನ ಇಂದಿನಷ್ಟು ಹಿಂದೆಂದೂ ಅಸ್ವಾಸ್ಥ್ಯದ ಮತ್ತು ದುಸ್ಸಹವಾಗಿರಲಿಲ್ಲ. ಏಕೆಂದರೆ ಇಂದು ಲೋಕವನ್ನಾಳುವವರು ದೈತ್ಯದ್ವಯರು. ಅವರೆಂದರೆ ದಿಢೀರ್ ಯಶಸ್ಸು, ದಿಢೀರ್ ಲಾಭ !

ಭಾಷೆಯು ಕಾವ್ಯದ ಶರೀರ ಮತ್ತು ಕಾವ್ಯವು ಭಾಷೆಯ ನಾಡಿಮಿಡಿತ. ಆದರೆ ಈಗ ಸರಕು ಸಂಸ್ಕೃತಿಯ ಅಧ್ವರ್ಯುಗಳು ಭಾಷೆಯನ್ನು ಬಿಗಿದು ಕಟ್ಟಿಹಾಕಿ ಇನ್ನೊಂದು ವಿವೇಕಶೂನ್ಯ, ಹೃದಯಶೂನ್ಯವಾದ ದಿಢೀರ್ ಯಶಸ್ಸು ಮತ್ತು ಲಾಭದ ಸ್ವಾಧೀನಕ್ಕೆ ಒಪ್ಪಿಸಿದ್ದಾರೆ.

ಒಬ್ಬ ಅಘೋರಿಯು ತನ್ನ ಮೆಚ್ಚಿನ ದೇವತೆಗಾಗಿ ತನ್ನ ತಲೆ ಕಡಿದುಕೊಂಡಾಗ, ಅಥವಾ ಮಜ್ನು ಲೈಲಾಳ ಪ್ರೀತಿಗಾಗಿ ಮರುಭೂಮಿಯಲ್ಲಿ ಸುತ್ತಾಡಿದಾಗ, ಒಬ್ಬ ಚೀನೀ ಚಿತ್ರಕಾರನು ಮೂವತ್ತು ವರ್ಷ ಒಂದು ಹುಲ್ಲಿನ ಎಳೆಯನ್ನು ಚಿತ್ರಿಸಲು ಚಿಂತಿಸಿದಾಗ, ಚೆ ಗುವೆರಾ ಮತ್ತು ಅವನ ಗೆಳೆಯರು ಬ್ಯಾಟಿಸ್ಟನ ಗುಂಡಿನ ಸುರಿಮಳೆಯನ್ನೂ ಲೆಕ್ಕಿಸದೆ ಕ್ರಾಂತಿಗಾಗಿ ಮುನ್ನುಗ್ಗಿದಾಗ, ಬಡವರು ತಮ್ಮ ಮಕ್ಕಳು ಉನ್ನತಿ ಹೊಂದಲೆಂದು ತಮ್ಮ ಯೌವನ ಮತ್ತು ವೃದ್ಧಾಪ್ಯಗಳಲ್ಲೂ ದುಡಿದುಡಿದು ದಣಿವಾಗ, ಇವರೆಲ್ಲ ಅನುಸರಿಸುವ ದಾರಿ ನ್ಯಾಯದ ಪಥವಾಗಿರುತ್ತದೆ. ದಿಢೀರ್ ಯಶಸ್ಸು ಮತ್ತು ದಿಢೀರ್ ಲಾಭದ ಆಳುವ ದೊರೆಗಳು ಪ್ರತಿಪಾದಿಸುವದರ ವಿರುದ್ಧ ದಿಕ್ಕಿನ ದಾರಿಯಾಗಿರುತ್ತದೆ. ಅವರದು ಸಾಫಲ್ಯದ ದಾರಿ; ಯಾರನ್ನೂ ಮೆಚ್ಚಿಸುವದಲ್ಲ !

ಬಂಡವಾಳ ಮತ್ತು ಸರಕು, ಉತ್ಪನ್ನ, ಕಸಿದುಕೊಳ್ಳುವಿಕೆ – ಇವು ಹುಟ್ಟಿದ ಮೇಲೆ ಎಲ್ಲ ಭೂಮಿ ವಿಷಮಯಿತು. ಭಾಷೆ ಭ್ರಷ್ಟವಾದವು. ಸ್ತ್ರೀ ಪುರುಷ ಬಾಲಕರ ದೃಷ್ಟಿ ಎಲ್ಲವೂ ಭ್ರಷ್ಟವಾಯಿತು. ಇದು ಇಂದಿನ ಕ್ರೂರ ಗೆಲುವಿಗೆ ಬಂದ ಪ್ರತಿಫಲ. ಇದನ್ನು ಭ್ರಷ್ಟ ಜಗತ್ತಿನ ಅಧ್ವರ್ಯುಗಳು ನಾಗರಿಕತೆ ಎನ್ನುವರು. ಕಳೆದೊಂದು ಶತಮಾನದಲ್ಲಿ ಕಾವ್ಯವು ಕ್ರಮೇಣ ತನ್ನ ಸಾಫಲ್ಯದ ಧರ್ಮವನ್ನು ದಿಢೀರ್ ಯಶಸ್ಸು ಮತ್ತು ದಿಢೀರ್ ಲಾಭದೊಂದಿಗೆ ಒಪ್ಪಂದ ಮಾಡಿಕೊಂಡು ಅದರ ಅಧರ್ಮಕ್ಕೆ ತಿರುಗಿತು. ಇನ್ನೊಂದು ಪ್ರತಿಫಲ ಕಂಡು ಬಂದದ್ದೆಂದರೆ ಶಾಶ್ವತವಾಗಿ ತೂಗುಯ್ಯಾಲೆಯಲ್ಲಿಳಿದು ಯಾವುದೇ ನಿರ್ಧಾರ ಕೈಕೊಳ್ಳದ ಸ್ಥಿತಿ. ಅಪನಂಬಿಕೆ. ನಾಸ್ತಿಕ್ಯದ ವೃತ್ತಿ. ಇದು ಶೂನ್ಯದಿಂದ ಶೂನ್ಯಕ್ಕೆ ಒಯ್ಯುವ ದಾರಿ. ನಿರರ್ಥಕತೆಯಿಂದ

ನಿರರ್ಥಕತೆಗೆ ಒಯ್ಯುವ ದಾರಿ. ಭಗ್ನ ಪ್ರತಿಮೆಗಳ ರಾಶಿ, ಒಂದು ಕಾಲದ ಪ್ರೇಮಿಕನ ಮನುಷ್ಯಾಕಾರದ, ಆದರಿಂದು ನಂಬಲಾಗದ ಕೈಗಳು...

ವಿಲಿಯಂ ಬ್ಲೇಕ್ ಹೇಳಿದ್ದ : ಫ್ರೆಂಚ್ ರಾಜ್ಯ ಕ್ರಾಂತಿಯ ನಂತರ ಯುರೋಪಿನ ಎಲ್ಲ ಪೋಪರು ಕೂಡಿ ಒಟ್ಟಾಗಿ ಧರ್ಮದ ದಂಡವನ್ನು ನ್ಯೂಟನ್‌ನ ಕೈಗಿತ್ತರು. ಆದರೆ ಒಂದೂವರೆ ಶತಮಾನದ ತರುವಾಯ ಜಗತ್ತಿನ ಎಲ್ಲ ನ್ಯೂಟನ್‌ರು, ಐನ್‌ಸ್ಟೈನ್‌ರು ಕೂಡಿ ಒಟ್ಟಾಗಿ ತಮ್ಮ ದಂಡವನ್ನು ಅಮೆರಿಕೆಯ ಬಹುರಾಷ್ಟ್ರೀಯ ಕಂಪನಿಗಳಿಗೂ ಅವುಗಳ ಜಾಹಿರಾತಿನ ರೂಪದ ಮರಿಗಳಿಗೂ ಕೊಟ್ಟರು. ಏಕೆಂದರೆ ಈ ದಿಢೀರ್ ಯಶಸ್ಸು ಮತ್ತು ದಿಢೀರ್ ಲಾಭದ ಸ್ತೋತ್ರ ಎದುರಾಳಿಗಳೂ ಇದೇ ಯಶಸ್ಸು ಮತ್ತು ಲಾಭದ ಭಾಷೆಯಲ್ಲೇ ಮಾತಾಡತೊಡಗಿದರು. ಸಂಸ್ಕೃತಿಯಲ್ಲಿ ವ್ಯವಹರಿಸತೊಡಗಿದರು. ಅವರ ಧ್ವನಿಗಳನ್ನು ಹೆಚ್ಚು ಕರ್ಕಶವಾದ, ಕ್ರೂರವಾದ, ಏನನ್ನು ಬೇಕಾದರೂ ತಿನ್ನಬಲ್ಲ ವಿಶ್ವಭಕ್ಷಕ ದಿಢೀರ್ ಯಶಸ್ಸು ದಿಢೀರ್ ಲಾಭದ ಭಾಷೆಯು ನುಂಗಿ ಬಿಟ್ಟಿತ್ತು.

ಕಳೆದೆರಡು ಶತಮಾನಗಳಲ್ಲಿ ಕಾವ್ಯದ ಫ್ಯಾಶನ್‌ಗಳು ಮತ್ತು ಶೈಲಿಗಳು ಬಂದವು, ಹೋದವು. ಆದರೆ ಈ ಅವಧಿಯಲ್ಲಿ ಬರೆಯಲ್ಪಟ್ಟ ಅತ್ಯುತ್ತಮ ಬರಹದ ಭಾವನೆ-ಅನಿಸಿಕೆಗಳಾವವೂ ಬಹಳಷ್ಟು ಬದಲಾಗಿಲ್ಲ. ಕಾವ್ಯ, ಪ್ರೀತಿ ಮತ್ತು ಕ್ರಾಂತಿಯ ಅತ್ಯಂತ ತೀವ್ರತೆಯ ಕ್ಷಣಕ್ಕೆ ಸದ್ಯಃಕಾಲೀನ ಸಂದರ್ಭವೆನ್ನುವದು ಇರುವದಿಲ್ಲ. ಆಧುನಿಕ ಭೌತವಿಜ್ಞಾನದ ಬ್ರೌನಿಯನ್ ಗತಿಯಲ್ಲಿಯಂತೆ ಇದಕ್ಕೆ ಸಮಕಾಲೀನತೆಯೆ ಇರುವದಿಲ್ಲ. ಎಷ್ಟೋ ಕಣಗಳು ದಿಕ್ಕೆಟ್ಟು ಹಾರುತ್ತಿವೆ. ಲಕ್ಷಾಂತರ ಅಸಂಗತ ಸಂಗತಿಗಳು, ಸಮಕಾಲೀನ ಕ್ಷಣದಲ್ಲಿ ಇರಬಲ್ಲವು. –ಪ್ರೆಸಿಡೆಂಟ್ ಬುಶ್ ವಾಷಿಂಗ್‌ಟನ್‌ನಲ್ಲಿ ತನ್ನ ಬರ್ಜರಿ ಊಟ ಮಾಡುತ್ತಿರಬಹುದು. ಪ್ರಧಾನಿ ವಾಜಪೇಯಿ ಜಾತಿವಾದಿ ಶೋಷಣೆಯ ಪಾವಿತ್ರ್ಯದ ನಾವೀಕರಣದಲ್ಲಿ ತೊಡಗಿರಬಹುದು. ದಬ್ಬಾಳಿಕೆಗೊಳಗಾದ ದರಿದ್ರ ದೇಶದ ಎಲುಬಿನ ಗೂಡಾದ ಮಕ್ಕಳು ತಮ್ಮ ದೆವ್ವದಂಥ ಕಣ್ಣು ಬಿಡುತ್ತಾ ಇರಬಹುದು, ಒಂದು ಬಾಲಿವುಡ್ ಸಿನೆಮಾ ಹಾಡು ಅಥವಾ ಆಲಿಂಡಿಯಾ ರೇಡಿಯೋದಲ್ಲಿ ಯಾವನೋ ಒಬ್ಬ ಕವಿ ಇಲ್ಲದ ವೈಭವವನ್ನು ವೈಭವೀಕರಿಸುತ್ತಿರಬಹುದು. ಇವೆಲ್ಲ ಒಂದೇ ಅವಕಾಶದಲ್ಲಿ, ಒಂದೇ ಸಮಯದಲ್ಲಿ ಒಂದಕ್ಕೊಂದು ಸಂಬಂಧವೇ ಇಲ್ಲದಂತೆ, ಒಂದು ಇನ್ನೊಂದರ ಪಾಲಿಗೆ ಇದ್ದೂ ಇಲ್ಲದಂತೆ ಇರಬಹುದು. ಕಾವ್ಯ, ಪ್ರೀತಿ, ಕ್ರಾಂತಿ ಅಥವಾ ಚಿತ್‌ಪ್ರಕಾಶ ಇವು ಯಾವಾಗಲೂ ಇರುವಂಥವು. ವರ್ತಮಾನದ ಇರುವಿಕೆಯಲ್ಲಿ ಭೂತ ಭವಿಷ್ಯತ್ತು –ಇತಿಹಾಸದ ಎಲ್ಲ ಅಪರಾಧಗಳು, ಲಜ್ಜೆಗಳು 'ಅನುತ್ತರ'ದ ದಂಡೆಯಲ್ಲಿ ವಿನಾಶ ಹೊಂದುವವು. ಇದನ್ನು ಅಭಿನವಗುಪ್ತ ಆಚಿನ ಇಲ್ಲದ ಆಚೆಯನ್ನು ಸೂಚಿಸಲು ಬಳಸಿದ. ಅಲ್ಲಿ ಶಿವ ಮತ್ತು ಶಕ್ತಿಯರು ಒಂದಾಗುವರು. ಶಬ್ದ ಮತ್ತು ವಸ್ತುವಿಶ್ವ ಒಂದಾಗುವವು. ಸತ್ಯ ಮತ್ತು ಕಲ್ಪನೆ-ಬಯಕೆ ಒಂದಾಗುವವು. ಇಂದಿನ ಪತಿತ ಕಾವ್ಯವು ಆ ಮುಕ್ತಿಯ ಸೀಮೆಯಲ್ಲಿ ಎಚ್ಚರಾಗಲಿ. ಬಂಧಿತ, ಉಸಿರುಗಟ್ಟಿದ, ಅನುತ್ಪಾದಕ ಸ್ಥಿತಿಯನ್ನು ತಲುಪಿದ ಸಮಕಾಲೀನತೆಯ ಕಾಲುಬೇಡಿಗಳಿಂದ ವಿಚಲಿತವಾಗದ ಅದಮ್ಯ ಮುಕ್ತಿಯ ನಾಡಲ್ಲಿ. ಅಲ್ಲಿ ಎಚ್ಚರಾಗಲಿ.

● ▼

**ಡಾ. ಕ. ನಾಯಕ**, ೮೧೩, ಆಚಾರ್ಯ ಗಲ್ಲಿ, ಶಹಾಪೂರ, ಬೆಳಗಾವಿ - ೫೯೦ ೦೦೩.
✆: ೦೮೩೧ - ೨೪೧ ೫೨೨೧

# ಮುದುಕ ಸೆಟ್ಟಿಯೂ ಮೂವರು ಮಕ್ಕಳೂ *

ಐ. ಕೆ. ಬೊಳುವಾರು

**ಮಕ್ಕಳ ನಾಟಕ**

ಪಾತ್ರಗಳು : ಮುದುಕ ಸೆಟ್ಟಿ, ಹೆಡ್ಡ, ದಡ್ಡ, ಒಡ್ಡ, ಊರಿನವನು, [illegible], [illegible]. ಮರಗಳು, ಬಂಡೆಗಳು, ನದಿ, ಡಂಗುರದವನು, ಸೈನಿಕರು, ಅರಸ

*ಹಾಡುಗಾರರು ಹಾಡುತ್ತಾರೆ.*

ಬಹಳ ಹಿಂದೆ ತುಂಬಾ ಹಿಂದೆ
ಪಂಜೆಯವರ ಊರಿನಲ್ಲಿ
ಒಬ್ಬ ಮುದುಕ ಸೆಟ್ಟಿಯಿದ್ದಾ
ಅವಗೆ ಮೂರು ಮೊಮ್ಮಕ್ಕಳು
ಹೆಡ್ಡ ದಡ್ಡ ಒಡ್ಡ ಎಂಬುದು
ಅವರ ಹೆಸರು ಕೇಳಿರಣ್ಣಾ
ದೊಡ್ಡವ ಹೆಡ್ಡ ನಡುವಣ ದಡ್ಡ
ಕಿರಿಯವ ಒಡ್ಡ ಕೇಳಿರೊ
ಹೆಡ್ಡನೆಂದರೆ ಹೆಡ್ಡನಲ್ಲ   ಗಟ್ಟಿ ಮುಟ್ಟು
ದಡ್ಡನೆಂದರೆ ದಡ್ಡನಲ್ಲ   ಕಪ್ಪು ಗಿಡ್ಡ
ಒಡ್ಡನೆಂದರೆ ಒಡ್ಡನಲ್ಲ   ಚುರುಕು ಜಾಣ
ಹೆಡ್ಡ ದಡ್ಡ ಒಡ್ಡ ಎಂಬುದು ಅವರ ಹೆಸರು ಕೇಳಿರೊ.

**ಮುದುಕ ಸೆಟ್ಟಿ** : (ಮಕ್ಕಳನ್ನು ಕರೆದು) ಏಯ್ ಹೆಡ್ಡಾ, ಏ ದಡ್ಡಾ, ಲೇ ಒಡ್ಡಾ. ಬನ್ರೋ ಇಲ್ಲಿ... (ಮೂವರೂ ಬರುತ್ತಾರೆ) ಬನ್ರೋ... ನೋಡಿ ಮಕ್ಕಳೇ, ನಾನೀಗ ಮುದುಕನಾಗಿದ್ದೇನೆ. ಹಿಂದಿನ ಹಾಗೆ ಕೆಲಸ ಮಾಡಲಿಕ್ಕೆ ಆಗ್ತಾ ಇಲ್ಲ. ಇನ್ನು ನೀವು [illegible] ಕೆಲಸ ಮಾಡಬೇಕು. ಕೆಲಸ ಮಾಡಿ ಹಣ ಸಂಪಾದನೆ ಮಾಡಿ. [illegible] ಆಗಲಿ. ಆದರೆ ಪ್ರೀತಿಯಿಟ್ಟು ಕೆಲಸ ಮಾಡಿರಿ.

**ಮೂವರೂ** : ಹಾಗೇ ಆಗಲಿ ಅಜ್ಜಾ...

**ಹೆಡ್ಡ** : ಅಜ್ಜ ಹೇಳಿದ ಹಾಗೆ ನಾವೇನಾದ್ರೂ ಕೆಲಸ ಹುಡುಕಬೇಕಾಗಿದೆ. ನಾವು ಎಲ್ಲಿಗೆ ಹೋಗೋಣ ?

**ದಡ್ಡ** : ಎಲ್ಲಿಗಾದರೂ ಹೋಗಬೇಕಲ್ಲ. ಯಾರಿಗೆ ಗೊತ್ತು. ಎಲ್ಲಾದರೂ ಹೋದರಾಯಿತು.

**ಒಡ್ಡ** : ನಾನು ಅರಸರ ಮನೆಗೆ ಹೋಗುತ್ತೇನೆ.

**ಹೆಡ್ಡ** : ಏನು ? ಅರಸರ ಮನೆಗೆ ! ಎಲಾ ಒಡ್ಡ ! ಅರಸರು ಅಂದರೆ ಏನೆಂದು ತಿಳಿದಿದೆಯೋ ?

**ದಡ್ಡ** : [illegible] ಒಡ್ಡ ಅರಮನೆಗೆ ಹೋಗ್ತಾನಂತೆ...

*ನಗುತ್ತಾರೆ.*

**ಒಡ್ಡ** : ಯಾಕೆ ನಗ್ತೀರಿ ! ಅರಮನೆ ಬಹಳ ದೊಡ್ಡದು. ಅಲ್ಲಿ ಹೋದರೆ ನಮಗೆ ಯಾವುದಾದರೂ ಕೆಲಸ ದೊರಕುತ್ತದೆ. ಆ ಮನೆ ನಮ್ಮ ಮನೆಯ ಹಾಗೆ [illegible]

---

* [illegible] ನಾಟಕರೂಪ.

ಕಂಬದ. ಹುಲ್ಲು ಚಾವಣಿಯ, ಸಗಣಿ ಸಾರಣೆಯ ಗುಡಿಸಲು ಅಲ್ಲ... ಅರಮನೆ ಅಂದರೆ ಬಹಳ ದೊಡ್ಡದಾಗಿರುತ್ತದೆ. ಹತ್ತು ಹದಿನೆಂಟು ಬಾಗಿಲು. ನೂರಾರು ಕಿಟಕಿ... ಹವಳದ ಕಂಬ, ಚಿನ್ನದ ಗೋಡೆ. ಬೆಳ್ಳಿಯ ಮಾಡು, ರತ್ನದ ಕಲಶ ಎಲ್ಲ ಇರುತ್ತದೆ. ನಾನು ಅಲ್ಲಿಗೆ ಹೋಗಿಯೇ ಹೋಗುತ್ತೇನೆ.

ದಡ್ಡ : ನೀನು ಅಲ್ಲಿಗೆ ಹೋಗಿ ಯಾವ ಕೆಲಸ ಮಾಡುತ್ತೀಯ ?

ಒಡ್ಡ : ನಮ್ಮ ನಾಡಿನ ಅರಸರ ಅರಮನೆಯ ಮುಂಭಾಗದಲ್ಲಿ ಒಂದು ದೊಡ್ಡ ಆಲದ ಮರ ಇದೆಯಂತೆ. ಅದು ಬೆಳೆದು ಬೆಳೆದು ಬಹಳ ಎತ್ತರಕ್ಕೆ ಏರಿ ಚಾವಣಿಯ ಮೇಲೆ ತುಂಬಾ ಕತ್ತಲಾಗಿದೆಯಂತೆ. ಯಾರು ಅದನ್ನು ಕಡಿದು ಬೀಳಿಸುತ್ತಾರೋ ಅವರಿಗೆ ಮೂರು ಚೀಲ ಬಂಗಾರದ ನಾಣ್ಯಗಳನ್ನು ಕೊಡುತ್ತಾರಂತೆ.

ಹೆಡ್ಡ, ದಡ್ಡ : ಏನು ? ಮೂರು ಚೀಲ ಬಂಗಾರದ ನಾಣ್ಯಗಳು !

ಒಡ್ಡ : ಹ್ಞಾ... ನಾನು ಹೋಗಿ ಆ ಮರವನ್ನು ಅದೇನೆಂದು ಪರೀಕ್ಷಿಸುತ್ತೇನೆ. ಮೂರು ಚೀಲ ಬಂಗಾರದ ನಾಣ್ಯಗಳನ್ನು ತರುತ್ತೇನೆ.

ಹೆಡ್ಡ : ನನಗಿಂತ ಮೊದಲು ನೀನು ಈ ಕೆಲಸ ಮಾಡಲಿಕ್ಕುಂಟೇ... ?

ದಡ್ಡ : ನಾನು ಮೊದಲು ಹೋಗಿ ಅದನ್ನು ಕಡಿಯದಿದ್ದರಲ್ಲವೇ ನೀನು ಕಡಿಯುವುದು...

ಒಡ್ಡ : ಯಾರೇ ಆದರೂ ಪರವಾಗಿಲ್ಲ. ಬನ್ನಿ ನಾವು ಮೂವರೂ ಒಟ್ಟಾಗಿಯೇ ಅಲ್ಲಿಗೆ ಹೋಗೋಣ ಬನ್ನಿ...

*ಮೂವರೂ ಪಯಣ ಹೊರಡುತ್ತಾರೆ. ರಸ್ತೆಯಲ್ಲಿ ಬಗೆಬಗೆಯ ಜನರು, ವಾಹನಗಳು, ಕಟ್ಟಡಗಳು ಸಿಗುತ್ತವೆ. ಒಡ್ಡ ಅವರೆಲ್ಲರನ್ನೂ ಪ್ರಶ್ನಿಸಿ ವಿಚಾರಗಳನ್ನು ತಿಳಿದುಕೊಳ್ಳುತ್ತಾನೆ. ಹೆಡ್ಡ ದಡ್ಡರು ಬೇಕೋ ಬೇಡವೋ ಅನ್ನುವವರಂತ ಹ್ಞೂಗುಟ್ಟುತ್ತಿದ್ದಾರೆ. ಊರು ಮುಗಿದು ಕಾಡುದಾರಿ ಬಂದಿದೆ. ಕೊಡಲಿಯಿಂದ ಮರ ಕಡಿಯುವವರ ಸದ್ದು ಕೇಳಿಸುತ್ತದೆ.*

ಒಡ್ಡ : ಅಣ್ಣಂದಿರೇ... ಏನದು ಸದ್ದು ? ಯಾಕೆ ಆ ಸದ್ದು ಬರ್‍ತಾ ಇದೆ ? ಎಲ್ಲಿಂದ ಆ ಸದ್ದು ಕೇಳ್ತಿರೋದು ? ಈ ಸದ್ದು ಯಾರು ಮಾಡ್ತಿರಬಹುದು ?

ಹೆಡ್ಡ : ಅದೆಲ್ಲಾ ನಮಗೆ ಗೊತ್ತಿಲ್ಲ. ಕೊಡಲಿಯ ಶಬ್ದ ಕೇಳ್ತಾ ಇಲ್ಲವೇ... ?

ದಡ್ಡ : ನಿನಗೆಷ್ಟು ಕೇಳ್ತಾ ಇದೆಯೋ ಅಷ್ಟೇ ನಮಗೂ ಕೇಳಿಸೋದು...

ಹೆಡ್ಡ : ಅದರ ಬಗ್ಗೆ ಈ ರೀತಿ ಪ್ರಶ್ನಿಸಲಿಕ್ಕೆ ಏನಿದೆ ? ಸುಮ್ಮನೆ ಮಾತನಾಡದೆ ನಮ್ಮ ಜೊತೆ ಬಾ...

ಒಡ್ಡ : ಯಾವುದನ್ನೂ ಪ್ರಶ್ನಿಸಿ ಉತ್ತರ ಪಡೆದು ನಿಜ ತಿಳಿಯುವುದು ನನ್ನ ಹವ್ಯಾಸ. ಆ ಸದ್ದು ಏನು ? ಅದು ಏಕೆ ಉಂಟಾಗುತ್ತಿದೆ ? ಅದು ಹೇಗೆ ಉಂಟಾಗುತ್ತಿದೆ ? ಅದು ಎಲ್ಲಿ ಉಂಟಾಗುತ್ತಿದೆ ? ಇದನ್ನೆಲ್ಲಾ ತಿಳಿಯದೆ ನಾನು ಮುಂದಕ್ಕೆ ಬರುವುದಿಲ್ಲ...

ಹೆಡ್ಡ : ಆಗಲಿ ನಿನ್ನ ಇಷ್ಟದಂತೆಯೇ ಆಗಲಿ. ಹೋಗಿ ಬೇಕಾದದ್ದನ್ನೆಲ್ಲ ನೋಡಿಯೇ ಬರುವೆಯಂತೆ. ಮರ ಕಡಿಯುವ ಕೊಡಲಿಯನ್ನು ನೋಡುವುದಕ್ಕೆ ಇಷ್ಟು ಉತ್ಸಾಹ... ಇಷ್ಟು ಓಟ ಯಾಕೆ ?

ದಡ್ಡ : ನೀನು ನಿಧಾನಕ್ಕೆ ನೋಡಿ ಬಾ... ನಾವು ನಮ್ಮಷ್ಟಕ್ಕೆ ಹೋಗುತ್ತೇವೆ.

*ಒಡ್ಡ ಚಲಿಸಿ ಕಾಡಿನ ಒಳ ಪ್ರವೇಶಿಸುತ್ತಾನೆ. ಹಲವು ಮಂದಿ ಮರಕಟುಕರು ಮರ ಕಡಿಯುತ್ತಿದ್ದಾರೆ.*

*ಹಾಡುಗಾರರು ಹಾಡುತ್ತಾರೆ.*

ಬನ್ನಿರೂ ಬನ್ನಿರಣ್ಣ ಕೋಲು ಕೋಲೆ
ತನ್ನಿರೂ ತನ್ನಿರಣ್ಣ ಕೋಲು ಕೋಲೆ

ಕಾಡನು ಕಡಿದರೆ ಮಳೆಯೇ ಬಾರದು ಕೋಲು ಕೋಲೆ
ಕಾಡು ಮರಗಳ ಉಳಿಸಿ ಬೆಳೆಸಿರೊ ಕೋಲು ಕೋಲೆ
ಸುಂದರ ಬನದ ಸುತ್ತಲ ಕಾಡು ಕೋಲು ಕೋಲೆ
ಕಟುಕರ ಕೊಡಲಿಯ ಏಟಿಗೆ ಕರಗಿತು ಕೋಲು ಕೋಲೆ
ಫಳ ಫಳ ಹೊಳೆಯುವ ಕೊಡಲಿಯ ಇಳಿಸಿ ಕೋಲು ಕೋಲೆ
ಕೊಡಲಿಯ ಏಟಿಗೆ ಕಾಡೇ ನಡುಗಿತು ಕೋಲು ಕೋಲೆ

ಒಡ್ಡ : ಅಯ್ಯೋ ಕಡಿಯಬೇಡಿ ಕಡಿಯಬೇಡಿ... ಅರಣ್ಯನಾಶ ಅಂದರೆ ಮಾನವಕುಲದ ನಾಶ... ದಯವಿಟ್ಟು ಕಡಿಯಬೇಡಿ...

ಒಬ್ಬ : ಹೇಯ್ ಯಾವನಯ್ಯ ನೀನು... ಏನು ಹೇಳ್ತಾ ಇದೀಯ...

ಒಡ್ಡ : ನಾನು ಒಡ್ಡ – ಇದೇ ಕಾಡಿನ ಸಮೀಪದಲ್ಲಿರುವ ಪಂಜೆಯವರ ಊರಿನವನು. ದಯವಿಟ್ಟು ಈ ಮರಗಳನ್ನು ಕಡಿಯಬೇಡಿ.

ಮರ - ೧ : *(ಪ್ರೇಕ್ಷಕರೊಂದಿಗೆ)* ನಿಮಗೆ ಗೊತ್ತಿದೆಯೇ... ತಮ್ಮ ಸ್ವಾರ್ಥಗಳಿಗಾಗಿ ಬೃಹತ್ ಉದ್ದಿಮೆದಾರರು ಬಡ ಆದಿವಾಸಿಗಳಿಂದ ಕೂಲಿಯಾಳುಗಳಿಂದ ಅರಣ್ಯಗಳನ್ನು ನಾಶಪಡಿಸುತ್ತಿದ್ದಾರೆ. ಈಗ ಈ ಆದಿವಾಸಿಗಳಿಗೆ ಬದುಕಲು ಉರುವಲು ಯಾವುದಕ್ಕೂ ಗತಿ ಇಲ್ಲದಂತಾಗಿದೆ.

ಒಡ್ಡ : ದಯವಿಟ್ಟು ಕಾಡು ಕಡಿಯಬೇಡಿ. ಯಾಕೆ ನೀವು ಹೀಗೆ ಕಾಡುಗಳನ್ನು ಕಡಿಯುತ್ತಿದ್ದೀರಿ ?

ಇನ್ನೊಬ್ಬ : ಹೋಗಯ್ಯ ಆಕಡೆ... ಈ ತನಕ ಯಾರೂ ನಮ್ಮನ್ನು ಕೇಳಿಲ್ಲ. ಅರಣ್ಯ ಇಲಾಖೆಯವರೇ ಮಾತನಾಡೋದಿಲ್ಲ. ಇವನೊಬ್ಬ ಬಂದ ಮಾತನಾಡೋದಕ್ಕೆ.

ಒಡ್ಡ : ಸ್ವಾಮೀ, ಹಾಗೆ ಹೇಳಬೇಡಿ... ಕಾಡು ನಾಶವಾದರೆ ಭೂಮಿ ಬಂಜರು ಬೀಳುತ್ತದೆ. ಮಳೆ ಇಲ್ಲದೆ ಬರಗಾಲ ಬರುತ್ತದೆ. ಎಲ್ಲರೂ ನಾಶವಾಗುತ್ತಾರೆ.

ಮರ - ೨ : ಕಾಡುಗಳನ್ನು ವಿಪರೀತ ಧ್ವಂಸ ಮಾಡಿರುವುದರಿಂದಲೇ ವಾತಾವರಣದಲ್ಲಿ ಸಮತೋಲನವಿಲ್ಲದೆ ವೈಪರೀತ್ಯ ಉಂಟಾಗಿದೆ. ಮತ್ತು ಇದೇ ಕಾರಣದಿಂದಾಗಿ ಅನಾವೃಷ್ಟಿಯೂ ಅತಿವೃಷ್ಟಿಯೂ ಉಂಟಾಗಿದೆ.

ಮತ್ತೊಬ್ಬ : ನಮಗೆಲ್ಲ ಗೊತ್ತಿದೆ. ನೀನೇನೂ ಹೇಳ್ಬೇಕಾಗಿಲ್ಲ.

ಒಡ್ಡ : ಹೀಗೆಲ್ಲ ಮಾತನಾಡಬೇಡಿ. ಕಾಡು ಕಡಿದು ಬೆಟ್ಟಗಳು ಬೋಳಾಗಿವೆ. ಸಸ್ಯಶ್ಯಾಮಲೆ ಎಂದು ಕರೆಸಿಕೊಳ್ಳುವ ಈ ಭೂಮಿ ಇಂದು ಮರಳುಗಾಡಾಗುತ್ತಿದೆ.

ಮರ - ೩ : ಮರಗಳು ಜಲಕ್ಷಾಮವನ್ನು ತಡೆಗಟ್ಟುತ್ತವೆ. ಮರಗಳು ಹರಿಯುವ ನೀರನ್ನು ತಡೆದು ನೆಲದಲ್ಲಿಯೇ ಇಂಗುವಂತೆ ಮಾಡುತ್ತವೆ. ಹಳ್ಳಕೊಳ್ಳಗಳಲ್ಲಿ ನೀರು ತುಂಬಿ ಹರಿಯುವಂತೆ ಮಾಡುತ್ತವೆ.

ಒಬ್ಬ : ನಮ್ಮ ಧಣಿಗಳು ನಮಗೆ ಬೇಕಾದ ಹಾಗೆ ಹಣ ಕೊಡ್ತಾರೆ. ಅವರು ಏನು ಹೇಳ್ತಾರೋ ಹಾಗೆ ಮಾಡುವುದು ನಮ್ಮ ಕೆಲಸ.

ಒಡ್ಡ : ನೀವು ಯಾಕೆ ಅವರೊಂದಿಗೆ ಪ್ರಶ್ನಿಸುತ್ತಿಲ್ಲ ? ಅರಣ್ಯನಾಶದಿಂದಾಗಿ ಇವತ್ತು ಭೂಮಿ ಮೇಲೆ ಇರಬೇಕಾದ ಕೋಟಿತ ಸಸ್ಯಾಂಶ ಮಾಯವಾಗುತ್ತಿದೆ. ಹೀಗಾಗಿ ನೆಲಕ್ಕೆ ಮಳೆ ನೀರು ಹೀರುವ ಕವಚ ಇಲ್ಲದಾಗಿದೆ. ಮಳೆನೀರು ಇಂಗದೆ ಸರಾಗವಾಗಿ ಹರಿಯುವುದರಿಂದಲೇ ನೆರೆ ಮಹಾಪೂರಗಳ ಸಂಖ್ಯೆ ಅಧಿಕವಾಗುತ್ತಿದೆ.

ಮರ - ೪ : ಜಗತ್ತಿನಲ್ಲಿಯೇ ಅತೀ ಹೆಚ್ಚು ಮಳೆ ಬೀಳುವ ಪ್ರದೇಶವೆಂದು ಹೆಸರಾಗಿರುವ ಚಿರಾಪುಂಜಿ ಇವತ್ತು ಸಸ್ಯಶೂನ್ಯವಾಗಿದೆ. ಕರ್ನಾಟಕದಲ್ಲಿಯೇ ಅತೀ ಹೆಚ್ಚು ಮಳೆ

ಬೀಳುವ ಸ್ಥಳವೆಂದು ಹೆಸರಾದ ಆಗುಂಬೆಯಲ್ಲಿ ಕುಡಿಯುವ ನೀರಿಗೆ ಜನ ಕಷ್ಟಪಡುತ್ತಿದ್ದಾರೆ.

ಇನ್ನೊಬ್ಬ : ಹೋಗಯ್ಯಾ... ಎಷ್ಟು ಸಾರಿ ಹೇಳಬೇಕು ನಿನಗೆ... ಹೋಗ್ತೀಯಾ ಇಲ್ವೋ...

*ಹಾಡುಗಾರರು ಹಾಡುತ್ತಾರೆ*

ಬನ್ನಿರೊ ಬನ್ನಿರಣ್ಣ ಕೋಲು ಕೋಲೆ
ತನ್ನಿರೊ ತನ್ನಿರಣ್ಣ ಕೋಲು ಕೋಲೆ

*ಹಾಡಿನ ಲಯಕ್ಕನುಗುಣವಾಗಿ ಎಲ್ಲ ಮರಕಟುಕರೂ ಒಡ್ಡನನ್ನು ಓಡಿಸಲು ಪ್ರಯತ್ನಿಸುತ್ತಾರೆ. ಒಡ್ಡ ಮರಗಳನ್ನು ಅಪ್ಪಿ ಹಿಡಿಯುತ್ತಾನೆ. ಪೋಲೀಸ್ ಪೋಲೀಸ್ 'ವಿಸಿಲ್' ಕೇಳಿಸುತ್ತದೆ. ಮರಕಟುಕರು ಒಡ್ಡನನ್ನು ಬಿಟ್ಟು ಪೋಲೀಸ್ ಎಂದು ಓಡಿ ಹೋಗುತ್ತಾರೆ.*

ಒಡ್ಡ : ಎಲ್ಲಿ ಪೋಲೀಸ್... ಎಲ್ಲಿ ಪೋಲೀಸ್...

ಮುದುಕ ಸೆಟ್ಟಿ : *(ಪ್ರವೇಶಿಸಿ, ಪ್ರೇಕ್ಷಕರೊಂದಿಗೆ)* ಪೋಲೀಸರು ಈಗ ಬರುವುದಿಲ್ಲ. ವಿಜಿಲ್ ಊದಿದ್ದು ನಾನೇ... ಆ ಮರಕಟುಕರು ನಮ್ಮ ಒಡ್ಡನನ್ನು ಹೊಡೆದು ಕೊಂದುಬಿಟ್ರೆ ನಮ್ಮ ನಾಟಕದ ಗತಿ ಏನಾಗ್ಬೇಕು... ಅದಕ್ಕೆ ನಾನು ಮಧ್ಯ ಪ್ರವೇಶಿಸಬೇಕಾಯಿತು. ಪಂಜೆಯವರ ಕತೆಯಲ್ಲಿ ಏನಾಗುತ್ತದೆ ಅಂದರೆ ಈ ಸಂದರ್ಭದಲ್ಲಿ ಒಂದು ಮಾಯದ ಕೊಡಲಿ ಕಾಣಿಸಿಕೊಳ್ಳುತ್ತದೆ. ಆ ಕೊಡಲಿ ಒಡ್ಡನ ಪ್ರಶ್ನೆಗಳಿಂದ ಸಂತೋಷಗೊಂಡು ಒಡ್ಡನ ವಶವಾಗುತ್ತದೆ. ನಮ್ಮ ಕತೆ ಮುಂದುವರಿಯುವುದು ಹೀಗೆ.

*ನಿಷ್ಕ್ರಮಣ.*

ಆಲದಮರ : ಅಯ್ಯಾ ಗೆಳೆಯ, ನೀನು ನಮ್ಮ ಮೇಲೆ ತೋರಿಸಿರುವ ಪ್ರೀತಿ, ಕಳಕಳಿಗಳಿಗೆ ನಾವು ಕೃತಜ್ಞರಾಗಿದ್ದೇವೆ. ಮರಗಿಡಗಳು, ಅರಣ್ಯಗಳು ಇರುವುದು ಜನರ ಉಪಯೋಗಕ್ಕಾಗಿಯೇ ಹೊರತು ವಿನಾಶಕ್ಕಲ್ಲ... ತೆಗೆದುಕೋ ಈ ಅದೃಶ್ಯ ಕೊಡಲಿಗಳನ್ನು...

*ಮುದುಕ ಸೆಟ್ಟಿ ಪ್ರವೇಶಿಸಿ ಮಾಯದ ಕೊಡಲಿಗಳನ್ನು ನೀಡುತ್ತಾನೆ. ಮರಕಟುಕರು ಸಂಮೋಹಿನಿಗೊಳಗಾದವರಂತ ಪ್ರವೇಶಿಸಿ ಕೊಡಲಿಗಳನ್ನು ಹಿಡಿದುಕೊಂಡು ಒಡ್ಡನ ಹಿಂದೆ ಹೊರಟು ನಿಲ್ಲುತ್ತಾರೆ.*

ಈ ಕೊಡಲಿಗಳನ್ನು ಎಲ್ಲ ಜನರ ಉಪಯೋಗಕ್ಕಾಗಿ ಮಾತ್ರ ಬಳಸಬೇಕೇ ಹೊರತು ಕೆಲವೇ ಕೆಲವು ಜನರ ಸ್ವಾರ್ಥಕ್ಕಲ್ಲ... ನೀನು ಯೋಚಿಸಿ ಇಷ್ಟಪಡುವ ಎಲ್ಲ ಒಳ್ಳೆಯ ಕೆಲಸಗಳಿಗೂ ಇದು ನೆರವಾಗುತ್ತದೆ. ಹೋಗಿ ಬಾ ಗೆಳೆಯ, ಹೋಗಿ ಬಾ...

*ಮರಗಳು, ಮರಕಟುಕರು, ಕೊಡಲಿಗಳು ಮರೆಯಾಗುತ್ತವೆ. ಒಡ್ಡ ಓಡುತ್ತಾ ತನ್ನ ಅಣ್ಣಂದಿರನ್ನು ಸಮೀಪಿಸುತ್ತಾನೆ. ಅವರುಗಳು ಗಾಢ ನಿದ್ರೆಯಲ್ಲಿದ್ದಾರೆ.*

ಒಡ್ಡ : ಅಣ್ಣಾ, ಅಣ್ಣಾ, ಎದ್ದೇಳಿ... ಬಹಳ ಹೊತ್ತಾಗಿದೆ. ನಾವು ಮುಂದೆ ಹೋಗಬೇಕು.

ಹೆಡ್ಡ : ಯಾವನಯ್ಯ ನನ್ನ ನಿದ್ದೆ ಹಾಳು ಮಾಡಿದೋನು ?

ದಡ್ಡ : ಹ್ಞಾ... ನೀನಾ... ಬಾ... ಸ್ವಲ್ಪ ನಿದ್ರೆ ಮಾಡಿ ಆ ಮೇಲೆ ಹೋಗೋಣ... ಆಗ ಓಡಿದೆಯಲ್ಲಾ ಅಲ್ಲೇನು ನೋಡಿದ ? ಮರ ಕಡಿಯುವುದನ್ನು ತಾನೇ... ಅದು ನನಗೆ ಮೊದಲೇ ಗೊತ್ತಿತ್ತು.

ಒಡ್ಡ : ನೋಡಬೇಕಾದ್ದನ್ನು ನೋಡಿದ್ದೇನೆ. ಮಾಡಬೇಕಾದ್ದನ್ನು ಮಾಡಿದ್ದೇನೆ. ಬನ್ನಿ ಹೋಗೋಣ.

*ಮೂವರೂ ಮುಂದಕ್ಕೆ ಚಲಿಸುತ್ತಾರೆ.*

*ಇದ್ದಕ್ಕಿದ್ದಂತೆ ಬಂಡೆ ಒಡೆಯುವ, ನೆಲ ಅಗೆಯುವ ಸದ್ದು ಕೇಳಿಸುತ್ತದೆ.*

ಒಡ್ಡ : ಅಣ್ಣಂದಿರೇ. ಏನದು ಸದ್ದು ? ಯಾಕೆ ಆ ಸದ್ದು ಬರ್‍ತಾ ಇದೆ ? ಎಲ್ಲಿಂದ ಆ ಸದ್ದು ಕೇಳ್ತಿರೋದು ? ಈ ಸದ್ದು ಯಾರು ಮಾಡ್ತಿರಬಹುದು ?

ಹೆಡ್ಡ : ಅದೇನ್ಲಾ ನಮಗೆ ಗೊತ್ತಿಲ್ಲ... ಗುದ್ದಲಿ ಶಬ್ದ ಕೇಳ್ತಾ ಇಲ್ವೇ... ?

ದಡ್ಡ : ನಿನಗೆಷ್ಟು ಕೇಳ್ತಾ ಇದೆಯೋ... ಅಷ್ಟೇ ನಮಗೂ ಕೇಳ್ತಿರೋದು...

ಹೆಡ್ಡ : ಅದರ ಬಗ್ಗೆ ಈ ರೀತಿ ಪ್ರಶ್ನಿಸಲಿಕ್ಕೆ ಏನಾಗಿದೆ ? ಸುಮ್ಮನೆ ಮಾತನಾಡದೆ ನಮ್ಮ ಜತೆ ಬಾ...

ಒಡ್ಡ : ಯಾವುದನ್ನೂ ಪ್ರಶ್ನಿಸಿ ಉತ್ತರ ಪಡೆಯುವುದು ನನ್ನ ಹವ್ಯಾಸ. ಆ ಸದ್ದು ಏನು ? ಅದು ಏಕೆ ಉಂಟಾಗುತ್ತಿದೆ ? ಅದು ಹೇಗೆ ಉಂಟಾಗುತ್ತಿದೆ ? ಅದು ಎಲ್ಲಿ ಉಂಟಾಗುತ್ತಿದೆ ? ಇದನ್ನೆಲ್ಲ ತಿಳಿಯದೆ ನಾನು ಮುಂದಕ್ಕೆ ಬರುವುದಿಲ್ಲ.

ದಡ್ಡ : ಆಗಲಿ, ನಿನ್ನ ಇಷ್ಟದಂತೆಯೇ ಆಗಲಿ, ಹೋಗಿ ಬೇಕಾದದ್ದನ್ನೆಲ್ಲ ನೋಡಿಯೇ ಬರುವಿಯಂತೆ. ಗುಡ್ಡೆ ಅಗೆಯುವ ಗುದ್ದಲಿ ನೋಡುವುದಕ್ಕೆ ಇಷ್ಟು ಉತ್ಸಾಹ... ಇಷ್ಟು ಓಟ ಯಾಕೆ ?

ಹೆಡ್ಡ : ನೀನು ನಿಧಾನಕ್ಕೆ ನೋಡಿ ಬಾ... ನಾವು ನಮ್ಮಷ್ಟಕ್ಕೆ ಹೋಗ್ತೇವೆ.

*ಒಡ್ಡ ಚಲಿಸಿ ಗುಡ್ಡದ ಮೇಲೇರಿ ಹೋಗುತ್ತಾನೆ. ಅಲ್ಲಿ ಹಲವರು ಬಂಡೆ ಒಡೆಯುತ್ತಿದ್ದಾರೆ. ಒಡ್ಡ ಪ್ರವೇಶಿಸಿ ಅವರೊಂದಿಗೆ ಪ್ರಶ್ನಿಸುತ್ತಾನೆ.*

ಒಡ್ಡ : ಅಯ್ಯೋ ನಿಲ್ಲಿಸಿ... ಬಂಡೆಗಳನ್ನು ಒಡೆಯಬೇಡಿ... ಈ ನೆಲವನ್ನು ಉಳಿಸಿ ಭೂಮಿಯ ಮೇಲೆ ಆಗ್ತಿರೋ ಹಲ್ಲೆಯನ್ನು ನಿಲ್ಲಿಸಿ...

ಬಂಡೆ ಒಡೆಯುವವ - ೧ : ಹೇಯ್ ಹೋಗಯ್ಯ... ನಿನಗೇನು ಗೊತ್ತು ಈ ಬಂಡೆಗಳ ಬೆಲೆ... ? ನಿನಗೆ ಪಿಂಕ್ ಗ್ರ್ಯಾನೈಟ್ ಅಂದರೇನು ಗೊತ್ತಿದೆಯೇ. ಇದುವೇ ಅದು...

ಒಡ್ಡ : ಗೊತ್ತಿದೆ ಸ್ವಾಮೀ... ನೀವು ಈ ಬಂಡೆಗಳನ್ನು ಒಡೆದು ಬೆಂಗಳೂರಿಗೋ ಜಪಾನಿಗೋ ದಿಲ್ಲಿಗೋ ಇಟಲಿಗೋ ಸಾಗಿಸೋದೂ ಗೊತ್ತು... ಅಲ್ಲಿ ಈ ಕಲ್ಲುಗಳು ಪಂಚತಾರಾ ಹೋಟೇಲುಗಳ ಹೊಸ್ತಿಲು ಪಟ್ಟಿಯಾಗೋದೂ ಗೊತ್ತು... ಅಥವಾ ಧನಿಕರ ಕಳೇಬರಗಳ ಮೇಲೆ ಗೋರಿಕಲ್ಲುಗಳಾಗುವುದೂ ಗೊತ್ತು... ಆದರೆ ಹಾಗೆ ಮಾಡಬೇಡಿ... ಇದರಿಂದಾಗಿ ಭೂಮಿಯ ಮೇಲಿನ ಒತ್ತಡ ಏರುಪೇರಾಗಿ ಭೂಕಂಪವೂ ಆಗಬಹುದು ಅಥವಾ ನೆರೆ ಪ್ರವಾಹಗಳೂ ಉಂಟಾಗಬಹುದು...

ಬಂಡೆ ಒಡೆಯುವವ - ೨ : ಅವನ ಹತ್ತಿರ ಏನು ಸುಮ್ಮನೆ ಮಾತು ! ಲೇಯ್, ಇಲ್ಲಿಂದ ಹೋಗ್ತೀಯಾ ಅಲ್ಲ ಇಲ್ಲೇ ನಿನ್ನ ಸಮಾಧಿ ಮಾಡಲಾ... ?

ಒಡ್ಡ : ಅಷ್ಟು ಕಷ್ಟ ಪಡೋದು ಬೇಡ. ಇಲ್ಲಿ ನೋಡಿ...
ಅರರೆ ಕೊಡಲಿ ಹರಿತ ಕೊಡಲಿ
ಮರದ ಬುಡಕೆ ಏಟು ಕೊಡಲಿ

*ಅದೃಶ್ಯ ಕೊಡಲಿಗಳು ನರ್ತಿಸುತ್ತಾ ಪ್ರವೇಶಿಸುತ್ತವೆ. ಭಯಗೊಂಡ ಬಂಡೆ ಒಡೆಯುವವರು 'ತಪ್ಪಾಯ್ತು... ನಮ್ಮನ್ನು ಕೊಲ್ಲಬೇಡ...' ಎಂದೆಲ್ಲ ಹೇಳುತ್ತಾ ಕ್ಷಮೆ ಯಾಚಿಸುತ್ತಾರೆ.*

ಬಂಡೆ : ಅಯ್ಯಾ ಗೆಳೆಯಾ, ನೀನು ನಮ್ಮ ಬಗ್ಗೆ ತೋರಿಸಿರುವ ಪ್ರೀತಿ ವಿಶ್ವಾಸಗಳಿಗೆ ನಾವು ಕೃತಜ್ಞರಾಗಿದ್ದೇವೆ. ಕಲ್ಲು ಮಣ್ಣು ಬಂಡೆ ನೆಲಗಳಿರುವುದು ಜನರ ಉಪಯೋಗಕ್ಕಾಗಿಯೇ ಹೊರತು ವಿನಾಶಕ್ಕಲ್ಲ... ತೆಗೆದುಕೋ ಈ ಮಾಯದ ಗುದ್ದಲಿಯನ್ನು...

*ಮುದುಕ ಸೆಟ್ಟಿ ಪ್ರವೇಶಿಸಿ ಗುದ್ದಲಿ ನೀಡುತ್ತಾನೆ.*

ಈ ಗುದ್ದಲಿಯನ್ನು ಎಲ್ಲ ಜನರ ಉಪಯೋಗಕ್ಕಾಗಿ ಮಾತ್ರ ಬಳಸಬೇಕೇ ಹೊರತು ಕೆಲವೇ ಕೆಲವು ಜನರ ಸ್ವಾರ್ಥಕ್ಕಲ್ಲ... ನೀನು ಯೋಚಿಸಿ ಇಷ್ಟಪಡುವ ಎಲ್ಲ ಒಳ್ಳೆಯ ಕೆಲಸಗಳಿಗೂ ಇದು ನೆರವಾಗುತ್ತದೆ. ಹೋಗಿ ಬಾ ಗೆಳೆಯ. ಹೋಗಿ ಬಾ...

*ಬಂಡೆಗಳು, ಬಂಡೆ ಒಡೆಯುವವರು, ಗುದ್ದಲಿ ಮರೆಯಾಗುತ್ತವೆ.*

*ಒಡ್ಡ ಓಡುತ್ತಾ ತನ್ನ ಅಣ್ಣಂದಿರನ್ನು ಸಮೀಪಿಸುತ್ತಾನೆ. ರಂಗದಲ್ಲಿ ಹೊಳೆಯೊಂದು ನಿರ್ಮಾಣವಾಗಿದೆ.*

*ಹೆಡ್ಡ, ದಡ್ಡ ನೀರು ತೆಗೆದು ಕುಡಿಯುತ್ತಿದ್ದಾರೆ.*

ಹೆಡ್ಡ : ಹ್ಞಾ... ಬಂದೆಯಾ... ಬಾ... ನೀರು ಬೇಕಿದ್ರೆ ಕುಡಿ... ಅಲ್ಲೇನು ನೋಡಿದೆ ?

ದಡ್ಡ : ನೋಡೋದೇನು ? ಗುಡ್ಡ ಅಗೆಯೋ ಗುದ್ದಲಿಗಳನ್ನು ನೋಡಿರಬಹುದು...

ಒಡ್ಡ : ಅಲ್ಲಿ ನಾನು ನೋಡಬೇಕಾದುದನ್ನು ನೋಡಿದ್ದೇನೆ. ಮಾಡಬೇಕಾದ್ದನ್ನು ಮಾಡಿದ್ದೇನೆ. ಅದಿರಲಿ... ಇದೇನು ? ಇದು ಯಾಕೆ ಹೀಗೆ ಹರಿಯುತ್ತಿದೆ ? ಇದು ಯಾಕೆ ಹೀಗೆ ಹರಿಯುತ್ತಿದೆ ? ಇದು ಎಲ್ಲಿಂದ ಹೊರಡುತ್ತಿದೆ ?

ದಡ್ಡ : ಅದೆಲ್ಲಾ ನಮಗೆ ಗೊತ್ತಿಲ್ಲ... ಹರಿಯುವ ಹೊಳೆಯ ಬಗ್ಗೆ ಯಾರಾದರೂ ಹೀಗೆ ಪ್ರಶ್ನಿಸುತ್ತಾರೆಯೇ ?

ಒಡ್ಡ : ನಾನು ಪ್ರಶ್ನಿಸಿ ಉತ್ತರ ಪಡೆಯುತ್ತೇನೆ. ಉತ್ತರ ಸಿಗದೆ ನಾನು ಇಲ್ಲಿಂದ ಹೊರಡುವುದಿಲ್ಲ.

ಹೆಡ್ಡ : ಹೋಗಪ್ಪಾ ಹೋಗು... ಬೇಕಾದದ್ದನ್ನೆಲ್ಲ ನೋಡಿ ಬರುವಿಯಂತೆ... ನದೀ ಮೂಲ ಋಷಿ ಮೂಲ ಯಾರೂ ಹುಡುಕಬಾರದಂತೆ... ನಮಗೇನು ?

*ನಿಷ್ಕ್ರಮಿಸುತ್ತಾರೆ.*

ಒಡ್ಡ : ಯಾಕೆ ಹುಡುಕಬಾರದು ? ನಾನು ಇದು ಎಲ್ಲಿಂದ ಹೊರಟು ಬರುತ್ತದೆ ಎಂಬುದನ್ನು ತಿಳಿದೇ ಬರುತ್ತೇನೆ.

**ಚಲಿಸುತ್ತಾನೆ.**

*ರಂಗದಲ್ಲಿ ನದಿಯ ಮಾದರಿಯೊಂದು ನಿರ್ಮಾಣವಾಗಿದೆ. ಉಗಮ ಸ್ಥಾನವೂ ಕಾಣಿಸುತ್ತದೆ.*

*ಹಾಡುಗಾರರು ಹಾಡುತ್ತಾರೆ. 'ಪಂಜೆಯವರು ಬರೆದ ನದಿಯ ಹಾಡು'.*

ಒಡ್ಡ : ಎಲ್ಲಿಂದ ಬರುತೀಯೆ ನೀರನ್ನು ತರುತೀಯೆ
ಒಳ್ಳೇದಾಗಿರುತೀಯೆ ನೀನು
ಎಲ್ಲಿಗೆ ಹೋಗುವೆ ನೀರನ್ನು ಸಾಗುವೆ
ಕಡೆಗೆ ಏನಾಗುವೆ ನೀನು ?

ನದಿ : ಬೆಟ್ಟದಾ ಹೊಡೆಯಲ್ಲಿ ಹುಟ್ಟಿದೆ ಹನಿಯಾಗಿ
ತೊಟ್ಟಾದೆ ತಟುಕಾದೆ ನಾನು
ಬಟ್ಟಾದೆ ಬೆರಳಾದೆ ತೋಳಾದೆ ತೊಡೆಯಾದೆ
ಪುಟ್ಟ ತೋಡಾದೆನು ನಾನು
ಆಡುತ್ತ ಸುತ್ತಲು ನೋಡುತ್ತ ತೊರೆಯನ್ನು
ಕೂಡುತ್ತ ಓಡುತ್ತ ಬಂದೆ
ದೂಡುತ್ತ ಕಲ್ಲನ್ನು ಮಾಡುತ್ತ ಗುಲ್ಲನ್ನು
ಹಾಡುತ್ತ ನೀಡುತ್ತ ಬಂದೆ.

ನದಿ : ಅದೆ ಗೆಳೆಯಾ. ಇವತ್ತು ನನ್ನ ಪರಿಸ್ಥಿತಿಯನ್ನು ಯಾರೂ ಕೇಳುವವರೇ ಇಲ್ಲವಾಗಿದೆ. ಎಲ್ಲರಿಗೂ ಉಪಯೋಗಕ್ಕೆ ಅತ್ಯಗತ್ಯವಾಗಿ ಬೇಕಾದ ನೀರು ಕೇವಲ ಕೆಲವೇ ಸ್ವಾರ್ಥಿಗಳ ಪಾಲಾಗುತ್ತಿದೆ. ಉಳಿದ ಮಂದಿ ನೀರಿಗಾಗಿ ಬಹಳ ಕಷ್ಟ ಪಡುತ್ತಿದ್ದಾರೆ.

ಒಡ್ಡ : ಇದೆಲ್ಲಾ ಹೇಗಾಯಿತು ? ಯಾಕಾಯಿತು ?

ನದಿ : ಏನು ಹೇಳಲಿ ಗೆಳೆಯಾ... ನಗರಗಳಲ್ಲಿ ಇರುವ ಕಾರ್ಖಾನೆಗಳ ಕಲುಷಿತ ನೀರನ್ನು, ರಾಸಾಯನಿಕ ವಿಷಮಿಶ್ರಿತ ತ್ಯಾಜ್ಯಗಳನ್ನು ನನ್ನೊಳಗೇ ಬೆರೆಸುತ್ತಿರುವುದರಿಂದ ನನ್ನನ್ನೇ ನಂಬಿರುವ ಎಷ್ಟೋ ಮಂದಿ ಗ್ರಾಮೀಣರು ನಿಧಾನ ವಿಷಕ್ಕೆ ಬಲಿಯಾಗುತ್ತಿದ್ದಾರೆ. ರೋಗ ರುಜಿನಗಳಿಗೆ ತುತ್ತಾಗುತ್ತಿದ್ದಾರೆ.

ಒಡ್ಡ : ಹಾಗಾದರೆ ನಾನೇನು ಮಾಡಬೇಕಾಗಿದೆ ? ಹೇಳು.

ನದಿ : ನಿನಗೆ ನಾನು ಮರ ಬಂಡೆಗಳಂತೆ ಕೊಪ್ಪರಿಗೆಗಳನ್ನು ನೀಡಲಾರೆ. ಹಾಗಿದ್ದರೂ ನೀರಿನ ಮಿತವ್ಯಯ ಬಳಕೆ ಉಪಯೋಗಗಳ ಬಗ್ಗೆ ಎಲ್ಲ ಜನರಿಗೂ ನೀನು ತಿಳಿಸಿ ಹೇಳಬೇಕು.

ಒಡ್ಡ : ಅಂದರೆ...

ನದಿ : ಮಳೆಯ ನೀರನ್ನು ಹಿಡಿದು ನಿಲ್ಲಿಸುವುದು... ಆ ನೀರನ್ನು ಇಂಗುವಂತೆ ಮಾಡುವುದು ಎಲ್ಲರ ಕಾಯಕವಾಗಬೇಕು. ನೀನು ಮತ್ತು ನಿನ್ನ ಸ್ನೇಹಿತರು ಓಡುವ ನೀರನ್ನು ನಡೆಯುವಂತೆ ಮಾಡಬೇಕು... ನಡೆಯುವ ನೀರನ್ನು ತೆವಳುವಂತೆ ಮಾಡಬೇಕು... ತೆವಳುವ ನೀರನ್ನು ನಿಲ್ಲುವಂತೆ ಮಾಡಬೇಕು. ನಿಂತ ನೀರನ್ನು ಇಂಗುವಂತೆ ಮಾಡಬೇಕು... ಹಾಗೆ ಮಾಡಿದಲ್ಲಿ ನೀರು ಇಲ್ಲ ಎನ್ನುವುದೇ ಇಲ್ಲವಾಗುತ್ತದೆ. ಹೋಗಿ ಬಾ ಗೆಳೆಯ... ಹೋಗಿ ಬಾ...

*ಒಡ್ಡ ಹೊರಡುತ್ತಾನೆ. ನದಿ ನಿಷ್ಕ್ರಮಿಸುತ್ತದೆ.*

*ಹೆಡ್ಡ, ದಡ್ಡ ನಿಧಾನಕ್ಕೆ ಚಲಿಸುತ್ತಿದ್ದಾರೆ. ಒಡ್ಡ ಓಡೋಡಿ ಬರುತ್ತಾನೆ.*

ಒಡ್ಡ : ಅಣ್ಣಂದಿರೇ, ಸ್ವಲ್ಪ ನಿಲ್ಲಿ, ನಾನೂ ಬರ್ತಾ ಇದ್ದೇನೆ.

ಹೆಡ್ಡ : ಬಾ ಬಾ, ಏನು ನೋಡಿದೆ ಒಡ್ಡಾ... ?

ಒಡ್ಡ : ನೋಡಬೇಕಾದುದನ್ನು ನೋಡಿದ್ದೇನೆ. ಮಾಡಬೇಕಾದುದನ್ನು ಮಾಡಿದ್ದೇನೆ.

ದಡ್ಡ : ಸರಿ ಸರಿ. ಮುಂದಕ್ಕೆ ಹೋಗೋಣ... ಅರಸರ ಅರಮನೆಗೆ ಸ್ವಲ್ಪ ದೂರವಷ್ಟೇ ಉಳಿದಿದೆ.

*ಮೂವರೂ ಚಲಿಸುತ್ತಾರೆ.*

*ರಂಗದಲ್ಲಿ ಮೂರು ಹೆಬ್ಬಾಗಿಲುಗಳು ನಿರ್ಮಾಣವಾಗುತ್ತವೆ. ಹೆಬ್ಬಾಗಿಲುಗಳಲ್ಲಿ ಅರಸನ ಆಜ್ಞೆಯ ಫಲಕಗಳನ್ನು ತೂಗುಹಾಕಲಾಗಿದೆ. ಫಲಕಗಳನ್ನು ಹೊತ್ತ ಸೈನಿಕರು ಬರೆದುದನ್ನು ಓದಿ ಹೇಳುತ್ತಿದ್ದಾರೆ. ಹೆಡ್ಡ, ದಡ್ಡ, ಒಡ್ಡ ಅದನ್ನು ಗಮನಿಸುತ್ತಿದ್ದಾರೆ.*

ಸೈನಿಕ - ೧ : ಅರಸರ ಅಪ್ಪಣೆಯ ಪ್ರಕಾರ ಅರಮನೆಯ ಹೆಬ್ಬಾಗಿಲಿನ ಮುಂಭಾಗದಲ್ಲಿರುವ ಆಲದ ಮರವನ್ನು ಯಾರು ಕಡಿದು ಹಾಕುತ್ತಾರೋ ಅವರು ಅರ್ಧ ರಾಜ್ಯದ ಒಡೆಯರಾಗುತ್ತಾರೆ.

ಸೈನಿಕ - ೨ : ಅರಸರ ಅಪ್ಪಣೆ ಈ ರೀತಿಯಾಗಿದೆ... ಅರಮನೆಯ ಅಂಗಳದಲ್ಲಿ ಯಾರು ಬಾವಿಯೊಂದನ್ನು ತೋಡುತ್ತಾರೋ ಅವರು ಅರ್ಧ ರಾಜ್ಯದ ಒಡೆಯರಾಗುತ್ತಾರೆ.

ಹೆಡ್ಡ : ಪರವಾ...

ದಡ್ಡ : ಶಹಭಾಸ್...

ಒಡ್ಡ : (ಮೌನ)

ಹೆಡ್ಡ : ಈ ಕೆಲಸ ಒಡ್ಡನಿಂದ ಆದೀತೇ... ?
ದಡ್ಡ : ಆಗಲಿಕ್ಕಿಲ್ಲ... ಏನು ಒಡ್ಡ, ಈ ಬಗ್ಗೆ ನಿನ್ನದು ಯಾವುದೇ ಪ್ರಶ್ನೆಗಳಿಲ್ಲವಲ್ಲ... ಏಕೆ ?
ಒಡ್ಡ : *(ಫಲಕ ತೋರಿಸಿ)* ಉತ್ತರ ಸ್ಪಷ್ಟವಾಗಿ ನಮೂದಿಸಿರುವಾಗ ಪ್ರಶ್ನೆಯ ಅಗತ್ಯಗಳಿಲ್ಲ... ಪ್ರಶ್ನೆಗಳಿಗಾಗಿಯೇ ಪ್ರಶ್ನೆಗಳನ್ನು ಕೇಳಬಾರದು.
ಹೆಡ್ಡ : ಆಗಲಿ... ಅರ್ಧ ರಾಜ್ಯ ನನಗೆ.
ದಡ್ಡ : ಉಳಿದರ್ಧ ರಾಜ್ಯ ನನ್ನ ಪಾಲಿಗೆ.

*ಚಲಿಸುತ್ತಾರೆ.*

*ಹೆಬ್ಬಾಗಿಲು ಚಲಿಸಿ ಇನ್ನೊಂದು ಫಲಕ ಕಾಣಿಸುತ್ತದೆ.*

ಸೈನಿಕ - ೩ : *(ಓದುತ್ತಾನೆ)* ಅರಸರ ಅಪ್ಪಣೆ ಈ ರೀತಿಯಾಗಿದೆ... ಈ ಆಲದಮರ ಕಡಿಯಲು ಬಂದವರು ಕಡಿಯಲಾರದೆ ಹೋದರೆ ಅವರ ಕಿವಿ ಕತ್ತರಿಸಲಾಗುವುದು. ಬಾವಿ ತೋಡಲು ಬಂದವರು ತೋಡಲಾರದೆ ಹೋದರೆ ಅವರ ಮೂಗು ಕತ್ತರಿಸಲಾಗುವುದು...

*ಹೆಡ್ಡ ಸೈನಿಕರಿಂದ ಕೊಡಲಿ ಪಡೆದುಕೊಂಡು ಮರ ಕಡಿಯಲು ಆರಂಭಿಸುತ್ತಾನೆ. ಒಂದು ಕೊಂಬೆ ತುಂಡಾದರೆ ಇನ್ನೆರಡು ಹುಟ್ಟಿಕೊಳ್ಳುತ್ತವೆ. ಒಂದು ಬೇರು ಕಡಿದಾಗ ಇನ್ನೆರಡು ಬೇರು ಕಾಣಿಸಿಕೊಳ್ಳುತ್ತವೆ. ಪುನಃ ಪ್ರಯತ್ನಿಸುತ್ತಾನೆ. ಕೊನೆಗ ಸೋತು ಹೋಗುತ್ತಾನೆ.*

ಹೆಡ್ಡ : ಅಬ್ಬಾ... ಇನ್ನು ನನ್ನಿಂದ ಆಗಲಿಕ್ಕಿಲ್ಲ...

*ಕೂಡಲೇ ಸೈನಿಕರು ಅವನನ್ನು ಬಂಧಿಸಿ ಒಳಒಯ್ಯುತ್ತಾರೆ.*

ದಡ್ಡ : ಈಗ ನನ್ನ ಸರದಿ. ನಾನು ಈ ಮರವನ್ನು ಬುಡದಿಂದಲೇ ಕತ್ತರಿಸುತ್ತೇನೆ.

*ದಡ್ಡ ಕೊಡಲಿ ಎತ್ತಿಕೊಂಡು ಕಡಿಯಲು ಪ್ರಯತ್ನಿಸುತ್ತಾನೆ. ಕೊನೆಗೆ ಅವನೂ ಸೋತು ಹೋಗುತ್ತಾನೆ.*

ದಡ್ಡ : ಅಬ್ಬಾ... ಎಷ್ಟು ಕಷ್ಟ. ನನ್ನಿಂದ ಆಗಲಿಕ್ಕಿಲ್ಲ.

*ಸೈನಿಕರು ಅವನನ್ನೂ ಒಳಒಯ್ಯುತ್ತಾರೆ.*

*ಇನ್ನೊಂದು ಮೂಲೆಯಲ್ಲಿ ಅರಸ ಕಾಣಿಸಿಕೊಳ್ಳುತ್ತಾನೆ.*

ಅರಸ : ಓಹೋ ಇವರೂ ಸೋತು ಹೋದರೇ... ನಾಳೆ ಬೆಳಿಗ್ಗೆ ಇವರಿಬ್ಬರ ಕಿವಿಗಳನ್ನೂ ಕತ್ತರಿಸಿ ಬಿಡಿ.
ಸೈನಿಕ : ಆಗಲಿ ಮಹಾಸ್ವಾಮೀ.
ಒಡ್ಡ : *(ಪ್ರವೇಶಿಸಿ)* ಅರಸರಿಗೆ ವಂದನೆಗಳು. ತಾವು ಅನುಮತಿ ನೀಡಿದರೆ ನಾನು ಈ ಕೆಲಸಗಳನ್ನು ಮಾಡಬಲ್ಲೆ.
ಅರಸ : ಎಲಾ ಚಿಣ್ಣಾ... ನಿನ್ನಿಂದಾಗಲಿಕ್ಕಿಲ್ಲ... ಸೈನಿಕರೇ, ಇವನ ಕಿವಿಗಳನ್ನೂ ಮೂಗನ್ನೂ ಈಗಲೇ ಕತ್ತರಿಸಿ ಬಿಡಿ.
ಒಡ್ಡ : ಮಹಾಸ್ವಾಮೀ, ನಾನು ಆ ಕೆಲಸಗಳನ್ನು ಮಾಡದಿದ್ದರಲ್ಲವೇ ನನ್ನ ಕಿವಿ ಮೂಗುಗಳನ್ನು ಕತ್ತರಿಸಿ ಬಿಡುವುದು ? ಕೆಲಸಗಳನ್ನು ಮಾಡಲೆ ಮಹಾಸ್ವಾಮೀ ?
ಅರಸ : ಹ್ಞೂ... ನೋಡುವ...

*ಒಡ್ಡ ಮಾಯದ ಕೊಡಲಿಗಳೊಂದಿಗೆ ನರ್ತಿಸುತ್ತಾನೆ.*

*ಹಾಡುಗಾರರು ಹಾಡುತ್ತಾರೆ.*

ಅರರೆ ಕೊಡಲಿ ಹರಿತ ಕೊಡಲಿ
ಮರದ ಬುಡಕೆ ಏಟು ಕೊಡಲಿ

*ನರ್ತನ ಪರಾಕಾಷ್ಠೆ ತಲುಪುತ್ತಿದ್ದಂತೆ ಫ್ರೀಜ್.*

ಒಡ್ಡ : ಕ್ಷಮಿಸಿ ಅರಸರೆ. ಮರ ಕಡಿಯುವ ಮೊದಲು ನನ್ನಲ್ಲಿ ಕೆಲವು ಪ್ರಶ್ನೆಗಳಿವೆ. ಅವುಗಳಿಗೆ ನೀವು ಸಹನೆಯಿಂದ ಉತ್ತರಿಸುತ್ತೀರಲ್ಲ ?

ಅರಸ : ಪ್ರಶ್ನೆಗಳೇ... ? ಖಂಡಿತವಾಗಿಯೂ ಉತ್ತರಿಸುತ್ತೇವೆ.

ಒಡ್ಡ : ಈ ಆಲದಮರವನ್ನು ಯಾರೇ ಆಗಲಿ ಇಲ್ಲಿಂದ ಕಡಿಯತೊಡಗಿದ ಕೂಡಲೇ ಏನಾಗುತ್ತದೆ ?

ಅರಸ : ಒಂದು ಬೇರು ಕಡಿದರೆ ಎರಡು ಬೇರು ಹುಟ್ಟಿಕೊಳ್ಳುತ್ತವೆ. ಒಂದು ಕೊಂಬೆ ಕಡಿದರೆ ಎರಡು ಕೊಂಬೆಗಳು ಚಿಗುರೊಡೆಯುತ್ತವೆ.

ಒಡ್ಡ : ಅರಸರೇ, ಅದು ಸರಿಯಾದದ್ದೇ ಆಗಿದೆ. ಪ್ರಕೃತಿಯಲ್ಲಿರುವ, ಕಾಡುಗಳಲ್ಲಿರುವ ಮರಗಳನ್ನು ಕಡಿದರೆ ಇನ್ನೆರಡು ಗಿಡಗಳು ಹುಟ್ಟಿ ಬರಬೇಕಾದದ್ದು ನ್ಯಾಯವೇ ಆಗಿದೆ. ಆದುದರಿಂದ ಅತ್ಯಂತ ಸರಳ ಮತ್ತು ಸುಲಭದ ವಿಧಾನವೊಂದಿದೆ. ನೀವು ಈಗಿಂದೀಗಲೇ ಎರಡು ಗಿಡಗಳನ್ನು ನೆಟ್ಟು ಬೆಳೆಸುವ ವ್ಯವಸ್ಥೆ ಮಾಡಿರಿ. ಆಗ ಈ ಮರವನ್ನು ಕಡಿಸಲು ನಿಮಗೆ ಹಕ್ಕು ಬರುತ್ತದೆ. ಇಲ್ಲಿ ಬೇಕಾದದ್ದು ನೆಟ್ಟು ಬೆಳೆಸುವ ಮನಸ್ಸೇ ಹೊರತು ಇದ್ದುದನ್ನು ನಾಶಪಡಿಸುವ ಕೆಟ್ಟ ಯೋಚನೆಗಳಲ್ಲ...

ಅರಸ : ಭಲೇ. ನಿನ್ನ ತರ್ಕ ಚೆನ್ನಾಗಿದೆ. ಸೈನಿಕರೇ, ಈಗಿಂದೀಗಲೇ ಡಂಗುರ ಸಾರಿಸಿರಿ.

ಡಂಗುರದವನು : ಇಂದಿನಿಂದ ನಮ್ಮ ನಾಡಿನಲ್ಲಿ ಮರ ಕಡಿಯುವ ಹಕ್ಕು ಅದನ್ನು ಬೆಳೆಸಬಲ್ಲವರಿಗೆ ಮಾತ್ರ ಇರುತ್ತದೆ. ಆದುದರಿಂದ ಎರಡು ಗಿಡಗಳನ್ನು ನೆಟ್ಟು ಬೆಳೆಸಿದ ಬಳಿಕವೇ ಒಂದು ಮರವನ್ನು ಕಡಿಯಬಹುದು... ಎಂದು ಅರಸರ ಆಜ್ಞೆಯಾಗಿದೆ...

ಅರಸ : *(ಒಡ್ಡನಿಗೆ)* ನಿನಗೆ ಅರ್ಧ ರಾಜ್ಯ ಕೊಡಬಹುದು... ಆದರೆ ಬಾವಿಯನ್ನು ತೋಡಲಿಲ್ಲವಲ್ಲ...

ಒಡ್ಡ : ಅರಸರೇ. ನೀವು ಎಲ್ಲಿ ಬಾವಿ ತೋಡಬೇಕೆಂದು ಬಯಸುತ್ತೀರಿ... ?

ಅರಸ : ಅಲ್ಲಿಯೇ, ನೀನು ನಿಂತಲ್ಲಿ. ಒಂದು ಬಂಡೆಕಲ್ಲು ಹರಡಿಕೊಂಡಿದೆಯಲ್ಲ. ಅದೇ ಸ್ಥಳದಲ್ಲಿ...

ಒಡ್ಡ : ಬಾವಿಯನ್ನೇನೋ ತೋಡಬಹುದು, ಆದರೆ ಅದರಲ್ಲಿ ನೀರು ಸಿಗಲಿಕ್ಕಿಲ್ಲ...

ಅರಸ : ನೀರು ಸಿಗಲಿಕ್ಕಿಲ್ಲ ಎಂದರೇನು ? ಬಾವಿ ತೋಡಿ ನೀರು ಸಿಗುವಂತಾದರೆ ನಿನಗೆ ನನ್ನ ಮಗಳನ್ನು ಕೊಟ್ಟು ಕಲ್ಯಾಣ ಮಾಡಿಸುತ್ತೇನೆ.

ಒಡ್ಡ : ಅರಸರೇ, ನೀವು ನನ್ನ ಕಲ್ಯಾಣಕ್ಕಿಂತಲೂ ಈ ನಾಡಿನ ಎಲ್ಲ ಜನರ ಕಲ್ಯಾಣದ ಬಗ್ಗೆ ಯೋಚಿಸಿ. ನಾನು ಹೇಳಿದ್ದು ಇಲ್ಲಿ ಬಾವಿ ತೋಡಿದರೆ ನೀರು ಸಿಗಲಿಕ್ಕಿಲ್ಲ ಎಂದು ಮಾತ್ರ...

ಅರಸ : ಚೆನ್ನಾಗಿ ಮಾತನಾಡುತ್ತೀಯ... ನೀರು ಯಾಕೆ ಸಿಗಲಿಕ್ಕಿಲ್ಲ... ?

ಒಡ್ಡ : ಯಾಕೆಂದರೆ ನೀರು ಸಿಗಬೇಕಾದ ಪೂರಕ ಕೆಲಸಗಳನ್ನು ನಾವು ಯಾರೂ ಮಾಡುತ್ತಿಲ್ಲ... ಇರುವ ನೀರ ಸೆಲೆಗಳನ್ನೆಲ್ಲ ಅನಾವಶ್ಯಕ ದುರುಪಯೋಗದಿಂದಾಗಿ ನಾಶ ಮಾಡಿದ್ದೇವೆ...

ಅರಸ : ಹಾಗಾದರೆ ನಾವೇನು ಮಾಡೋಣ ? ನೀರಂತೂ ನಮಗೆ ಅಗತ್ಯವಾಗಿ ಬೇಕೇ ಬೇಕಲ್ಲವೇ... ?

ಒಡ್ಡ : ನಾವು ಪ್ರಕೃತಿಯಿಂದ ಎಷ್ಟು ನೀರನ್ನು ಪಡೆಯುತ್ತೇವೆಯೋ... ಅದನ್ನು ಮರುಪೂರಣ ಮಾಡಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ನಮ್ಮ ಊರಲ್ಲಿ ತುಂಬ ಸುರಿಯುವ ಮಳೆಯಿದೆ. ಆದರೆ ಅದರ ಸಮರ್ಪಕ ಬಳಕೆ ಆಗುತ್ತಿಲ್ಲ...

ಅದರ ನೀರನ್ನು ಎಲ್ಲ ಜನರಿಗೂ ಸರಿಯಾದ ರೀತಿಯಲ್ಲಿ ಬಳಕೆಯಾಗುವಂತೆ ಯೋಜನೆ ರೂಪಿಸಬಹುದಲ್ಲ... ?

ಅರಸ : ಒಳ್ಳೆಯ ಸಲಹೆ... ನೀರಿಗಾಗಿ ಕಷ್ಟಪಡುವ ಜನರನ್ನು ನೋಡಿದ್ದೇವೆ. ಹಾಗಾಗಿ...

ಒಡ್ಡ : ಹಾಗಾಗಿಯೇ ಮಳೆ ಕೊಯ್ಲಿನ ಕೆಲಸವನ್ನು ಎಲ್ಲರೂ ಮಾಡಬೇಕಾಗಿದೆ. ಮಳೆ ಕೊಯ್ಲು ಎಂದರೆ ಓಡುವ ನೀರನ್ನು ನಡೆಯುವಂತೆ ಮಾಡುವುದು... ನಡೆಯುವ ನೀರನ್ನು ತೆವಳುವಂತೆ ಮಾಡುವುದು... ತೆವಳುವ ನೀರನ್ನು ನಿಲ್ಲಿಸುವುದು... ನಿಂತ ನೀರನ್ನು ಇಂಗಿಸುವುದು. ಅರಸರೇ, ಮೊದಲು ನಾವು ನೀರಿಂಗಿಸೋಣ ಆಗ ತಾನಾಗಿಯೇ ನೀರು ಹರಿದು ಬರುತ್ತದೆ.

ಅರಸ : ಅಂದ ಹಾಗೆ ನಿನ್ನ ಹೆಸರೇನೆಂದು ಹೇಳಿದೆ...

ಒಡ್ಡ : ಒಡ್ಡ ಮಹಾಸ್ವಾಮೀ.

ಅರಸ : ನೀನು ಒಡ್ಡು, ಮದಕ, ಕೆರೆ, ನದಿಗಳ ರಕ್ಷಣೆಯ ಬಗ್ಗೆ ಹೊಂದಿರುವ ಕಾಳಜಿ ಬಗ್ಗೆ, ಜೀವಜಲದ ಬಗೆಗಿನ ಪ್ರೀತಿಯ ಬಗ್ಗೆ ನಮಗೆ ಬಹಳ ಮೆಚ್ಚುಗೆಯುಂಟಾಗಿದೆ. ನೀನು ನಮಗೆ ನೀರುಳಿತಾಯದ ಮೊದಲ ಪಾಠ ಹೇಳಿದ್ದೀಯ, ಅದಕ್ಕಾಗಿ ಕೃತಜ್ಞತೆಗಳು.

ಒಡ್ಡ : ಕೃತಜ್ಞತೆ ಸಲ್ಲಿಸಬೇಕಾದದ್ದು ಈ ನೆಲಕ್ಕೆ, ಈ ಜಲಕ್ಕೆ. ನಾವೆಲ್ಲರೂ ಈಗಾಗಲೇ ಈ ಭೂಮಿಯಿಂದ ಪಡೆದಿರುವ ನೀರಿನ ಪ್ರಮಾಣವನ್ನು ವಾಪಾಸು ಮಾಡದಷ್ಟು ಮುಂದಕ್ಕೆ ಹೋಗಿದ್ದೇವೆ. ಭೂಮಿತಾಯಿಯ ಆ ಋಣವನ್ನು ಸ್ವಲ್ಪವಾದರೂ ಸಂದಾಯ ಮಾಡೋಣ. ಅದು ಒಬ್ಬರಿಂದ ಇಬ್ಬರಿಂದ ಆಗುವ ಕೆಲಸವಲ್ಲ. ನಾವೆಲ್ಲರೂ ಸಾಮೂಹಿಕ ಸಹಭಾಗಿತ್ವದೊಂದಿಗೆ ನಡೆಸಬೇಕಾದ ಕಾಯಕ.

ಅರಸ : ಹೌದು, ನಾವೆಲ್ಲರೂ ಸೇರಿ ಜೀವಜಲದ ಉಳಿವಿನ ಕುರಿತು ಪ್ರಯತ್ನಿಸೋಣ. ಎಲ್ಲಿ ಸೈನಿಕರೇ, ಈಗಿಂದೀಗಲೇ ಡಂಗುರ ಸಾರಿಸಿರಿ.

ಡಂಗುರದವನು : ಈ ನಾಡಿನ ಎಲ್ಲ ಜನರಿಗೂ ಈ ಮೂಲಕ ತಿಳಿಸುವುದೇನೆಂದರೆ– 'ಪ್ರತಿಯೊಬ್ಬರೂ ನೀರುಳಿತಾಯ ಕಾಯಕದಲ್ಲಿ ಸ್ವಂತ ಆಸಕ್ತಿಯಿಂದ ಪಾಲ್ಗೊಳ್ಳಬೇಕು.' ಮಳೆನೀರು ಸಂಗ್ರಹ, ಕೆರೆ, ಒಡ್ಡು, ಇಂಗು ಗುಂಡಿಗಳ ನಿರ್ಮಾಣದಲ್ಲಿ ಪ್ರೀತಿಯಿಂದ ಭಾಗವಹಿಸಬೇಕು. ನೀರೆ ನೆಮ್ಮದಿಯ ನೂರಾರು ದಾರಿಗಳಲ್ಲಿ ಯಾವ ದಾರಿಯನ್ನಾದರೂ ಕಂಡುಕೊಳ್ಳಬಹುದು... ಎಂದು ಅರಸರ ಕೋರಿಕೆಯಾಗಿದೆ... ಬನ್ನಿ... ನೀರಿಂಗಿಸೋಣ ಬನ್ನಿ...

*ಹಾಡುಗಾರರು ಹಾಡುತ್ತಾರೆ.*

ಬನ್ನಿರೊ ಬನ್ನಿರಣ್ಣ ಕೋಲು ಕೋಲೆ
ತನ್ನಿರೊ ತನ್ನಿರಣ್ಣ ಕೋಲು ಕೋಲೆ
ಹನಿ ಹನಿ ಸೇರಿಸೋಣ ಕೋಲು ಕೋಲೆ
ನೀರಿಂಗಿಸೋಣ ಬನ್ನಿ ಕೋಲು ಕೋಲೆ
ಕೆರೆ ಒಡ್ಡು ಕಟ್ಟ ಬನ್ನಿ ಕೋಲು ಕೋಲೆ
ಮಳೆ ನೀರ ಹಿಡಿಯ ಬನ್ನಿ ಕೋಲು ಕೋಲೆ
ಬನ್ನಿರೊ ಬನ್ನಿರಣ್ಣ ಕೋಲು ಕೋಲೆ
ತನ್ನಿರೊ ತನ್ನಿರಣ್ಣ ಕೋಲು ಕೋಲೆ

● ▼

ಐ. ಕೆ. ಬೊಳುವಾರು, ನಿರತನಿರಂತ, ದೂರಸಂಪರ್ಕ ವಸತಿಗೃಹ
ಪುತ್ತೂರು - ೫೭೪ ೨೦೧ (ದ. ಕ.) ☎: ೦೮೨೫೧ - ೬೨ ೪೦೦೦; ೯೪೪೮೦-೧೨೨೬೭

ಹಣಮಂತ ತಾಸಗಾಂವಕರ

ಮನ್ನೆ ಒಂದ ಮಜಾಗಾಟ ಆತ್ರಿಪಾ. ಮಜಾ ಅಂದ್ರ ಭಾರಿ ಮಜಾನ. ನಮ್ಮೊಬ್ಬ ದೋಸ್ತ್ರು ಹಳೀ ದೊಡ್ಡ ಮಾಸ್ತರು. ಕನ್ನಡ ಪಾಠ ಮಾಡ್ತಿದ್ದರಂತ. ನಾವೂ ಅವ್ರು ಕೂಡೆ ಒಮ್ಮೊಮ್ಮೆ ಅಡ್ಡಾಡ್ಲಾಕ ಹೋಗ್ತಿರ್ತೀವಿ. ಶಕ್ತಿ ಇದ್ದಷ್ಟ ಅವರು ಹೊರಗಿನಿಂದ ಹೊರಗ ಮಾತಾಡಿ ಕಳಿಸ್ತಿದ್ರು. ಅತ್ತಿತ್ತ ಪುಸ್ತಕದ್ದು ಪೋಲಿ ಮಾತ್ರ ತೋರಿಸ್ತಿದ್ದಿಲ್ಲ.

ಹಿಂಗs ಮಾತಾಡ್ತ ಕುಂತಾಗನ ಒಂದೆರಡ ಪತ್ರ. 'ಸಂಕಲನ' ಪುಸ್ತಕಾ ಬಂತ್ರಿಪಾ. ಪೋಸ್ಟಮನ ಇನಾ ನನ ಕೈಯಾಗsನ ಕೊಟ್ಟಿಲ್ಲ. ಪಟ್ನ ನಂ ಮಿತ್ರರು ಅದ್ನ ಕಸ್ಗೊಂಡುಬಿಟ್ರು. ಯಾಲಾ ಯಾವದೋ ಪುಸ್ತಕಾ ಬಂತಲ್ರಿ. ಹ ಪ್ಹ ಪ್ಹ... ಒಳ್ಳೆ ಛಂದ ಕಾಣತೈತ್ರಿ. ಇಂದು ಮ್ಯಾಲಿನ ರ್‍ಯಾಪರು ಹರದ ಬಿಟ್ರು. ಏಟ ಚಂದಾಗೆ ಐತಲ್ರಿ. ಅಂತ ಚಿತ್ರದ ಮ್ಯಾಗ ಕೈ ಆಡಸೂವಾಂಗ ಆಡಿಸಿದ್ರು.

ಅದಕ್ಕ ಮೊದ್ಲ ನಿಮಗ ಹೇಳಿದ್ನಿಲಾ. ಒಂದ ಚಂದಂತಾದ್ದು. ಅಪ್ಪ ಅಪ್ಪನ ಮ್ಯಾಕ ಬರದಂಥಾದ್ದು. ನಿಮಗೂ ಸೈತ ಅದ್ರಾಗ ಬರೀರಿಲಾ ಅಂತ ಹೇಳಿದ್ದಿಲ್ಲ. ಅದು ಇದು ಅಂದ.

ಹ್ಞಾ... ಹ್ಞಾ... ಯಾರ ಬರದಾರ ಇದನ್ನ. ಮುಖಪುಟ ಚಿತ್ರ ಭಾಳ ಚಂದ ಐತಿಲಾ. ಅದ್ರ ಅದ್ರಾಗ ಏನೈತಿ ಅನ್ನೋದನs ತಿಳ್ಕೊಂಗಿಲ್ಲ. ಅಲ್ಲ... ಅಂದವ್ರ ಹೊಸ ಶೋಧ ಮಾಡಿದವರಂಗ ಗದ್ದಕ್ಕ ಕೈ ಹಚ್ಚಿ ಕುಂತ್ರು. ಪಾನ ಹೊಳಿಸಿ ಹೊಳಿಸಿ ನೋಡಾಕ ಹತ್ತಿದ್ರು. ನಾನೂ ಹಂಗs ಬಿಡಲಿಲ್ಲ. ಅಲ್ರೀ ಸರ್, ನೀವೂ ಇದಕ ಮೆಂಬರ ಆಗರಿಲಾ. ಅಸ್ಸಿ. ಆಗೂನು. ಆಗೂನು. ಅದ್ರಾಗೇನೈತಿ. ಚಲೂತ್ಕಾಂಗ ತಗೀತಾರು. ಇನ್ನೊಂದ. ನಿಮ್ಗ ಹೇಳೋನೋ ಇಲ್ಲೋ ಯಾಂಬಲ್ಲ. ಇವ್ರ ಹಿನ ಅದಾರಲಾ ಶಟ್ರು. ಅದs ಈ ಪಟ್ಟಣಶೆಟ್ರು... ನಮ್ಮ ಚಿಗಪ್ಪನ ಅತ್ತೀಮನಿ ಕಡೆ ಪತ್ರಕರ್ತಿಗಿ ಆಗಬೇಕ್ರಿ. ಇಷ್ಟs ಅಲ್ಲ, ಇವ್ರ ನನಗೂ ಸೈತ ಕಲಿಸ್ಯಾರ್ರಿಪಾ. ಈ ಪಟ್ಟಣಶೆಟ್ಟಿ ಸರ್ರು ನನಗ ಕವನಾ ಬರೀಪಾ ತಮ್ಮಾs, ನೀ ಭಾಳ ಛಂದ ಹಾಡತಿ ಅಂತ ಡುಬ್ಬಾ ಚಪ್ಪರಿಸಿದ್ದರು... ಹೇಳುತ್ತ ಬಚ್ಚ ಬಾಯಿಂದ ಪಕ ಪಕ ನಕ್ಕರ್ರಿ.

ನನಗತ್ತೂ ನಗೀನ ತಡ್ಯಾಕ ಆಗ್ಲಿಲ್ಲ. ಯಾಕರೀ ನನ ಮಾತಿಗಿ ನಗತೀರಿಲಾ... ಅಂದ್ರು. ಅಲ್ಲಾರೀ ನಿಮಗ ಈಗ ಏಟ ವರ್ಷರೀ... ಅಂದೆ. ನಾಳೆ ದೀಪಾವಳಿಗೆ ಎಪ್ಪತ್ತೈದು ಮುಗೀತಾವ್ರಿ. ಉತ್ತರಿಸಿದರು. ಅದ್ಕತ್ತಾ ನೀವs ಭಾಳ ದೊಡ್ಡಾವ್ರಿ. ಅಂದಾಗ, ನಾ ಕಾಲೇಜಕ ಇದ್ದಾಗ ಒಂದೆರಡ ವರ್ಷ ನಪಾಸ ಆಗಿದ್ನಿಪಾ... ಅನ್ನಬೇಕೇ.

ನಾ ಯಾನೂ ಹೇಳಿಲ್ಲ. ಮತ್ತ... ಈ ಸಂಕಲನಕ ಮೆಂಬರ ಆಗ್ರಿ, ಅಸ್ಸಿ.

ಆತ್ರಿ, ಆಗೂನರಿ. ಇದನೊಂದ ಜರಾ ನೋಡಿ ಕೊಡತೇನ್ರಿ... ಅನ್ನುತ್ತಲೇ ತಕ್ಕೊಂಡೇ ಹೊಂಟರು.

ಒಂದು ತಿಂಗಳ ದಿಡ ತಿಂಗಳ ಆಗಿರಬೇಕು. ನನಗ ಅವರ ಮನೀಗೆ ಹೋಗೂ ಪ್ರಸಂಗ ಬಂತ್ರಿಪಾ. ಹ್ಯಾಂವ್ನಿ. ಬಾ... ಕೂಡು ಅಂದರು. ಆ... ಈ ಮಾತ ಆಡಿದ್ನಿ. ಹಂಗs ಅವ್ರ ಒಯ್ದಿದ್ದ ಸಂಕಲನ ಪರತ ಕೇಳಿದ್ನಿ.

ಅವ್ರು ಆಶ್ಚರ್ಯಗೊಂಡವರಾಗಿ. ಸಂಕಲನದ್ರೀ... ನಾ... ನಿಮ್ಮಿಂದ ಒಯ್ದಿನ್ರೀ. ನಾ ಯಾವ್ದೂ ಒಯ್ದಿದ್ದು ನೆಪ್ಪ ಇಲ್ಲರಿ, ಅಂದರು. ಅವರ ಅಕಸ್ಮಾತ್ ಅದು ನನ್ನ ಕಣ್ಣಿಗೆ ಬಿತ್ತು. ಅಲ್ಲಿಂದ ಎದ್ದೊಳಗಿ ತೆಕ್ಕೊಂಡು. ಇಲ್ಲಿ ಖಾತೆ ನೋಡ್ರಿ... ಎಂದು ತೋರಿಸಿದೆ.

ಅವ್ರು ನೋಡಿ ಜೋರಾಗಿ ನಕ್ಕರು. ಮುಖಪುಟ ಹೊಳ್ಸ್ರೀ... ಅಂತ.

ಒನ್ನೇ ಪಾನ ತಿರುಗಿಸಿ ನೋಡಿದ್ವಿ. "ಪ್ರೀತಿಯ ಮೂಂದವರಿಗೆ" ಅಂತಾ ಬರ್ದು ಸಹಿ ಹಾಕಿದ್ವಿತ್ತು. ನಾ ಬೆಚ್ಚಿಬಿದ್ವಿ. ಹಂಗs ಸಹಿ ಕೆಳಗ ತಾರೀಖು ನೋಡಿದ್ರ, ಹತ್ತು ವರ್ಷ ಹಿಂದಿಂದ ಬಿತ್ತು. ಇನ್ನ ಯಾನ ಮಾತಾಡಬೇಕ ಹೇಳ್ರಿ. ಅತ ಬಿಟ್ರಿ... ಮುಂಗ್ಯಾನಂಗ ಬನ್ನಿ.

ಒಂದಿಷ್ಟ ವರ್ಷದ್ದ ಅಜೀಕ. ನಾವ್ರೊಂದಿಷ್ಟ ಗೆಳ್ಯಾರು ಗೆಣತ್ಯಾರು ಕೂಡಿ ಸಾಹಿತ್ಯ ವೇದಿಕೆ ಕಟಿಗೊಂಡು ಕನ್ನಡ ಕೆಲಸಾ ಅಂತ ಯಾವ್ರುಯಾವ್ರೋ ಕಾರ್ಯಕ್ರಮ ಮಾಡತಿದ್ವಿ. ಮುಂದಿ ಮ್ಯಾಲೆ ಒಂದೀಟ ಚಲೂ ಛಾಪೂ ಬಿದ್ದಿತ್ತನ್ರಿ. ಒಮ್ಮೇನಾತು... ಬಿಎಂಶ್ರೀ ಸಂಸ್ಮರಣ ಕಾರ್ಯಕ್ರಮ ಹೆಮ್ಮಿಕೊಂಡ್ವಿ. ಒಟ್ಟs ಪಟ್ಟಿ ಎತ್ತದಿದ್ದಾವ್ರು, ಈ ಕಾರ್ಯಕ್ರಮಕ ಎತ್ತಾಣಾಂತ ವಿಚಾರ ಮಾಡಿದಿವಿ. ಇದಕ ಬೆಂಗಳೂರ ಕಡಿಂದ ದೊಡ್ಡ ದೊಡ್ಡ ಲೇಖಕರು ಬರಾವ್ರು ಇದ್ರು. ಅವ್ರ ವ್ಯವಸ್ಥಾಕ ಬೇಕತ್ತ ನಿಶ್ಚಾ ಮಾಡಿ, ವಸೂಲಿಗೆ ಹೊಂಟ್ವಿ. ಅಂತೂ ಹುಸಿ ಹೋಗದ ತಿಳಿದಷ್ಟು ಕೊಟ್ಟರನ್ರಿ.

ಒಬ್ರು ಡಾಕ್ಟರು. ಅವ್ರು ಕಡೆ ಹ್ವಾದ್ವಿ. ಮುಂದಿನ್ನ ಕಂಡ್ರು. ಖುಶಿ ಆತ ಕಾಣಸ್ತೈತಿ. ಬರ್ರಿ... ಅಂತ ಕುಂದರಿಸಿದ್ರು. ಅಲ್ಲಿ ಪೇಶಂಟ ಯಾವ್ರೂಯಿದ್ದಿಲ್ಲ. ಹೊತ್ತಾಗೇತಿ. ಎಲ್ಲಾ ಮುಗಿಸಿ ಕುತಿರಬೇಕಂತ ನಾವೂ ತಿಳಿದ್ವಿ. ಮುಂದಕ ಮಾತಿಗಿ ಬಿದ್ವಿ. ಡಾಕ್ಟರ್ರೂ ಛಲೂತ್ಯಾಗ ಮಾತಾಡಕೋತ ಗೋಣ ಅಗಳ್ಯಾಡಿಸಿದ್ರು. ಹಂಗs ಮಾತಾಡತಾ ಅವ್ರು, ನೀವೇನ ಮಾಡ್ತೀರಲಾ, ಇವ್ರು ಬಿಎಂಶ್ರೀ. ಅವ್ರು ನಮಗ ಕಲಿಸ್ಯಾರ್ರಿ. ಅಂದ್ರು.

ನಮಗೆಲ್ಲಾ ಔಡಲೆಣ್ಣಿ ಕುಡಿಧಾಂಗ ಆತು. ಹ್ಯಾಂಗ ಕಲಿಸಿರತಾರು... ಅವ್ರೇ ನಾಲವತ್ತ ಆರ್ರಾಗನ (೧೯೪೬) ಭೂಮಿ ಬಿಟ್ಟಾರ್ರು. ಈ ಮಹಾಶಯಗರೇ ಮೂವತ್ತರ ಆಜೀಕಿಗೆ ಕಾಣತಾರು ಒಬ್ಬರ ಮುಖ ಒಬ್ಬರ ನೋಡಿಕೊಂಡ್ವಿ. ನಾವೂ ಹೆಚ್ಚ ಮಾತಾಡ್ವ. ಛಾಳೆ ನಸೀಬರಿ. ನೀವು ಹಂತಾವ್ರು ಕೈಯಾಗ ಕಲ್ತಿದ್ದು. ಅದ್ಕೇ ಅವ್ರದೊಂದು ಸ್ಮರಣಾದ್ದ ಕಾರ್ಯಕ್ರಮ ಹಾಕ್ಕೊಂಡೀವಿ. ಬೆಂಗಳೂರಿಂದ ಭಾರೀ ಲೇಖಕರು ಕವಿಗಳು ಬರತಾರೆ. ಇದಕೊಂದಿಷ್ಟು ನಿಮ್ಮಿಂದ ಶಕ್ಯವಾದಷ್ಟು ಪಟ್ಟಿ ಕೊಡ್ರಿ. ಅಂದೀವಿ.

ಅಲ್ಲೀ ತನಾ ರೀಲ ಬಿಟ್ಟ ಆ ವ್ಯಕ್ತಿ ಒಮ್ಮೇಕನ ಬದ್ಲಿಯಾದ. ಎಲ್ಲಿಂದ ಕುಡೂದ್ರಿ. ಅದs ಹದಿನೈದ ಇಪ್ಪತ್ತ ರುಪಾಯಿಗನ ಪೇಶಂಟ ಸಿಕ್ಕಾವಂದ್ರು, ನೀವು ಪಟ್ಟಿ ಕೇಳಲಿಕ್ಕೆ ಬಂದೀರಿ. ನಾನs ನೋಡಾ ಹಾರ್ಸಾಕ ಹತ್ತೇನಿ.     ಅಂದವ್ರು ಎದ್ದು ನಿಂತರು.

ನಮ್ಮಲ್ಯಾ ಯಾರಿಗೂ ಜ್ವರಾಗಿರಾ ಇಲ್ಲ ನೋಡ್ರಿ. ನೋಯಿ ಒಳಗ ಗುಳಿಗಿ ಇಂಜಕ್ಶನ್ ಸಿಗ್ತಿತ್ತು... ಅನಕೋತನ ಬಾಕಲಾ ದಾಟಿದಿವಿ.

**ಹಣಮಂತ ತಾಸಗಾಂವಕರ**, ಸುಧನ್ವ. ಶಿನೇ ಮುಖ್ಯರಸ್ತೆ. ಎಫ್ ಅಡ್ಡರಸ್ತೆ. ಸೆಕ್ಟರ್ ನಂ. ೧೮. ಪ್ಲಾಟ ನಂ. ೨೫, ನವನಗರ, ಬಾಗಲಕೋಟ - ೫೮೭ ೧೦೧

# ಇನ್ನೂ ಮರಳಿ ಬರಲಿಲ್ಲ ನನ್ನ ಮುನಿದ ಮನಸು

ನೀಲಗಂಗಾ ಎಸ್. ಜಿ. ಸ್ವಾಮಿ ಕವಿತೆ - ೯

ಕಡಲ ಅಲೆ ಅಪ್ಪಳಿಸುತಿದ್ದವು ಆ ದಂಡೆಗೆ
ಮೌನ ತಂಗಾಳಿ ಬೀಸುತ್ತಿತ್ತು.
ಸೂರ್ಯ ಹಗಲಿಗೆ ವಿದಾಯ
ಹೇಳಿ ಹೊರಟಿದ್ದ ಮನೆಗೆ
ಇನ್ನೂ ಮರಳಿ ಬರಲಿಲ್ಲ ನನ್ನ ಮುನಿದ ಮನಸು.

ಹುಣ್ಣಿಮೆ ಚಂದ್ರ ಅರಳಿ ನಿಂತಿದ್ದ ಬಾನಿನಲಿ
ಹಾಲಿನಂಥ ಬೆಳದಿಂಗಳರಳಿತು ಭುವಿಯಲಿ
ಕುಣಿಯುತ್ತಿವೆ ಚುಕ್ಕೆಗಳೆಲ್ಲಾ ಬಾನಿನಲಿ
ಚಂದ್ರ ಹೊರಟಿದ್ದಾನೆ ಜಗಜಗಿಸುತಲಿ
ಇನ್ನೂ ಮರಳಿ ಬರಲಿಲ್ಲ ನನ್ನ ಮುನಿದ ಮನಸು.

ಇನ್ನೂ ಮಾಗಿಯ ಚಳಿ ಮುಗಿಯಲಿಲ್ಲ
ಎಲೆಗಳು ಸರಿಯಾಗಿ ಉದರಲಿಲ್ಲ
ಮಾಗಿಯ ಚಳಿಗೆ ಮೈಮನ ಬೆಚ್ಚಗಿಲ್ಲ
ಮುತ್ತಿನಂಥ ಮಂಜು ಬಿದ್ದಿಲ್ಲ
ಭೂರಮೆಯೂ ಆಗಲೇ ಚೈತ್ರಕ್ಕೆ ಮೈ ಒಡ್ಡಿದೆ
ಇನ್ನೂ ಮರಳಿ ಬರಲಿಲ್ಲ ನನ್ನ ಮುನಿದ ಮನಸು.

ಭುವಿಯೂ ಮೈ ಒಡ್ಡಿದೆ ಚೈತ್ರಕ್ಕೆ
ಚಿಗುರಿನ ಹಬ್ಬಕ್ಕೆ
ಚೈತ್ರ ಹುಳಿ ತಂದಿದೆ ಮಾಮರಕ್ಕೆ
ಮಲ್ಲಿಗೆ ಮೊಗ್ಗು ಅರಳಿ ನಿಂತಿದೆ ತೋಟಕ್ಕೆ
ಹೊನ್ನಿನಂಥ ಬಿಸಿಲು ಹರಡಿದೆ ಅಂಗಳಕ್ಕೆ
ಇನ್ನೂ ಮರಳಿ ಬರಲಿಲ್ಲ ನನ್ನ ಮುನಿದ ಮನಸು.

ಸಾಗರದಷ್ಟು ಆಳವಾಗಬೇಡ,
ಗಗನ ಚುಕ್ಕಿಯಷ್ಟು ದೂರವಾಗಬೇಡ,
ಮಲೆನಾಡಿನ ಆ ಹಸಿರಲ್ಲಿ ಮರೆಯಾಗಬೇಡ,
ರಂಗಿನ ಕಾಮನಬಿಲ್ಲ ಹಿಂದೆ ಬಚ್ಚಿಟ್ಟುಕೊಳ್ಳಬೇಡ
ಪ್ರೀತಿಗೆಂದು ನೀನು ಬಲಿಯಾಗಬೇಡ.

ಇನ್ನೂ ಮರಳಿ ಬರಲಿಲ್ಲ ನನ್ನ ಮುನಿದ ಮನ
ನೀನಿರದ ಪ್ರತಿ ಕ್ಷಣ
ನನಗದೇ ಮುಳ್ಳಿನ ಪಯಣ.

ನೀಲಗಂಗಾ ಎಸ್. ಜಿ. ಸ್ವಾಮಿ, 1-೪-೧೨, ನೀಲಗಂಗಾ, ಗಾಜಗಾರ ಪೇಟೆ, ರಾಯಚೂರು - ೧

## ನನ್ನ ನೆನಪಿಗಾಗಿ

ಅರುಣ ಚಂ. ಇನಾಮದಾರ ಕವಿತೆ - ೧೦

ಬಂದಾಗ ಅಂತಿಮ ಪಯಣದ ಕ್ಷಣ
ಹೊದೆಯದಿರು ನನ್ನನ್ನು ಬಿಳಿ ಬಟ್ಟೆಯಿಂದ.
        ಹೇಳು ವೈದ್ಯರಿಗೆ ಉಳಿಸದಿರಲು
        ನನ್ನನ್ನು ಯಂತ್ರಗಳ ಮೂಲಕ.
        ,ಮೆದುಳು ಕ್ಷೀಣಿಸಿದ ಮರುಕ್ಷಣವೇ
        ನನ್ನ ದೃಷ್ಟಿ ನೀಡಲಿ
        ಸೂರ್ಯನ ಹೊಂಬೆಳಕು ನೋಡದ,
        ಕಂದನಿಗೆ ಅವಿರತ ವೀಕ್ಷಣಾನಂದ.
ನನ್ನ ಹೃದಯ ನೀಗಲಿ ನೋವು 'ಛಿದ್ರ'ಹೃದಯಿಗೆ.
ನೀಡು ನನ್ನ ರಕ್ತ
ರಕ್ತದ ಮಡುವಿನಿಂದ ಎದ್ದ ಎಳೆಯನಿಗೆ
ನೋಡಲಿ ಅವನು ತನ್ನ ಕುಡಿಗಳ ನಲಿವಿನಾಟ.
ಕೊಡು ನನ್ನ 'ಕಿಡ್ನಿ'
ನಿರಂತರ ಯಂತ್ರದಿಂದ
ಸಾವು-ಬದುಕಿನ ಹೋರಾಟ ನಡೆಸುವವಗೆ.
        ತೆಗೆದುಕೋ ನನ್ನ ಮೂಳೆ, ನರತಂತು, ಮಾಂಸಖಂಡ
        ಉಪಯುಕ್ತವಾದುದೆಲ್ಲವನು.
ನೀನೇನಾದರೂ ಹೂಳುವದಿದ್ದರೆ,
ಹೂತು ಹಾಕು ನನ್ನ ತಪ್ಪುಗಳನ್ನು, ಅರಿಷಡ್ವರ್ಗಗಳನ್ನು,
ಕೊಡು ನನ್ನ ಪಾಪಗಳನ್ನೆಲ್ಲಾ ಅಸುರರಿಗೆ.
ನೀಡು ದೇವನಿಗೆ ನನ್ನಾತ್ಮ
ನಾ ಕೇಳಿದ್ದನ್ನೆಲ್ಲಾ ನೀ ಮಾಡುವೆಯಾದರೆ,
ನನ್ನ ಸಾವು ಬದುಕಿನ ನಿತ್ಯಧಾರೆ
ಯಲ್ಲಿ ನಿರಂತರ ಅಣುವಾಗುವದು.

● ▼

ಡಾ. ಅರುಣ ಚಂ. ಇನಾಮದಾರ, ಪ್ರಾಧ್ಯಾಪಕರು, ವಿಭಾಗ ಮುಖ್ಯಸ್ಥರು, ಚರ್ಮ ಮತ್ತು ಲೈಂಗಿಕ ರೋಗತಜ್ಞರು, ಬಿ.ಎಲ್.ಡಿ.ಇ. ಶ್ರೀ ಬಿ.ಎಮ್.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ವಿಜಾಪುರ

## ಪುಸ್ತಕ ಪರಿಶೀಲನೆ

೧. ಕಾಲ : ಕಥಾ ಸಂಕಲನ : ಪ್ರಹ್ಲಾದ ಅಗಸನಕಟ್ಟೆ, ಸಿವಿಜಿ ಪಬ್ಲಿಕೇಷನ್ಸ್, ೭೦, ೨ನೇ ಮೇನ್, ಜಬ್ಬಾರ್‌ಬ್ಲಾಕ್, ವೈಯಾಳಿಕಾವಲ್, ಬೆಂಗಳೂರು-೩, ಪ್ರ.ಮು. ೨೦೦೨, ಪು. ೧೬೦, ರೂ. ೧೧೦ -

ಈಗಾಗಲೇ ತಮ್ಮ ಕಥೆ ಕವಿತೆಗಳ ಮೂಲಕ ಪರಿಚಿತರಾಗಿರುವ ಪ್ರಹ್ಲಾದ ಅಗಸನಕಟ್ಟೆ ಅವರ ಹೊಸ ಕಥಾ ಸಂಕಲನ 'ಕಾಲ' ಸಮಕಾಲೀನ ಕನ್ನಡದ ಸಾಹಿತ್ಯ ತನ್ನ ಎಲ್ಲ

ಪ್ರಕಾರಗಳಲ್ಲಿಯೂ 'ಕಾಲ'ವನ್ನು ಹುಡುಕಲು, ಹಿಡಿಯಲು ಯತ್ನಿಸುತ್ತೇವೆ. ಕಾಲವನ್ನು ಹಿಡಿಯುವುದು ಗಾಳಿಯನ್ನು ಹಿಡಿದಂತೆ ಎಂದು ಕವಿತೆಯೊಂದು ಹೇಳಿದರೂ ಅದರ ಪ್ರಯತ್ನವು ಕೂಡ 'ಕಾಲ' ಹಿಡಿಯುವುದೇ. ಕೇವಲ ಸಾಪೇಕ್ಷತೆಯಿಂದ ಮಾತ್ರ ಅರಿಯಲು ಅಳೆಯಲು ಸಾಧ್ಯವಾಗುವ ಕಾಲವನ್ನು ಹಿಡಿದು, ತಿದ್ದಿ, ತೀಡಿ, ಅದಕ್ಕೊಂದು ರೂಪ, ಆಕೃತಿ ಕೊಡಲು ಹೊರಟಿರುವ ಕನ್ನಡ ಸಾಹಿತ್ಯದ ಅನೇಕ ಪ್ರಕಾರಗಳ ಜತೆಗೆ ಈಗ 'ಕಾಲ' ಕಥಾ ಸಂಕಲನವೂ ಸೇರ್ಪಡೆಯಾಗಿದೆ. ಇಲ್ಲಿಯ ಕಥೆಗಳು ಸುಲಲಿತವಾಗಿ ಓದಿಸಿಕೊಂಡು ಹೋಗುತ್ತವೆ.

ಕಥೆಗಳಲ್ಲಿರುವ ಒಂದು ವಿಶಿಷ್ಟ ಗುಣ ಎಂದರೆ ಚಿತ್ರಗಳನ್ನು ಚಿತ್ರಿಸುವುದು. ಕವಿತೆಯ ಅಭ್ಯಾಸವೂ ಇರುವ ಲೇಖಕರಿಗೆ ಈ ಚಿತ್ರೀಕರಣದ ಸಾಧ್ಯತೆ ಸುಲಭವೇನೋ. ಅನೇಕ ಕಥೆಗಳು ಅಂತಹ ಗುಣ ಹೊಂದಿವೆ. ಗಡಿಯಾರ, ಸಂಜೆಗಣ್ಣಲ್ಲಿ, ಕಮಾನ್ ಇಂಡಿಯಾ.... ಹೀಗೆ ಕಥೆಗಳು ಚಿತ್ರೀಕರಣ ಗುಣ ಹೊಂದಿವೆ.

ಪ್ರಹ್ಲಾದರನ್ನು 'ಕಾಲ' ಕಾಡಿರುವುದು ಎರಡು ಅವಸ್ಥೆಗಳಲ್ಲಿ. 'ಅಂದು' ಮತ್ತು 'ಇಂದು' ಭಾರತೀಯ ಮನಸ್ಸುಗಳು, ಭಾವನೆಗಳು, ಕನಸುಗಳು, ಬದಲಾದ ಬಗೆ, ಮುರುಟಿರುವ ರೀತಿ, ಸುಟ್ಟುಹೋದ ಸ್ಥಿತಿ, ಎತ್ತೆತ್ತಲೋ ಹರಿದುಹೋಗಿ, ಎಲ್ಲೆಲ್ಲಿಗೋ ಚೆಂಡಾಡಿರುವ ಪರಿಸ್ಥಿತಿ ಇಲ್ಲಿಯ ಕಥೆಗಳಲ್ಲಿ ಅಚ್ಚುಕಟ್ಟಾಗಿ ಮೂಡಿಬಂದಿದೆ.

ಎಲ್ಲ ಕಥೆಗಳಲ್ಲಿ ಪ್ರಮುಖವಾಗಿ ಗಮನ ಸೆಳೆವ ಮತ್ತೊಂದು ಅಂಶವೆಂದರೆ 'ಮೂಕವೇದನೆ'. ಕಾಲದ ಪರಿಸ್ಥಿತಿಯಲ್ಲಿ ಮನುಷ್ಯನ ಮಾತು 'ಮೂಕ'ವಾಗುತ್ತದೆ. 'ವೇದನೆ' ರೋದನವಾಗುವುದೇ ಇಲ್ಲ. ಈ 'ಮೂಕವೇದನೆ'ಯೇ ಒಂದು ಮಿತಿಯಾಗಿ ಇಲ್ಲಿಯ ಕಥೆಗಳಲ್ಲಿ ಬಿಂಬಿತಗೊಳ್ಳುತ್ತವೆ. ಪ್ರಹ್ಲಾದ ಅವರ 'ಸನ್ನಿವೇಶ ಸೃಷ್ಟಿ' ಮತ್ತು ಅವುಗಳ ಬೆಳೆಸುವಿಕೆಯಲ್ಲಿ ಮೂಕವೇದನೆ ಮಿತಿ ತರುತ್ತದೆಯಾದ್ದರಿಂದ ಅದು 'ಕಾಲ' ಒಡ್ಡುವ 'ಆತಂಕ'ವಾಗಿ ಬಿಡುತ್ತದೆ. ಆತಂಕಗಳು ಆಘಾತವಾಗಿ ಪರಿಣಮಿಸಿ ಕೊನೆಗೆ ಅಂತ್ಯಕ್ಕೆ ನ್ಯಾಯ ಸಿಗುವುದಿಲ್ಲ. ಹೀಗಾಗಿ 'ಕಾಲ'ದ ವ್ಯಾಪ್ತಿಯನ್ನೇ ಮತ್ತಷ್ಟು ಹಿಗ್ಗಿಸಿ ನೋಡಿದರೆ ಎಂಬ ಪ್ರಶ್ನೆ ನಮಗೆ ಮೂಡುತ್ತದೆ.

– ಎಂ. ಆರ್. ಮಂದಾರವಲ್ಲಿ, ಕೇರ್ ಜಿ.ಕೆ. ರವೀಂದ್ರಕುಮಾರ್, ಆಕಾಶವಾಣಿ, ಮೈಸೂರು - ೨೦

**೨. ಮರಳುಗಾಡಿನ ಕುಸುಮ** : ಅನು : ಭಾರತಿ ಮೋಹನ ಕೋಟಿ, ಶಿಲ್ಪಾ ಪ್ರಕಾಶನ, ಚೈತ್ರ, ಎಂಐಜಿ-೨, ೧೨೫-೧೨೬, ಸಿದ್ಧಲಿಂಗನಗರ, ಗದಗ-೬. ಪ್ರ.ಮು. ೨೦೦೨, ಪು. ೧೯೮, ರೂ. ೫೦/-

ಕರ್ನಾಟಕ ಲೇಖಕಿಯರ ಸಂಘದ (ಎಚ್. ವಿ. ಸಾವಿತ್ರಮ್ಮ ದತ್ತಿನಿಧಿ) ಬಹುಮಾನ ಪಡೆದ ಕೃತಿ (೨೦೦೩) 'ಮರಳುಗಾಡಿನ ಕುಸುಮ'ವು ವಿವಿಧ ಮಹಿಳೆಯರ ಆತ್ಮವೃತ್ತಾಂತಗಳ ಒಂದು ಗೊಂಚಲು, ಅನುವಾದವಾದರೂ ಉಚಿತ ಶಬ್ದಗಳ ಜೋಡಿಕೆ ಅರ್ಥಸ್ವರೂಪದ ನಿಲುವುಗಳಿಂದ ಭಾರತಿ ಕೋಟಿಯವರು ಇಲ್ಲಿ ಕೃತಿಗೆ ನ್ಯಾಯ ಒದಗಿಸಿದ್ದಾರೆ. ೧೬೮ ಪುಟಗಳಲ್ಲಿ ೭ ಜನರ ಜೀವನವೃತ್ತಾಂತಗಳಿವೆ.

ಸ್ವಂತ ತಾಯಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ಮರಣಿಸಿದಾಗ ಪಡೆದ ತೀವ್ರತೆಯನ್ನು ಅನುಭವಿಸಿದ ಲೇಖಕಿ ಈ ತೆರನಾದ ಸ್ತ್ರೀಯರು ದುಃಖದಾಯಕ ಮರಣವನ್ನು ಎದುರಾದರೂ ಮರಣವನ್ನು ತಾಳಿಯೂ ಅದನ್ನು ಛಲದ ರೂಪವನ್ನು, ಸ್ಥಿರ ನಿಲುವನ್ನು ಹೊಂದಿರುವವನ್ನು ಗುರುತಿಸಿಕೊಂಡು ಆ ಆಶಯವ್ಯಾಪ್ತಿಯಲ್ಲಿಯ ಜಗತ್ತಿನ ವಿವಿಧ ಪ್ರದೇಶದ ಜನರ ಆತ್ಮವೃತ್ತಾಂತಗಳನ್ನು ಇಂಗ್ಲೀಷಿನಿಂದ ಕನ್ನಡಿಸಿದ್ದಾರೆ.

ಪ್ರತಿಯೊಂದು ಆತ್ಮಚರಿತ್ರೆಗಳಲ್ಲಿ, ಮಾರಣಾಂತಿಕ ರೋಗಪೀಡಿತವಾದ ವ್ಯಕ್ತಿ, ಅಂಗವಿಕಲ ವ್ಯಕ್ತಿ, ಇತರರ ವಿಷಮ ಮರಣೋನ್ಮುಖಿ ಸ್ಥಿತಿಯಲ್ಲಿ ವ್ಯಕ್ತಿ ಬದುಕುವ ಅದಮ್ಯ ಉತ್ಸಾಹವನ್ನು ತಾಳಿರುವ ಹೃದಯಸ್ಪರ್ಶಿ, ವಿವೇಕಸ್ಪರ್ಶಿ ಘಟನೆಗಳೆ ಇಲ್ಲಿ ಹಾಸುಹೊಕ್ಕಿವೆ.

ಏಡ್ಸ್ ಪೀಡಿತ ೮ ವರ್ಷದ ಮಗುವನ್ನು ಸಾವಿಗೆ ಅಣಿಗೊಳಿಸಿದ ತಾಯಿ ಕ್ರಿಸ್; ಕ್ಯಾನ್ಸರ್ ಪೀಡಿತೆಯಾದರೂ ಆ ರೋಗವನ್ನು ತಡೆಯಲು ಸಂಸ್ಥೆ ಕಟ್ಟಿದ ಮಹಿಳೆ 'ವಿಕ್ಕಿ'; ಕಾಲು ಕಳೆದರೂ ಹಗ್ಗದಾಟವನ್ನು ಆಡಿ ಬದುಕನ್ನು ಆಮೂಲಾಗ್ರ ಪ್ರೀತಿಸುವ ಏಂಜೆಲ್; ಪೋಲಿಯೊ ಪೀಡಿತೆಯಾಗಿ ಜೀವನದುದ್ದಕ್ಕೂ ಲೋಹದ ಕೋಶಬಂಧಿಯಾದ ಇಟಲಿಯ ರೊಸೆನ್ನಾ; ಗಿಲ್ಲೆನ್‌ಬಾರ್ ಎಂಬ ವಿಚಿತ್ರ ರೋಗಕ್ಕೆ ತುತ್ತಾದ ಸ್ಟ್ಯೂವರ್ಟ್, ಜೀವನದ ಮುಂಜಾವಿನಲ್ಲೆ ಅಂಧಳಾದರೂ ಬದುಕನ್ನು ಪ್ರೀತಿಸಿ 'ಅಂಧತ್ವವನ್ನು ಮೀರಿ ನೋಡುವ' ಜ್ಯೂಡಿ, ಆಫ್ರಿಕಾದ ಸೋಮಾಲಿಯಾದಲ್ಲಿದ್ದ ಸ್ತ್ರೀಯರ ವಿರುದ್ಧ ನಡೆಸಲಾಗುವ ಅಂಧಾಚರಣೆಗಳ ವಿರುದ್ಧ ಹೋರಾಡಿದ ಡೇರಿ– ಇವರೆ ಇಲ್ಲಿಯ ಬದುಕನ್ನು ಗೆದ್ದ ಮಹತ್ವದ ಮಾನವರು. ಮಗು ಚಿನ್ ರೋಗಪೀಡಿತನಾಗಿ ಮರಣದತ್ತ ಹೊರಟ ಅನುಭವವನ್ನು ಹೊರಗಿನಿಂದಲೆ ಅನುಭವಿಸಿ ಹೇಳಿದ್ದು ಕ್ರಿಸ್. ಉಳಿದ ಆರು ಜನ ಸ್ವಯಂ ಅನುಭವವನ್ನು ನೀಡಿದ್ದಾರೆ.

ಬದುಕಿನ ವಿಷಮ ಪರಿಸ್ಥಿತಿಯಲ್ಲಿ ಜೀವಿಗೆ ಬದುಕಬೇಕೆಂಬ ಅಂತರಂಗದ ಅದಮ್ಯ ಅಭೀಪ್ಸೆಯೊಂದಿಗೆ ಇರುವದು, ಅಧೈರ್ಯ ತಾಳಿ ಹಾಳಾಗದೆ ಧೈರ್ಯದಿಂದ ಎದುರಿಸುವದು 'ಬದುಕಿನ ಪ್ರಸ್ಥಾನ'ವೆನಿಸಿವೆ. ಅಲ್ಲಿ 'ಜೀವದೂರುಗೋಲು' ಎಂಬಂತೆ ಅಂಧಳಾದವಳಿಗೆ ನಾಯಿಯೆ ಕಣ್ಣಬೆಳಕು. ರೋಗದ ವಿರುದ್ಧ ತಿಳಿವಳಿಕೆ ಸಂಘಟನೆಗಳೆ ಮದ್ದು, ಸಂಪ್ರದಾಯದ ವಿರುದ್ಧ ಹೋರಾಟವೇ ಗತಿ. ಕೋಶಬಂಧಿಯಾದರೂ ಪ್ರೀತಿಯನ್ನು ನೀಡಿದ ಪೆಂರ್ಸಿಯನ್ನು ಬದುಕಿಸಿದ ಮಾರಿನೊ ಹೀಗೆ ಇವರೆಲ್ಲರೂ ಪ್ರಮುಖರೆ. ಪ್ರಮುಖವಾದವುಗಳೆ ಇಲ್ಲಿವೆ.

ಇಲ್ಲಿಯ ಲೇಖಗಳಲ್ಲಿ ಐದನ್ನು ಅನುಭವಿಗಳೆ ನಿರೂಪಿಸಿದ್ದು ಎರಡಕ್ಕೆ ಬೇರೆ ನಿರೂಪಕರಿದ್ದಾರೆ. ಪ್ರಸಿದ್ಧ ರೋಮಾಂಟಿಕ್ ಕವಿ ಶೆಲ್ಲಿಯ ಸಾಲೊಂದಿಗೆ 'I change but cannot die' (ಮೋಡಗಳಿಗೆ ಸ್ವಾಗತ). ಇದೇ ಆಶಯ ಇಲ್ಲಿಯ ವ್ಯಕ್ತಿಯ ಮಹಾ ಬದುಕಿನ ಮೂಲ ತತ್ವವಾಗಿದೆ. ಇದು ಈ ತೆರನಾದ ಪ್ರಥಮ ಕೃತಿ, ಇದು ಆರಂಭವೆಂದು ಲೇಖಕಿ ತಿಳಿಸಿದ್ದಾರೆ. ಇಂತಹ ಹಲವಾರು ಕೃತಿಗಳು ಬರಲಿ 'ಸ್ತ್ರೀ'ಮಹಾವ್ಯಕ್ತಿತ್ವ ಪರಿಚಯಿಸಲಿ.

–ಬಿ. ಎಸ್. ಗೊರವರ, ಸಮರಸ, ೪೨೬/ಬಿ/೩೧, ಕರೆಯವ್ವನ ಕಲ್ಲು ಬಡಾವಣೆ, ಗದಗ - ೧

**೩. ವೈದ್ಯಾಧಿಕಾರಿಯ ಬದುಕು-ಬವಣೆ : ಡಾ. ಎಚ್. ಡಿ. ಚಂದ್ರಪ್ಪಗೌಡ, ಮಲೆನಾಡು ಸಾಹಿತ್ಯ ಪ್ರಕಾಶನ, ೬೪, ಮಿಶನ್ ಕಂಪೌಂಡ್, ಶಿವಮೊಗ್ಗ-೫೭೭ ೨೦೧, ಪ್ರ.ಮು. ೨೦೦೨, ಪು. ೩೭೨, ರೂ. ೧೫೦/-**

ಸುಮಾರು ನಾಲ್ಕು ದಶಕಗಳ ಕಾಲ ವೈದ್ಯಕೀಯ ವೃತ್ತಿಯಲ್ಲಿ ಕಾರ್ಯನಿರತರಾದ ಡಾ. ಎಚ್. ಡಿ. ಚಂದ್ರಪ್ಪಗೌಡ ಅವರು ತಮ್ಮ ಅಪರೂಪದ ಅನುಭವ ಸ್ಮೃತಿಗಳನ್ನು ಒಂದೆಡೆ ಕಲೆಹಾಕಿ ನೀಡಿದ ಈ ಕೃತಿಯಲ್ಲಿ ನಾನಾ ಬಗೆಯ ರೋಗಿಗಳು ಎದುರಾದಾಗ ಅನುಭವಿಸಿದ ತೊಳಲಾಟ, ನಂತರ ಆನಂದಪಟ್ಟ ಗಳಿಗೆಗಳನ್ನು ಮನಮೋಹಕವಾಗಿ ನಿರೂಪಿಸಿದ್ದಾರೆ. ಇದು ಆತ್ಮಕಥೆಯ ಹಂದರದಲ್ಲಿದ್ದರೂ ಅನುಭವದ ಅಮೃತವೇ ಜೀವಾಳವಾಗಿರುವುದರಿಂದ ಅದನ್ನು ಮೀರಿ ನಿಲ್ಲುತ್ತದೆ. ಡಾ. ಚಂದ್ರಪ್ಪಗೌಡರು ನಾಡಿನ ಶ್ರೇಷ್ಠ ವೈದ್ಯಬರಹಗಾರರು. ಅಲ್ಲದೆ

ಕನ್ನಡ ನುಡಿಯ ಬಗ್ಗೆ ಅನನ್ಯ ಪ್ರೀತಿ ಇಟ್ಟುಕೊಂಡವರು. ಅತ್ಯಂತ ಪವಿತ್ರವಾದ ನುಡಿಯ ಆಸಕ್ತಿಯಲ್ಲಿ ಯಾವುದೇ ಕೃತಿಯೂ ಕೂಡ ತಾನಾಗಿಯೇ ಮೌಲ್ಯಗಳನ್ನು ಸಂಪಾದಿಸಿಕೊಳ್ಳುತ್ತದೆ.

The Healing knife ಹಾಗೂ The knife heals again ಎಂಬ ವೃತ್ತಿ ಅನುಭವದ ಎರಡು ಜನಪ್ರಿಯ ಇಂಗ್ಲಿಷ್ ಕೃತಿಗಳು ತಮಗೆ ಪ್ರೇರಕವಾದವು ಎಂದು ಲೇಖಕರು ಹೇಳುತ್ತಾರೆ. ಇಂದಿನ ರಾಜಕೀಯದ ಜಂಜಡಮಯ ವಾತಾವರಣದಲ್ಲಿ ವೈದ್ಯಾಧಿಕಾರಿಯ ಬವಣೆಯೆ ಬಹುಪಾಲು ರೋಗಿಯನ್ನು ದಕ್ಷತೆಯಿಂದ ಗುಣಪಡಿಸಬೇಕು, ಸರಕಾರಿಯಂತ್ರದಲ್ಲಿ ಸೇವೆ ಸಾಗಬೇಕು. ಮುಖ್ಯವಾಗಿ ತತ್ತ್ವ-ನಿಷ್ಠೆ-ನೀತಿಗಳನ್ನು ಬಿಡದೆ ಪಾಲಿಸಬೇಕು. ಸಂಘರ್ಷಮಯ ವೈದ್ಯವೃತ್ತಿಯಲ್ಲಿ ನಿಜವಾಗಿಯೂ ಬಂದ ಸಿಹಿ-ಕಹಿ ಅನುಭವಗಳು ಅಕ್ಷರದಲ್ಲಿ ಮೂಡಿದಾಗ 'ಅಬ್ಬಾ' ಎನಿಸುತ್ತದೆ. ಲೇಖಕರು ಇಲ್ಲಿ ಪ್ರತಿಯೊಂದು ಹಂತಕ್ಕೂ ಯಶಸ್ವಿಯಾಗಿದ್ದಾರೆ. ಡಾ. ಸಾಮ್ಯುಯೆಲ್ ಜಾನ್ಸನ್‌ನ ಮಾತನ್ನು ಎತ್ತಿ ಹೇಳಿದ ಲೇಖಕರು ಒಳ್ಳೆಯ ದಾಖಲೆಯಾಗಬೇಕಾದರೆ ಅದನ್ನು ಸಂಬಂಧಿಸಿದವರೇ ಬರೆಯುವುದು ಒಳಿತು ಎಂದಿದ್ದಾರೆ. ಹಾಗೆ ನಿಖರವಾಗಿ ವೈದ್ಯವೃತ್ತಿಯಲ್ಲಿ ಬದುಕಿ-ಬಾಳಿ-ಬವಣೆ ಸಹಿಸಿದ ಲೇಖಕರೂ ಕೂಡ 'ಇನ್ನೋರ್ವ ವ್ಯಕ್ತಿ'ಯಾಗಿ ನಿರೂಪಿಸಿದ ಪ್ರಾಮಾಣಿಕ ಉಲ್ಲೇಖಗಳು ಇಲ್ಲಿವೆ.

ಮಲೆನಾಡಿನ ಹಳ್ಳಿಯೊಂದರಲ್ಲಿ ಹುಟ್ಟಿ ತಂದೆಯನ್ನು ಕಳೆದುಕೊಂಡು ಶೈಶವಾವಸ್ಥೆಯಲ್ಲಿಯೇ ಪಡಲಾರದ ಕಷ್ಟಪಟ್ಟು ಸಹೃದಯರ ನೆರವಿನಿಂದ ಎಂ.ಬಿ.,ಬಿ.ಎಸ್. ಪದವಿ ಪಡೆದಿದ್ದು ಕೂಡ ರೋಚಕ-ಸಂಘರ್ಷಯುತ ಜೀವನ. ಸರಕಾರಿ ಸೇವೆಯಲ್ಲಿದ್ದು ಅಹಿತಕರ ಸನ್ನಿವೇಶಗಳಿಗೆ ಎದೆ ಒಡ್ಡಿ, ವಿಕೋಪಕ್ಕೆ ಹೋದಾಗ ರಾಜೀನಾಮೆ ನೀಡಿ ನಂತರ 'ಸೇವಾಕಿರಿತನ' ಅವರಿಗೆ ಸೇವಾ ಅವಧಿಯುದ್ದಕ್ಕೂ ಬೆಂಬಿಡದೆ ಸತಾಯಿಸಿತು. ಪಾಲಿಗೆ ಬಂದದ್ದು ಪಂಚಾಮೃತವೆಂದು ಸ್ವೀಕರಿಸಿ, ಜನಸಾಮಾನ್ಯರ ಹಾಗೂ ಆಸ್ಪತ್ರೆಯ ಒಳಿತಿಗಾಗಿ ಪ್ರಾಮಾಣಿಕವಾಗಿ ಪರಿಶ್ರಮಿಸಿದರು. ಕೆಲವು ರೋಗಿಗಳ ಪ್ರಕರಣ-ಪ್ರಸಂಗಗಳನ್ನು ಹೇಳಿದ್ದಾರೆ. ನಕಲಿ ವೈದ್ಯರ ವಿರುದ್ಧ ಸೆಣಸಾಟ ತುಂಬ ರೋಚಕವಾಗಿದೆ. ಅರಿವಳಿಕೆ ವೈದ್ಯರ ಅವಾಂತರ ಕೂಡ ಅದೇ ರೀತಿಯಾಗಿದೆ. ಶವಪರೀಕ್ಷೆಗೆ ವಿಶಿಷ್ಟ ಸನ್ನಿವೇಶ-ಅನುಭವಗಳು ಹೊಸ ಹೊಸ ಆವರಣಗಳನ್ನು ಪಡೆದು ಆತ್ಮಕಥೆಯ ನೈಜ ಪಾತ್ರವಾಗುತ್ತವೆ. ಇವು ಅನುಭವೀ ಲೇಖನಿಯಿಂದ ಹೊರಬಂದು ಹೃದಯ ಬಿಚ್ಚಿದ ಮಾತುಗಳು. ಇದೊಂದು ವೈದ್ಯಕೀಯ ಜೀವನಾನುಭವದ ಸುಂದರ ಕೃತಿ.

**– ಡಾ. ವಸಂತ ಅ. ಕುಲಕರ್ಣಿ,** ಅನಂತಲಕ್ಷ್ಮೀ, ಚಾಲುಕ್ಯನಗರ, ವಿಜಾಪುರ - ೫೮೬ ೧೦೩

---

## ಸಂಕಲನ : ಅನಿಸಿಕೆ

▼ ಸಂಕಲನದ ಈವರೆಗೆ ಬಂದ ಎಲ್ಲ ಸಂಚಿಕೆಗಳನ್ನು ಮತ್ತೆ ಮತ್ತೆ ನೋಡಿದೆ. ಎಲ್ಲ ಸಂಚಿಕೆಗಳೂ ಚೆನ್ನಾಗಿ ಮೂಡಿಬಂದಿವೆ. ಸಾಹಿತ್ಯಿಕ ಪತ್ರಿಕೆಯಾಗಿ ಪ್ರಕಟವಾಗುವ ಈ ಪತ್ರಿಕೆ ವೈವಿಧ್ಯಮಯ ವಾಗಿಯೂ ಅಚ್ಚುಕಟ್ಟಾಗಿಯೂ ಇದೆ. ಸಾಹಿತ್ಯದ ವಿವಿಧ ಪ್ರಕಾರಗಳಿಗೂ ಮಹತ್ವ ನೀಡಿರುವುದು ಉಚಿತವಾಗಿದೆ. ಯಾವುದೇ ಜಾಹೀರಾತಿಲ್ಲದೆ ಪತ್ರಿಕೆಯನ್ನು ಪ್ರಕಟಿಸುತ್ತಿರುವ ನಿಮ್ಮ ಸಾಹಸಕ್ಕೆ ಮೆಚ್ಚಲೇಬೇಕು. ಕನ್ನಡದಲ್ಲಿ ಇಂತಹ ಒಂದು ಉತ್ತಮ ಸಾಹಿತ್ಯಿಕ ಸಂಕಲನವನ್ನು ತರುತ್ತಿರುವ ನಿಮಗೆ ಅಭಿನಂದನೆಗಳು. **– ಡಾ. ಶ್ರೀಕೃಷ್ಣ ಭಟ್, ಅರ್ತಿಕಜೆ, ಚೆನ್ನೈ**

▼ ಸಂಕಲನ-೧೧ ರ ಸಂಪಾದಕರ ಮಾತಿನಲ್ಲಿ, ಭಾರತೀಸುತರ ಬಗ್ಗೆ 'ಕನ್ನಡ ವಿಷಯ ವಿಶ್ವಕೋಶ' (ಮೈಸೂರು ವಿ.ವಿ. ಪ್ರಕಟಣೆ) ದಲ್ಲಿ ತಪ್ಪಾಗಿ ದಾಖಲಿಸಿದ ಅಕ್ಷಮ್ಯ ಕಾರ್ಯವನ್ನು ತಾವು ಸೂಕ್ತವಾದ ಮಾತುಗಳಲ್ಲಿ ತಿವಿದಿದ್ದೀರಿ. **– ಡಿ. ಎನ್. ಅಕ್ಕಿ, ಗೋಗಿ**

▼ ಸಂಚಿಕೆಯಿಂದ ಸಂಚಿಕೆಗೆ ಸಂಕಲನ ಮೈದುಂಬಿ ಬರುತ್ತಿರುವುದು ಸಂತೋಷದ ವಿಚಾರ. ಕೇರಳದ ನಾಯರ್ ಸಮಾಜದಲ್ಲಿದ್ದ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಒಂದು ಉತ್ತಮ ಅನುವಾದ ಲೇಖನ. ಭಾರತೀಸುತರ ಕಾದಂಬರಿ 'ಗಿಳಿಯು ಪಂಜರದೊಳಿಲ್ಲ' ಎಂಬುದು ಅದೇ ವಸ್ತುವಿನ ಹಿನ್ನೆಲೆಯಲ್ಲಿ ರಚಿತವಾಗಿದೆ. ಭಾರತೀಸುತರ ಬಗೆಗೆ 'ನನ್ನ ಅವ್ವ ನನ್ನ ಅಪ್ಪ ಮಾಲಿಕೆ'ಯಲ್ಲಿ ಬಂದಿರುವ ಲೇಖನ ಕೇವಲ ಕಾಕತಾಳೀಯ ಇರಬಹುದು. – **ಡಾ. ವಸಂತಕುಮಾರ ಪೆರ್ಲ**, ಮಂಗಳೂರು

▼ ಸೆಪ್ಟಂಬರ್ ತಿಂಗಳಲ್ಲಿ ಎಲ್ಲ ಕಡೆ 'ವಿಶ್ವ ಸಾಕ್ಷರತಾ ಸಪ್ತಾಹ'ವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಸಂಕಲನದಲ್ಲಿ ಸಾಕ್ಷರತೆಯ ಮಹತ್ವವನ್ನು ಬಿಂಬಿಸುವ ಪ್ರೊ. ಸಿ. ನಾಗಣ್ಣನವರ ಲೇಖನ 'ಅಕ್ಷರದ ಮೂಲಕ ಬಿಡುಗಡೆ : ಪಾಲೊ ಫ್ರೆರೀಯ ಕೆಲವು ವಿಚಾರಗಳು' ಸೂಕ್ತವಾಗಿದ್ದು ಇದೇ ಸಂಚಿಕೆಯಲ್ಲಿ ಪ್ರಕಟವಾದ ಮುರಳೀಧರನ್‌ರವರ ಲೇಖನದ ಅನುವಾದ 'ಕೇರಳದ ನಾಯರ್ ಸಮಾಜದಲ್ಲಿದ್ದ ಮಾತೃಪ್ರಧಾನ ಕುಟುಂಬ ವ್ಯವಸ್ಥೆ' ಬರಹಕ್ಕೆ ನಾಗಣ್ಣನವರ ಲೇಖನ ಭಾಷ್ಯದಂತಿದೆ. ಸಂಕಲನದ ಎಲ್ಲ ಲೇಖನಗಳು ವೈವಿಧ್ಯಪೂರ್ಣವಾಗಿವೆ. –**ಎ.ಡಿ.ನಂಜುಂಡಸ್ವಾಮಿ**, ಮೈಸೂರು

▼ ನಿಮ್ಮ ಪತ್ರಿಕೆಯಲ್ಲಿ ಬರುವ ಕವನಗಳು, ಲೇಖನಗಳು ಒಂದು ಬಗೆಯ ಆಕರ್ಷಣೆಯಾದರೆ ಅದರಲ್ಲಿ ಬರುವ ಪುಸ್ತಕ ವಿಶ್ಲೇಷಣೆಗಳು ನನಗೆ ಅದಕ್ಕೂ ಹೆಚ್ಚಿನ ಆಕರ್ಷಣೆ. ಅದರಲ್ಲಿ ವಿಶ್ಲೇಷಿಸಿದ ಕೃತಿಗಳನ್ನು ನಾನೂ ಓದಿ ತೂಗುವುದು ನನ್ನ ಹವ್ಯಾಸ. ಈ ಬಾರಿ ಗೀತಾ ನಾಗಭೂಷಣರ ಕಾದಂಬರಿ 'ಬದುಕು' ಕುರಿತು ಲಲಿತಾ ಸಿದ್ದಬಸವಯ್ಯ ಅವರು ಬರೆದದ್ದು ಪೂರ್ತಿ ಒಪ್ಪಿಕೊಳ್ಳಲಾಗಲಿಲ್ಲ. ಕಾದಂಬರಿಯ ಸಾರಾಂಶ ಚೆನ್ನಾಗಿನೀಡಿದ್ದಾರೆ. ಪ್ರೇಮಿಗಳಾದ ಕಾಶವ್ವ ಮತ್ತು ಲಿಂಗರಾಜ ಸಮಾಜವನ್ನು ವಿರೋಧಿಸಿ ಒಂದುಗೂಡಿದ ನಂತರ ಹೇಗೆ ಬಾಳುವೆ ಮಾಡಿದರೆಂಬುದನ್ನು ಕಾದಂಬರಿ ವಿವರಿಸುವುದಿಲ್ಲ ಎಂಬ ನ್ಯೂನತೆಯನ್ನು ಸರಿಯಾಗಿ ಗುರುತಿಸಿದ್ದಾರೆ. ವಿಮರ್ಶಕಿ ಎಡವಿದ್ದು ಎಲ್ಲೆಂದರೆ ಬದುಕನ್ನು ದೈವನಿರ್ದೇಶಿತ ಎಂದು ವ್ಯಾಖ್ಯಾನಿಸಿ ಈ ಕಾದಂಬರಿಯನ್ನೂ ಆ ವ್ಯಾಖ್ಯಾನದೊಳಗೆ ಒಳಪಡಿಸಲು ಪ್ರಯತ್ನ ಪಟ್ಟಿದ್ದರಲ್ಲಿ. ದೇವಿಯ ಹೇಳಿಕೆಯಂತೆ ಮಲ್ಲಪ್ಪನ ಬದುಕು ಮತ್ತು ಅವನ ಮಗ ಕಲ್ಯಾಣಿ ಮತ್ತು ಬೆಳ್ಳಿಯ ಬದುಕು ದುರಂತದಲ್ಲಿ ಅಂತ್ಯವಾದರೂ ಅವರ ಬದುಕಿನ ಹಿಂದೆ ದೈವದ ಕೈವಾಡವಿತ್ತು ಎಂದು ಹೇಳುವುದು ಕಾದಂಬರಿಗೆ ಅನ್ಯಾಯ ಮಾಡಿದಂತಾಗುತ್ತದೆ. 'ಹಲವರ ಯಾತನೆಯ ಚಪ್ಪಡಿಗಲ್ಲುಗಳ ಮೇಲೆ ಒಬ್ಬಿಬ್ಬರ ಸುಖಸೌಧ ನಿರ್ಮಾಣವಾಗುವುದೇ ಬದುಕು' ಎನ್ನುವ ವಾಕ್ಯವಂತೂ ಶೋಷಣೆಯನ್ನು ಸಮರ್ಥಿಸುವ ಧಾಟಿಯಲ್ಲಿದ್ದು ಕಾದಂಬರಿಯ ಆಶಯವನ್ನೇ ಬುಡಮೇಲು ಮಾಡಿದಂತಾಗುತ್ತದೆ. – **ಹಾಲಾಡಿ ಮಾರುತಿರಾವ್**, ಬೆಂಗಳೂರು

▼ ಸಂಕಲನ - ೧೧ ರಲ್ಲಿ ಬಂದ ಜಂಬಣ್ಣ ಅಮರಚಿಂತ ಅವರ ಮಿನಿಗವನಗಳು ಹಾಗೂ ವಾಸಂತಿ ಪ್ರಭಾಕರ ನಾಯಕರ ಕವನ ಅರ್ಥಗರ್ಭಿತವಾಗಿವೆ. ತಮ್ಮ 'ಕಡೀ ಪುಟ'ವಂತೂ ಭಾಷೆಯ ಸೊಗಡಿನಲ್ಲಿ ಗಮಗಮಿಸುತ್ತಿದೆ. – **ನಿರ್ಮಲ ವೀರಣ್ಣ**, ತುಮಕೂರು

▼ ಸಂಕಲನ ಸಾಹಿತ್ಯಕ್ಕೇ ಮೀಸಲಿರುವುದು ಮತ್ತು ವಿಮರ್ಶೆಗಳಿಗೆ ಒತ್ತು ಕೊಡುತ್ತಿರುವುದು ಅತ್ಯಂತ ಸ್ತುತ್ಯ. ಕವನಗಳ ಪ್ರಾಯೋಗಿಕ ವಿಮರ್ಶೆಗೊಂದಷ್ಟು ಒಟ್ಟಾಸೆ ಕೊಟ್ಟರೆ ಮತ್ತೂ ಚೆಂದವಾಗುತ್ತದೆ. ಸಾಹಿತ್ಯ ಮತ್ತು ವಿಮರ್ಶೆಗೆ ಪ್ರಾಮುಖ್ಯ ಕೊಡುವ ಇಂಥ ಪತ್ರಿಕೆಗಳು ಇಂದಿನ ಅಗತ್ಯ.

– **ಶಾಂತಕುಮಾರಿ ಎಲ್. ವಿ.**, ಬೆಂಗಳೂರು

▼ ಕುಸುಮಾ ಶಾನಭಾಗರ 'ನನ್ನ ಅಣ್ಣ ನನ್ನ ಅಮ್ಮ' ತುಂಬಾ ಚೆನ್ನಾಗಿದೆ. 'ಅಸಂಖ್ಯ ಮನಸ್ಸುಗಳು ಸಂದಿಗೊಂದ್ಯಾಗ ಹಾದೀ ತಪ್ಪಿಸಿಕೊಂಡು ಸಂಖ್ಯಾತೀತ ದೇಹಗಳ ಮುಳ್ಳುಬೇಲಿಗಳ ಕಂಟಿಗಳ ನಡುವೆ ಬಂದು ನಿಂತೇವಿ' ಎಂಬ ವಿಚಾರ ಮಂಡಿಸಿರುವ ನಿಮ್ಮದೇ ಸ್ಟೈಲ್‌ನ 'ಕಡೀ ಪುಟ'ವನ್ನು ಎಷ್ಟು ಮೆಚ್ಚಿದರೂ ಸಾಲದು. ಆತ್ಮದ ಬಗ್ಗೆ ನಿಮ್ಮ ವಿವೇಚನೆ fine ಆಗಿದೆ.

– **ಸಿ. ವಿ. ಶೇಷಾದ್ರಿ ಹೊಳವನಹಳ್ಳಿ**, ಕೊರಟಗೆರೆ

▼ ಸಂ – ಸಂಕುಲದ ಮನ ತಟ್ಟುವ ಸಂಕಲನ, ಕ – ಕರುಳು ಮಿಡಿಯುವ ಲೇಖನಗಳ ಸಂಕಲನ, ಲ – ಲಲಿತಪ್ರಬಂಧದ ಚಿತ್ತಾರದ ಸಂಕಲನ, ನ – ನನ್ನದೆಂದೆನಿಸುವ ಪ್ರತಿ ಮನೆಯ ಸಂಕಲನ– ಗರಿಗೆದರಿ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. – **ರಾಧಾ ಶಾಮರಾವ**, ಧಾರವಾಡ

## ಕಡೀ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಆಯುಷ್ಯ ಬೆಳೀತಯ್ತಿ, ವಯಸ್ಸು ಕಳೀತಯ್ತಿ. ಆಯುಷ್ಯ ಬೆಳೆಯುವ ಪ್ರಕ್ರಿಯೆಗೆ ಒಳಪಟ್ಟಿದ್ದು, ವಯಸ್ಸು ಅಳಿಯುವ ಮಿತಿಯೊಳಗೆ ಸಿಲುಕಿದ್ದು. ಒಂದಕ್ಕ ನಿರಂತರತೆ ಉದ್ದೇಶ, ಗುರಿ; ಇನ್ನೊಂದಕ್ಕ ಸ್ಥಿತ್ಯಂತರ ಸೀಮೆ, ಗಡಿ, ಮಿತಿ. ಒಂದಕ್ಕ ಬೆಳೆಯುವ 'ಸಮಯ' ಅನ್ನುವ ಅರ್ಥದ ಕಾಲಮಿತಿ. ಇನ್ನೊಂದಕ್ಕ ಅಳಿಯುವ, ಗತಿಸುವ 'ಮರಣ', ಸಾವು ಅನ್ನುವ ಕಾಲಮಿತಿ. ಅದಕ್ಕಾಗಿ ಪ್ರಕೃತಿಧರ್ಮವನ್ನ ವಯೋಮಾನದಿಂದ ತಿಳೀಬೇಕು.

ಮಾನ ಅಂದರ ಮರ್ಯಾದೆ, ಕಿಮ್ಮತ್ತು, ಪ್ರತಿಷ್ಠೆ, ಅನುಭವಸಂಪತ್ತು, ಅಳತೆ, ಎಣಿಕೆ, ಉಪಚಾರ ಇತ್ಯಾದಿ ಅರ್ಥಗಳು. ವಯಸ್ಸಾದಂಗ ಇವುಗಳ ಸ್ಥಿತಿ-ಗತಿ-ಮಿತಿಗಳನ್ನ ಲೆಕ್ಕ, ತಾಳೆ ಹಾಕೂದಂದರ ವಯೋಮಾನವನ್ನ ತಿಳಕೊಳ್ಳುವ ಅಥವಾ ಅಳೆಯುವ ವಿಧಾನ, ರೀತಿ ಅಂತ ಅರ್ಥ. ಸಾಮಾನ್ಯವಾಗಿ ವಯಸ್ಸು ದೇಹಬಂದಿ. ಆದ್ದರಿಂದ ಸಹಜವಾಗಿ ದೇಹ ಸವೆದಾಗ ಸಣ್ಣಾದಾಗ, ದಣಿದಾಗ, ಸೋತಾಗ, ಅಡ್ಡದಾರಿ ನಡುದಾರಿಗಳನ್ನ ಬಿಟ್ಟು ದಂಡಿಗುಂಟ ನಡ್ಯಾಕ್ಹತ್ತಿದಾಗ ವಯಸ್ಸು ಸಯ್ತು ತಗ್ಗತಯ್ತಿ, ಬಗ್ಗತಯ್ತಿ. ಅದಕ ನಾವು ವಯಸ್ಸಾಗೂದು ಅಂತೇವಿ. ಹಂಗಾದಾಗ ನೆಲ ಹತ್ತಿರದ್ದಾಕ್ಕತಿ. ಮಣ್ಣು ಆತ್ಮೀಯ ಅನಸತಯ್ತಿ. ಇದಕ್ಕ ನೆಲೆ ಅಭದ್ರ ಆಗೂದು ಅನ್ನೂದು ಅನಬಾರದು. ಇದು ನಿಸರ್ಗ ದಯಪಾಲಿಸುವ ಸಹಜಾನುಭೂತಿ.

ದೇಹ, ಅದರ ಕೂಡ ಮನಸ್ಸು ಹೊಯ್ದಾಡತಾವು, ಶಿಥಿಲ ಆಗತಾವು, ನಾವು ಒಂದ ನಮೂನಿ ಅವಲಂಬಿತರಾಗತೇವು. ಆದರ ಚಂಚಲ ಆಗೂದುಲ್ಲ. ಇದು ಸ್ಥಿತಿಯ ಅನಿವಾರ್ಯತೆ. ಅದಕ್ಕ ಹೊಂದಕೋಬೇಕು. ತಿರಗ್ಯಾಡೂದು ಆಗೂದುಲ್ಲ, ಆದರ ಅಡ್ಯಾಡೂದು ಅನಿವಾರ್ಯ ಆಕ್ಕತಿ. ನೆನಪು ಕೈ ಕೊಟ್ಟರ ಚೀಟಿ ಬರಕೊಳ್ಳೂದು, ಪಟ್ಟಿ ಮಾಡೂದು ಸುರುವಾಕ್ಕತಿ. ಆಗ ಅದು ಇದು ಇಟಗೊಳ್ಳಾಕ, ನೆನಪು ಮಾಡಿಕೊಳ್ಳಾಕ ಅಂಗಿಗೆ ಚಣ್ಣಕ್ಕ ಕಿಸೆ ಭಾಳ ಬೇಕನಸ್ತಾವು. ಕಡೀಕಡೀಕ ಅನೇಕ ವಿಷಯಾನುಭವಗಳ ಕಣಜ ನಾವ್‌ಅ ಆಗಿ ಕಿಸೆ ಆಗ್ತೇವು, ಅವು ಸಾಲದ್ದಕ್ಕ ಕೈಚೀಲ ಆಗಿಬಿಡ್ತೇವು.

ಇದೇನು ಚಿಂತ್ಯಾದಂಥ ವಿಷಯ ಅಲ್ಲ. ಯಾಕಂದರ ವಿಷಯಗಳ ಮಹಾರ್ಣವದೊಳಗ ಮುಳುಗಿ ತೇಲಿ ಈಸಿದ ಮ್ಯಾಲನ್‌ಅ ಈ ಸ್ಥಿತಿಗೆ ಬಂದಿರತೇವಿ. ಹಂಗಾಗಿ ಪ್ರತಿಷ್ಠಾತ್ಮಕ ಮನಸ್ಸಿನಿಂದ, ಮಾನಪೂರ್ವಕ ಇಂಥ ಮನೋಧರ್ಮವನ್ನ ಗೌರವಿಸುವ ಮನಸ್ಸು ನಮಗ ಬರಬೇಕು. ಇದು ಎಷ್ಟು ಲಗೂ ಬರತಯ್ತೋ ಅಷ್ಟ ಲಗೂ ಚಿಂತಿ ಕಡಿಮಿ ಆಗ್ತಾವು: ಶಾಂತಿ, ಸಮಾಧಾನ, ನೆಮ್ಮದಿ ಚಿಗುರೊಡ್ಯಾಕ್ಹತ್ತತಾವು.

ಖರೇ ಅಂದರ ಇದನ್ನ ಸಾಧಸೂದ್‌ಅ ನಮ್ಮ ಬದುಕಿನ ಮುಖ್ಯ ಗುರಿ. ಆ ಮಹಾಶಕ್ತಿ ನಮಗ ವಯಸ್ಸಿನ ಕುದುರೀ ಕೊಟ್ಟು ಹತ್ತರಿ, ಅಡ್ಯಾಡಿ ಬರ್‍ರಿ ಅಂತ ಕಳಿಸಿರತಯ್ತಿ. ಅದನ್ನ, ಆ ಆಜ್ಞೆಯನ್ನ ಎಷ್ಟು ಮನಸ್ಸುಗೊಟ್ಟು ಪಾಲಿಸತೇವೋ ಅಷ್ಟ ಲಗೂ ಪಕ್ವತೆ, ಪರಿಪಕ್ವತೆ ಅನ್ನುವ ಮಾನದಂಡಗಳು ನಮಗ ಲಭಿಸ್ತಾವು. ಅವುನ್ನ ಬಳಸಿ, ಹಚ್ಚಿ, ತಿಕ್ಕಿ ಅಳೆದು ನೋಡಿದಾಗ ನಮಗ ಅರಿವಿಗೆ ಬರ್‍ತಯ್ತಿ. –ಒಂದು ಯಾವುದಾರ ಸಾದಾ ಪಶು-ಪಕ್ಷಿಗಿರುವಷ್ಟೂ ಬೆಲೆ ಈ ಮನಶ್ಯಾನ ದೇಹಕ್ಕ, ಮಾಂಸಕ್ಕ, ಚರ್ಮಕ್ಕ ಇಲ್ಲ; ಅದು ಎದೆದಕೂ ಬರೂದುಲ್ಲ; ಅದಕ ಏನೇನೂ ಕಿಮ್ಮತ್ತಿಲ್ಲ. ಇರೂ ಕಿಮ್ಮತ್ತೆಲ್ಲಾ ಆದ ವಯಸ್ಸಿಗೆ, ಮತ್ತು ಅದು ಅರ್ಜಿಸಿಕೊಂಡಂಥ ಅನುಭವದ್ರವ್ಯಕ್ಕ –ಅಂತ.

ಅದಕ್ಕಾಗಿ ಈ ದೇಹಧರ್ಮದ ಬಗ್ಗೆ ದಿಮಾಕು ಮಾಡೂದುನ್ನ ಆದಷ್ಟು ಲಗೂ ಬಿಡಬೇಕು. ಅದರ ಬಚ್ಚಬಾಯಾಗ, ಕಿಸೇದಾಗ, ಚೀಲದಾಗ, ಹಾದೀ ದಂಡ್ಯಾಗ, ಮೂಲ್ಯಾಗ ಬೆಳಕು, ಅನುಭವದ ಜ್ಯೋತಿ ಪ್ರಕಾಶಪರ್ವದ ದೀಪಾವಳಿ ಆಗೂಹಂಗ ಮಾಡಬೇಕು. ಈ ಪ್ರಕಾರ ವಯಸ್ಸಾದವರು ಮುಂದಿನವರ ಹಾದಿಯ ಅಡಿಗಲ್ಲಾಗಬೇಕು, ದೀಪಗಳ ಆವಳಿ ಆಗಬೇಕು. ಆಗ ಮಾತ್ರ ವಯಸ್ಸು ಅನ್ನೂದು ಆಯುಷ್ಯದ ಕಟ್ಟಡದ ಮುಂದುವರಿಕೆ ಆಕ್ಕತಿ.

SANKALANA : RNI NO. KARKAN 14160/10/1/2002-TC

ಸಂಕಲನ : ಸಂಪುಟ ೨, ಸಂಚಿಕೆ ೬ : ೧೪ ನವಂಬರ್ ೨೦೦೩

*ಸಂಪಾದಕರು*

ಸಿದ್ಧಲಿಂಗ ಪಟ್ಟಣಶೆಟ್ಟಿ / ಹೇಮಾ ಪಟ್ಟಣಶೆಟ್ಟಿ

•

• ಅಶೋಕ ಶೆಟ್ಟರ್
• ಚಂದ್ರಶೇಖರ ತಾಳ್ಯ • ಅರುಂಧತಿ ರಮೇಶ್
• ಅರವಿಂದ ಚೊಕ್ಕಾಡಿ
• ಅಪ್ಪಾಸಾಹೇಬ ಅಲಿಬಾದಿ • ಬಸವರಾಜ ಸಾದರ
• ಕಂನಾಡಿಗಾ ನಾರಾಯಣ
• ದೇಶಪಾಂಡೆ ಸುಬ್ಬರಾಯ
• ಎಚ್. ಎಸ್. ಶಿವಪ್ರಕಾಶ್ / ಡಾ. ಕೆ. ನಾಯಕ
• ಜಿ. ಕೆ. ಬೊಳುವಾರು • ಹಣಮಂತ ತಾಸಗಾಂವಕರ
• ನೀಲಗಂಗಾ ಎಸ್. ಜಿ. ಸ್ವಾಮಿ • ಅರುಣ ಚಂ. ಇನಾಮದಾರ

•

ಎಂ. ಆರ್. ಮುಂದಾರವಲ್ಲಿ
ಬಿ. ಎಸ್. ಗೊರವರ, ವಸಂತ ಅ. ಕುಲಕರ್ಣಿ

•

ಶ್ರೀಕೃಷ್ಣ ಭಟ್ ಅರ್ತಿಕಜೆ
ಡಿ. ಎನ್. ಅಕ್ಕಿ, ವಸಂತಕುಮಾರ ಪೆರ್ಲ
ಟಿ. ಡಿ. ನಂಜುಂಡಸ್ವಾಮಿ
ಹಾಲಾಡಿ ಮಾರುತಿರಾವ್
ನಿರ್ಮಲ ವೀರಣ್ಣ, ಶಾಂತಕುಮಾರಿ ಎಲ್. ವಿ.
ಸಿ. ವಿ. ಶೇಷಾದ್ರಿ ಹೊಳವನಹಳ್ಳಿ
ರಾಧಾ ಶಾಮರಾವ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೫೮೦ ೦೦೪